ಜನಪ್ರಿಯ
ಪುಸ್ತಕ ಮಾಲೆ

ನಾಲ್ಕನೆಯ ಆಯಾಮ

ಕುಸುಮಾಕರ ದೇವರಗಣ್ಣೂರು

ಕರ್ನಾಟಕ ಸರ್ಕಾರ
ಕನ್ನಡ ಪುಸ್ತಕ ಪ್ರಾಧಿಕಾರ
ಬೆಂಗಳೂರು

ಜನಪ್ರಿಯ ಪುಸ್ತಕ ಮಾಲೆ

ನಾಲ್ಕನೆಯ ಆಯಾಮ

(ಕಾದಂಬರಿ)

ನಾಲ್ಕನೆಯ ಆಯಾಮ.........

......ಶ್ರೇಯ-ಪ್ರೇಯಗಳ ಸಂಘರ್ಷದಲ್ಲಿ ಸಿಲುಕಿದ ವಿದ್ಯಾರ್ಥಿಯ ಕತೆ ಇದು. ತನ್ನ ಬದುಕಿಗೆ ನಾಲ್ಕನೆ ಆಯಾಮ ಬರಬೇಕೆಂದು ಹೆಣಗಿದ. ಆದರೆ ನಾಲ್ಕನೆಯ ಆಯಾಮವೆಂದರೇನು ಎಂಬುದರ ಅರಿವು ಮಾತ್ರ ಅವನಿಗಿರಲಿಲ್ಲ. ಇದೇ ಜೀವನ ದಲ್ಲಿಯ ಉತ್ಕಟ ದುರಂತ. ಒಂದು ರೀತಿಯಿಂದ ಇದು ಜೀವನದ ಅಧ್ಯಯನ. ಉದ್ದೀಪನ ಹಾಗೂ ಆಲಂಬನ ಇವುಗಳ ರಹಸ್ಯವನ್ನು ಅರಿಯುವ ಪ್ರಯತ್ನ ಇಲ್ಲಿದೆ.

ಲೇಖಕರು ತಂತ್ರದ ಅಸ್ತ್ರದಿಂದ ಜೀವನವನ್ನು ಬೇಟೆಯಾಡುವ ವ್ಯಾಧವೃತ್ತಿಯನ್ನಾಗಲಿ, ಪ್ರತಿ ಸೃಷ್ಟಿಯನ್ನು ನಿರ್ಮಿಸುವ ಬ್ರಹ್ಮತ್ವವನ್ನಾಗಲಿ ಇಲ್ಲಿ ಅವಲಂಬಿಸಿಲ್ಲ. ಆದುದರಿಂದ ಈ ಕೃತಿ ಮರಣಿಸಿದ ಮೃಗವಾಗಲಿ, ಜೀವನದ 'Relief map' ಆಗಲಿ ಆಗಿಲ್ಲ. ಆದರೆ ಗಂಭೀರ ಹಾಗೂ ಸಂಕೀರ್ಣ ಸಂವೇದನೆಗಳನ್ನು ಯಾವ ವಿಕಾರವೂ ಇಲ್ಲದೆ ಪ್ರಕಟಿಸುವ ಸೂಕ್ಷ್ಮ ಉಪಕರಣವಾಗಿದೆ ಈ ಕೃತಿ.

ಹಾವಿನ ಕತ್ತನ್ನು ಹಿಸುಕಿ ಅದರಿಂದ ವಿಷವನ್ನು ಕಕ್ಕಿಸುವಂತೆ ಇದರಿಂದ ಯಾವ ಸಂದೇಶವನ್ನು ಕಕ್ಕಿಸಿಲ್ಲ. ಆದರೆ ಮೈಯೆಲ್ಲ ಕಿವಿಯಾಗಿ ಕೇಳಿದರೆ ರಂಗದ ಪಾರ್ಶ್ವದಿಂದ ಅಲೌಕಿಕ ಸಂಗೀತ ಕೇಳಿ ಬರುತ್ತದೆ. ಇದೇ ಈ ಕೃತಿಯ ಸಾರ್ಥಕತೆ.

ಗಣಿತ ಶಾಸ್ತ್ರದ ಅವ್ಯಕ್ತ ಸೌಂದರ್ಯ ಭಾವಗೀತದ ತೀವ್ರತೆಯಿಂದ ಒಡಮೂಡಿದಂತೆ ಜೀವನದ ಅಮೂರ್ತಸ್ವರೂಪ ಇದರಲ್ಲಿ ಅಭಿವ್ಯಕ್ತವಾಗಿದೆ........

ಜನಪ್ರಿಯ ಪುಸ್ತಕ ಮಾಲೆ

ನಾಲ್ಕನೆಯ ಆಯಾಮ

ಕುಸುಮಾಕರ ದೇವರಗಣ್ಣೂರು

ಕರ್ನಾಟಕ ಸರ್ಕಾರ

ಕನ್ನಡ ಪುಸ್ತಕ ಪ್ರಾಧಿಕಾರ

ಪಂಪಮಹಾಕವಿ ರಸ್ತೆ, ಚಾಮರಾಜಪೇಟೆ

ಬೆಂಗಳೂರು - ೧೮

NALKANEYA AAYAMA - A novel by Kusumakar Devaragannuru. Published by **Kannada Pustaka Pradhikara** (Kannada Book Authority) Pampa Mahakavi Road, Chamarajpet, Bangalore - 560 018.

Pages : 160 + viii

ಮೊದಲ ಮುದ್ರಣ : ೧೯೬೭

ಪುನರ್ ಮುದ್ರಣ : ೧೯೯೬

24

ಬೆಲೆ ರೂ : ಇಪ್ಪತ್ತನಾಲ್ಕು ರೂಪಾಯಿಗಳು

ಮುದ್ರಣ :

ಲಾವಣ್ಯ ಮುದ್ರಣ

ನಂ. ೧೯, ಬಿ.ಎಸ್.ಕೆ. ಮೊದಲನೇ ಹಂತ

ಬೆಂಗಳೂರು - ೧೯

ದೂರವಾಣಿ : ೬೬೧೦೫೬೩

ಮುನ್ನುಡಿ

ಜ್ಞಾನಾರ್ಜನೆಗೆ ಅಕ್ಷರ ಮಾಧ್ಯಮವೇ ಪ್ರಮುಖ ಸಾಧನ. ಆಧುನಿಕ ಕಾಲದಲ್ಲಿ ತಿಳುವಳಿಕೆಯನ್ನು ನೀಡಲು ಅನೇಕ ಮಾಧ್ಯಮಗಳು ಸಿದ್ಧವಾಗಿದ್ದರೂ ಸಾಹಿತ್ಯ ಕೃತಿಗಳಿಗೆ ಮಾತ್ರ ಅಪೂರ್ವವಾದ ಅನನ್ಯತೆ ಇದೆ. ಸಾಹಿತ್ಯ, ಸಂಗೀತ, ಕಲೆ ಮುಂತಾದ ಸಾಂಸ್ಕೃತಿಕ ಅನುಭವ ಜ್ಞಾನದಿಂದ ಮಾನವನ ಹೃದಯದಲ್ಲಿ ಆತ್ಮಸೌಂದರ್ಯ ವೃದ್ಧಿಸುತ್ತದೆ. ಭವ್ಯವಾದ ಪರಂಪರೆಯನ್ನು ನಿರಂತರವಾಗಿ ಮುಂದುವರಿಸಲು ಭಾಷೆಯ ಮೂಲಕ ಅನುವಾಗುವ ಗ್ರಂಥಗಳು ಸಂಸ್ಕೃತಿಯ ಜೀವನಾಡಿಯಾಗಿ ಜೀವಂತವಾಗಿ ಸಾಗಬೇಕಾಗುತ್ತದೆ. ಈ ಸಾಗುವಿಕೆಯಲ್ಲಿ ಮಾನವರು ತಂತಮ್ಮ ನಡುವಿನ ತಿಳುವಳಿಕೆಯನ್ನು ಪರಸ್ಪರ ಅರಿಯುತ್ತ ವಿಸ್ತರಿಸುತ್ತ ಸಾಮರಸ್ಯಕ್ಕೆ ದಾರಿ ಮಾಡಿಕೊಡಬೇಕಾಗುತ್ತದೆ. ಇಂತಹ ಅಪರೂಪದ ಜ್ಞಾನಶಕ್ತಿಯನ್ನು ಒಳಗೊಂಡ ಸಾಹಿತ್ಯವನ್ನು ವಾಚಕರಿಗೆ ತಲುಪಿಸುವ ಜವಾಬ್ದಾರಿಯನ್ನು 'ಕನ್ನಡ ಪುಸ್ತಕ ಪ್ರಾಧಿಕಾರ' ಹೊತ್ತಿದೆ.

ಕರ್ನಾಟಕ ಸರ್ಕಾರ ಬಹುದಿನಗಳಿಂದ ಇಂತಹ ಮೌಲಿಕವಾದ ಗ್ರಂಥಗಳ ಪ್ರಕಟಣೆಗೆ ಪ್ರೋತ್ಸಾಹ ನೀಡುತ್ತಾ ಬಂದಿದೆ. ಶ್ರೀ ಕೆಂಗಲ್ ಹನುಮಂತಯ್ಯನವರು ಮುಖ್ಯ ಮಂತ್ರಿಯಾಗಿದ್ದ ಕಾಲದಲ್ಲಿ ಸಾಹಿತ್ಯ ಸಂಸ್ಕೃತಿಯ ಪ್ರಸರಣ ಕಾರ್ಯಕ್ಕೆ ಒತ್ತಾಸೆಯಾಗಿದ್ದರು. ಕುವೆಂಪು ಮತ್ತು ಮಾಸ್ತಿ ಅವರು ಸೇರಿ ಸಂಪಾದಿಸಿಕೊಟ್ಟ ಮತ್ತು ಅತ್ಯಂತ ಕಡಿಮೆ ಬೆಲೆಯಲ್ಲಿ ಈ ಇಲಾಖೆಯಿಂದ ಪ್ರಕಟವಾದ 'ಕುಮಾರ ವ್ಯಾಸ ಭಾರತ' ಗ್ರಂಥ ಇಂದಿಗೂ ವಿದ್ವಾಂಸರ ಜನಸಾಮಾನ್ಯರ ಮೆಚ್ಚುಗೆಗೆ ಪಾತ್ರವಾಗಿದೆ. ಅನಂತರ 'ವಿಶ್ವ ಕನ್ನಡ ಸಾಹಿತ್ಯ ಸಮ್ಮೇಳನದ' ಕಾಲಕ್ಕೆ ಕರ್ನಾಟಕ ಸರ್ಕಾರವು ಇದೇ ಇಲಾಖೆಯ ಮೂಲಕ ಕನ್ನಡದ ಮೌಲಿಕವಾದ ಹಾಗೂ ಹಲವಾರು ವರ್ಷಗಳಿಂದ ಬೇಡಿಕೆಯಲ್ಲಿದ್ದೂ ಪುನರ್ ಮುದ್ರಣವಾಗದಿದ್ದ ನೂರಕ್ಕೂ ಹೆಚ್ಚಿನ ಗ್ರಂಥಗಳನ್ನು 'ಜನಪ್ರಿಯ ಪುಸ್ತಕ ಮಾಲೆ' ಯ ಮೂಲಕ ಆಯ್ದು ಪ್ರಕಟಿಸಿ ಓದುಗರ ಮೆಚ್ಚುಗೆ ಗಳಿಸಿತು.

ಕರ್ನಾಟಕ ಸರ್ಕಾರ ಇದುವರೆಗೆ ಕನ್ನಡ ಮತ್ತು ಸಂಸ್ಕೃತಿಯ ಇಲಾಖೆ ಮೂಲಕ ಪ್ರಕಟಿಸುತ್ತಿದ್ದ ಇಂತಹ ಅಪರೂಪದ ಕೃತಿಗಳನ್ನು ಕನ್ನಡ ಪುಸ್ತಕ ಪ್ರಾಧಿಕಾರ ಪ್ರಕಟಿಸುತ್ತಲಿದೆ. ಅಲಭ್ಯವಾದ ಕನ್ನಡದ ಗ್ರಂಥಗಳನ್ನು ಜನಸಾಮಾನ್ಯರಿಗೆ ಎಟುಕುವ ಬೆಲೆಯಲ್ಲಿ ಮತ್ತೆ ಪ್ರಕಟಿಸಿ ತಲುಪಿಸುವುದೇ ಈ ಜನಪ್ರಿಯ ಪುಸ್ತಕ ಮಾಲೆಯ ಮುಖ್ಯ ಗುರಿ. ಹಿಂದಿನ ಪೀಳಿಗೆಗಳ ಅನೇಕ ಉತ್ತಮ ಕೃತಿಗಳು ಇಂದಿನ ಪೀಳಿಗೆಯ ಓದುಗರಿಗೆ ಲಭ್ಯಗೊಳಿಸುವುದೇ ಈ ಯೋಜನೆಯ ಆಶಯವಾಗಿದೆ. ಅಲಭ್ಯವಾಗಿರುವ ಇತ್ತೀಚಿನ ಉತ್ತಮ ಕೃತಿಗಳನ್ನೂ ಈ ಮಾಲೆಯಲ್ಲಿ ಪ್ರಕಟಿಸಲು ಉದ್ದೇಶಿಸಿದೆ.

ಈ ಮಾಲೆಯಲ್ಲಿನ ಪುಸ್ತಕಗಳನ್ನು ಪ್ರಕಟಿಸಲು ನೆರವಾದ ಜನಪ್ರಿಯ ಪುಸ್ತಕ ಮಾಲೆಯ ಉಪಸಮಿತಿಯ ಸದಸ್ಯರಿಗೆ, ಪುಸ್ತಕ ಪ್ರಾಧಿಕಾರದ ಸದಸ್ಯರಿಗೆ, ನಾಲ್ಕನೆಯ ಆಯಾಮ ಪುಸ್ತಕ ಪ್ರಕಟಿಸಲು ಅನುಮತಿ ನೀಡಿದವರಿಗೆ, ಅಂದವಾಗಿ ಮುದ್ರಿಸಿಕೊಟ್ಟ ಲಾವಣ್ಯ ಮುದ್ರಣ ಅವರಿಗೆ ಕೃತಜ್ಞತೆಗಳು.

ನೆಲಮನೆ ಕೆ. ದೇವೇಗೌಡ
ಅಧ್ಯಕ್ಷರು
ಕನ್ನಡ ಪುಸ್ತಕ ಪ್ರಾಧಿಕಾರ

ನಾಲ್ಕನೆಯ ಆಯಾಮ

ಒಂದು

ಇಂದು ಅವನಲ್ಲಿ ಹಿಂದೆಂದೂ ಕಂಡುಬಾರದಂತಹ ವಿಲಕ್ಷಣ ಉತ್ಸಾಹ ಕಾಡುಬೇಗೆಯಂತೆ ಧಗಧಗಿಸುತ್ತಿದೆ. ಈ ಮೊದಲು ಅವನು ಅನೇಕಸಲ ಉತ್ಸಾಹದ ಸತ್ವವನ್ನು ಅನುಭವಿಸಿದ್ದಾನೆ. ಆದರೆ ಇಂದಿನ ಉತ್ಸಾಹದ ಬಗೆ ತೀರ ಹೊಸದು. ಹತ್ತಡಿ ಉದ್ದ ಹತ್ತಡಿ ಅಗಲದ ಕಿರುಕೋಣೆಯಲ್ಲಿ ಅತ್ತಿಂದಿತ್ತ ಇತ್ತಿಂದತ್ತ ಬಿರುಗಾಳಿಯಂತೆ ಹರಿದಾಡಿದ. ಮುಚ್ಚಿದ ಕಿಟಕಿಯನ್ನು ತೆರೆದ. ಮತ್ತೆ ಅದನ್ನು ಮುಚ್ಚಿದ. ಬಾಗಿಲನ್ನು ತೆರೆದು ಮತ್ತೆ ಮುಚ್ಚಿದ. ಆರೆಂಟು ಪುಸ್ತಕಗಳನ್ನು ತೆರೆದು ತೆರೆದು ದೂರ ಬೀಸಿದ. ಬಟ್ಟೆಗಳನ್ನು ಹಾಕಿಕೊಂಡು ಹೊರಗೆ ಹೋಗಬೇಕೆಂದು ಎದ್ದ. ಬಾಗಿಲನ್ನು ತೆರೆದು ಹೊರಗೆ ಬಂದು ಬಾಗಿಲನ್ನು ಇಕ್ಕಿದ. ಮತ್ತೇನು ಎನ್ನಿಸಿತೋ ! ಒಳಗೆ ಬಂದು ಹಾಗೆಯೇ ಕಾಟಿನ ಮೇಲೆ ಒರಗಿದ. ಹದಿನೆಂಟು ವರುಷಗಳ ಚಿತ್ರ ಕಣ್ಣೆದುರು ನಿಂತಿತು. ಹೀಗೆ ತನ್ನ ಬದುಕನ್ನು ಅವನು ಅನೇಕಸಲ ಅನುಭವಿಸಿದ್ದಾನೆ. ಕಾಲದೇಶಗಳ ಸಂವೇದನೆಯನ್ನೂ ಮೀರಿ ವರ್ತಮಾನದ ಹೆಡೆಯನ್ನು ತುಳಿದಿದ್ದಾನೆ. ಭೂತವನ್ನು ಅಗಿದಿದ್ದಾನೆ. ಭವಿಷ್ಯದಲ್ಲಿ ಗರಿಗೆದರಿದ್ದಾನೆ.

'ಇಂದು ಹೀಗೇಕೆ?' ಎಂದು ತನ್ನನ್ನು ತಾನು ಕೇಳಿಕೊಂಡ.

ಹಿಂದೆ ಅವನು ತಾನು ಅನುಭವಿಸಿದ ಅನೇಕ ಭಾವನೆಗಳನ್ನು ವಿಶ್ಲೇಷಿಸಿದ್ದ. ಅವುಗಳಲ್ಲಿ ತೀವ್ರತೆ ಇತ್ತು. ಆಳವಿತ್ತು. ಆದರೆ ಇಂದಿನ ಅನುಭೂತಿಯಲ್ಲಿ ವ್ಯಕ್ತವಾದ ಸಂಕೀರ್ಣತೆ ಮಾತ್ರ ಎಂದೂ ಈ ಮೊದಲು ಅವನ ಅನುಭವದ ಲೋಕದಲ್ಲಿ ಕಾಲಿಟ್ಟಿರಲಿಲ್ಲ.

'ಇದು ಏನು? ಏಕೆ ಈ ಉತ್ಸಾಹ ?'

ಪ್ರಶ್ನೆಗಳ ಪಾತಾಳಗರಡಿಯನ್ನು ಅಚಿತ್ತಿನ ಬಾವಿಯಲ್ಲಿ ಆಳ ಆಳವಾಗಿ ಇಳಿಬಿಟ್ಟ. ನೆಲೆಕಂಡ ಚಿಹ್ನ ಕಂಡುಬರಲಿಲ್ಲ. ಏಳು ಹೊರಸುಗಳ ನುಲಿಯನ್ನು ಬಿಟ್ಟರೂ ತಳ ಸಿಲುಕದ ಬಾವಿಯ ಕತೆ ನೆನಪಾಯಿತು. ಅವನಿಗೆ ಒಂದು ಬಗೆಯ ಅವ್ಯಕ್ತ ಭೀತಿಯುಂಟಾಯಿತು. ತನ್ನ ಅಚಿತ್ತಿನ ಆಳವನ್ನು ಕಂಡು ಅವನಿಗೆ ಆಶ್ಚರ್ಯವಾಯಿತು. ತಾನು ಅದ್ವಿತೀಯ ಎಂಬ ಭಾವನೆಯುಂಟಾಯಿತು. ಆದರೆ ಇವೆಲ್ಲ ಒಂದೇ ಕ್ಷಣ. ಮತ್ತೆ ಸ್ಥಾಯೀಭಾವವಾಗಿ ಉತ್ಸಾಹ ಹೊರಹೊಮ್ಮಿತು.

'ನಿನ್ನಲ್ಲಿ ಅದಮ್ಯವಾದ ಉತ್ಸಾಹವಿದೆ. ಶಕ್ತಿ ಇದೆ. ಬುದ್ಧಿ ಇದೆ. ನೀನು ಅದನ್ನು ಅರಿತಿಲ್ಲ' ಎಂಬ ನುಡಿ ಮೇಲಿಂದ ಮೇಲೆ ಪ್ರತಿಧ್ವನಿಸಿತು.

'ನಾನು ನನ್ನ ಉತ್ಸಾಹವನ್ನು ಶಕ್ತಿಯನ್ನು ಬುದ್ಧಿಯನ್ನು ಉಪಯೋಗಿಸಿ ಕೊಳ್ಳುತ್ತಿದ್ದೇನೆ.' ತನ್ನಂತರಂಗದಲ್ಲಿಯೆ ಯಾರದೊ ಉತ್ತರ.

'ನಿನ್ನ ತಲೆ ನಿನ್ನದೆಂಬುವದೊಂದು ವ್ಯಕ್ತಿತ್ವ ನಿನಗಿದೆಯೆ? ನೀನು ಸ್ವಾತಂತ್ರ್ಯವನ್ನು ಅನುಭವಿಸಿರುವೆಯಾ?' ಮರುಪ್ರಶ್ನೆ.

ಕಾಡಿನಲ್ಲಿ ಭೆಟ್ಟಿಯಾದ ಯಕ್ಷನಂತೆ ಯಾರೋ ಪ್ರಶ್ನೆ ಕೇಳಿದರು.

ಹಿಂದೆ ಇಂತಹ ಆತ್ಮ ವಿಶ್ಲೇಷಣೆ ಇರಲಿಲ್ಲ ಎಂದಲ್ಲ. ಆದರೆ ಯಾವ ಪ್ರಶ್ನೆಗೂ ಉತ್ತರ ಸುಲಭವಿತ್ತು.

ಸ್ಮೃತಿಯ ಕೋರೆಯಿಂದ ಅಚಿತ್ತಿನ ಪಾತಾಳವನ್ನು ಬಗಿದಾಗ ಸಹಸ್ರಾರು ಚಿತ್ರಗಳು ಕಣ್ಮುಂದೆ ಕುಣಿದವು.

ಯಾರು ಅವನು? ಓ ! ಈಗ ಗುರುತು ಹತ್ತಿತು. ಇಂಗ್ಲಿಷ್ ಶಾಲೆಯಲ್ಲಿಯ ಶಿಕ್ಷಕ. ಅವನನ್ನು ಕಂಡೊಡನೆ ತಾನು ತಲೆ ಬಗ್ಗಿಸುತ್ತಿದ್ದ. ಅವನಿಗಾಗಿ ಊರನ್ನೇ ಬಿಟ್ಟು ಹೋಗಬೇಕು ಎಂದು ಎಷ್ಟು ಸಲ ತಪಿಸಿದ್ದ. ಆ ಸಂಗತಿ ಸಂಭವಿಸಿ ಇಂದಿಗೆ ಮೂರು ವರ್ಷಗಳೇ ಕಳೆದಿವೆ. ಆದರೂ ಅವನ ನೆನಪು ಬಂದು ಕಾಡುತ್ತದೆ. ಎಂತಹ ಅಪಮಾನ! ಅವನ ನೆನಪು ಬಂದ ಸಲಕ್ಕೊಮ್ಮೆ ಅವನ ಕತ್ತು ಲಜ್ಜೆಯ ಭಾರದಿಂದ ಕುಸಿಯುತ್ತಿತ್ತು. ಇಂದು ಹಾಗಾಗಲಿಲ್ಲ.

''ನೀನೆ ನನ್ನ ಬದುಕನ್ನು ಹಾಳುಮಾಡಿದವ'' ಎಂದು ಅಂತರಂಗ ಕೂಗಿತು.

''ನನ್ನನ್ನು ವರ್ಗದಲ್ಲಿ ಮೂವತ್ತೈದು ಹುಡುಗರ, ಹತ್ತು ಹುಡುಗಿಯರ ಎದುರು ಹೊಡೆದೆ.''

ಅವನು ಕಣ್ಣುಗಳನ್ನು ಮುಚ್ಚಿದ್ದ. ಅಂದಿನ ತನ್ನ ಮುಖವನ್ನು ಮತ್ತೆ ಅವನು ಕಂಡುಕೊಂಡ ! ಎಂತಹ ದೀನ ಕಳೆ ! ತನ್ನ ಕತ್ತನ್ನು ತಾನೇ ಹಿಸುಕಿಕೊಳ್ಳುವಂತಾಯಿತು.

''ಊಹೂಂ ! ನಾನು ಪ್ರತಿಭಟಿಸಬೇಕಿತ್ತು.''

''ನಾನು ಪ್ರತಿಭಟಿಸಿದೆ.''

''ಇಲ್ಲ ಇಲ್ಲ ಪ್ರತಿಭಟಿಸಲಿಲ್ಲ. ನೀನು ಅತ್ತೆ. ದೊಡ್ಡ ಧ್ವನಿತೆಗೆದು ಅತ್ತೆ. ಬೇಡಿಕೊಂಡೆ. ಅಂಗಲಾಚಿದೆ.''

ಅವನು ಮತ್ತೊಮ್ಮೆ ಅದನ್ನೆಲ್ಲ ಅನುಭವಿಸಿದ.

ಅಂದೇ ಬೆಳಗಿನಲ್ಲಿ ಅವನಿಗೆ ಕನ್ನಡ ಶಿಕ್ಷಕರು ವರ್ಗದಲ್ಲಿ ಹೇಳಿದ ಸುಭಾಸನ ಕತೆ ಅವನ ವ್ಯಕ್ತಿತ್ವಕ್ಕೆ ಹೊಸದೊಂದು ಹುರಿಯನ್ನು ಹಾಕಿತ್ತು. ಏನು ಧೈರ್ಯ ಸುಭಾಸರದು. ನಾನು ಹಾಗಾಗಬೇಕು. ವರ್ಗದಲ್ಲಿ ಕನ್ನಡ ಶಿಕ್ಷಕರು ಹೇಳಿದ್ದರು:

''ಸುಭಾಸರ ಜೀವನದ ಸಂದೇಶ- ಅನ್ಯಾಯವನ್ನು ಪ್ರತಿಭಟಿಸಲು ಎಂದೂ ಹಿಂಜರಿಯಬಾರದು. ಪ್ರಾಣತ್ಯಾಗವೂ ಹೆಚ್ಚಲ್ಲ !''

ಎಂತಹ ಸ್ಫೂರ್ತಿಯನ್ನು ತುಂಬಿತ್ತು ಈ ವಾಣಿ ತನ್ನಲ್ಲಿ. ತನ್ನನ್ನು ಕೇಂದ್ರ ಬಿಂದುವನ್ನಾಗಿ ಮಾಡಿಕೊಂಡು ಅನ್ಯಾಯದ ವಿರುದ್ಧ ಏಕಾಕಿ ಅಸಹಾಯ ಶೂರನೆಂದು ಹಗಲುಗನಸುಗಳನ್ನುಣ್ಣುತ್ತ ಕುಳಿತಾಗ ಎರಡೇ ಎರಡು ಗಂಟೆಗಳಲ್ಲಿ ತನ್ನ ಸತ್ವದ ಪರೀಕ್ಷೆಯಾಗಬೇಕೆ !

''ಏಕಾಗಬಾರದಿತ್ತು? ನೀನು ಬಂದ ಪರಿಸ್ಥಿತಿಯನ್ನು ಎದುರಿಸಿ ನಿಲ್ಲಬೇಕಿತ್ತು. ಕಲಿತದ್ದೇನು ಸಾರ್ಥಕ... ''

ತನ್ನ ಕಡೆ ಏನೂ ತಪ್ಪಿರಲಿಲ್ಲ.

''ಹಾಗಾದರೆ ನೀನೇಕೆ ಪ್ರತಿಭಟಿಸಲಿಲ್ಲ? ''

ಅವರು ಇಂಗ್ಲಿಶ್ ಶಿಕ್ಷಕರು. ಭೆಂಡಿ ಆಟ ಅವರ ತಾಸಿನಲ್ಲಿ. ನಿತ್ಯ ನಿತ್ಯ ಹೊಸ ಶಬ್ದಗಳನ್ನು ಹುಡುಕಿ ಹೇಳುವ ಉತ್ಸಾಹದಲ್ಲಿ ಅಂದು ತಾನೊಂದು ಹೊಸ ಶಬ್ದವನ್ನು ತನ್ನ ನೋಟಬುಕ್ಕಿನಲ್ಲಿ ಸೃಷ್ಟಿಸಿದ್ದ. Organ ಎಂಬ ಶಬ್ದವನ್ನು ಮೊದಲು ಬರೆದು ಬಳಿಕ Orga ಎಂಬ ಅಕ್ಷರಪುಂಜವನ್ನು ಹಾಗೆಯೇ ಇಟ್ಟು ಮುಂದೆ ಬೇರೆ ಬೇರೆ ಅಕ್ಷರಗಳನ್ನು ಕೂಡಿಸಿ ಆರೆಂಟು ಶಬ್ದಗಳನ್ನು ರಚಿಸಿದ್ದ. ಇಂಗ್ಲಿಶ್-ಇಂಗ್ಲಿಶ್ ಶಬ್ದಕೋಶವನ್ನು ಮೂರು ರೂಪಾಯಿಗಳನ್ನು ಕೊಟ್ಟು ಕೊಂಡುಕೊಂಡಿದ್ದ. ಭೆಂಡಿ ಆಟ ಪ್ರಾರಂಭವಾಗಿತ್ತು. ತಾನು ಉತ್ಸಾಹದಿಂದ ಬೆರಳೆತ್ತಿ ಕುಳಿತಿದ್ದ-ಹೊಸ ಅಸ್ತ್ರವೊಂದನ್ನು ಪ್ರಯೋಗಿಸಲು ದಾರಿಕಾಯುವ

ರಾಜಕಾರಣಿಯಂತೆ ಯಾರೊ ಹೇಳಿದರು 'To' ಅವನಿಗೆ ಅಪ್ಪಣೆ ಸಿಕ್ಕಿತು. ಎದ್ದವನೆ ಆರ್ಗ್ಯಾಜಮ್ ಸ್ಪೆಲಿಂಗ್ ಸಹಿತ ಕೂಗಿದ. ಶಿಕ್ಷಕರು ತಪ್ತರಾದರು. ಬಂದವರೆ ಏನೆಂದು ಕೇಳದೆ ಕೆನ್ನೆಗೆ ಹತ್ತೆಂಟು ಏಟುಗಳನ್ನು ಹಾಕಿದರು.

''ಹೊರಗೆ ಹೋಗು. ನಾಚಿಕೆ ಬರುವುದಿಲ್ಲವೆ? ಎಲ್ಲಿತ್ತು ಈ ಶಬ್ದ? ಇನ್ನೂ ಚಿಕ್ಕ ವಯಸ್ಸು ! ಈಗಲೇ ಈ ದಾರಿ...... ಮುಖ್ಯಾಧ್ಯಾಪಕರಿಗೆ ರಿಪೋರ್ಟ್ ಮಾಡಲೇನು? ಒಂದು 'ಸ್ಟ್ರೋಕ್ ಆಫ್ ಪೆನ್ನಿ' ನಿಂದ ನಿನ್ನ ಆಯುಷ್ಯವನ್ನೆಲ್ಲ ನಾನು ಹಾಳುಮಾಡಬಲ್ಲೆ. ತಪ್ಪಾಯಿತೆನ್ನು. ಇನ್ನೊಮ್ಮೆ ಹೀಗೆ ಮಾಡುವುದಿಲ್ಲ - ಹೇಳು. ಬೊಗಳು.''

ವರ್ಗದ ವಾತಾವರಣವೇ ಬದಲಾಯಿತು. ಏನು ಏಕೆ ಎಂಬುದರ ಅರಿವು ಯಾರಿಗೂ ಇರಲಿಲ್ಲ. ಏನೋ ಆಗಬಾರದ್ದಾಗಿದೆ - ಇದರ ಪರಿಣಾಮ ಏನೋ ! ಎಂಬ ಚಿಂತೆಯಲ್ಲಿ ವರ್ಗ ಮುಳುಗಿತ್ತು.

''ನನಗೆ ಗೊತ್ತಿಲ್ಲ ಸಾರ್. ನನ್ನ ಕಡೆ ತಪ್ಪಿಲ್ಲ ಸಾರ್. ನನಗೆ ಶಬ್ದದ ಅರ್ಥ ಗೊತ್ತಿಲ್ಲ ಸಾರ್.''

''ಮತ್ತೆ ಸುಳ್ಳು. ನಾನು ಕ್ಷಮಿಸಬಲ್ಲೆ. ತಪ್ಪಾಯಿತು ಎನ್ನು. ಇಲ್ಲವಾದರೆ....''

''ತಪ್ಪಾಯಿತು ಸಾರ್ .''

''ಹೀಗೆ ಬಾ ಹಾದಿಗೆ.''

ಶಿಕ್ಷಕರ ಮುಖದಲ್ಲಿ ವಿಜಯಸ್ತಂಭದ ಹಾಗೆ ಮುಗುಳುನಗೆ ಆತ್ಮತೃಪ್ತಿಯೊಡನೆ ಮೂಡಿತು. ಅಲ್ಲಿಗೆ ಭೆಂಡಿ ಆಟ ನಿಂತಿತು. ಶಿಕ್ಷಕರು ಇಪ್ಪತ್ತು ನಿಮಿಷಗಳವರೆಗೆ ನೈತಿಕ ಮೌಲ್ಯಗಳನ್ನು ಕುರಿತು ವಿವೇಕಾನಂದ, ಗಾಂಧಿ, ನೆಹರು ಹಾಗು ಅರವಿಂದ ಅವರ ಆಣೆಮಾಡಿ ಉಪನ್ಯಾಸ ಮಾಡಿದರು. ಗಂಟೆಯಾಯಿತು. ಹಾಜರಿ ತೆಗೆದುಕೊಂಡು ವರ್ಗಪುಸ್ತಕದಲ್ಲಿ ಕಲಿಸಿದ ವಿಷಯ ಎಂಬ ಕಾಲಮ್ಮಿನಲ್ಲಿ ' ಡೈರೆಕ್ಟ್ ಇಂಡೈರೆಕ್ಟ' ಎಂದು ಬರೆದು ಹೋದರು.

ಆದರೆ ಇಷ್ಟೆ ಆಗಿದ್ದರೆ ಅವನಿಗೆ ಅಷ್ಟು ದುಃಖವಾಗುತ್ತಿರಲಿಲ್ಲ. ತಮ್ಮ ವರ್ಗದಲ್ಲಿಯ ಕೆಲವರು ವಿದ್ಯಾರ್ಥಿ ವಿದ್ಯಾರ್ಥಿನಿಯರನ್ನು ಕಂಡರೆ ಶಿಕ್ಷಕರು ಹೆದರುತ್ತಿದ್ದರು. ತನಗಾದರೆ ಹೀಗೇಕೆ? ಶಿಕ್ಷಕರಲ್ಲಿ ತಪ್ಪಿಲ್ಲ. ನನ್ನದೇ ತಪ್ಪಿದೆ ಎಂದು ಸುಮ್ಮನಾಗಿದ್ದ.

ಇನ್ನೊಮ್ಮೆ ಅದೇ ಶಿಕ್ಷಕರು ತನ್ನ ಸಹಾಧ್ಯಾಯಿಯನ್ನು ಹೊಡೆದಾಗ ಅವನು ನೇರವಾಗಿ ಮನೆಗೆ ಹೋಗಿ ತನ್ನ ತಂದೆಯನ್ನು ಕರೆದುಕೊಂಡು ಬಂದಿದ್ದ. ಎಂಟನೆ ಪಿರಿಯಡ್ಡಿನಲ್ಲಿ ಅವರು ವ್ಹಾಲಿಬಾಲ್ ಆಡಿಸುತ್ತ ನಿಂತಿದ್ದರು. ಆ ಹುಡುಗನ ತಂದೆ ತನ್ನ ಸಹಕಾರಿಗಳೊಡನೆ ಬಂದು ಕಾಲರ್ ಜಗ್ಗಿದ. ಶಿಕ್ಷಕರು ಗಾಬರಿಯಾದರು. ಬಾಯಿಂದ ಮಾತೇ ಹೊರಡಲಿಲ್ಲ. ಕ್ರೀಡಾಂಗಣದ ತುಂಬ ಹುಡುಗ ಹುಡುಗಿಯರು ಆಡುತ್ತಿದ್ದರು. ಶಿಕ್ಷಕ ಶಿಕ್ಷಕಿಯರೂ ಅಲ್ಲಿಯೇ ಇದ್ದರು. ಮೂವರು ನಾಲ್ವರು ಶಿಕ್ಷಕರು ಓಡಿಬಂದರು. ಹುಡುಗರೂ ಓಡಿ ಬಂದರು. ಗದ್ದಲ ಕೇಳಿ ಮುಖ್ಯಾಧ್ಯಾಪಕರೂ ಕ್ರೀಡಾಂಗಣದ ಮೇಲೆ ಬಂದರು. ವರ್ತಮಾನವನ್ನು ತಿಳಿದುಕೊಂಡು ಬಂದ ಪಾಲಕರಿಗೆ ಆಶ್ವಾಸನವನ್ನು ಕೊಟ್ಟು ಸಮಾಧಾನ ಮಾಡಿ ಕಳುಹಿಸಿದರು.

ಅವನಿಗೆ ಸಂತೋಷವಾಗಿತ್ತು ಈ ಸಂಗತಿಯಿಂದ. ಆದರೆ ಇಂದು ಇದೇ ಸಂಗತಿ ಗಾಯದ ಮೇಲೆ ಬರೆಕೊಟ್ಟಷ್ಟು ನೋವನ್ನುಂಟುಮಾಡಿತು.

''ನಿನ್ನನ್ನು ಹಿಂಸಿಸಿದಷ್ಟು ಅವನನ್ನು ಹಿಂಸಿಸಿರಲಿಲ್ಲ. ಅವನು ಮಾಡಿದಂತೆ ನೀನೂ ಮಾಡಬೇಕಿತ್ತು. ಮುಯ್ಯಕ್ಕೆ ಮುಯ್ಯ ನೀನು ತೀರಿಸಿಕೊಳ್ಳಬೇಕಿತ್ತು.''

''ಹೌದು. ನಾನೇ ಮುಯ್ಯಕ್ಕೆ ಮುಯ್ಯವನ್ನು ತೀರಿಸಿಕೊಳ್ಳಬೇಕಿತ್ತು.''

''ಮನೆಗೆ ಹೋಗಿ ತನ್ನ ತಂದೆಗೆ ಕೆನ್ನೆಗಳನ್ನು ತೋರಿಸಿದ್ದರೆ....''

''ಅಯ್ಯೊ ತಂದೆಯ!''

ತನ್ನ ತಂದೆತಾಯಿಗಳನ್ನು ಕುರಿತು ಅವನಿಗೆ ಎಂದೂ ಇಲ್ಲದ ಜುಗುಪ್ಸೆ ಉಂಟಾಯಿತು.

ಆರಿಸಿಕೊಂಡು ಕಾಳು ತಿನ್ನುವ ಕೋಳಿ !

ತಮ್ಮ ನೆರಳಿಗೆ ಅಂಜುವ ಪುಕ್ಕರು.

ಅವರಿಂದಲೇ ಅಲ್ಲವೇ ತನ್ನಲ್ಲಿ ಅಪಮಾನವನ್ನು ನುಂಗಿಕೊಳ್ಳುವ ಹೇಡಿತನ ಬಂದದ್ದು.

''ಮಗು ಹೊರಗೆ ಹೋಗಬೇಡ.''

''ಅವರೊಡನೆ ಆಡಬೇಡ.''

''ಜಗಳ ತೆಗೆಯಬೇಡ.'' ''ಅವರೆಲ್ಲಿ ? ನಾವೆಲ್ಲಿ?''

''ನಿನಗೆ ಎಷ್ಟು ಸಲ ಹೇಳಿಲ್ಲ - ದೊಡ್ಡವರ ಗೊಡವೆ ಬೇಡ ಎಂದು '' ಇದೇ ಉಪದೇಶ.

ತೀರ ಸಣ್ಣವನಿದ್ದಾಗಿನ ಸಂಗತಿ. ಊರ ಹೊರಗಿನ ಹಳ್ಳದಲ್ಲಿ ನನಗೆ ದೊರೆತ ಸುಂದರ ಬೆನಕವೊಂದನ್ನು ತನ್ನ ಗೆಳೆಯ ತನಗೆ ಬೇಕೆಂದು ಕಸಿದುಕೊಂಡ. ನಾನು ಕೊಡಲಿಲ್ಲ. ಅವನು ಕುಸ್ತಿಗೇ ಇಳಿದ. ನನ್ನನ್ನು ನೆಲಕ್ಕೆ ಮೆಟ್ಟಿ ಎದೆಯ ಮೇಲೆ ಕುಳಿತು ಆ ಬೆನಕವನ್ನು ಕಸಿದುಕೊಂಡ. ಅಂದೇ ಅವನ ಪಕ್ಷ ಬಲಿಷ್ಠವಾಯಿತು.

ಅವನು ಮನೆಯಲ್ಲಿ ಈ ಸಂಗತಿಯನ್ನು ಹೇಳಿರದಿದ್ದರೂ ತಂದೆ ತಾಯಿಗೆ ಈ ಸಂಗತಿ ಗೊತ್ತಾಯಿತು. ಬೆನಕವನ್ನು ತನ್ನಿಂದ ಕಸಿದುಕೊಂಡವನು ತನ್ನ ಮನೆಗೆ ಹೋಗಿ ತನ್ನ ತಂದೆತಾಯಿಗಳಿಗೆ ದೂರುಕೊಟ್ಟ. ಅವರಿಬ್ಬರೂ ಬಂದು ತನ್ನ ತಂದೆತಾಯಿಗಳನ್ನು ಗದರಿಸಿದರು. ತಾನು ಹೇಳಿಕೊಂಡ:

''ನನ್ನಲ್ಲಿ ತಪ್ಪಿಲ್ಲ. ನಾನು ಅವನ ಕೈಯಿಂದ ಬೆನಕವನ್ನು ಕಸಿದುಕೊಂಡಿಲ್ಲ. ಅವನೇ ನನ್ನ ಕೈಯಿಂದ ಬೆನಕವನ್ನು ಕಸಿದುಕೊಂಡ. ನನ್ನನ್ನು ನೆಲಕ್ಕೆ ಕೆಡವಿ ಎದೆಯ ಮೇಲೆ ಕುಳಿತು ಹೊಡೆದ.''

ಅವನ ತಾಯಿ 'ಅಹಹಾ !' ಎಂದು ಮುಖಕ್ಕೆ ಕೈ ತಿವಿದಳು.

ತನ್ನ ತಂದೆತಾಯಿ - ''ತಪ್ಪಾಯ್ತು. ನಮ್ಮ ಹುಡುಗನಿಗೆ ಹೇಳುತ್ತೇವೆ.'' ಎನ್ನಬೇಕೆ !

ತಂದೆ ''ನಿನಗೆಷ್ಟು ಸಲ ಹೇಳಿಲ್ಲ. ಹಳ್ಳದಲ್ಲಿ ಬೇರೆ ಬೆನಕಗಳಿರಲಿಲ್ಲವೆ?'' ಏನು ನಿರಭಿಮಾನತೆ ಇದು ! ಇಂತಹ ಹೇಡಿಗಳಿಗಾಗಿ ಜಗತ್ತು ಇಲ್ಲ ಎನ್ನುವುದು ತಿಳಿಯುವ ಬಗೆ ಹೇಗೆ ?

'ಸಿಂಹದಾ ಉದರಲ್ಲಿ ಜಂಬುಕವು ಜನಿಸುವದೆ?', ಒಂಭತ್ತನೆಯ ವರ್ಗದ ಕನ್ನಡ ಪಠ್ಯದಲ್ಲಿ ತಾನೇ ಓದಿದ ಮಾತು. ಭೂಮಿತಿಯಲ್ಲಿಯ ಪ್ರಮೇಯದ ಸಾಮಾನ್ಯ ಪ್ರತಿಜ್ಞೆಯಂತೆ ಮೆದುಳಿನಲ್ಲಿ ಮೂಡಿತು. ''ಜಂಬುಕದ ಉದರಲ್ಲಿ ಸಿಂಹ ಜನಿಸುವದೇನು?'' ತಾನು ನರಿ ನರಿ, ನರಿ. ಆಗಲಾರೆ - ಆಗಲಾರೆ. ಆಗುವುದಿಲ್ಲ ಎಂದರೇನು? ನಿನ್ನ ತಂದೆತಾಯಿ ನರಿಗಳು. ನೀನೇ ಹೇಳಿದೆಯಲ್ಲ - ಸಿಂಹದ ಉದರದಲ್ಲಿ ಸಿಂಹ- ನರಿಯ ಉದರದಲ್ಲಿ ನರಿ.

''ಇರಬಹುದು. ನಾನು ನರಿ ಅಲ್ಲ.''

''ಅಲ್ಲವಾಗಿದ್ದರೆ ನೀನು ನರಿಯಂತೆ ಶರಣು ಏಕಾದೆ ಆ ಸಿಂಹಕ್ಕೆ? ನೀನು ಕಂಡ ಪಡೆದ ಬೆನಕವನ್ನು ಕಸಿದುಕೊಂಡನಲ್ಲ. ನೀನೇಕೆ ಅವನನ್ನು ನೆಲಕ್ಕೆ ಮೆಟ್ಟಲಿಲ್ಲ?''

''ನಾನು ಹಾಗೆ ಮಾಡಲಿಲ್ಲ ನಿಜ. ಆದರೆ ನರಿಯಲ್ಲ. ನರಿಗಳ ಗುಂಪಿನಲ್ಲಿ ಬೆಳೆದ ಸಿಂಹ. ಒಂದು ಸಿಂಹದ ಮರಿಯಿತ್ತಂತೆ. ಅದು ಕುರಿಗಳ ಹಿಂಡಿನಲ್ಲಿ ಬೆಳೆದು ಕುರಿಯೇ ಆಗಿತ್ತಂತೆ.

''ಗೊತ್ತು ಈ ಕತೆ. ಆದರೆ ನೀನು ಸಿಂಹ ಎಂಬುದು ಎಂದು ತಿಳಿಯಿತು? ತಿಳಿದೊಡನೆ ಸಿಂಹವಾದೆಯಾ?''

ಇದಕ್ಕೆ ಏನುತ್ತರ ಕೊಡಬೇಕು?

''ಈ ಸಣ್ಣ ಸಂಗತಿಯಾಗಿ ಹತ್ತು ವರುಷಗಳುರುಳಿವೆಯಲ್ಲ- ಒಮ್ಮೆಯಾದರೂ ನೀನು ಸಿಂಹ ಹಾಗೆ ವರ್ತಿಸಿರುವೆಯಾ?''

''ಸುಮ್ಮನೆ ಸಿಂಹ ಸಿಂಹ ಎಂದುಕೊಂಡರಾಯ್ತೆ? ಒಂದಾದರೂ ಸನ್ನಿವೇಶದಲ್ಲಿ ನೀನು ಸಿಂಹದಂತೆ ವರ್ತಿಸಿದ್ದು?''

''ನಾನು ದುರ್ಬಲನಲ್ಲ ಎಂದು ಈ ಮೊದಲೇ ಹೇಳಿದೆನಲ್ಲ. ನನ್ನ ಕಡೆ ತಪ್ಪಿಲ್ಲ. ತಂದೆತಾಯಿಗಳ ಕಡೆ....''

''ತಂದೆತಾಯಿಗಳ ಕಡೆಗೇನು? ಅವರು ನರಿ. ಆದ್ದರಿಂದ ನೀನು ನರಿ.''

''ಅಲ್ಲ ! ಅಲ್ಲ ! ಅಲ್ಲ ! ತನ್ನನ್ನು ಹೊಡೆದು ಅವಮಾನಕ್ಕೆ ಗುರಿಮಾಡಿದ ಶಿಕ್ಷಕ ಈಗ ಮುಂದೆ ಬಂದರೆ.... ಅವನ ಕತ್ತನ್ನೇ ಹಿಚುಕುತ್ತೇನೆ. ಮಗನೆ ಆರ್ಗ್ಯಾನಿಜಮ್ ಎಂದು ಏಕೆ ಎಂದು ಹೊಡೆದೆಯಲ್ಲ. ತೆಗೆದುಕೊ ಹತ್ತು ಸಾರೆ ಹೇಳುತ್ತೇನೆ. ನೀನೇನು ಮಾಡುತ್ತೀಯಾ? ಆ ಬೆನಕವನ್ನು ಕಸಿದುಕೊಂಡ ದುಷ್ಟ ಎಲ್ಲಿರುವನೊ ! ಈಗ ಸಿಕ್ಕರೆ ನೆಲಕ್ಕೆ ಹಾಕಿ ಕತ್ತನ್ನ ಕತ್ತರಿಸುತ್ತೇನೆ. ಅಂದೇ ನನ್ನ ಪೌರುಷವನ್ನು ತೋರಿಸಬಹುದಿತ್ತು. ನನ್ನ ತಂದೆ ಹೀಗೆ ನನ್ನನ್ನು ಹಿಂದೆ ಎಳೆದಿರದಿದ್ದರೆ....ಈಗಿನಿಂದ ಈ ಕ್ಷಣದಿಂದ ನಾನು ಸಿಂಹ.''

ಅವನು ತನ್ನ ಮನಸ್ಸನ್ನು ತನ್ನ ಕೈಯಲ್ಲಿ ಹಿಡಿದುಕೊಂಡು ನೋಡಿದ. ಹೀಗೆ ಅವನೆಂದೂ ಅದನ್ನು ನೋಡಿರಲಿಲ್ಲ. ಅದೊಂದು ಗ್ರಾಮಫೋನ್ ರಿಕಾರ್ಡಿನಂತೆ

ಕಂಡಿತು. ಅದರ ಮೇಲೆ ಅಸಂಖ್ಯಾತ ಸೂಕ್ಷ್ಮರೇಷೆಗಳಿದ್ದವು. ಹದಿನೆಂಟು ವರುಷಗಳಲ್ಲಿ ತನಗೆ ತಿಳಿವು ಬಂದಂದಿನಿಂದ ಬಂದ ಅನುಭವ ಸಂಗೀತವಿತ್ತು ಅದರಲ್ಲಿ. ಸಹಸ್ರಾರು ವ್ಯಥೆ. ಸಹಸ್ರಾರು ಕತೆ. ಎಷ್ಟು ವ್ಯಥೆಗಳೋ ಅಷ್ಟು ಸ್ವರಗಳು. ಇವೆಲ್ಲವನ್ನೂ ಅವನು ಒಳಗೆ ಹೇಗೋ ಅಡಗಿಸಿಟ್ಟುಕೊಂಡಿದ್ದ. ಅದಕ್ಕೂ ತನಗೂ ಇದ್ದ ಸಂಬಂಧಧ ಸೇತುವೆಯನ್ನು ಕತ್ತರಿಸಿಹಾಕಿದ್ದ. ಕ್ಷಣಕ್ಷಣದ ಅನುಭವವನ್ನು ಅದು ಅವನಿಗರಿವಿರದಂತೆಯೇ ಶೋಷಿಸಿಕೊಳ್ಳುತ್ತಿದ್ದಿತು. ಅದರ ಭಾರವನ್ನು ಕಂಡು ಅವನಿಗೆ ಬೆರಗಾಯಿತು. ''ಇದು ನನ್ನದಲ್ಲ'' ಎಂಬ ಭಾವನೆ ಬಂತು. ಇದನ್ನು ಹೊರಗೆ ಒಗೆದುಬಿಡಬೇಕು. ಒಗೆಯುವದು ಸಾಧ್ಯವಾಗಲಿಲ್ಲ.

''ಮೊದಲಿನಂತೆ ಇದನ್ನೂ ಒಳಗೆ ಇಟ್ಟುಬಿಡುತ್ತೇನೆ'' ಇಡಲಾಗಲಿಲ್ಲ. ಕಣ್ಣುಮುಚ್ಚಿಕೊಂಡ; ಕಿವಿ ಮುಚ್ಚಿಕೊಂಡ. ಆದರೆ ಕರುಣಕ್ರಂದನ ಕೇಳಿಸದೆ ಇರಲಿಲ್ಲ. ಮೂಡಿದ ಚಿತ್ರ ಮರೆಯಾಗಲಿಲ್ಲ.

ಕಾಲ ಹೇಗೆ ಕಳೆಯುತ್ತದೆ. ಇಷ್ಟು ಭಾರವನ್ನು ನೋವನ್ನು ಹೊತ್ತುಕೊಂಡು ಹದಿನೆಂಟು ವರ್ಷ ಬದುಕಿದೆ. ಒಂದೇ ಒಂದು ಆಸೆಯಿಂದ. ಎಂಟು ವರ್ಷಗಳ ಕೆಳಗಿನ ಒಂದು ಘಟನೆ. ೧೯೫೭ರ ಆಗಸ್ಟ ಹದಿನೈದರ ಬೆಳಗಿನಲ್ಲಿ ಊರನ್ನೆಲ್ಲ ತಿರುಗಿ 'ವಂದೇ ಮಾತರಮ್. ಮಹಾತ್ಮಾ ಗಾಂಧೀಜೀ ಕಿ ಜಯ್. ಪಂಡಿತ ಜವಾಹರಲಾಲ ನೆಹರೂ ಕಿ ಜಯ್. ಭಾರತ ಮಾತಾಕಿ ಜಯ್' - ಎಂದು ಕೂಗಿದ್ದೇ ಕೂಗಿದ್ದು. ಏನು ಅಭಿಮಾನ. ತನ್ನ ಏಳನೆಯ ವರ್ಷದಿಂದ ಹೀಗೆ ಕೂಗುತ್ತ ಬಂದ. ನಡೆದರೆ ದಣಿವಿಲ್ಲ. ಕೂಗಿದರೆ ಕಂಠ ಬೀಳುವುದಿಲ್ಲ. ಮನೆಗೆ ಬಂದು ತಾಯಿಯ ಮುಂದೆ ಹೇಳಿದ್ದೇ ಹೇಳಿದ್ದು.

ಅಂದು ತಾನು ಅದೇ ಸ್ವಾತಂತ್ರ್ಯೋತ್ಸವವನ್ನು ಮುಗಿಸಿಕೊಂಡು ಬಂದಿದ್ದ - ನಗರಾಧ್ಯಕ್ಷರ ಉಜ್ವಲ ಭಾಷಣವನ್ನು ಕೇಳಿಕೊಂಡು. ಪಕ್ಕದ ಮನೆಯ ಸುಭಾಸ್ - ಅವನಿಗಿಂತ ದೊಡ್ಡವ - ಕೈಲೊಂದು ಪೇಪರ ಹಿಡಿದುಕೊಂಡು ಬಂದಿದ್ದ. ಅವನ ತಂದೆ ''ನೋಡು, ಸುಭಾಷನ ಹೆಸರು ಫೋಟೊ ಪತ್ರಿಕೆಯಲ್ಲಿ ಬಂದಿದೆ. ನಿನ್ನ ಕಣ್ಣೆದುರು ಆದರ್ಶ ಇಟ್ಟುಕೊ'' ಹೇಳಿದರು. ತಾಯಿ ಹೊರಗೆ ಬಂದು:

''ಸುಭಾಷ ಬಹಳ ಚಲೊ ಆತಪ್ಪ. ಮನೆ ಹೆಸರು ಮುಂದೆ ತಂದೆ ''

ಸಂತೋಷಿಸಿದಳು.

ಸುಭಾಷ ಮುಂದಿನ ಶಿಕ್ಷಣಕ್ಕಾಗಿ ರಸಿಯಾಕ್ಕೆ ಹೋಗುವ ಯತ್ನ ನಡೆಸಿದ್ದ. ಪ್ರೊಡಕ್ಷನ್ ಎಂಜಿನಿಯರಿಂಗ್ ಕಲಿಯಲು. ''ನೀನು ರಸಿಯಾಕ್ಕೆ ಹೋಗಿ ಬಾ. ದುಡಿ ಅಭ್ಯಾಸಮಾಡು.'' ಅವನು ಗೌರವದಿಂದ ಸುಭಾಷನತ್ತ ನೋಡಿದ. ಆದರೆ ಸುಭಾಷ ಅವನ ಕಡೆಗೆ ಒಂದು ಬಗೆಯ ತಿರಸ್ಕಾರ ದೃಷ್ಟಿಯಿಂದ ನೋಡಿ ನಕ್ಕ. ಅವನ ತಂದೆಯ ಮುಖ ಸಣ್ಣದಾಯಿತು. ತಾಯಿಯ ಮನಸ್ಸು ನೊಂದಿತು.

''ಪರದೇಶಕ್ಕೆ ಹೋಗುವುದೆಂದರೆ ಅಷ್ಟು ಸುಲಭವಲ್ಲ. ಅದರಲ್ಲಿ ರಸಿಯಾಕ್ಕೆ ಹೋಗುವದು ಲಕ್ಷಕ್ಕೊಬ್ಬರಿಗೆ ಮಾತ್ರ ಸಾಧ್ಯ. ಎಂತಹ ಸಾಮರ್ಥ್ಯ ಬೇಕು ಅದಕ್ಕೆ. ಇಂಗ್ಲಂಡ ಅಮೇರಿಕಾ ಇವುಗಳಿಗೆ ಯಾರೂ ಹೋಗಬಹುದು. ದಾಸಯ್ಯನ ಹಾಗೆ ಅವರ ಮುಖಸ್ತುತಿ ಮಾಡಿದರೆ ಸಾಕು. ಆದರೆ ರಸಿಯಾಕ್ಕೆ ಹೋಗಬೇಕಾದರೆ ನಿಜವಾದ ಬುದ್ಧಿವಂತಿಕೆ ಬೇಕು.'' ಅವನು ತನಗೊಂದು ಆಹ್ವಾನವನ್ನೇ ಕೊಟ್ಟಿದ್ದ. ಅವನು ಅಚಲನಿರ್ಧಾರವನ್ನು ಮಾಡಿಕೊಂಡ. ಅವನು ನಿರ್ಧಾರದ ಹೊರೆಯನ್ನು ಹೊತ್ತು ಎಂಟು ವರ್ಷಗಳನ್ನು ಕಳೆದಿದ್ದ.

ಪ್ರಾಮಾಣಿಕತೆಯನ್ನೇ ಉಂಡು ತನ್ನ ಮನಸ್ಸು ಬೆಳೆಯಬೇಕು. ಸರ್ವಾಂಗ ಸುಂದರ ವ್ಯಾಯಾಮವನ್ನು ಮಾಸ್‌ಡ್ರಿಲ್‌ನಲ್ಲಿ ಮಾಡುತ್ತಿದ್ದಾಗ ತಾನೆಂದೂ ತಪ್ಪಿದವನಲ್ಲ. ಅದನ್ನು ಅವನು ತುಂಬ ಶ್ರದ್ಧೆಯಿಂದ ಮಾಡುತ್ತಿದ್ದ. ಡ್ರಮ್ಮಿನ ಲಯಕ್ಕನುಗುಣವಾಗಿ ಚಾಚೂತಪ್ಪದೆ ಎಂಟನೆಯ ವ್ಯಾಯಾಮವನ್ನು ಮಾಡಿ ಮುಗಿಸಿದಾಗ ಎಂತಹ ಧನ್ಯತೆ ಅವನಲ್ಲಿರುತ್ತಿತ್ತು. ಹತ್ತನೆಯ ವ್ಯಾಯಾಮ ಕುಣಿದು ಚಪ್ಪಾಳೆ ಹೊಡೆಯುವದು. ಸಹಸ್ರವಿದ್ಯಾರ್ಥಿಗಳ ಚಪ್ಪಾಳೆಗಳ ಸದ್ದಿನಲ್ಲಿಯೂ ತನ್ನ. ಚಪ್ಪಾಳೆ ವಿಶಿಷ್ಟ ಮೆರುಗಿನಿಂದ ಕೇಳುತ್ತಿತ್ತು. ತನ್ನ ಚಪ್ಪಾಳೆಯಿಂದಲೇ ಅದಕ್ಕೆ ಪೂರ್ಣತೆ ಬರುತ್ತಿತ್ತು.

ಅವನ ತಂದೆಗೆ ಒಂದೇ ಅಪೇಕ್ಷೆ-ತನ್ನ ಮಗ ದೊಡ್ಡವನಾಗಬೇಕು. ಆಫೀಸಿನಿಂದ ದಣಿದು ಮನೆಗೆ ಬಂದವನು ತನ್ನ ಮಗ ಅಭ್ಯಾಸದಲ್ಲಿ ತೊಡಗಿರದಿದ್ದರೆ ತುಂಬ ತ್ರಸ್ತನಾಗುತ್ತಿದ್ದ. ಅವನ ತಂದೆಗೆ ಆಧುನಿಕ ಶಿಕ್ಷಣದಲ್ಲಿಯೆ ವಿಶ್ವಾಸವಿರಲಿಲ್ಲ. ''ನಾನು ಕೇವಲ ಮ್ಯಾಟ್ರಿಕ್ ಆದರೂ ಏನು ಈಗಿನ ಎಂ.ಎ. ದವರಕ್ಕಿಂತ ಮೇಲು.'' ಇದು ಅವನ ನಿತ್ಯ ಪಲ್ಲವಿ.

''ನಿಮಗೆ ಬುದ್ಧಿಯೆ ಇಲ್ಲ. ನಿಮ್ಮನ್ನು ಏನೆಂದು ತೆಗೆದುಕೊಂಡರೂ

ನೋಕರಿಗೆ'' ಎಂದು ನಿತ್ಯ ಮೇಲಿನವರಿಂದ ಬೈಗಳು ತಿನ್ನುವ ಅವನ ತಂದೆಗೆ ಮೇಲಿನವರ ಬೈಗಳೇ ಕೇಳಿಸುತ್ತಿದ್ದಿಲ್ಲ. ಅವನು ತನ್ನ ಆಸೆ ಆಕಾಂಕ್ಷೆಗಳನ್ನೆಲ್ಲಾ ತನ್ನ ಮಗನಲ್ಲಿ ಕಾಣುತ್ತಿದ್ದ.

''ಏನು ಈಗಿನ ಶಿಕ್ಷಕರು! ವಿದ್ಯಾರ್ಥಿಗಳಿಗೆ ಸ್ಫೂರ್ತಿಸ್ಥಾನವಾಗಬೇಕು.'' ಅವನ ಅಪೇಕ್ಷೆ. ಆದರೆ ತನ್ನ ಮಗನಲ್ಲಿ ಸ್ಫೂರ್ತಿಯನ್ನು ತಾನೆ ತುಂಬುತ್ತಿದ್ದ:

''ಇದು ಸ್ಪರ್ಧೆಯ ಯುಗ. ಸ್ಪರ್ಧೆಯಲ್ಲಿ ಗೆದ್ದರೆ ಬದುಕು. ಇಲ್ಲದಿದ್ದರೆ ಸಾವು. ನಿನಗೆ ಏನೂ ಕಡಮೆ ಇಲ್ಲ. ನಮ್ಮ ಕಾಲದಲ್ಲಿ ಹೀಗಿರಲಿಲ್ಲ. ನಮಗೆ ಹೇಳುವವರೂ ಇರಲಿಲ್ಲ. ನನ್ನ ತಂದೆ ಕರ್ತವ್ಯಚ್ಯುತನಾದರೂ ನಾನು ನನ್ನ ಸ್ವಪ್ರಯತ್ನದಿಂದ ಮುಂದೆ ಬಂದೆ. ನೀನು ಎಲ್ಲದರ ಸದುಪಯೋಗವನ್ನು ಮಾಡಿಕೊಡು ಮುಂದೆ ಬರಬೇಕು. ನಾನು ನನಗಾಗಿ ಹೇಳುತ್ತಿಲ್ಲ. ನನಗೆ ನಿನ್ನ ಮೇಲೆ ಅವಲಂಬಿಸುವ ಅಪೇಕ್ಷೆ ಎಳ್ಳಷ್ಟೂ ಇಲ್ಲ. ನಿನಗಾಗಿ ನಿನ್ನ ಹಿತಕ್ಕಾಗಿ ಹೇಳುತ್ತಿದ್ದೇನೆ.''

ಈ ಉಪದೇಶ ಅವನಿಗೆ ಮಾದಕವಾಗಿತ್ತು. ''ಅಹುದು. ನಾನು ಮುಂದೆ ಹೋಗಬೇಕು'' ಒಂದೇ ಸವನೆ ಈ ಬಯಕೆ ಅವನನ್ನು ಸುಡುತ್ತಿತ್ತು. ಹನ್ನೊಂದನೆ ವರ್ಗಕ್ಕೆ ಬಂದಾಗ ಅವನಿಗೆ ತನ್ನ ಮೇಲೆ ಏನೋ ತುಂಬ ಭಾರ ಬಿದ್ದಂತೆ ಎನಿಸಿತು. ಎರಡು ವರ್ಷಗಳಿಂದ ಅವನು ಒಂದು ಕನಸನ್ನು ಅನೇಕ ಸಲ ಕಂಡಿದ್ದ. ಅಪಾರವಾದ ಜಲರಾಸಿ. ತಾನು ಮಧ್ಯದಲ್ಲಿದ್ದಾನೆ. ಯಾವ ಆಸರೆಯೂ ಇಲ್ಲ. ಕಡಲಿನಂತಹ ಆ ಜಲರಾಸಿಯಲ್ಲಿ ಇನ್ನೊಂದು ಪಿಳ್ಳೆ ಕೂಡ ಕಣ್ಣಿಗೆ ಕಾಣುವಂತಿಲ್ಲ. ತಾನೊಬ್ಬನೆ ಈಸುತ್ತಿದ್ದಾನೆ. ರಭಸದಿಂದ ಈಸುತ್ತಿದ್ದಾನೆ. ಭೋರ್ಗರೆಯುವ ಪ್ರವಾಹದ ಗರ್ಜನೆ, ಬಿರುಗಾಳಿಯ ಹೊಡೆತ ಇವುಗಳನ್ನು ಮೀರಿಸಿ ಅವನು ಈಸುವ ಸುದ್ದಿ ಕೇಳಿಬರುತ್ತಿದೆ. ಅವನ ವೇಗವೂ ಸಾಕಷ್ಟಿದೆ. ಅವನಿಗೆ ದಣಿವು ಎನಿಸುತ್ತಿಲ್ಲ. ಆದರೆ ಒಂದು ಬಗೆಯ ಅವ್ಯಕ್ತ ಭೀತಿಯಿದೆ. ಒಂದೆರಡು ಸಲ ಗಾಬರಿಯಾಗಿ ಎಚ್ಚತ್ತು ಇದು ನಿತ್ಯದ ಅನುಭವವಾಯಿತು. ಒಂದು ಸಲ ತಾಯಿಗೆ ಹೇಳಿದ.

''ಇಲ್ಲದುದನ್ನು ಯೋಚಿಸಬೇಡ. ಮಲಗುವಾಗ ಮಗ್ಗುಲಾಗಿ ಮಲಗು. ದೇವರ ಹೆಸರು ತೆಗೆದುಕೊ.'' ತಾಯಿ ಉಪದೇಶ ಮಾಡಿದಳು.

ಕನಸು ಯಾವ ಉಪಾಯಕ್ಕೂ ಬಗ್ಗಲಿಲ್ಲ. ಆದರೆ ಅವನಿಗೆ ಸ್ವಲ್ಪ

ದಿನಗಳಲ್ಲಿಯೇ ಕನಸು ಒಳ್ಳೆಯದು ಎಂಬ ಅರಿವು ಬಂತು. ಈಸುವದು ತನ್ನ ಪ್ರಯತ್ನವನ್ನು ನೀರು ಬದುಕಿನ ಭೀಕರತೆಯನ್ನು ತೋರಿಸುತ್ತದೆ ಎಂಬ ಕಲ್ಪನೆ ಅವನಿಗೆ ಬಂತು. ತನ್ನ ಪ್ರಯತ್ನವನ್ನು ಇನ್ನೂ ಹೆಚ್ಚಿಸಿದ.

ಅವನು ವೃತ್ತಪತ್ರಗಳನ್ನು ಓದಿದರೆ ಅವನ ತಂದೆಗೆ ಬೇಸರ. ಅವನ ತಂದೆಗೆ ವೃತ್ತಪತ್ರಿಕೆಗಳನ್ನು ಕಂಡರಾಗದು.

‘‘ವೃತ್ತಪತ್ರಿಕೆಗಳನ್ನು ಓದಿ ವೇಳೆ ಹಾಳುಮಾಡಿಕೊಳ್ಳಬೇಡ.’’

ಕತೆ ಕಾದಂಬರಿಗಳೆಂದರೆ ಅವನ ತಂದೆಗೆ ವಿಪರೀತ ತಲೆನೋವು. ಇಂಗ್ಲಿಶ್ ಭಾಷೆಯ ಮೇಲೆ ಅಪಾರ ಮೋಹ. ಮಗ ಶಾಲೆಯಿಂದ ತಪ್ಪಿ ಯಾವುದಾದರೂ ಕಾದಂಬರಿಯನ್ನು ತಂದರೆ ‘‘ನಿನಗೆ ನನ್ನ ಮಾತೆಂದರೆ ಕಾಲುಕಸ. ಅವುಗಳನ್ನು ಓದಿ ವೇಳೆ ಹಾಳುಮಾಡಬೇಡ. ಇಂಗ್ಲಿಶ್ ಚೆನ್ನಾಗಿ ಅಭ್ಯಾಸಮಾಡು. ನಿಮ್ಮ ಶಿಕ್ಷಕರಿಗೇ ಇಂಗ್ಲಿಶ್ ಬರುವುದಿಲ್ಲ. ನಾನು ಇತಿಹಾಸ ಭೂಗೋಲಗಳನ್ನು ಕೂಡ ಇಂಗ್ಲಿಶ್‌ನಲ್ಲಿ ಓದಿದ್ದೇನೆ. ವೃತ್ತಪತ್ರ ಕತೆ ಕಾದಂಬರಿ ನಾಳೆ ನಿನ್ನ ಹೊಟ್ಟೆಗೆ ಹಾಕುವದಿಲ್ಲ.’’ ತಂದೆಯ ಈ ನುಡಿಗಳಲ್ಲಿ ತುಂಬಿದ ವೇದನೆಯ ಮೊನೆಯ ಇರಿತ ಅಸಹ್ಯವಾಗಿರುತ್ತಿತ್ತು. ತಾಯಿ ಹೇಳಿದಳು:

‘‘ಅವರ ಮನಸ್ಸನ್ನು ನೋಯಿಸಬಾರದು.’’

೧೯೬೨ ನೆಯ ಇಸ್ವಿ ಅವನಲ್ಲಿ ತುಂಬ ಭಯವನ್ನು ಬಿತ್ತಿತು. ಸ್ನೇಹಿತರೊಡನೆ ಅಷ್ಟಗ್ರಹದ ಪರಿಣಾಮಗಳನ್ನು ಅವನು ಚರ್ಚಿಸಿದ. ಊರಲ್ಲೆಲ್ಲ ಒಂದು ಬಗೆಯ ಭಯ ಒಂದು ತಿಂಗಳವರೆಗೆ ವ್ಯಾಪಿಸಿತ್ತು. ೧೯೪೮ರ ಜನವರಿಯಿಂದ ಅವನ ತಂದೆಯವರು ರಾಮರಕ್ಷೆಯನ್ನು ಪಾರಾಯಣ ಮಾಡುತ್ತ ಬಂದಿದ್ದರು. ಅವನ ತಾಯಿ ಕೂಡ ಅದರ ಪಾರಾಯಣವನ್ನು ಮಾಡುತ್ತಿದ್ದಳು. ಅವನಿಗೆ ಮಾತು ಬಂದಕೂಡಲೆ ತಂದೆ ರಾಮರಕ್ಷೆಯನ್ನೇ ಕಲಿಸಹತ್ತಿದ್ದರು. ಗಾಂಧಿವಧೆಯ ನಂತರ ದೇಶ ಮತ್ತೆ ಒಂದು ಬಗೆಯ ಕ್ರೌರ್ಯವನ್ನು ಅನುಭವಿಸಿತು. ‘‘ಕೇಳಿದೆಯಾ ? ರಾಮರಕ್ಷೆಯ ಮಹಿಮೆ ಜಗತ್ತಿನಲ್ಲೆಲ್ಲ ಹಬ್ಬುತ್ತಿದೆ.’’

‘‘ದೇವರು ಆಪತ್ತಿಗಳನ್ನು ಈ ಕಾರಣಕ್ಕಾಗಿಯೇ ತರುತ್ತಾನೆ. ಸೂಜಿಯ ಎಚ್ಚದಲ್ಲಿ ಆನೆಯನ್ನು ಹಾಯಿಸುವ ಅನಂತ ಮಹಿಮೆ ಆತನದು !’’

``ಆ ಊರಲ್ಲಿ ಒಂದು ಮನೆಯವರನ್ನೆಲ್ಲ ಒಳಗೆ ಹಾಕಿ ಜೀವಂತ ಸುಡುವ ಪ್ರಯತ್ನ ಮಾಡಿದರಂತೆ. ಮನೆಯವರು ಜೀವದ ಮೇಲಿನ ಆಸೆಯನ್ನೇ ಬಿಟ್ಟು ಉಚ್ಚಕಂಠದಿಂದ ಎಳೆ ಮಕ್ಕಳು ಮೊದಲು ಮಾಡಿಕೊಂಡು `ಅಸ್ಯ ಶ್ರೀ ರಾಮ ರಕ್ಷಾಸ್ತೋತ್ರ ಮಂತ್ರಸ್ಯ' ಎಂದು ಪ್ರಾರಂಭ ಮಾಡಿದರಂತೆ - `` ರಾಮೋ ರಾಜಮಣಿಃಸ್ಸದಾ ವಿಜಯತೇ ರಾಮಂ ರಮೇಶಂ ಭಜೇ' ಶ್ಲೋಕದವರೆಗೆ ಬಂದಿದ್ದರು. ಮನೆಗೆ ಬೆಂಕಿ ಹಚ್ಚಲು ಬಂದವರಿಗೆ ಏನಾಯಿತೋ ಏನೋ ನಿಲ್ಲಿಸಿದರಂತೆ `ಮಹಾತ್ಮಾ ಗಾಂಧೀಜೀಕಿ ಜಯ್. ಪ್ರಭು ಶ್ರೀ ರಾಮಚಂದ್ರಜೀಕಿ ಜಯ್' ಇಂತಹ ನೂರಾರು ಕತೆಗಳಿಂದ ತಂದೆಯ ಮನಸ್ಸು ಒಂದು ನಿರ್ಧಾರಕ್ಕೆ ಬಂದಿತ್ತು.

``ಇಲ್ಲಿ ನೋಡು ಇನ್ನೂ ಈಗೇನಾಗಿದೆ. ಕಾಲ ತುಂಬ ಕಷ್ಟತರದ್ದಾಗುತ್ತಿದೆ. ನಮ್ಮ ಕಾಲ ಹೇಗೂ ಸರಿಯಿತು. ನೀವು ಏನೇನು ಅನುಭವಿಸಬೇಕಾಗುತ್ತದೆಯೋ ಯಾರು ಬಲ್ಲರು!'' ತಂದೆಯ ಈ ಧ್ವನಿ ಅವನ ಕೈಕಾಲು ಕೆಡಿಸುತ್ತಿತ್ತು. ಕತ್ತಲು ಗುಹೆಯೊಂದರಲ್ಲಿ ಹೊಕ್ಕು ಕುತ್ತೆಸರು ಪಡುವಂತಾಗುತ್ತಿತ್ತು ಅವನಿಗೆ. ಮನಸ್ಸಿನಲ್ಲಿಯೇ ರಾಮರಕ್ಷೆಯನ್ನು ಪಠಿಸುತ್ತಿದ್ದ. ಬದುಕು ಎಷ್ಟು ಭಯಂಕರ! ಎನ್ನಿಸುತ್ತಿತ್ತು. ಅವನಿಗೆ ಮೊದಮೊದಲು ಗಿಡವನ್ನೇರಬೇಕು. ಹಣ್ಣು ಹರಿಯಬೇಕು ಎನ್ನುವ ಅವನಿಗೆ ``ನಲ್ಲಿಯಿಂದ ನೀರು ಬರುವಂತೆ ಹಣ ಬರಬಾರದೆ? ಹಣ್ಣು ಬರಬಾರದೆ?''ಎನ್ನುವಂತಾಯಿತು.

ಒಮ್ಮೊಮ್ಮೆ ಅವನ ಕಣ್ಣೆದುರು ಭಯಂಕರವಾದ ಶೂನ್ಯ ಬಂದು ಭಯಗ್ರಸ್ತನಾಗುತ್ತಿದ್ದ. ``ನೋಡು ನಿಮ್ಮ ದೈವ ನಿಮ್ಮ ಸುತ್ತ. ನೀನು ದುಡಿಯಬೇಕು. ಅಭ್ಯಾಸ ಮಾಡಬೇಕು. ಆಟಓಟಗಳಲ್ಲಿ ವೇಳೆ ಹಾಳಾದರೆ ಮುಂದೆ ಹೊಟ್ಟೆಗೇನು ಗತಿ? ಈಗಿನ ಸ್ಥಿತಿ ಬಹಳ ಕೆಟ್ಟದೆ. ತಿಳಿಯಿತೊ ಇಲ್ಲವೊ? ನಾವೇನು ಚಿರಂಜೀವಿಗಳೆಂದು ತಿಳಿದೆಯಾ? ಎಷ್ಟು ದಿವಸ ನಿಮ್ಮನ್ನು ನೋಡಿಕೊಳ್ಳಲಾದೀತು?'' ತಂದೆಯ ನುಡಿ.

ಅವನಿಗೆ ಒಂದೊಂದು ಸಲ ಕಣ್ಣೆದುರು ದೊಡ್ಡದಾದ ಎರಡು ಕೈಗಳು-ಉದ್ದನ್ನ ಬೆರಳು. ಹರವಾದ ಅಂಗೈ. ಎಲ್.ಆಯ್.ಸಿಯ ಹಸ್ತಗಳಂತೆ ಬಂದು ನಿಲ್ಲುತ್ತಿದ್ದವು. ಅವನು ಭಯದಿಂದ ಕಣ್ಣು ಮುಚ್ಚುತ್ತಿದ್ದ. ಆ ಅಂಗೈಗಳ ಮಧ್ಯದಲ್ಲಿ ತಾನು ತನ್ನ ಒಬ್ಬಳೇ ತಂಗಿ ಹಾಗೂ ತಾಯಿ ನಿಂತಂತೆ ಭಾಸ.

ಸುತ್ತಲೆಲ್ಲ ಭೋರ್ಗರೆಯುವ ಸಮುದ್ರ. ಭಯಂಕರವಾದ ಬಿರುಗಾಳಿ. ತಮ್ಮ ಎದುರು ಒಂದು ಹಣತೆ. ಅದರಲ್ಲಿ ಮಿಣಿ ಮಿಣಿ ದೀಪ. ಅನಿರ್ವಚನೀಯವಾದ ವೇದನೆಯಾಗುತ್ತಿತ್ತು ಅವನಿಗೆ. ತುಸು ಸಮಯದಲ್ಲಿ ಯಾರೋ ಕೈಗಳನ್ನು ಕತ್ತರಿಸಿದಂತೆ. ಎರಡೂ ಭವ್ಯವಾದ ಹಸ್ತಗಳು ಕೆಳಗೆ ಬಿದ್ದೊಡನೆ ತಾವೆಲ್ಲ ನಿರಾಧಾರ.

ಇದೇಕೆ ಕಣ್ಣೆದುರು? ಥೂ ಇದರ ಮನೆ ಹಾಳಾಗ. ಹೀಗೆ ತನಗೊಬ್ಬನಿಗೆಯೇ ಆಗುತ್ತದೆಯೆ? ಯಾರನ್ನಾದರೂ ಕೇಳಬೇಕು. ಯಾರನ್ನು ಕೇಳುವದು? ಗೆಳೆಯರನ್ನು. ಗೆಳೆಯರಾದರೂ ಯಾರು ತನಗೆ? ಶಾಲೆಯಲ್ಲಿ ಒಂದು ದಿನವಾದರೂ ಮಾತನಾಡಿದ್ದು !

ಒಂದು ದಿವಸ ಶಾಲೆಯಲ್ಲಿ ಸಮಯ ಸಿಕ್ಕಿತು. ಹತ್ತಿರದ ಹುಡುಗನನ್ನು ಕೇಳಿದ:

''ನಿನಗೆ ಭಯ ಬರುವುದಿಲ್ಲವೆ?''

''ಯಾತರದು?''

''ಯಾತರದ್ದಾದರೂ?''

''ಹತ್''

ಅವನು ಆ ಅಭಿನಯದಿಂದ ಮತ್ತೂ ಹೆದರಿದ. ನಾಲ್ವರೊಡನೆ ಕೂಡಿ ಇರಬೇಕು. ಅಂದರೆ ಅದನ್ನು ಮರೆಯಬಹುದು.

ಊರಲ್ಲಿ ರಾಷ್ಟ್ರೀಯ ಸೇವಾ ಸಂಘಗಳು ಬೆಳೆಯುತ್ತಿರುವ ಕಾಲ. ತಂದೆಯ ಹಳೆಯ ಸ್ನೇಹಿತನೊಬ್ಬ ತಮ್ಮ ಮನೆಗೆ ಬಂದ ಒಂದು ಸಂಜೆ. ತನ್ನ ತಂದೆ ಭಯದಿಂದ ಹೊರಗೇ ಓಡಿಬಂದರು. ಸ್ನೇಹಿತನ ಜತೆ ಹೊರಗೆ ನಿಲ್ಲಲೂ ಭಯ. ಸ್ನೇಹಿತ ರಾಷ್ಟ್ರೀಯ ಸೇವಾ ಸಂಘದ ಪುರಸ್ಕರ್ತ. ಒಂದು ಶಾಖೆಯನ್ನು ನಡೆಸುತ್ತಿದ್ದ. ಖಾಕಿಯ ಚಣ್ಣ ಹಾಫಶರ್ಟ್ ತಲೆಯ ಮೇಲೊಂದು ಟೊಪ್ಪಿಗೆ. ಎಡಗೈ ಮಣಿ ಕಟ್ಟಿಗೆ ಕಟ್ಟಿದ. ಗುಲಾಬಿ ಬಣ್ಣದ ರಕ್ಷಾಬಂಧನ. ತಂದೆಯ ಸ್ನೇಹಿತನ ತುಂಬು ತೊಡೆ ತುಂಬು ತೋಳು ಹರವನ್ನ ಎದೆ ಅವನಲ್ಲಿ ದುಃಖವನ್ನುಂಟುಮಾಡಿತು. ತನ್ನ ತಂದೆ ಒಮ್ಮೆಯಾದರೂ ಈ ವೇಷ ತೊಟ್ಟಿದ್ದರೆ?

ಸ್ನೇಹಿತನ ವಿಷಯದಲ್ಲಿ ಅವನಿಗೆ ಗೌರವ ಉಂಟಾಯಿತು.

''ನೋಡು ನಾವು ಸರಕಾರಿ ನೌಕರದಾರರು. ನಮ್ಮ ಪ್ರಾಣವೆಲ್ಲ ನಿಮ್ಮ ಕಡೆಗಿದೆ.''

''ಅರೆ ಈಗ ಅದಕ್ಕೆ ಪ್ರತಿಬಂಧವಿಲ್ಲವಲ್ಲ. ನೀನು ಬಿಡು. ನಿನ್ನ ಮಗನನ್ನಾದರೂ ಕಳಿಸಿಕೊಡಬಾರದೆ? ಅವನ ಓರಗೆಯ ಹುಡುಗರು ಎಷ್ಟೋ ಬರುತ್ತಾರೆ. ಆರೋಗ್ಯ ಸುಧಾರಿಸುತ್ತದೆ.''

''ನಾಳಿನಿಂದ ನೀನೂ ಶಾಖಾಕ್ಕೆ ಹೋಗು'' ತಂದೆ ಹೇಳಿದ.

ಮರುದಿನ ಸಂಜೆ ಎಂಟಕ್ಕೆ ಅವನು ಮನೆಗೆ ಬಂದಾಗ ತಂದೆ ಗುಡುಗಿದ:

''ಎಲ್ಲಿಯೋ ಹೋಗಿದ್ದೆ ಅಭ್ಯಾಸ ಬಿಟ್ಟು?''

''ಶಾಖಾಕ್ಕೆ ಹೋಗಿದ್ದೆ.''

''ನೀನು ಒಂದು ದಿನ ಹೀಗೆ ಹಾಳಾಗಿ ಹೋಗುತ್ತಿ.''

''ನೀನೇ ಹೇಳಿದ್ದೆಯಲ್ಲಪ್ಪ ನಾಳೆಯಿಂದ ನೀನು ಸಂಘಕ್ಕೆ ಹೋಗು ಎಂದು.''

''ನಿನ್ನ ತಲೆ. ಹೋಗು ಎಂದಕೂಡಲೆ ಹೋಗಿಯೇಬಿಡುವದೇನು? ನಾಳೆ ನೌಕರಿಗೆ ಏನು ಮಾಡುತ್ತಿ?''

ಅವನು ಸಂಘದ ಕೌಮುದಿ ಸಂಚಲನವನ್ನು ಮುಗಿಸಿಕೊಂಡು ಉತ್ಸಾಹದಿಂದ ಮನೆಗೆ ಬಂದಿದ್ದ- ತನ್ನ ತಂದೆಗೆ ತಾಯಿಗೆ ತನ್ನ ಹೊಸ ಅನುಭವಗಳನ್ನು ಹೇಳಲು. ತಂದೆಯ ನುಡಿಯಿಂದ ಅವನು ಭೀತಿಯ ನಂಜಿನಿಂದ ತ್ರಸ್ತನಾದ.

''ಅಲ್ಲಿ ಹೋಗಬೇಡಪ್ಪ'' ತಾಯಿಯ ಬೇಡಿಕೆ.

''ಅಲ್ಲಮ್ಮ ನಾನೊಮ್ಮೆಯೂ ಹೋಗಿರಲಿಲ್ಲ. ತಂದೆಯೇ ಹೇಳಿದ ಸಂಘಕ್ಕೆ ಹೋಗು ಎಂದು. ನಾನು ಹೋದೆ.''

''ಅವರು ನಿಜವಾಗಿ ಹೋಗು ಎನ್ನಲಿಲ್ಲ. ಬಂದವರ ಮುಖದೆದುರು ಸುಮ್ಮನೆ ಹೇಳಿದರು.''

''ಅಲ್ಲಿ ಹೋದರೆ.....''

''ಹೆಚ್ಚು ಕೇಳಬಾರದು ಹಿರಿಯರು ಹೇಳಿದ ಮಾತಿಗೆ ಹೂಂ ಎನ್ನಬೇಕು. ಏನೆಂದರೂ ಅವರಿಗೆ ನಿನಗಿಂತ ಹೆಚ್ಚು ತಿಳಿಯುತ್ತದೆ. ಅವರೇನು ನಿನ್ನ ಶತ್ರುಗಳಲ್ಲ. ನಿನ್ನ ಹಿತವನ್ನೇ ಬಯಸುತ್ತಾರೆ.''

ಅಲ್ಲಿ ಹೋಗುವುದರಿಂದ ಕಲ್ಯಾಣವಾಗುವದಿಲ್ಲವೆ? ಅಲ್ಲಿ ಅಷ್ಟು ಹುಡುಗರು ಬರುತ್ತಾರೆ. ಅವರ ತಂದೆ ಅವರಿಗೇಕೆ ಬೇಡವೆನ್ನುವುದಿಲ್ಲ. ಈ ಭಯ ತನ್ನ ತಂದೆಗೆ ಮಾತ್ರ ಏಕೆ? ಸಂಘದಲ್ಲಿ ಹೋದರೆ ಎಷ್ಟು ಸಂತೋಷ. ಸ್ನೇಹಿತರೆಷ್ಟು ಜನ. ತನ್ನ ತಾಯಿಯನ್ನೂ ಕೇಳಿ ಪ್ರಯೋಜನವಿಲ್ಲವೆಂದು ಎನ್ನಿಸಿತು ಅವನಿಗೆ.

ಮನದಲ್ಲಿಯ ದ್ವಂದ್ವ ಅವನನ್ನು ಹಣ್ಣು ಹಣ್ಣು ಮಾಡುತ್ತಿತ್ತು. ''ನಾನು ಹೇರ್ ಕಟ್‌ಗೆ 'ರಾಯಲ್' ಸಲೂನಿಗೆ ಹೋಗುತ್ತೇನೆ.''

''ಅಲ್ಲೇಕೆ? ಇಲ್ಲಿಯೇ ಇದೆಯಲ್ಲ?''

''ಇಲ್ಲಿ ಚಲೊ ಮಾಡುವುದಿಲ್ಲ''

''ಅವೆಲ್ಲಾ ರಗಳೆ ಬೇಡ. ಇಲ್ಲಿಯೇ ಹೋಗು.''

''ಶಾಲೆಯಲ್ಲಿ ಸ್ನೇಹಿತರು ನಗುತ್ತಾರೆ.'' ಶಾಲೆಯಲ್ಲಿ ಅವನ ಸಹಪಾಠಿಗಳು ನಕ್ಕದ್ದುಂಟು.

ರಾಯಲ್ ಹೇರ್ ಕಟಿಂಗ್ ಸಲೂನಿನಲ್ಲಿಯ ಕುರ್ಚಿ, ಫ್ಯಾನ್, ಕನ್ನಡಿ ಅವನ ಮನಸ್ಸನ್ನು ಸೆಳೆಯುತ್ತಿದ್ದವು. ಮನೆಯ ಹತ್ತಿರದ ಸಲೂನಿನಲ್ಲಿ ಒಂದೇ ಒಂದು ಮುರುಕು ಕುರ್ಚಿ. ಒಡೆದ ಕನ್ನಡಿ. ಒಂದೂ ಚಿತ್ರವಿಲ್ಲ. ಪತ್ರಿಕೆಗಳಿಲ್ಲ. ರಾಯಲ್‌ದಲ್ಲಿಯ ವಿಶೇಷ ಆಕರ್ಷಣೆಯೆಂದರೆ ತುಂಬುಕಂಠದಲ್ಲಿ ಹಾಡುವ ರೇಡಿಯೊ.

''ಅಲ್ಲಿ ಏಕೆ ಬೇಡ ಎನ್ನುತ್ತಿ?''

''ನಿನಗೆ ಒಮ್ಮೆ ಹೇಳಿದ್ದೇನೆ. ಏಕೆ ಎಂದು ಎನ್ನಬಾರದೆಂದು.''

ಅವನಿಗೆ ತುಂಬ ಬೇಸರ ಬಂತು. ತಂದೆ ಹೇಳಿದುದನ್ನು ಮೀರುವಂತಿಲ್ಲ.'' ಮಾತೆತ್ತಿದರೆ ಅಪ್ಪಣೆ.

''ನಾನು ನಿನ್ನ ಹಿತವನ್ನೇ ಬಯಸುತ್ತೇನೆ.''

ನನಗೇನು ತಿಳಿಯುವದಿಲ್ಲವೆ ನನ್ನ ಹಿತ? ಅವರ ಹತ್ತು ಮಾತನ್ನು ಕೇಳಿದರೆ ನನ್ನ ಒಂದು ಮಾತನ್ನು ಅವರು ಕೇಳಬಾರದೆ? ತಮ್ಮ ಮನೆಯಲ್ಲೊಂದು ರೇಡಿಯೊ ಇದ್ದರೆ ಏನು ಸಂತೋಷ ! ಎಂತಹ ಅಭಿಮಾನ ! ಸಿನೆಮಾ - ಅಯ್ಯೊ - ಒಂದು ಸಿನೆಮಾ ನೋಡಬೇಕಾದರೆ ಎಷ್ಟು ಪ್ರಯಾಸ. ಒಂಭತ್ತನೆಯ ಇಯತ್ತೆಯ ವಾರ್ಷಿಕ ಪರೀಕ್ಷೆ ಮುಗಿದಿತ್ತು. ಕೊನೆಯ ದಿನ ತನ್ನ ವರ್ಗದ ಹುಡುಗರೆಲ್ಲ ಎಷ್ಟು ಉತ್ಸಾಹದಿಂದ ಸಿನೇಮಾದ ಬಗ್ಗೆ ಚರ್ಚಿಸಿದರು.

‘‘ನೀನೂ ಬರುತ್ತೀಯೇನೊ ಸಿನೇಮಾಕ್ಕೆ?’’

ಅವನಿಗೆ ಈ ಪ್ರಶ್ನೆಯನ್ನು ಕೇಳಿದವನ ಮಾತಿನಲ್ಲಿಯ ವ್ಯಂಗ್ಯ ಹೃದಯಕ್ಕೆ ತಗುಲಿತು.

‘‘ಬರುತ್ತೇನೆ’’ ಉತ್ಸಾಹದಿಂದ ಹೇಳಿದ.

ಮನೆಗೆ ಬಂದವನೆ ತಂದೆಯನ್ನು ಕೇಳಿದ:

‘‘ಸಹಪಾಠಿಗಳೆಲ್ಲ ಸಿನಿಮಾಕ್ಕೆ ಹೋಗುತ್ತಾರೆ.’’

ಈ ಮಾತನ್ನು ಕಿವಿಗೆ ಹಾಕಿಕೊಳ್ಳದೆ ತಂದೆ ಕೇಳಿದ:

‘‘ಯಾವ ಪೇಪರ ಇತ್ತು?’’

ಮನೆ ಬಿಟ್ಟು ಹೋಗುವಷ್ಟು ಸಂತಾಪವಾಯಿತು. ಕ್ರೋಧ ಶೋಕದಲ್ಲಿ ಪರಿವರ್ತಿತವಾಯಿತು. ಕಣ್ಣಂಚಿನಲ್ಲಿ ನೀರು ಬಂದವೇ ಹೊರತು ತುಟಿಯಿಂದ ಮಾತು ಉದುರಲಿಲ್ಲ.

ತಂದೆಗೆ ತನ್ನ ಭಾವನೆಗಳೇ ಅರ್ಥವಾಗಲೊಲ್ಲವು. ಇಷ್ಟು ವರ್ಷಗಳಲ್ಲಿ ತಾನು ನೋಡಿದ ಸಿನೆಮಾ ಎಂದರೆ ಮೂರೇ ಮೂರು. ಒಂದೊಂದು ಸಿನೆಮಾ ಎಂದರೆ ದುಡಿದು ಗಳಿಸಿದ ಶ್ರೇಯಸ್ಸು. ನೂರಕ್ಕೆ ಅರವತ್ತೈದರಷ್ಟಾದರೂ ಗುಣಗಳನ್ನು ದೊರಕಿಸಬೇಕು - ಸಿನೆಮಾ ನೋಡಲು. ನೂರಕ್ಕೆ ಅರವತ್ತೈದು !

‘‘ಏಕೆ ನಾಚಿಕೆ ಬರುವುದಿಲ್ಲವೇನು ? ನೂರಕ್ಕೆ ಎಪ್ಪತ್ತು ತೆಗೆದುಕೊಂಡು ತೋರಿಸುತ್ತೇನೆ ಎಂದು, ಫರ್ಸ್ಟ್ ಬರುತ್ತೇನೆ ಎಂದು ಪ್ರತಿಜ್ಞೆ ಮಾಡಬೇಕು. ನಿನಗೇನು ಪುಸ್ತಕಗಳಿಲ್ಲವೆ? ಮನೆಯಿಲ್ಲವೆ? ಹೊಟ್ಟೆಗಿಲ್ಲವೆ? ಯಾರಾದರೂ ಫರ್ಸ್ಟ್ ಬಂದೇ ಬರಬೇಕಲ್ಲ. ನೀನೇ ಯಾಕಾಗಬಾರದು?’’

ಏಳನೆಯ ಇಯತ್ತೆಯ ಪರೀಕ್ಷೆಯಲ್ಲಿ ಅರವತ್ತರಷ್ಟು ಬಿದ್ದದ್ದರಿಂದ ಸಿನೆಮಾ ಲೋಪವಾಗಿತ್ತು. ತಾಯಿ ಹೇಳಿದಳು:

''ಅರವತ್ತರಷ್ಟು ಕಡಿಮೆಯೇನೂ ಅಲ್ಲ. ಹೋಗಲಿ ಹುಡುಗ ಪಾಪ ಸಿನೆಮಾಕ್ಕೆ.''

ಕೊನೆಗೆ ತಂದೆ ಒಪ್ಪಿದರು. ಆದರೇನು? ಸಿನೇಮಾ ತಂದೆಯ ಆಯ್ಕೆಯದು. ತನ್ನ ಗೆಳೆಯರಿಗೆ ಈ ಸಮಸ್ಯೆ ಇಲ್ಲ. ಊರಲ್ಲಿ ಆರೇಳು ಚಿತ್ರಮಂದಿರಗಳಿವೆ. ಕೆಲವರು ಊರಿಂದೂರಿಗೆ ಹೋಗಿ ಸಿನೇಮಾ ನೋಡುತ್ತಾರೆ. ಎರಡು ವರ್ಷಗಳ ಹಿಂದೆ ಕಟ್ಟಿಸಿದ ಭವ್ಯ ಚಿತ್ರಮಂದಿರವನ್ನು ತನಗೆ ಇನ್ನೂ ನೋಡುವುದಾಗಿಲ್ಲ.

''ಯಾವ ಪೇಪರ ಇತ್ತು?''

''ಸಾಮಾನ್ಯ ವಿಜ್ಞಾನ'' ಅವನ ಧ್ವನಿಯಲ್ಲಿ ದುಃಖ ತುಂಬಿತ್ತು. ಆದರೆ ತಂದೆಯ ಹೃದಯಕ್ಕೆ ಅದು ತಟ್ಟಲಿಲ್ಲ. ಅವನು ಸುಮ್ಮನೆ ಕುಳಿತ. ಯಾವ ಪೇಪರ ಎಂದು ಕೇಳಿದೊಡನೆ ಪ್ರಶ್ನೆಪತ್ರಿಕೆಯನ್ನು ತೆಗೆದುಕೊಂಡು ತಂದೆಗೆ ತೋರಿಸಬೇಕು. ಈಗ ಅವನು ತೋರಿಸಲಿಲ್ಲ.

''ಯಾಕೆ ಪ್ರಶ್ನೆಪತ್ರಿಕೆ ತೋರಿಸಿರಿ ಎಂದು ಪ್ರಾರ್ಥನೆ ಮಾಡಬೇಕೇನು?''

ಅವನು ಪ್ರಶ್ನೆಪತ್ರಿಕೆಯನ್ನು ತಂದು ಮುಂದಿಟ್ಟ.

''ಹೇಗಾಗಿದೆ? ಎಲ್ಲ ಪ್ರಶ್ನೆಗಳನ್ನು ಬಿಡಿಸಿರುವೆಯಾ? ಗುಣ ಎಷ್ಟು ದೊರೆತಾವು?

ಸಿನೆಮಾದ ಮಾತೆ ಇಲ್ಲ.

''ಎಲ್ಲ ಪ್ರಶ್ನೆಗಳನ್ನು ಬಿಡಿಸಿದ್ದೇನೆ. ಗುಣ ತುಂಬ ಚೆನ್ನಾಗಿ ಬೀಳುತ್ತವೆ.''

''ಗುಡ್.''

''ಇದೊಂದೇ ಸಲ ಸಿನಿಮಾಕ್ಕೆ ಹೋಗಿಬರುತ್ತೇನೆ.''

ತಂದೆ 'ಊಹುಂ' ಕೂಡ ಅನ್ನಲಿಲ್ಲ. ಕೋಣೆಯಲ್ಲಿಯ ಹದಿನೈದು ಕ್ಯಾಂಡಲಿನ ಬಲ್ಬು ಕತ್ತಲೆಯಲ್ಲಿ ಮಿಣುಕುತ್ತಿತ್ತು. ಕಣ್ಣೆದುರು ವಿಸ್ತಾರವಾದ ಬಯಲು, ಪುಟ್ಟ ಪುಟ್ಟ ಮಾವಿನ ಸಸಿಗಳು ಎದ್ದಿದ್ದವು. ಏನು ಚೆಲುವು. ಏನು

ಕೋಮಲತೆ. ಸಂತೋಷದಿಂದ ಅವನ ಹೃದಯ ಬೆಳಗಿತು. ಒಂದೇ ಒಂದು ನಿಮಿಷ. ಯಾರೋ ನಿರ್ದಯವಾಗಿ ರೋಡರೋಲರನ್ನು ಹಾಯಿಸಿದರು. ಮಾವಿನ ಸಸಿಗಳಲ್ಲಿ ರಕ್ತವಿತ್ತು. ಆ ನೆಲವೆಲ್ಲ ಅವುಗಳ ರಕ್ತದಿಂದ ತೊಯ್ದುಹೋಯಿತು. ಅವನ ಹೃದಯ ಅಯ್ಯೋ ಎಂದು ಕೂಗಿತು. ಕಣ್ಣು ಮುಚ್ಚಿದವು. ಭೀಕರವಾದ ಕತ್ತಲೆ, ಮುರುಕು ಮನೆ. ಬಿದ್ದ ಗೋಡೆ. ಕತ್ತಲೆಯಲ್ಲಿ ತಾನು ಕರಗಿಹೋದಂತೆ ಅನ್ನಿಸಿತು ಅವನಿಗೆ.

ಈ ಬಗೆಯ ಭಯದ ಹೆಡೆಯ ನೆರಳಲ್ಲಿಯೇ ಅವನು ಮಾಧ್ಯಮಿಕ ಶಾಲಾಂತ್ಯ ಪರೀಕ್ಷೆಯಲ್ಲಿ ಉತ್ತೀರ್ಣನಾದನು. ಕಾಲೇಜಿಗೆ ಅವನು ಹೋಗುವ ಆಸೆಯನ್ನು ತಂದೆಯ ಎದುರು ಹೇಳಿದ.

"ಕಾಲೇಜಿಗೆ ಹೋಗಿ ಏನು ಮಾಡುವವ?" ಎಂತಹ ನಿಷ್ಠುರ ಮಾತು ತಂದೆಯಿಂದ. ಒಂದು ವರ್ಷದವರೆಗೆ ಹಗಲಿರುಳು ದುಡಿದು ಅರವತ್ತೈದರಂತೆ ಗುಣಗಳನ್ನು ಪಡೆದು ಉತ್ತೀರ್ಣನಾದ. ಎಷ್ಟು ವೇದನೆಯನ್ನು ಅನುಭವಿಸಿದ ತಾನು.

"ನನಗೆ ಅರವತ್ತೈದರಂತೆ ಗುಣ ಬಿದ್ದಿವೆ. ಮೂವತ್ತೈದರಷ್ಟು ಪಡೆದವರೂ ಕಾಲೇಜಿಗೆ ಹೋಗುತ್ತಾರೆ."

"ಅರವತ್ತೈದರಷ್ಟು ಎಂದರೆ ಬಹಳ ಏನಲ್ಲ. ಹತ್ತು ವರ್ಷಗಳ ಹಿಂದಿನ ಒಂದು ಮಾರ್ಕ್ ಎಂದರೆ ಈಗಿನ ಐದು ಮಾರ್ಕ್."

"ಹಾಗಾದರೆ ನಾನೇನು ಮಾಡಬೇಕು."

"ಸರಕಾರಿ ನೌಕರಿ. ನೀನು ಸೈನ್ಸ್ ಸೇರಿ ನಾಲ್ಕು ವರ್ಷ ದುಡಿದು ಬಿ.ಎಸ್ಸಿ. ಮುಗಿಸಿ ೬೦-೪-೧೨೦ರ ಗ್ರೇಡಿನಲ್ಲಿ ನೌಕರಿಗೆ ಸೇರಿದರೆ ಬಂದ ಲಾಭವೇನು? ನಾಲ್ಕು ವರ್ಷ ಹಾಳು ದುಡ್ಡು ಹಾಳು. ವರ್ಷಕ್ಕೆ ೧೮೦೦ ರೂಪಾಯಿಗಳಂತೆ ನಾಲ್ಕು ವರ್ಷಗಳ ಸಂಬಳ ನಷ್ಟ."

ಅವನ ಬಾಯಿಂದ ಮಾತೇ ಬರಲಿಲ್ಲ. ತನ್ನ ಪರವಾಗಿ ಏನನ್ನಾದರೂ ಮಾತನಾಡಬಲ್ಲವಳೆಂದರೆ ತಾಯಿ. ಆದರೆ ಅವಳನ್ನು ತಂದೆ ಕೇಳುವುದಿಲ್ಲ.

"ಏಕೆ ? ನಾನು ಹೇಳಿದಂತೆ ಮಾಡು. ರೈಲ್ವೆ ಪಬ್ಲಿಕ್ ಸರ್ವಿಸ್ ಕಮಿಶನ್

ಪರೀಕ್ಷೆಗೆ ಕುಳಿತುಕೊ. ಆರೆಂಟು ತಿಂಗಳಲ್ಲಿ ನೌಕರಿ ಸಿಕ್ಕುತ್ತದೆ. ರೇಲ್ವೆ ನೋಕರಿ ಎಂದರೆ ಏನೆಂದು ತಿಳಿದುಕೊಂಡಿರುವಿ? ಔಷಧಿಸಹಾಯ, ವರ್ಷಕ್ಕೆ ಮೂರು ಪಾಸು, ಮಕ್ಕಳ ಶಿಕ್ಷಣಕ್ಕೆ ಬೇಕಾದ ಅನುಕೂಲತೆ, ಪೆನ್‌ಶನ್ನು, ಫಂಡು.''

ಅವನು ಇದಕ್ಕೂ ಉತ್ತರ ಕೊಡಲಿಲ್ಲ.

''ನಾನು ಬಿ.ಎಸ್‌ಸಿ. ಆಗುವುದಿಲ್ಲ. ಮೆಡಿಕಲ್‌ಗೆ ಹೋಗುತ್ತೇನೆ.''

ಅವನ ತಂದೆಗೆ ಸ್ವತಂತ್ರ ವ್ಯವಹಾರವೆಂದರೆ ಭೀತಿ. ''ಮೆಡಿಕಲ್ಲು, ಮೆಡಿಕಲ್ಲು. ಸ್ವತಂತ್ರ ವಿಚಾರಸರಣಿಯೇ ಇಲ್ಲ ನಿಮಗೆ. ಸರ್ವಂ ಡಾಕ್ಟರಮಯಂ ಜಗತ್. ನೋಡು ಓಣಿಗೊಬ್ಬೊಬ್ಬ ಎಮ್.ಡಿ., ಎಮ್.ಎಸ್. ಆಗಿದ್ದಾರೆ ಇಲ್ಲಿ. ಐದು ವರ್ಷಗಳ ಹಿಂದಿನ ಸ್ಥಿತಿ ಇಂದು ಉಳಿದಿಲ್ಲ. ಇಂದಿನ ಸ್ಥಿತಿ ಇನ್ನೈದು ವರ್ಷಕ್ಕೆ ಉಳಿಯುವುದಿಲ್ಲ. ಡಾಕ್ಟರ್ ನೊಣ ಓಡಿಸುತ್ತಾರೆ. ಈಗ ವಕೀಲರಿಗಾದ ಗತಿಯೇ ಡಾಕ್ಟರರಿಗೂ ಬರುತ್ತದೆ.''

''ನಾನು ಒಂದು ವರ್ಷದ ಮಟ್ಟಿಗಾದರೂ ಕಾಲೇಜಿಗೆ ಹೋಗುತ್ತೇನೆ.''

''ಒಂದು ವರ್ಷದ ಮಟ್ಟಿಗೆ ಹೋಗಿ ಏನು ಮಾಡುವವ? ಮಾಡಿದರೆ ಕೊನೆಯವರೆಗೆ ಮಾಡಬೇಕು.''

''ಈಗ ಹೇಗೂ ನನಗೆ ನೌಕರಿಯ ವಯಸ್ಸಿಲ್ಲ, ಒಂದು ವರ್ಷ ಮನೆಯಲ್ಲಿ ಕುಳಿತೇನು ಮಾಡಲಿ?''

''ಅದನ್ನೇ ನಾನೂ ಹೇಳುವದು. ಹೇಗೂ ನಾನು ಹೋಮಿಯೋಪಥಿ ಅಭ್ಯಾಸ ನಡೆಸಿದ್ದೇನೆ. ಇನ್ನು ಹದಿನೈದು ವರ್ಷ ನನ್ನ ಸರ್ವಿಸ್ ಇದೆ. ಇಷ್ಟು ಡಾಕ್ಟರರು ಈ ಊರಲ್ಲಿದ್ದರೂ ನನ್ನ ಕಡೆ ರೋಗಿಗಳು ಬರುವದನ್ನು ನೀನು ನೋಡುತ್ತಿ. ನನ್ನ ಕ್ಷೇಮನಿಧಿ ಬರುವದಲ್ಲದೆ ನಿವೃತ್ತಿವೇತನ ಬರುತ್ತದೆ. ನಿವೃತ್ತಿಯಾದ ಮೇಲೆ ಮೂರು ವರ್ಷ ನೋಕರಿ ಮಾಡುತ್ತೇನೆ. ನಾನೇನು ನಿಮ್ಮ ಮೇಲೆ ಅವಲಂಬಿಸುವದಿಲ್ಲ. ಹಳ್ಳಿಗೆ ಹೋಗಿ ಬರುತ್ತೇನೆ. ಸಹಜ ನೂರು ರೂಪಾಯಿ ಕಳಿಸಬಲ್ಲೆ. ಪೆನ್‌ಶನ್ ೮೦ ರೂಪಾಯಿ. I am the best ideal ನನ್ನ ಪ್ರಶಂಸೆ ನಾನೇ ಮಾಡಿಕೊಳ್ಳಬಾರದು. ಆದರೆ ನಿನ್ನ ಹಿತ ಯಾವುದರಲ್ಲಿದೆ ಎಂಬುದು ನನಗೆ ಗೊತ್ತಿದೆ. ಅದನ್ನು ತಿಳಿಸಿ ಹೇಳುವುದಕ್ಕಾಗಿ ಇದನ್ನೆಲ್ಲ ಹೇಳಿದೆ ನಿನಗೆ. ಹೋಮಿಯೋಪಥಿ ಕಲಿಸುತ್ತೇನೆ. ನಿನ್ನನ್ನು ಎಕ್ಸಪರ್ಟು ಮಾಡುತ್ತೇನೆ.''

ತಂದೆಯ ಜತೆ ವಾದಮಾಡುವದರಲ್ಲಿ ಇನ್ನು ಅರ್ಥವಿಲ್ಲವೆಂದು

ಮನದಟ್ಟಾಯಿತು. ಆದರೂ ಕೊನೆಯ ಉಪಾಯವೆಂದು ಅವನು ''ನನ್ನ ತಲೆಯಲ್ಲಿ ಇಲ್ಲದ ಆದರ್ಶವನ್ನು ನೀನೆ ತುಂಬಿದೆ, ದೊಡ್ಡವನಾಗಬೇಕು ಮುಂದೆ ಬರಬೇಕು ಎಂದೆಲ್ಲ ಹೇಳಿ.... ''

''ನೀನು ಕೇಂದ್ರಕ್ಕಾದರೂ ಪ್ರಥಮ ಬಂದಿದ್ದರೆ ಏನಾದರೂ ಆ ದಿಸೆಯಲ್ಲಿ ವಿಚಾರ ಮಾಡಬಹುದಿತ್ತು. ಡಾಕ್ಟರನಾಗುವುದೆಂದರೆ ದೊಡ್ಡವನಾಗುವದೆಂದು ಯಾರು ಹೇಳಿದರು? ಡಿ.ಸಿ.ಎಸ್: ಸಿ.ಸಿ.ಎಸ್. ಆಗಬಹುದಿತ್ತು. ನೀನು ಕೇಂದ್ರಕ್ಕಾದರೂ ಪ್ರಥಮನಾಗಿದ್ದರೆ ನೀನು ಬಿ.ಎ. ಮುಗಿಸಿ ಆಯ್.ಆರ್.ಎಸ್ ಆಗಬಹುದಾಗಿತ್ತು.''

ಕೇಂದ್ರಕ್ಕೆ ಪ್ರಥಮ ಬಂದರೇ ಕಾಲೇಜಿಗೆ ಹೋಗಬೇಕೆ? ಹಾಗಾದರೆ ಎಷ್ಟು ಜನ ಕಾಲೇಜಿಗೆ ಹೋಗಿಯಾರು? ಅವನಲ್ಲಿ ಒಂದು ಬಗೆಯ ಆವೇಶ ತುಂಬುತ್ತಿತ್ತು. ಕೈಯಲ್ಲೊಂದು ಕಾಗದವನ್ನು ಹಿಡಿದುಕೊಂಡು ಮಾತನಾಡುತ್ತಿದ್ದ. ಅವನಿಗೆ ಅರಿಯದೆ ಅವನ ಕೈ ಅದನ್ನು ಚರ ಚರ ಹರಿದು ಹಾಕಿತ್ತು ಆ ತುಣುಕುಗಳನ್ನು ನೋಡಿ ಅಲ್ಲಿಯೆ ಜುಗುಪ್ಸೆಯಿಂದ ಚಲ್ಲಿ ಉಫ಼್ಫೆಂದು ಊದಿದ. ಅವನ ಸುಪ್ತ ಪ್ರಜ್ಞೆಯ ಕ್ರಿಯೆಯ ಅರ್ಥ ಅವನ ಜಾಗೃತ ಪ್ರಜ್ಞೆಗೆ ಗೊತ್ತಾಗಲಿಲ್ಲ.

ತಾಯಿ ಅವನ ಪರವಾಗಿ ಬೇಡಿಕೊಂಡಳು. ಪುಸ್ತಕದ ವೆಚ್ಚವಿಲ್ಲ. ಬೇರೆ ಊರಿಗೆ ಹೋಗುವ ಕಾರಣವಿಲ್ಲ. ಫೀ ತುಂಬುವ ಕಾರಣವಿಲ್ಲ. ಇವೆಲ್ಲ ಸಂಗತಿಗಳು ತಿಳಿದ ಮೇಲೆ ತಂದೆ ಕಾಲೇಜಿಗೆ ಹೋಗಲು ಅಪ್ಪಣೆ ಕೊಟ್ಟ. ಸೈನ್ಸಿಗೆ ಹೋಗುವದೆಂದೇ ಅವನು ನಿರ್ಧರಿಸಿದ. ಏನೇ ಆಗಲಿ ಒಂದು ವರ್ಷ ಮುಗಿದ ಮೇಲೆ ದಾರಿ ತಾನೇ ಕಾಣುತ್ತದೆ. ಅಲ್ಲಿಯವರೆಗೆ ಚೆನ್ನಾಗಿ ಅಭ್ಯಾಸ ಮಾಡಿ ಮುಂದಿನ ವರ್ಷಕ್ಕೆ ದಾರಿ ಮಾಡಿಕೊಂಡರಾಯಿತು. ತನ್ನ ಕಕ್ಕನ ಮಕ್ಕಳು ಮುಂದೆ ಹೋಗಿದ್ದಾರೆ. ತನ್ನ ತಾಯಿಗೆ ತಾನು ಮುಂದೆ ಹೋಗುವದು ಪ್ರಿಯವಾದುದೇ. ಮನೆಯವರು ಕೊಡುವದಾದರೂ ಏನು? ಹೊಟ್ಟೆಗೆ ಹಿಟ್ಟು, ಮೈಗೆ ಬಟ್ಟೆ. ತಂದೆಯಲ್ಲೂ ಈರ್ಷೆಯನ್ನೂ ಹುಟ್ಟಿಸಿದರೆ ತನ್ನ ಕೆಲಸವಾದಂತಾಯಿತು. ಆದರೂ ಅವನಿಗೆ ಒಂದು ಬಗೆಯ ಅಸಮಾಧಾನವಾಗಿದ್ದರೂ ತನ್ನ ತಂದೆಯ ಮೇಲೆ ತಾನು ಪಡೆದ ಪ್ರಥಮ ವಿಜಯವಾಗಿತ್ತು. ಇಲ್ಲಿಯವರೆಗಿನ ಸೋಲುಗಳಿಗೆ ಅವನು ತೆತ್ತ ಬದುಕೇನೂ ಸಣ್ಣದಿರಲಿಲ್ಲ. ಆದರೆ ಈ ವಿಜಯ ತುಂಬ ಮಹತ್ವದ್ದಿತ್ತು.

ಸ್ನೇಹ ಸಮ್ಮೇಲನಗಳನ್ನು ನೋಡಲು ತಂದೆ ತನಗೆ ಅಪ್ಪಣೆ ಕೊಟ್ಟಿರಲಿಲ್ಲ. ''ನಿದ್ದೆ ಕೆಡಬಾರದು ಮೈಗೆ ಒಳ್ಳೆಯದಲ್ಲ'' ನಗರದ ಸಾಮಾನ್ಯ ಮನರಂಜನೆಗಳಿಗೆ ಹೋಗಲು ಅನುಮತಿಯಿರಲಿಲ್ಲ. ತನ್ನ ಸಹಪಾಠಿಗಳು ಶೈಕ್ಷಣಿಕ ಪ್ರವಾಸಗಳನ್ನು ಕೈಕೊಂಡಿದ್ದರು. ತನ್ನ ತಂದೆ ತನ್ನನ್ನು ಕಳಿಸಿರಲಿಲ್ಲ. ಎಂತಹ ತಂದೆ ಇವ. ಹಿರಣ್ಯಕಶ್ಯಪನೇ ಇರಬೇಕು - ಎಂದುಕೊಂಡಿದ್ದ. ಪ್ರಹ್ಲಾದನಿಗಾದರೂ ನರಸಿಂಹನ ನೆರವಿತ್ತು. ಅವನ ಕಣ್ಣಮುಂದೆ ಏನೋ ಕಾಣಬಾರದ್ದು ಕಂಡಂತಾಗಿ 'ಚೊ ಚೊ ' ಮಾಡಿ ತಲೆ ಅಲ್ಲಾಡಿಸಿ ಇಲ್ಲಿಯವರೆಗಿನ ಯೋಚನೆಯನ್ನು ತೆಗೆದು ಹಾಕಿದ. ಬೇಡ ಬೇಡ ಎಂದರೂ, ಸೋರುವ ಚಪ್ಪರದಿಂದ ಮಳೆನೀರು ನುಗ್ಗುವಂತೆ ಅವನ ತಲೆಯಲ್ಲಿ ಸಾವಿರಾರು ಯೋಚನೆಗಳು ನುಗ್ಗುತ್ತಿದ್ದವು.

ಕನಸುಗಳಿಲ್ಲದ ದಿನವೇ ಇಲ್ಲ. ಕನಸುಗಳಿಗೆ ಅರ್ಥವಿರುತ್ತದಂತೆ. ಯಾರನ್ನು ಕೇಳಬೇಕು? ತಂದೆಗೆ ಕನಸು ಬೀಳುತ್ತವೆಯೊ ಇಲ್ಲವೊ. ಅವನ ಬಾಲ್ಯ ಹೇಗಿರಬಹುದಾಗಿತ್ತು. ದೊಡ್ಡವರಿಗೆ ಕನಸು ಬೀಳುತ್ತಿರಲಿಕ್ಕಿಲ್ಲ. ಆದರೆ ತಾಯಿ ಹೇಳುತ್ತಾಳೆ:

''ಕನಸು ಎಲ್ಲರಿಗೂ ಬೀಳುತ್ತವೆ. ಆದರೆ ಅವುಗಳಿಗೆ ಬಹಳ ಬೆಲೆ ಕೊಡಬಾರದು.''

ತನಗೆ ಬೀಳುವಂತಹ ಕನಸುಗಳೇ ಬೀಳುತ್ತವೆಯೇನು ಎಲ್ಲರಿಗೂ? ಕಳೆದ ಆರು ವರ್ಷಗಳಿಂದ ಒಂದು ಕನಸು ಮೇಲಿಂದ ಮೇಲೆ ಬೀಳುತ್ತಿದೆ ಅವನಿಗೆ. ಒಂದು ನಿರ್ಜನವಾದ ಬೀದಿ - ತಾನೊಬ್ಬನೇ ಹೊರಟಿದ್ದಾನೆ. ಎಲ್ಲಿಗೋ ಗೊತ್ತಿಲ್ಲ. ಗಾಳಿ ಮಾತ್ರ ಬೀಸುತ್ತಿದೆ. ದಾರಿಯ ಎರಡೂ ಬದಿಗಳಲ್ಲಿ ಮರಗಳ ಸಾಲುಗಳು. ಮರದಲ್ಲಿ ಎಲೆಗಳೇ ಕಾಣುತ್ತಿಲ್ಲ. ಬರಿ ಕಾಗೆಗಳು. ತಲೆಯ ಮೇಲೆ ಒಂದೇ ಸವನೆ ಅವು ಹೇಲುತ್ತಿವೆ. ತಲೆಯ ಮೇಲೆ ಏನನ್ನಾದರೂ ಹಿಡಿದುಕೊಳ್ಳಬೇಕೆಂದರೆ ಕೈಯಲ್ಲಿ ಏನೂ ಇಲ್ಲ. ಜೇಬಿನಲ್ಲಿ ನೋಡಿದರೆ ಕರವಸ್ತ್ರವೂ ಇಲ್ಲ. ಶರಟನ್ನು ತೆಗೆದು ತಲೆಯ ಮೇಲೆ ಹಾಕಿಕೊಳ್ಳಬೇಕು ಎಂಬ ಯೋಚನೆ ಒಂದು ನಿಮಿಷ ಬಂದು ಹೋಯಿತು. ಆದರೆ ತೆಗೆದು ಹಾಕಿಕೊಳ್ಳಲಿಲ್ಲ. ಅಷ್ಟರಲ್ಲಿ ಭಯಂಕರ ಸದ್ದನ್ನು ಮಾಡುತ್ತ ಒಂದು ಲೆಲ್ಯಾಂಡ್ ಬಂದು ತನ್ನನ್ನು ನೆಲಕ್ಕೆ ಕೆಡವಿತು. ಒಂದು ಗಾಲಿ ಹಿಂದಿನದು ಎದೆಯ ಮೇಲೆ ನಿಂತಿದೆ. ಎಂತಹ ವಿಚಿತ್ರ ಭಯ ಆವರಿಸಿತು ಅವನನ್ನು. ಮುಂದೆ ಒಂದು ನಿಮಿಷದಲ್ಲಿ ತಾನು ಟ್ರಕ್ಕಿನ ಬದಿಗೆ ನಿಂತಿದ್ದಾನೆ.

ಅದರ ಅಡಿಯಲ್ಲಿ ಬಿದ್ದವನ ಮುಖವನ್ನು ಬಗ್ಗಿ ನೋಡುತ್ತಾನೆ. ಅಯ್ಯೊ! ಅದು ತನ್ನ ತಂದೆಯ ಮುಖ.

ಹೋಗಲಿ ಇಂದಿನವರೆಗಿನ ಜೀವನ ಹೇಗೇ ಹೋಗಲಿ. ಮುಂದಾದರೂ ಒಳ್ಳೆಯ ಬದುಕು ಬಂದೀತು. ಇನ್ನು ಎಷ್ಟು ವರ್ಷ. ಹದಿನಾರು ವರ್ಷ ಕಳೆದಿವೆಯಂತೆ. ಏನೇ ಆಗಲಿ ಸಾಹಸವನ್ನು ಬಿಡಬಾರದು. ಎಷ್ಟು ಜನ ಹೀಗೆ ಅನಾನುಕೂಲ ಪರಿಸ್ಥಿತಿಯಿಂದ ಮುಂದೆ ಬಂದಿಲ್ಲ. ಏರಬೇಕು. ಏರಬೇಕು. ಈಗ ಅವನು ಕಾಲೇಜಿನಲ್ಲಿ ಕಾಲಿಟ್ಟಿದ್ದಾನೆ. ಅವನ ಪ್ರಬುದ್ಧತೆಯ ಪ್ರತೀಕವಾಗಿ ಮುಖದ ಮೇಲೆ ಚಿಗುರು ಮೀಸೆ ಬಂದಿದೆ. ಪದವಿ ಪೂರ್ವ ಪರೀಕ್ಷೆಗಾಗಿ ಅವನು ತಯಾರಿಯನ್ನು ನಡೆಯಿಸಿದ. ಕಡ್ಡಾಯದ ಎನ್.ಸಿ.ಸಿ.ಯಲ್ಲಿ ಸೇರಿದ. ಮೈ ಮೇಲಿನ ಆ ಬಟ್ಟೆ, ಕಾಲಲ್ಲಿಯ ಆ ಶೂಸ್ ಅವನಲ್ಲಿ ಹೊಸತೊಂದು ಹೊಣೆಯನ್ನು ಪ್ರೇರಿಸಿದವು. ಕಾಲೇಜಿನಲ್ಲಿ ನಿರ್ಭಯವಾಗಿ ವೃತ್ತಪತ್ರಗಳನ್ನು ಓದಲಾರಂಭಿಸಿದ. ವಿಷಯಗಳ ಆಯ್ಕೆ ತುಸು ಕ್ಲಿಷ್ಟವೆನಿಸಿತು. ತಂದೆಯ ಸಲಹೆಯನ್ನು ಕೇಳಿದ. ಏನೋ ತಂದೆ ವಿಶೇಷ ತೊಂದರೆ ಕೊಡಲಿಲ್ಲ. ಹಿಂದಿಯನ್ನು ತೆಗೆದುಕೊಳ್ಳಬೇಕೆಂದು ಮಾತ್ರ ಹೇಳಿದ:

''ನಾಳೆ ನಿನಗೆ ಆಯ್.ಆರ್.ಎಸ್. ಪರೀಕ್ಷೆಯಲ್ಲಿ ತೊಂದರೆಯಾಗುವುದಿಲ್ಲ.''

ತಂದೆಯ ದೂರದೃಷ್ಟಿ ಅವನಲ್ಲಿ ತಂದೆಯ ವಿಷಯದಲ್ಲಿ ಆದರವನ್ನೇನೂ ಉಂಟುಮಾಡಲಿಲ್ಲ. ಅವನು ಹಿಂದಿಯನ್ನು ತೆಗೆದುಕೊಂಡ.

ವಿಶಾಲವಾದ ಕ್ರೀಡಾಂಗಣ, ಭವ್ಯವಾದ ಕಾಲೇಜ ಮಂದಿರ, ಅದ್ಭುತವಾದ ವಾಚನಾಲಯ ಅವನಲ್ಲಿ ಹೊಸ ಬಗೆಯ ಆಸೆಗಳನ್ನು ಹುಟ್ಟಿಸಿತು. ಮೊದಲನೆಯ ದಿವಸವೆ ಪ್ರಾಚಾರ್ಯರು ತಮ್ಮನ್ನುದ್ದೇಶಿಸಿ ಮಾಡಿದ ಭಾಷಣದಲ್ಲಿ ಅವನಿಗೆ ಬಹಳ ಅಂಶ ತಿಳಿದಿದ್ದರೂ ಏನೋ ಒಂದು ಬಗೆಯ ಹುರುಪು ಮೈಯಲ್ಲೆಲ್ಲ ಹರಿದಾಡಿತು. ಪ್ರಾಚಾರ್ಯರ ಎರಡು ಬದಿಗಳಲ್ಲಿ ಶೃಂಗರಿಸಿಕೊಂಡು ಕುಳಿತ. ಪ್ರಾಧ್ಯಾಪಕ ವೃಂದದಲ್ಲಿಯವರ ಮುಖಗಳನ್ನು ನೋಡಿದ. ಪಕ್ಕದ ವಿದ್ಯಾರ್ಥಿಗಳು ಮಾತನಾಡುತ್ತಿದ್ದುದನ್ನು ಕೇಳಿ ಭೌತ, ರಸಾಯನ, ಇಂಗ್ಲಿಷ್ ಪ್ರಾಧ್ಯಾಪಕರನ್ನು ಗುರುತಿಸಿದ. ಪ್ರಾಚಾರ್ಯರು

ವಿದ್ಯಾರ್ಥಿಗಳನ್ನು ಸ್ವಾಗತಿಸಿದರು. ಏನು ಆವೇಶ ಅವನ ಮಾತುಗಳಲ್ಲಿ. ತಮ್ಮ ಕಾಲೇಜದ ವೈಶಿಷ್ಟ್ಯಗಳನ್ನು ಎತ್ತಿ ತೋರಿಸಿದರು. ತಮ್ಮ ಕಾಲೇಜದ ಪರೀಕ್ಷೆಯ ಫಲಿತಾಂಶಗಳನ್ನು ಸ್ಥಾನಿಕ ಕಾಲೇಜುಗಳ ಫಲಿತಾಂಶಗಳೊಡನೆ ತೂಗಿ ಹೇಳಿದರು. ವಿದ್ಯಾರ್ಥಿಗಳು ಚಪ್ಪಳಿಕ್ಕಿದರು.

''ನೀವು ಸಣ್ಣವರಲ್ಲ. ನಿಮಗೆ ತಿಳುವಳಿಕೆ ಇದೆ. ನೀವು ಈ ಕಾಲೇಜನ್ನು ಆರಿಸಿದ್ದು ನಿಮ್ಮ ಪ್ರಬುದ್ಧತೆಯನ್ನು ಎತ್ತಿ ತೋರಿಸುತ್ತದೆ. ಒಂದು ಕುರಿಯನ್ನು ಹಿಂಬಾಲಿಸಿ ಸಾವಿರ ಕುರಿಗಳು ಹಳ್ಳದಲ್ಲಿ ಬೀಳುವಂತೆ ನೀವು ಇಲ್ಲಿ ಬಂದಿಲ್ಲ. ಕಾಲೇಜದ ಭವ್ಯ ಭವನ, ವಿಶಾಲ ಕ್ರೀಡಾಂಗಣ. ಜ್ಞಾನಜ್ಯೋತಿಯಿಂದ ಬೆಳಗುತ್ತಿರುವ ವಾಚನಾಲಯ, ಸರ್ವ ಯೋಗ್ಯತೆಯಿಂದ ತುಂಬಿತುಳುಕುತ್ತಿರುವ ಪ್ರಾಧ್ಯಾಪಕ ವೃಂದ. ನಮ್ಮ ಧ್ವಜವನ್ನು ಎತ್ತಿಹಿಡಿದವರು ವಿದ್ಯಾರ್ಥಿಗಳು. ಅದರ ಹೊಣೆ ನಿಮ್ಮ ಮೇಲಿದೆ.''

ಅವನು ಉಪನ್ಯಾಸ ಮುಗಿದ ಮೇಲೆ ಕಾಲೇಜದ ಅಟ್ಟದ ಮೇಲೆ ಹೋಗಿ ನಿಂತ. ಹನ್ನೊಂದು ಗಂಟೆಯಾಗಿತ್ತು. ಸೂರ್ಯನ ಬಿಸಿಲು ಪ್ರಖರವಾಗಿತ್ತು. ಅವನಿಗೆ ಅದರ ಪರಿವೆ ಇರಲಿಲ್ಲ. ವಿಶಾಲವಾದ ಕಾಲೇಜದ ಮೈದಾನವನ್ನು ನಿರೀಕ್ಷಿಸಿದ. ದೂರ ದೂರ ದಿಗಂತದವರೆಗೆ ಅವನ ದೃಷ್ಟಿ ಹರಿಯಿತು. ಅವನಿಗೆ ತನ್ನ ಕೈಯಲ್ಲಿ ಬಿಲ್ಲುಬಾಣಗಳಿದ್ದಂತೆ ಬಿಲ್ಲಿನ ಹೆದೆಯೇರಿಸಿ ಬಾಣ ಹೂಡಿದಂತೆ ಭಾಸವಾಯಿತು. ಸ್ವತ್ವದ ಅರಿವು ಮೂಡಿತ್ತವನಲ್ಲಿ.

ಅಂದು ಸಂಜೆ ಅವನು ತಂದೆಯನ್ನು ಕೇಳದೆ ಊರ ಹೊರಗೆ ಅಡ್ಡಾಡಲು ಹೋದ. ಶಾಂತವಾದ ರಮ್ಯವಾದ ಸಂಜೆ. ಸೂರ್ಯನ ಹೊಂಗಿರಣಗಳಲ್ಲಿ ಕೆರೆ ಬಂಗಾರ ಬಣ್ಣದಿಂದ ಮಿಂಚುತ್ತಿತ್ತು. ಅವನು ಎರಡು ಕಲ್ಲುಗಳನ್ನು ತೆಗೆದುಕೊಂಡು ರಭಸವಾಗಿ ಕೆರೆಯಲ್ಲಿ ಎಸೆದ. ಕಪ್ಪು ನೀರಿನಲ್ಲಿ ಬಿದ್ದ ಕಲ್ಲು ರಮ್ಯವಾದ ವರ್ತುಲಗಳನ್ನು ಮೂಡಿಸಿತು. ಕಲ್ಲು ನೀರಿನಲ್ಲಿ ಬಿದ್ದು ಮಾಡಿದ ಸದ್ದು ಏಕೋ ಅವನಿಗೆ ಕಿವಿಯಲ್ಲಿ ಒಂದು ರಹಸ್ಯವನ್ನು ಹೇಳಿದಂತೆ ಭಾಸವಾಯಿತು. ಒಂದು ಬಗೆಯ ಸಮಾಧಾನ ಎನ್ನಿಸಿತು. ಹೃದಯದ ಮೇಲೆ ಹೇರಿದ ಕಲ್ಲನ್ನು ಯಾರೋ ಎತ್ತಿ ಒಗೆದಷ್ಟು ಹಗುರವೆನ್ನಿಸಿತು.

ಮನೆಗೆ ಬಂದಮೇಲೆ ತಂದೆಯೊಡನೆ ಮುಕ್ತಮನಸ್ಸಿನಿಂದ ಮಾತಾಡಿದ.

ಇಂದಿನವರೆಗೆ ತನಗೆ ತನ್ನ ತಂದೆಯ ಪ್ರೀತಿಯ ಅನುಭವವೇ ಇಲ್ಲವೆನಿಸಿತ್ತವನಿಗೆ. ಇಲ್ಲ. ಹಾಗಾಗಬಾರದು. ತಂದೆಯ ವಾತ್ಸಲ್ಯವನ್ನು ಅನುಭವಿಸಬೇಕು. ತಾಯಕೋಮಲ ಹೃದಯದಿಂದ ಹರಿಯುವ ವಾತ್ಸಲ್ಯವನ್ನು ಇನ್ನೂ ಕುಡಿಯಬೇಕು. ತಂಗಿಯನ್ನು ಪ್ರೀತಿಸಬೇಕು.

ತಂಗಿಯನ್ನು ಹತ್ತಿರ ಕರೆದ. ಆರು ವರ್ಷದ ಮಗು ಇಂದೇನೋ ವಿಚಿತ್ರ ಎನ್ನಿಸುವಂತೆ ಸಾಶಂಕ ದೃಷ್ಟಿಯಿಂದ ನೋಡುತ್ತ ದೂರ ನಿಂತಿತು. ತನ್ನ ಬೆನ್ನ ಮೇಲಿನ ತಮ್ಮನನ್ನು ಹತ್ತಿರ ಕರೆದ. ತಮ್ಮ ಅದನ್ನು ಕಿವಿಯಲ್ಲಿ ಹಾಕಿಕೊಳ್ಳಲೇ ಇಲ್ಲ.

''ಹಾಗೆ ಮಾಡಬಾರದು. ಅಣ್ಣ ಕರೆಯುತ್ತಾನೆ. ಹತ್ತಿರ ಹೋಗಬಾರದೆ?'' ತಾಯಿ ಹೇಳಿದಳು. ಅವನ ಹತ್ತಿರ ಅವರಿಬ್ಬರೂ ಬಂದರು. ಅವನ ಮುಖದ ಕಳೆ ಬದಲಾಯಿತು. ''ಇನ್ನು ಆರೇಳು ವರ್ಷಗಳಲ್ಲಿ ಮನೆಯಲ್ಲಿ ತುಂಬಾ ಬದಲಾವಣೆಯಾಗುತ್ತದೆ.'' ಅವರಿಗೇನೂ ತಿಳಿಯಲಿಲ್ಲ. ಅವನು ತನ್ನ ಕನಸುಗಳಿಗೆ ಅಭಿವ್ಯಕ್ತಿ ಕೊಡುವ ದಾರಿಯನ್ನು ಹುಡುಕುತ್ತಿದ್ದ. ಅವರನ್ನು ತಟ್ಟಬಲ್ಲ ನುಡಿಗಳಿಗಾಗಿ ತಡವರಿಸಿದ. ಅವರಲ್ಲಿ ಆನಂದದ ಪುಲಕವನ್ನು ಹುಟ್ಟಿಸಬಲ್ಲ ಪ್ರತಿಮೆಗಳಿಗಾಗಿ ಅಂತರ್ಮುಖಿಯಾದ.

''ನೋಡಿರಿ. ನೀವಿಬ್ಬರೂ ತುಂಬ ಕಲಿತು ಜಾಣರಾಗಬೇಕು'' ಎಂದ. ಆದರೆ ಅವನು ಒಗೆದ ಈ ಕಲ್ಲು ಅವರಿಬ್ಬರ ಚಿತ್ತಗಳಲ್ಲಿ ಯಾವ ಅಲೆಗಳನ್ನೂ ಎಬ್ಬಿಸಲಿಲ್ಲ. ತಾಯಿಯೊಡನೆ ಮಾತನಾಡಿದ. ತಾಯಿಯ ಹೃದಯ ಅವನ ನುಡಿಗೆ ಸ್ಪಂದಿಸುತ್ತಿತ್ತು.

''ನನಗೆ ತುಂಬ ಕಲಿಯಬೇಕಾಗಿದೆ. ಈಗ ನೋಕರಿ ಮಾಡಿದರೆ ಏನು ಬಂತು? ಈಗಿನ ದಿನಮಾನಕ್ಕೆ ಏನು ಸಾಲೀತು? ಮೇಲಾಗಿ ನನಗೆ ನಿಚ್ಚಣಿಕೆಯ ಕೆಳಗಿನ ಮೆಟ್ಟಲಲ್ಲಿಯ, ತಂದೆಯಂತೆ ಬದುಕುವ ಅಪೇಕ್ಷೆಯಿಲ್ಲ.''

''ಹೌದು ಮಗು. ನೀನು ಕಲಿಯಬೇಕೆಂದೇ ಅವರದೂ ಅಪೇಕ್ಷೆ.''

''ಹಾಗೆ ನಿನ್ನ ಮುಂದೆ ಹೇಳಿದರೆ?''

''ಹೇಳದೆ ಏನು ! ಮಕ್ಕಳು ಮುಂದೆ ಹೋಗುತ್ತೇನೆ ಎಂದರೆ ಸಂತೋಷವಲ್ಲವೆ?''

''ಹಾಗಾದರೆ ಕಾಲೇಜಿಗೆ ಏಕೆ ಬೇಡ ಎಂದದ್ದು?''

‘‘ಯಾಕೊ ಅಂದಿರಬೇಕು. ಅದನ್ನೆಲ್ಲ ತೆಗೆದುಕೊಂಡು ಈಗ ಏನು ಮಾಡುವದು? ಈಗಂತೂ ಹೋಗಲು ಹೇಳಿದರಲ್ಲ.’’

‘‘ನೀನು ತಪ್ಪು ತಿಳಿದುಕೊಳ್ಳಬೇಡ. ನೀವು ರಕ್ಷಣೆ ಮಾಡಿದ್ದರಿಂದಲೇ ನಾವು ಬದುಕಿದ್ದೇವೆ. ಆದರೂ ಈ ಮನೆಯಲ್ಲಿ ಪ್ರೀತಿಯಷ್ಟೇ ಭಯವೂ ಅಧಿಕಾರವನ್ನು ವಹಿಸಿದೆ. ಒಂದೇ ದಿನದಲ್ಲಿ ಕಾಲೇಜಿಗೆ ಹೋಗಿಬಂದು ನಾನು ಪ್ರತಿಯಾಗಿ ಆಡುತ್ತಿದ್ದೇನೆ ಎನ್ನಬಹುದು ನೀನು. ತಮ್ಮನನ್ನು ತಂಗಿಯನ್ನು ನೋಡಿದಾಗ ನೀರಿಲ್ಲದೆ ಬಾಡಿದ ಬಳ್ಳಿಗಳ ನೆನಪಾಗುತ್ತದೆ ನನಗೆ.’’

ತಾಯಿಯ ಕಣ್ಣಂಚಿನಲ್ಲಿ ನೀರು ಬಂತು.

‘‘ಮನಸ್ಸು ನೊಂದಿತೇನೊ ! ನಾನು ಅನ್ನಬಾರದಾಗಿತ್ತು. ಆದರೇನು ಬಾಯಿಂದ ಮಾತು ಹೊರಬಿತ್ತು.’’ ಅವನೂ ಮಾತು ಬೆಳೆಸಲಿಲ್ಲ. ತಾಯಿಯೂ ಮಾತನಾಡಲಿಲ್ಲ.

ನಾಲ್ಕು ಗೋಡೆಗಳಿದ್ದ ಮಾತ್ರಕ್ಕೆ ಮನೆಯಾದೀತೆ? ತಂದೆಯಿದ್ದಾನೆ. ತಾಯಿ ಇದ್ದಾಳೆ. ಹೆಚ್ಚಲ್ಲದಿದ್ದರೂ ನಾಳೆ ಏನು ಎಂಬ ಚಿಂತೆಯಿಲ್ಲ. ಆದರೆ ಇಷ್ಟರಿಂದಲೇ ಮನೆಯಾಗದು. ಈ ಮನೆಯಲ್ಲಿ ಗೃಹತತ್ವದ ಮುಖ್ಯ ಪ್ರಾಣವೇ ಇಲ್ಲ ಎಂದೆನಿಸುತ್ತಿತ್ತು ಅವನಿಗೆ. ಒಂದು ಬಗೆಯ ಕಳಾಹೀನತೆ ಮನೆಯನ್ನು ಆವರಿಸಿದಂತೆ ಭಾಸವಾಗುತ್ತಿತ್ತು ಅವನಿಗೆ. ಮನೆಯೊಳಗೆ ಬರುವ ಗಾಳಿಗೂ ಬೆಳಕಿಗೂ ಕೂಡ ಒಂದು ಬಗೆಯ ಮೊದ್ದುತನ ಅಂಟಿಕೊಂಡಂತೆ ಕಾಣುತ್ತಿತ್ತು. ಊಹುಂ ಇದು ಬದುಕಿಗೆ ಹೊಂದಿಕೆಯಾಗುವ ದಾರಿಯಲ್ಲ. ಏನನ್ನಾದರೂ ಮಾಡಬೇಕು. ಒಮ್ಮೆಯಾದರೂ ಕಿಲಕಿಲ ನಗು ! ಮನೆಗೆ ಅಂಟಿದ ಶಾಪವನ್ನು ಏನಾದರೂ ಮಾಡಿ ತೆಗೆಯಬೇಕು.

ಕಾಲೇಜ ಅವನ ಮನಸ್ಸಿನ ಮೇಲೆ ಅದ್ಭುತವಾದ ಪರಿಣಾಮಗಳನ್ನು ಮಾಡಿತು. ತನ್ನ ವ್ಯಕ್ತಿತ್ವ ಮೊದಲಿಗಿಂತ ತೀರ ಭಿನ್ನವಾದಂತೆನಿಸಿತು ಅವನಿಗೆ. ವಾಚನಾಲಯದಲ್ಲಿ ಪುಸ್ತಕಗಳ ಕಡೆಗೆ ಗಮನ ಹಾಕಿದ. ಅವುಗಳನ್ನೋದುವ ಹಂಬಲವಾಯಿತು. ವೃತ್ತಪತ್ರಿಕೆಗಳು ನಿಯತಕಾಲಿಕಗಳು ತಮ್ಮ ಪುಟಪುಟಗಳಲ್ಲಿ ಪ್ರಕಟಿಸಿದ ಜೀವನದ ವಿಶಾಲತೆಯನ್ನು ಕಂಡು ಅವನು ಬೆರಗಾದ. ‘ತಾನು ತನ್ನ ತಂದೆಯಂತಾಗಬಾರದು’ ಎಂಬ ನಿರ್ಧಾರ ಅವನಲ್ಲಿ ಮೂಡಿತು.

ಹಾಗಾಗಬಾರದು ಎಂದರೇನು? '' ತನ್ನ ತಂದೆ ಮೊದಲಿನಿಂದ ಹೀಗಿರಲಿಕ್ಕಿಲ್ಲ. ಪರಿಸ್ಥಿತಿಯ ಒತ್ತಡದಿಂದ ತಂದೆಯ ಹೃದಯ ಹಲವು ದಿವ್ಯ ಕನಸುಗಳ ಗೋರಿಗಳಿಂದ ತುಂಬಿದ ರುದ್ರಭೂಮಿಯಾಗಿರಬೇಕು. ನನ್ನ ಹೃದಯಕ್ಕೆ ಈ ದುರ್ಗತಿ ಯಾವುದೇ ಸ್ಥಿತಿ ಬಂದೊದಗಿದರೂ ಈ ದುರ್ಗತಿ ಬಾರದಂತೆ ತಾನು ಎಚ್ಚರಪಡಿಸಬೇಕು.''

ನಿಯಮಿತತನದ ವಿಷಯದಲ್ಲಿ ಅವನಿಗೆ ಯಾರೂ ಹೇಳುವ ಕಾರಣವಿರಲಿಲ್ಲ. ಕಾಲೇಜಿನಲ್ಲಿ ಅವನಿಗೆ ಒಬ್ಬ ಸ್ನೇಹಿತ ದೊರೆತ. ಅವನು ಸ್ನೇಹಿತನ ಅಚ್ಚುಕಟ್ಟುತನಕ್ಕೆ ಮಾರುಹೋದ. ಅವನಿಗೂ ಪ್ಯಾಂಟ್ ಇರಲಿಲ್ಲ. ಆದರೆ ಇದ್ದ ಪಾಯಜಮಾವನ್ನೇ ಸ್ವಚ್ಛವಾಗಿಟ್ಟುಕೊಂಡಿದ್ದ. ಕಾಲಲ್ಲಿ ಚಪ್ಪಲಿ. ಅವನ ಜತೆಗಾರನ ಮನಸ್ಸು ಪ್ರಸನ್ನವಾಗಿತ್ತು. ಈ ಪ್ರಸನ್ನತೆ ತನ್ನದಾಗಬೇಕೆಂದು ಅವನು ಪ್ರಯತ್ನಿಸಿದ. ತನ್ನ ಸ್ನೇಹಿತನೊಡನೆ ಮಾತನಾಡಿದಾಗ ಅವನ ಕನಸುಗಳಲ್ಲಿ ಹೊಸ ಜೀವಕಳೆ ಬಂತು.

''ನೀನು ಇಲ್ಲಿ ಒಬ್ಬನೆ ಇರುವಿಯಾ?''

''ಹೂಂ''

''ತಂದೆ ತಾಯಿ ಎಲ್ಲಿ?''

''ಹಳ್ಳಿಯಲ್ಲಿ.''

''ನೀನಿಲ್ಲಿ ಎಲ್ಲಿರುವಿ?''

''ಫ್ರೀ ಹಾಸ್ಟೆಲಿನಲ್ಲಿ''

''ನನ್ನ ತಂದೆತಾಯಿ ಇಲ್ಲಿಯೇ ಇದ್ದಾರೆ. ನನಗೆ ಕಾಲೇಜಿಗೆ ಹೋಗಲು ತಂದೆಯ ಅನುಮತಿಯಿಲ್ಲ. ಮುಂದಿನ ವರ್ಷ ನಾನು ನೌಕರಿ ಹಿಡಿಯಲೇಬೇಕು.'' ಅವನು ತನ್ನ ವಿಷಾದವನ್ನು ತೋಡಿಕೊಂಡ.

''ಈ ಒಂದು ವರ್ಷ ಕಲಿತರೆ ಮಾತ್ರ ಏನು ಬಂತು?''

''ನೀನು ಏನು ಕಲಿಯಲಿರುವೆ?''

''ಬಿ.ಇ. ಮಾಡಿಕೊಳ್ಳಬೇಕೆಂಬ ಹವ್ಯಾಸವಿದೆ.''

''ವೆಚ್ಚಕ್ಕೇನು ಮಾಡುತ್ತೀಯಾ?''

ಸ್ನೇಹಿತನ ಕಣ್ಣಲ್ಲಿ ಮಿಂಚಿನ ಹೊಳೆ ತುಳುಕಾಡಿತು. ತನ್ನ ಕೈಯಲ್ಲಿದ್ದ

ಒಂದು ಸಣ್ಣ ಪುಸ್ತಕವೊಂದನ್ನು ಕೊಟ್ಟು ಹೇಳಿದ:

''ನನ್ನ ಜೀವನದ ಸಂಜೀವಿನಿ ಇದರಲ್ಲಿದೆ.''

ಅವನಿಗೆ ಆಶ್ಚರ್ಯವಾಯಿತು. ಈ ಉತ್ತರವನ್ನು ಅಪೇಕ್ಷಿಸಿರಲಿಲ್ಲ. ಅವನ ಮುಖವನ್ನು ನೋಡಿ ನಕ್ಕು ಸ್ನೇಹಿತ ಹೇಳಿದ:

''ಇದರಲ್ಲಿ ಮಾನವಸಾಹಸಕ್ಕೆ ದೊರೆಯದ ಫಲವಿಲ್ಲ ಎಂಬುದನ್ನು ಸ್ಪಷ್ಟಪಡಿಸುವ ಮಹಾಪುರುಷರ ಜೀವನಗಳಿವೆ. ಇದರಲ್ಲಿಯ ಒಬ್ಬೊಬ್ಬರ ಬದುಕು ನನ್ನಲ್ಲಿ ಸತ್ವವನ್ನು ತುಂಬಿದೆ. ಹಣಕ್ಕೇನು? ಮುಂದೇನು ನಾನು ಯೋಚಿಸುವದೇ ಇಲ್ಲ. ನೀನು ಶಹರದಲ್ಲಿಯಾದರೂ ಇರುವೆ. ನಾನು ಹಳ್ಳಿಯಿಂದ ಬಂದವ. ನನ್ನ ಮುಂದೆ ಎರಡೇ ಗುರಿಗಳಿವೆ. ಸಿದ್ಧಿ ಇಲ್ಲವೆ ಮೃತ್ಯು.''

ಸ್ನೇಹಿತನ ನಿಲುವು ತುಂಬ ಭವ್ಯವೆನಿಸಿತು. ಸ್ನೇಹಿತನೊಡನೆ ಅವನು ಹಾಸ್ಟೆಲಿಗೆ ಹೋದ. ಅವನ ಜೀವನದಲ್ಲಿಯ ನಿತ್ಯಕ್ರಮವನ್ನು ನೋಡಿ ತನ್ನ ಬದುಕಿನಲ್ಲಿ ಅದನ್ನು ಅಳವಡಿಸಿಕೊಳ್ಳಲು ನಿರ್ಧರಿಸಿದ. ಸ್ನೇಹಿತನ ಟಿಪ್ಪಣಿಗಳನ್ನು ನೋಡಿದ. ಅವೆಷ್ಟು ಸ್ಪಷ್ಟವಾಗಿದ್ದವು ! ವರ್ಗದ ಟಿಪ್ಪಣಿಗಳು - ಅಬ್ಬಾ !

''ನನಗೆ ನಿನ್ನಿಂದ ತುಂಬ ಸಹಾಯವಾಗಬೇಕು. ಮಾಡುತ್ತೀಯಾ?'' ಅವನ ಧ್ವನಿಯಲ್ಲಿಯ ದೈನ್ಯ ಸ್ನೇಹಿತನನ್ನು ತಟ್ಟಿತು.

''ಎಲ್ಲ ರೀತಿಯಿಂದ.''

ರಾತ್ರಿ ಮನೆಗೆ ಬಂದಾಗ ಅವನೊಬ್ಬ ಹೊಸ ಮನುಷ್ಯನಾಗಿದ್ದ. ''ಸ್ನೇಹಿತ ನನ್ನ ಓರಗೆಯವನೇ ಅವನಿಗೆ ಇದನ್ನೆಲ್ಲ ಯಾರು ಹೇಳಿಕೊಟ್ಟರು? ತಾನೆ ಇದನ್ನೆ ಅಳವಡಿಸಿಕೊಂಡನೆ? ನನಗೇಕೆ ಇದು ಗೊತ್ತಾಗಲಿಲ್ಲ'' ಈ ಚಿಂತೆ ಅವನನ್ನು ಕೆಲಹೊತ್ತು ಕಾಡಿತು. ಅದನ್ನು ಗಮನಿಸದೆ ಸ್ನೇಹಿತನ ದಿನಚರ್ಯೆಯನ್ನು ಪ್ರತಿಮಾಡಿಕೊಂಡ. ''ಇಂದಿನಿಂದ ಸ್ನೇಹಿತನ ಹೆಜ್ಜೆಯಲ್ಲಿ ಹೆಜ್ಜೆಹಾಕುವದು.''

ಎದ್ದಾಗ ಏನೋ ಒಂದು ತರಹ. ರಾತ್ರಿಯ ಕನಸಿನಿಂದ ತುಂಬ ನೋವು. ಅದರ ಅರ್ಥವೇನೂ ಆಗುತ್ತಿರಲಿಲ್ಲ. ಅದರ ಪರಿಣಾಮ ಮಾತ್ರ ಪ್ರತ್ಯಕ್ಷ ಅನುಭವಿಸಿದಷ್ಟು ಸ್ಪಷ್ಟ. ತಾನೊಬ್ಬನೇ ಎಲ್ಲೋ ಇದ್ದ. ಅಪರಿಚಿತವಾದ ಸ್ಥಳ. ಗೋಡೆಗಳು ಆಕಾರ ತಳೆದವು. ಎಲ್ಲಿಂದಲೋ ಏನೋ ತನ್ನ ಸ್ನೇಹಿತ ಬಂದ. ''ಅರೆ

ಇಲ್ಲಿರುವೆಯಾ? ನಿನ್ನನ್ನು ಎಷ್ಟು ಹುಡುಕಾಡಬೇಕು.''

''ಏಕೆ ? ನೀನೆಲ್ಲಿದ್ದೆ.''

''ಗೋಡೆಗಳೆಲ್ಲ ಬರಿದೇ ಇವೆಯಲ್ಲ. ಒಂದಾದರೂ ಮೊಳೆಯನ್ನು ಹೊಡೆಯಬಾರದೆ?''

''ಮೊಳೆ ಇಲ್ಲವಲ್ಲ.''

''ತೆಗೆದುಕೊ''

ಅವನ ಸ್ನೇಹಿತನ ಕೈಯಿಂದ ಮೊಳೆ ತೆಗೆದುಕೊಂಡು ಗೋಡೆಯಲ್ಲಿ ಹೊಡೆದ. ಅದು ಸರಿಯಾಗಿ ಕೂಡಲಿಲ್ಲ. ಗೋಡೆಯ ತುಂಬ ಮೊಳೆಗಳನ್ನು ಹೊಡೆಯಲು ಪ್ರಯತ್ನ ಮಾಡಿದ. ಒಂದೂ ಮೊಳೆ ಗಟ್ಟಿಯಾಗಿ ನಿಲ್ಲಲಿಲ್ಲ. ಒಂದು ಮೂಲೆಯಲ್ಲಿ ಅವನು ಒಗೆದ ಮೊಳೆಗಳ ರಾಶಿ ಜಂತಿಯವರೆಗೆ ಏರಿತು. ಸ್ನೇಹಿತನ ಕೈಲಿದ್ದಾಗ ಅದು ಮೊಳೆಯಾಗಿರುತ್ತಿತ್ತು. ಅವನ ಕೈಗೆ ಬಂದಕೂಡಲೆ ಮಾತ್ರ ಮೇಣಬತ್ತಿಯಾಗಿರುತ್ತಿತ್ತು. ಮೂಲೆಯಲ್ಲೊಗೆದ ಕೂಡಲೆ ಖಣ್ ಎಂದು ಸಪ್ಪಳ ಮಾಡುತ್ತ ಮೊಳೆಯಾಗಿ ಬೀಳುತ್ತಿತ್ತು. ತೂತುಗಳಿಂದ ತುಂಬಿದ್ದ ಗೋಡೆಯ ಪ್ರತಿಯೊಂದು ತೂತಿನಿಂದ ರಕ್ತ ಸೋರುತ್ತಿತ್ತು. ಅವನು ವಿಹ್ವಲನಾದ. ಗೋಡೆ ಬೇರೆ ಏನೂ ಆಗಿರಲಿಲ್ಲ. ತನ್ನ ಹೃದಯವೇ ಆಗಿತ್ತು.! ಏನು ಕನಸೊ ಇದು. ಅವನು ಭಯದಿಂದ ನಡುಗಿದ. ಸ್ನಾನವನ್ನು ಮುಗಿಸಿದ. ಅವಸರವಸರವಾಗಿ ಬೆಳಗಿನ ವೇಳಾಪತ್ರಿಕೆಯಂತೆ ಕೆಲಸ ಮುಗಿಸಿದ. ಊಟವನ್ನು ಮಾಡಿಕೊಂಡು ಕಾಲೇಜಿಗೆ ಹೋಗಿ ತನ್ನ ಸ್ನೇಹಿತನನ್ನು ಕಂಡ.

ಎರಡು ಗಂಟೆಯವರೆಗೆ ಜೊತೆಯಾಗಿಯೇ ಇದ್ದರೂ ಕನಸಿನ ವಿಷಯವಾಗಿ ಮಾತನಾಡಲಾಗಲಿಲ್ಲ. ವಿಶ್ರಾಂತಿಯ ಕಾಲದಲ್ಲಿ ಕೇಳಿದ:

''ಕ್ಷಮಿಸು ಒಂದು ನಿಮಿಷ. ತಪ್ಪು ತಿಳಿದುಕೊಳ್ಳಬೇಡ. ನಿನಗೆ ಕನಸುಗಳು ಬೀಳುತ್ತವೆಯೆ?''

''ಏಕೆ?''

''ಅಲ್ಲ ನನಗೆ ನಿತ್ಯ ಏನಾದರೂ ಕನಸು ಬಿದ್ದು ನನ್ನ ಮನಸ್ಸು ತುಂಬ ನೋಯುತ್ತದೆ. ನನಗೊಬ್ಬನಿಗೆಯೆ ಹೀಗಾಗುವದೇ?''

''ಕನಸೇನು ಎಲ್ಲರಿಗೂ ಬೀಳುತ್ತವೆ. ನನಗೂ ಬೀಳುತ್ತವೆ. ಆದರೆ

ನಾನವುಗಳನ್ನು ಗಮನಿಸಿಯೇ ಇಲ್ಲ. ನಾನಾಯ್ತು ನನ್ನ ಅಭ್ಯಾಸವಾಯ್ತು.''

''ಕನಸು ಎಲ್ಲರಿಗೂ ಬೀಳುವುವೇನು ಹಾಗಾದರೆ? ನಿನಗೂ ಬೀಳುತ್ತವೆಯೆ?'' ಅವನ ಮನಸ್ಸು ಎಷ್ಟೋ ಲಘುವಾಗಿತ್ತು. ''ನೀನು ನಿನ್ನೆ ರಾತ್ರಿ ನನ್ನ ಕನಸಿನಲ್ಲಿ ಬಂದಿದ್ದೆ. ನನ್ನ ಕೈಯಲ್ಲಿ ಮೊಳೆಗಳನ್ನು ಕೊಟ್ಟು ಗೋಡೆಯಲ್ಲಿ ಹೊಡೆ ಎಂದೆ. ನಾನು ನೂರಾರು ಮೊಳೆ ಹೊಡೆದೆ ಒಂದೂ ನಡಲಿಲ್ಲ. ಗೋಡೆಯೆಲ್ಲ ತೂತು. ನಿನ್ನ ಕೈಯಲ್ಲಿಯ ಮೊಳೆ ನನ್ನ ಕೈಯಲ್ಲಿ ಮೇಣಬತ್ತಿಯಾಗುತ್ತಿತ್ತು. ಮೂಲೆಯಲ್ಲೆಸೆದಾಗ ಮೊಳೆಯಾಗುತ್ತಿತ್ತು. ಗೋಡೆಯಿಂದ ರಕ್ತ ಸೋರುತ್ತಿತ್ತು. ನೋಡಿದರೆ ನನ್ನ ಹೃದಯದಲ್ಲಿಯೇ ನಾನು ಮೊಳೆ ಹೊಡೆದುಕೊಂಡೆ.'' ಅವನು ಕನಸನ್ನು ವಿವರಿಸಿದ.

''ನಾನು ಹೇಳಿದೆನಲ್ಲ. ದಿನವೂ ನೂರಾರು ಕನಸು ಬೀಳುತ್ತವೆ. ನಾನವುಗಳನ್ನು ಗಮನಿಸುವುದೇ ಇಲ್ಲ. ನಮ್ಮ ಧ್ಯೇಯವಾಯಿತು. ನಾವಾಯಿತು.''

ಇಂದಿನವರೆಗೆ ತನ್ನ ಸ್ನೇಹಿತ ತನ್ನೊಡನೆ ಮಾತನಾಡುವಾಗ ''ನಮ್ಮ ನಾವು'' ಎಂದು ಹೇಳುತ್ತಿರಲಿಲ್ಲ. ಇಂದು ಮಾತನಾಡಿದ. ಅದರಲ್ಲಿ ಅಹಂಭಾವವಿರಲಿಲ್ಲ. ನಾವು ಎಂಬುವದರಲ್ಲಿ ತಾನೂ ಇದ್ದ. ಅವನಿಗೆ ಧನ್ಯತೆ ಎನಿಸಿತು. ತನ್ನ ಸ್ನೇಹಿತನ ಔದಾರ್ಯದಿಂದ ಗಂಟಲು ಕಟ್ಟಿಬಂತು. ಏನೊ ಒಂದು ಬಗೆಯ ಬಲ ಬಂದಂತಾಯಿತು. ''ನಾನು ನಿನಗೆ ಕೃತಜ್ಞನಾಗಿದ್ದೇನೆ.'' ಬಾಯಿಂದ ಹೇಳಬೇಕೆಂದ ಮಾತು ಬರಲಿಲ್ಲ. ಸ್ನೇಹಿತನ ಕೈಗಳನ್ನು ಗಟ್ಟಿಯಾಗಿ ಹಿಡಿದ. ಅವನಿಗೆ ಸುತ್ತಮುತ್ತಲಿನ ಎಚ್ಚರವಿರಲಿಲ್ಲ. ಅವನು ಎಂದೂ ಅನುಭವಿಸಿರದಂತಹ ಭಾವನೆಯೊಂದರಲ್ಲಿ ಮುಳುಗಿದ್ದ. ಗಂಟೆಯಾದದ್ದರಿಂದ ಇಬ್ಬರೂ ವರ್ಗಗಳಿಗೆ ಹೋದರು.

ಅವನಿಗೆ ತನ್ನ ಸ್ನೇಹಿತನಲ್ಲಿ ಒಂದು ಆಧಾರ ಸಿಕ್ಕಿತು. ಸ್ನೇಹಿತನ ವಿಷಯದಲ್ಲಿ ಗೌರವವುಂಟಾದಂತೆ ತನ್ನ ವಿಷಯದಲ್ಲಿ ಅವನಿಗೆ ಜುಗುಪ್ಸೆಯೂ ಉಂಟಾಯಿತು. ಸ್ನೇಹಿತ ಹೀಗೇಕೆ? ತಾನು ಹೀಗೇಕೆ? ಈ ಪ್ರಶ್ನೆಗೆ ಉತ್ತರವಿರಲಿಲ್ಲ. ಆ ಯೋಚನೆಯನ್ನೆ ತೆಗೆದುಹಾಕಿದ. ''ಇದನ್ನೆಲ್ಲ ನೀನು ಎಲ್ಲಿ ಕಲಿತೆ?'' ಎಂದು ಕೇಳಬೇಕೆಂದು ಅವನಿಗೆ ಎನ್ನಿಸಿತು. ''ನಿನಗೆ ಯಾರು ಹೇಳಿದರು?'' ಕೇಳಿಬಿಡಲೆ? ಊಹುಂ ಅವನು ಕೋಪಿಸಿಕೊಂಡರೆ..... ಸ್ನೇಹದ

ಬಂಧನದಲ್ಲಿ ತೊಡಕಿದ ಅವನಿಗೆ ಬೇರೆ ಯಾವ ವಿಚಾರಗಳೂ ವ್ಯರ್ಥ ಎನ್ನಿಸಿದವು. ಸ್ನೇಹಿತನಲ್ಲಿ ಒಂದು ಬಗೆಯ ಸ್ವಯಂಪೂರ್ಣತೆ ಕಂಡುಬರುತ್ತಿತ್ತು. ಅವನಿಗೆ ಬಹಳ ಬೇಕಾಗಿತ್ತು. ``ತಾನೂ ಇಂದಿಲ್ಲ ನಾಳೆ ಹಾಗಾಗಬೇಕು. ನಾಳೆ ಹಾಗಾಗಬೇಕು.'' ತನ್ನಲ್ಲಿಯೆ ಅವನು ಹೇಳಿಕೊಂಡ. ಹೇಳಿಕೊಂಡಷ್ಟು ಸಲ ಹೃದಯದಲ್ಲಿ ನಟ್ಟು ಗಾಯ ಮಾದಂತಾದವು.

ತನ್ನ ಸ್ನೇಹಿತನಿಗೆ ಬಂದ ತಿಳಿವು ತನಗೂ ಬರಲು ಸಾಧ್ಯವಿದೆ ಎಂಬ ಅರಿವು ಅವನಿಗೆ ಬಂದಂದಿನಿಂದ ಅವನಲ್ಲಿಯ ನಿರಾಸೆ ಕಡಿಮೆಯಾಯಿತು. ಅವನು ತನ್ನ ಸ್ನೇಹಿತನ ಹಾಗೆಯೇ ಸೂಕ್ತಿಗಳನ್ನು ಕೂಡಿಸಹತ್ತಿದ. ಸ್ನೇಹಿತ 'ಗಂಗಾಸ್ನಾನ' ಎಂಬ ಹೆಸರಿನಿಂದ ಸೂಕ್ತಿಗಳನ್ನು ಸಂಗ್ರಹಿಸಿದ್ದ. ಅದರಲ್ಲಿಯ ಒಂದು ವಾಕ್ಯ ಅವನಿಗೆ ಹೊಸ ಸತ್ವವನ್ನು ತಂದುಕೊಟ್ಟಿತು. ಇಂದಿನವರೆಗೆ ಆ ವಾಕ್ಯದ ಅರಿವೇ ಇರಲಿಲ್ಲ ಅವನಿಗೆ. ``ಅನ್ಯಾಯದ ವಿರುದ್ಧ ಬಂಡನ್ನು ಎಬ್ಬಿಸದಿರುವುದು ಹೇಡಿತನ.'' ಎಂತಹ ವಾಕ್ಯವಿದು. ನಾನು ಬಂಡೇಳಬೇಕು. ಯಾವುದರ ವಿರುದ್ಧ? ಅನ್ಯಾಯದ ವಿರುದ್ಧ! ತಂದೆ ತನ್ನನ್ನು ಎಷ್ಟು ಅನ್ಯಾಯದಿಂದ ನಡೆಯಿಸಿಕೊಂಡ, ನಾನು ಬಂಡೇಳಲಿಲ್ಲ. ಈಗಾದರೂ ಏನಾಯಿತು? ಬದುಕು ಒಂದು ದಿನದ್ದಲ್ಲವಲ್ಲ. ಕ್ಷಣಕ್ಷಣಕ್ಕೂ ಬದುಕಿನಲ್ಲಿ ಅನ್ಯಾಯದ ವಿರುದ್ಧ ಬಂಡೇಳುವ ಅವಕಾಶ ದೊರೆಯುತ್ತವೆ. ನಾನು ಬಂಡಾಯಗಾರನೇ. ತಂದೆಯ ವಿರುದ್ಧ ಬಂಡೆದ್ದೇ ನಾನು ಕಾಲೇಜಿಗೆ ಬಂದಿದ್ದೇನೆ! ಅವನಿಗೆ ಒಂದುಕ್ಷಣ ವಿಷಾದವೆನಿಸಿತು. ತನಗೆ ತನ್ನ ತಂದೆಯ ವಿರುದ್ಧ ನಿಲ್ಲಬೇಕಾಯಿತಲ್ಲ ಎಂದು. ಸ್ನೇಹಿತನನ್ನು ಕೇಳಿದ:

``ನಿನ್ನ ತಂದೆ ನಿನ್ನನ್ನು ಕಾಲೇಜಿಗೆ ಸಂತೋಷದಿಂದ ಕಳಿಸಿಕೊಟ್ಟರೆ?''

ಈ ಪ್ರಶ್ನೆ ಸ್ನೇಹಿತನನ್ನು ಗೊಂದಲದಲ್ಲಿ ಹಾಕಿತು.

``ಯಾಕೆ?''

``ಯಾಕಿಲ್ಲ. ಸುಮ್ಮನೆ ಕೇಳಿದೆ.''

``ನನ್ನ ತಂದೆಯ ವಿರುದ್ಧ ನಾನು ಕಾಲೇಜಿಗೆ ಬಂದಿದ್ದೇನೆ'' ಎಂಬ ಮಾತು ಅವನ ತುಟಿಯವರೆಗೆ ಬಂದು ನಿಂತಿತು. ಅದನ್ನು ಹಾಗೇ ನುಂಗಿಕೊಂಡ.

ಆರು ತಿಂಗಳ ಪರೀಕ್ಷೆಯಾಯಿತು. ಅವನು ದುಡಿದಿದ್ದ. ಗುಣಗಳೂ ಸಮಾಧಾನಕಾರಕವಾಗಿರದಿದ್ದರೂ ತೀರ ಕೆಳಮಟ್ಟದಲ್ಲೂ ಇರಲಿಲ್ಲ. ಮಾಧ್ಯಮಿಕ ಶಾಲೆಯಲ್ಲಿ ಟ್ಯೂಷನ್ನಿನ ಸಹಾಯವಿಲ್ಲದೆ ಅವನು ಮುಂದೆ ಬಂದಿದ್ದ. ಕಾಲೇಜಿನಲ್ಲಿ ಟ್ಯೂಷನ್ ಅಗತ್ಯ ಎನ್ನಿಸಿತು. ನೂರಕ್ಕೆ ಅರವತ್ತರಷ್ಟು ವಿದ್ಯಾರ್ಥಿಗಳು ಟ್ಯೂಷನ್ನಿಗೆ ಹೋಗುತ್ತಿದ್ದರು. ತಂದೆ ಒಪ್ಪಲಿಕ್ಕಿಲ್ಲ. ಆತನು ಒಪ್ಪದೆ ನಾನು ಟ್ಯೂಷನ್ನಿಗೆ ಹೋಗುವದು ಹೇಗೆ? ಒಂದೊಂದು ವಿಷಯಕ್ಕೆ ನೂರು ರೂಪಾಯಿಗಳಂತೆ ತೀರ ಕಡಮೆ ಎಂದರೂ ಮೂರು ವಿಷಯಗಳಿಗೆ ೩೦೦ ರೂಪಾಯಿಗಳಾದರೂ ಬೇಕು. ತಂದೆಗೆ ಕೊಡಲು ಸಾಧ್ಯವಿರದಿದ್ದರೂ ತುಸು ಸಹಾನುಭೂತಿಯನ್ನಾದರೂ ತೋರಿಸಬಹುದಾಗಿತ್ತಲ್ಲ. ತನ್ನ ವಿಷಯದಲ್ಲಿ ಸ್ವಲ್ಪ ಅಭಿಮಾನ ಪಡಬಹುದಲ್ಲ. ಜತೆಗೆ ಕುಳಿತು ಒಂದೆರಡು ಒಳ್ಳೆಯ ಮಾತನ್ನಾದರೂ ಆಡಬಹುದಲ್ಲ. ತಂದೆ ಇರಲಿಕ್ಕಿಲ್ಲ-ಶತ್ರುವೇ ಇರಬೇಕು. ಎನ್.ಸಿ.ಸಿ.ಯ ಪರೇಡಿನಲ್ಲಿ ಕೂಡ ಈ ವಿಚಾರ ತಪ್ಪಲಿಲ್ಲ. ಸ್ನೇಹಿತನನ್ನು ಮತ್ತೆ ಶರಣು ಹೊಕ್ಕ.

''ನೀನು ಟ್ಯೂಷನ್ನಿನ ವಿಷಯ ಹೇಗೆ ಮಾಡುತ್ತಿ?''

''ಟ್ಯೂಷನ್ ಸಾಧ್ಯವಿಲ್ಲ.''

''ಹಾಗಾದರೆ ಅಭ್ಯಾಸ''

''ನಿತ್ಯ ಮಾಡುವದು. ಬಾರದಿದ್ದುದನ್ನು ಪ್ರಾಧ್ಯಾಪಕರಿಂದ ಕೇಳುವದು. ಗೈಡಂತೂ ಇವೆಯಲ್ಲ.''

''ಗಣಿತದ ಸಮಸ್ಯೆ''

''ಅದರಲ್ಲೇನಿದೆ?''

ಈ ಪ್ರಶ್ನೆಯಿಂದ ಅವನು ನಡುನೀರಿನಲ್ಲಿ ನಿರಾಧಾರನಾದಂತಾಯಿತು. ಅವನ ಮೌನದಲ್ಲಿ ಕರುಣೆ ಹೆಪ್ಪುಗಟ್ಟಿತ್ತು. ''ನೀನು ಕೈ ಬಿಟ್ಟರೆ ನನ್ನ ಗತಿ ಏನು? ನನ್ನ ಬದುಕು ನಿನ್ನನ್ನೇ ಕೂಡಿದೆ'' ಎಂಬ ಧ್ವನಿ ಆ ಮೌನದಿಂದ ಹೊರಡುತ್ತಿತ್ತು.

''ಟ್ಯೂಷನ್ ಅವಶ್ಯಕವಲ್ಲ. ಅದೊಂದು ಲಕ್ಝುರಿ. ಕಾಲೇಜಿನಲ್ಲಿ ಹೇಳಿದ್ದನ್ನೆ ಅಲ್ಲವೇ ಅವರು ಹೇಳುವದು? ಟ್ಯೂಷನ್ನಿಗೆ ನಿತ್ಯ ಮೂರು ತಾಸುಗಳನ್ನು ಎಲ್ಲಿಂದ ತರಬೇಕು? ಅದೇ ಹೊತ್ತನ್ನು ಅಭ್ಯಾಸದಲ್ಲಿ ಹಾಕಬಹುದಲ್ಲ.''

ಅವನು ನಿತ್ಯ ಎರಡು ಮೈಲು ನಡೆದು ಬರಬೇಕು ಕಾಲೇಜಿಗೆ. ತಪ್ಪದೆ ಕಾಲೇಜಿಗೆ ಬಸ್ ಬರುತ್ತವೆ. ಮನೆಯ ಹತ್ತಿರವೇ ಬಸ್ ನಿಲ್ಲುತ್ತವೆ. ಆದರೆ ತಾನು ಹೋಗಲಾರ ಅವುಗಳಲ್ಲಿ. ತಂದೆ ಕೇಳಿದನೆ? ಒಮ್ಮೆಯಾದರೂ ಬಸ್ಸಿನಲ್ಲಿ ಹೋಗು ಎಂದು ಹೇಳಿದನೆ? ಒಂದು ಸೈಕಲ್ ತೆಗೆದುಕೊಂಡರೆ ಎಲ್ಲ ಸಮಸ್ಯೆ ಬಗೆಹರಿಯಬಹುದು. ''ನೀನು ತುಂಬ ಕಷ್ಟಪಡುತ್ತಿ. ನಿನಗೊಂದು ಸೈಕಲ್ ಕೊಂಡುಕೊಡಬೇಕು.'' ತಂದೆ ಹೀಗಂದರೆ.......''ನಾನಿಷ್ಟು ಭಾಗ್ಯವಂತನೆ?'' ಎಷ್ಟು ಬಡಕುಟುಂಬಗಳಿವೆ! ನಾವೇನೂ ಅಷ್ಟು ಬಡವರಲ್ಲ. ಬಡಕುಟುಂಬವೂ ನಿಷ್ಕಾರಣವಾಗಿ ಇಂತಹ ದುರ್ದೈವವನ್ನು ಅನುಭವಿಸಿರಲಿಕ್ಕಿಲ್ಲ. ಮಳೆಗಾಲದಲ್ಲಂತೂ ತುಂಬ ತೊಂದರೆ. ಹೈಸ್ಕೂಲಿನಲ್ಲೂ ಹಾಗೇ ಕಷ್ಟಪಟ್ಟದ್ದಾಯಿತು. ಈ ಕಷ್ಟ ಬೇಡ ಎಂದಾದರೆ ತಂದೆ ಹೇಳಿದ ಹಾಗೆ ರೈಲ್ವೆ ನೋಕರಿಗೆ ಸೇರಬೇಕು ಎಂತಹ ಅಪವ್ಯಯ- ನನ್ನ ಬದುಕು. ಊಹೂಂ ಯಾವುದೇ ಪ್ರಸಂಗ ಬಂದರೂ ಹಿಂದೆ ಸರಿಯಬೇಡ.'' ''ಹ್ಯೂಮಾಸನ ಅಭಯಹಸ್ತ ಕಣ್ಣೆದುರು ಬಂತು. ಮನುಷ್ಯನಿಗೆ ಅಸಾಧ್ಯವಾದುದೇನೂ ಇಲ್ಲ ಎಂಬುದನ್ನು ಅವನು ಹ್ಯೂಮಾಸನ ಜೀವನಚರಿತ್ರೆಯಿಂದ ಕಂಡುಕೊಂಡಿದ್ದಾನೆ. ಆದರೆ ಆದರೆ ..... ಅದು ಅಮೇರಿಕೆ. ಇದು ಭಾರತ.

''ಭಾರತ ಎಷ್ಟೋ ಬದಲಾಗಿದೆ.'' ಸ್ನೇಹಿತನ ಆಶಾವಾದ- '''ನ್ಯಾಶನಲ್ ಟ್ಯಲೆಂಟ ರಿಸರ್ಚ ಸ್ಕೀಮ ನಿನಗೆ ಗೊತ್ತಿಲ್ಲವೆ?'' ಹಳ್ಳಿಯಲ್ಲಿದ್ದೂ ಸ್ನೇಹಿತನಿಗೆ ಇದೆಲ್ಲ ಹೇಗೆ ಗೊತ್ತು? ತಾನು ಪಟ್ಟಣದಲ್ಲಿ ಕಲಿತೂ ದಡ್ಡನಾಗಿ ಉಳಿದೆನಲ್ಲ.

ಕಾಲೇಜಿನಲ್ಲಿಯ ಪ್ರಾಧ್ಯಾಪಕರ ವರ್ತನೆ ಅಷ್ಟು ಸಹ್ಯವಾಗಿರಲಿಲ್ಲ. ವರ್ಗದಲ್ಲಿಯ ನೂರರಲ್ಲಿ ತಾನೊಬ್ಬ. ಸಮೀಪದ ಸಂಬಂಧವನ್ನು ಅವರೊಡನೆ ಇಟ್ಟುಕೊಂಡ ವಿದ್ಯಾರ್ಥಿಗಳ ಸಂಖ್ಯೆ ತೀರ ಕಡಮೆ. ತನ್ನ ಕಾಲೇಜಿನ ವಿಷಯದಲ್ಲಿಯೂ ಅವನಿಗೆ ಆರಂಭದಲ್ಲಿದ್ದ ಮಮತೆ, ಆದರ ಕೆಲವು ತಿಂಗಳುಗಳಲ್ಲಿ ಕಳೆದುಹೋಯಿತು. ಒಂದು ಭವ್ಯ ಪರಂಪರೆಯುಳ್ಳ ಕಾಲೇಜಿನಲ್ಲಿ ಕಲಿವ ಶ್ರೇಯಸ್ಸು ತನ್ನದಲ್ಲವಲ್ಲ ಎಂದು ಮರುಗಿದ. ''ನೋಡು ಇದೂ ಒಂದು ದುರ್ದೈವ. ಎಂತಹ ಕಾಲೇಜು ಇದು?''

``ನಾವು ದೊಡ್ಡವರಾದರೆ ನಮ್ಮ ಕಾಲೇಜು ದೊಡ್ಡದು. ಈ ಕಾಲೇಜಿಗೆ ಕೀರ್ತಿ ತಂದುಕೊಡುವ ಶ್ರೇಯಸ್ಸು ನಮ್ಮದೇ ಏಕಾಗಬಾರದು?'' ಎಂತಹ ಬುದ್ಧಿವಂತಿಕೆ ಸ್ನೇಹಿತನದು ! ಹೌದು ಏನೇ ಆಗಲಿ. ಮುಂದೆ ಹೋಗಬೇಕು. ಯಾವ ತ್ಯಾಗಕ್ಕೂ ಹಿಂದೆ ಸರಿಯಬಾರದು. ಅವನ ಕನಸಿನಲ್ಲಿ ಸ್ನೇಹಿತ ಹೇಳುತ್ತಿದ್ದ:

``ಶ್ರೇಯಸ್ಸು ಪ್ರೇಯಸ್ಸು ಎಂದು ಎರಡಿವೆ. ಬುದ್ಧಿಹೀನರು ಪ್ರೇಯಸ್ಸನ್ನು ಆರಿಸಿದರೆ ಬುದ್ಧಿವಂತರು ಶ್ರೇಯಸ್ಸನ್ನು ಆರಿಸುತ್ತಾರೆ. ನಾವು ಶ್ರೇಯಸ್ಸನ್ನು ಆರಿಸಿಕೊಳ್ಳಬೇಕು.''

ಎಚ್ಚೆತ್ತಾಗ ಅವನ ಮನಸ್ಸು ಹಗುರವಾಗಿತ್ತು.

ಸ್ನೇಹಿತನೊಡನೆ ಸಿನೇಮಾಕ್ಕೆ ಹೋಗಿದ್ದನವನು. ಸಿನೆಮಾ ಒಂದು ಕೌಟುಂಬಿಕ ಕತೆಯನ್ನು ಹೇಳುತ್ತಿತ್ತು. ಭಾವನಾವಶತೆಯಿಂದ ಸಿನೇಮಾದಲ್ಲಿ ಆರ್ದ್ರತೆ ತಾನೇತಾನಾಗಿ ಹರಿದಿತ್ತು. ಎರಡು ನಿಮಿಷಗಳಲ್ಲಿ ಅವನ ಕಣ್ಣು ತೇವಾದವು. ತಂದೆಯ ಕ್ರೌರ್ಯ, ತಾಯಿಯ ಅಸಹಾಯಕತೆ ಮಗನ ಧೀರೋದಾತ್ತತೆ ಕತೆ ಪದರುಪದರಾಗಿ ಬಿಚ್ಚುತ್ತಿತ್ತು. ತನ್ನ ತಂದೆಯನ್ನು, ತಾಯಿಯನ್ನು ಸಿನೇಮಾದಲ್ಲಿಯ ತಂದೆತಾಯಿಗಳೊಡನೆ ಹೊಂದಿಸಿದ. ತನ್ನ ಮನೆಗೂ ಸಿನೆಮಾದಲ್ಲಿಯ ಮನೆಗೂ ಏಕರೂಪತೆಯನ್ನು ಸಾಧಿಸಿದ. ತಮ್ಮ ಹಾಗೇ ಅವರದೂ ಬಡತನ. ಮಗನ ಹಟದಿಂದ ತಂದೆಗೆ ಕಣ್ಣು ಬರುತ್ತದೆ. ಮಗನ ಔದಾರ್ಯದಿಂದ ಮನೆಯ ವಾತಾವರಣ ಬದಲಾಗುತ್ತದೆ. ಮಗನ ಯೋಗ್ಯತೆಯಿಂದ ಮನೆಗೆ ಯೋಗ್ಯತೆ ಬರುತ್ತದೆ.

ಅವನಲ್ಲಿ ಪ್ರೇರಣೆ ಬಂತು. ತಾನೂ ಬದಲಾಗಬೇಕು. ತನ್ನ ತಂದೆಯನ್ನು ತಾನು ಪ್ರೀತಿಸಬೇಕು. ಅವನ ಕ್ರೌರ್ಯವನ್ನು ಎದುರಿಸಿ ಪರಿವರ್ತಿಸಬೇಕು. ತಂದೆಯನ್ನು ಪ್ರೀತಿಸಬೇಕು? ಹೇಗೆ ಸಾಧ್ಯ! ತಂದೆಗೆ ಪ್ರೀತಿಯ ಅವಶ್ಯಕತೆಯಾದರೂ ಎಲ್ಲಿದೆ ! ಅವನಿಗೆ ಪ್ರೀತಿಯ ಅವಶ್ಯಕತೆ ಇರಲೂಬಹುದು. ಆದರೆ ಹೇಗೆ ಪ್ರೀತಿಸಬೇಕು? ನನ್ನ ಬದುಕನ್ನು ಹೀಗೆ ಮಾಡಿದವನೇ ಅವನಲ್ಲವೆ? ಇಂದೇ ಬೆಳಿಗ್ಗೆ ಪತ್ರಿಕೆಯಲ್ಲಿ ನೋಡಿದ 'ಹನ್ನೊಂದು ವರ್ಷದ ಹುಡುಗನೊಬ್ಬ - ಅವನೂ ಭಾರತದವನೇ - ಇಂಗ್ಲೆಂಡಿನಲ್ಲಿ ಅಭ್ಯಾಸ ಮಾಡುತ್ತಿದ್ದಾನೆ. ಅವನ

ಚರಿತ್ರೆಯನ್ನು ಅಚ್ಚುಹಾಕಿದ್ದಾರೆ ಭಾವಚಿತ್ರದೊಡನೆ. ನನ್ನ ಬುದ್ಧಿ ಏನು ಕಡಮೆಯ? ಒಂದು ಅವಕಾಶವನ್ನು ಒದಗಿಸಿಕೊಟ್ಟರೆ .... ಹೊಟ್ಟೆಗೆ ಹಾಕಿದ ಮಾತ್ರಕ್ಕೆ ತಂದೆಯ ಕರ್ತವ್ಯ ಮುಗಿಯಿತೆ? ಕಾಗೆ - ಗುಬ್ಬಿಗಳಿಗೂ ಅವರಿಗೂ ಅಂತರವೇನು? ತಮ್ಮ ಕಾಲೇಜಿನಲ್ಲಿಯೇ ಕಾನ್ವೆಂಟ ವಿದ್ಯಾರ್ಥಿಗಳಿರುವರಲ್ಲ. ತಂದೆ ನನ್ನನ್ನು ಕಾನ್ವೆಂಟಿಗೂ ಹಾಕಲಿಲ್ಲ. ಹೊಟ್ಟೆಗೆ ಹಾಕಿದ ಎಂದರೇನು? ದಿನದ ಭಾರ ಹೊರದ ದೇಹ ಈಗಾಗಲೇ ತೆವಳುತ್ತಲಿದೆ. ಏನೇ ಇರಲಿ. ನಾನು ನನ್ನ ತಂದೆಯನ್ನು ಪ್ರೀತಿಸಲೇಬೇಕು. ತಂದೆಗೆ ತನ್ನ ಪ್ರೀತಿಯ ಅವಶ್ಯಕತೆ ಇರಲಿ ಇಲ್ಲದಿರಲಿ- ತಂದೆಯನ್ನು ಪ್ರೀತಿಸುವದರಲ್ಲಿ ತನ್ನ ವ್ಯಕ್ತಿತ್ವದ ಧೀರೋದಾತ್ತತೆಯಿದೆ.

ತಂದೆಯನ್ನು ಪ್ರೀತಿಸುವದು ಎಂದರೇನು? ಮೊದಲು ನನ್ನ ಬದುಕು ಬಂಗಾರವಾದರೆ ತಂದೆಯ ಬದುಕನ್ನು ನಾನು ಬಂಗಾರ ಮಾಡಬಲ್ಲೆ. ಈಗ ಅವನ ಧ್ಯೇಯ ಬದಲಾಗಿದೆ. ಡಾಕ್ಟರ ಇಂಜನಿಯರ ಇವುಗಳಲ್ಲಿ ಅವನಿಗೆ ಆಸಕ್ತಿ ಇಲ್ಲ. ಹ್ಯೂಮಾಸನ್, ಐನಸ್ಟೀನ್, ಹಾಲ್ಡೇನ್ ಇವರು ಅವನ ಮಾನಸ ಕ್ಷಿತಿಜವನ್ನು ವಿಸ್ತರಿಸಿದ್ದಾರೆ. ಹಣದ ಮೇಲೆ ಮೋಹವಿಲ್ಲ. ಈ ಬಗೆಯ ಹೊಸ ಕನಸಿನ ಬೀಜವನ್ನು ಬಿತ್ತಿದವನೂ ಸ್ನೇಹಿತನೆ. ವಿಜ್ಞಾನ ಇಂದಿನ ಮಂತ್ರ. ನಮ್ಮ ಭಾರತವನ್ನು ಮುಂದೆ ತರಬೇಕು. ನೋಬೆಲ್ ಪಾರಿತೋಷಕವನ್ನು ವಿಜ್ಞಾನದ ಶೋಧಗಳಿಗಾಗಿ ಪಡೆಯಬೇಕು. ಅಸಾಧ್ಯವಾದದ್ದೇನಿದೆ. ಪ್ರಯತ್ನ ಮಾಡಬೇಕು. 'ಸಂಶೋಧಕರ ಜೀವನಚರಿತ್ರೆ ''ವಿಜ್ಞಾನದ ಇತಿಹಾಸ'' ಇವುಗಳಿಂದ ಅವನ ಜೀವನ ವಿಕಾಸವಾಗುತ್ತಲಿದೆ. ಅವರಿಬ್ಬರೂ ಕೂಡಿ ವಿಜ್ಞಾನಿಗಳ ವೈಶಿಷ್ಟ್ಯಗಳನ್ನು ಕಲೆಹಾಕಿದರು. ಅವರ ಜೀವನದ ರೀತಿನೀತಿಗಳನ್ನು ಕೂಲಂಕಷವಾಗಿ ಅಭ್ಯಾಸ ಮಾಡಿದರು.

''ಸಂಶೋಧನೆಗಾಗಿ ಯಾವ ಕ್ಷೇತ್ರವನ್ನು ಆರಿಸಿಕೊಳ್ಳಬಹುದು?'' ಅವನು ಸ್ನೇಹಿತನನ್ನು ಕೇಳಿದ.

ನ್ಯೂಕ್ಲಿಯರ್ ಫಿಜಿಕ್ಸ್, ನ್ಯೂಕ್ಲಿಯರ್ ಕೆಮಿಸ್ಟ್ರಿ, ಬೈಯಾಲಜಿ, ಪ್ಯೂಅರ್ ಮೆಥೆಮೆಟಿಕ್ಸ್, ಕ್ಷೇತ್ರ ಎಷ್ಟು ವಿಶಾಲವಾಗಿದೆ. ಜೀವನಕ್ಕೊಂದು ಉದ್ದೇಶವಿರಬೇಕು. ಬರಿ ಹೊಟ್ಟೆ ತುಂಬಿಕೊಳ್ಳುವದೊಂದೇ ಜೀವನದ ಉದ್ದೇಶವಲ್ಲ. ಸೃಷ್ಟಿಯ ರಹಸ್ಯಗಳನ್ನು ಭೇದಿಸಿ ಲೋಕಜೀವನವನ್ನು ಸಮೃದ್ಧಗೊಳಿಸುವುದರಲ್ಲಿ ಎಂತಹ ಶ್ರೇಷ್ಠತೆ ಇದೆ.''

ಒಮ್ಮೊಮ್ಮೆ ಅವನಿಗೆ ಇದೆಲ್ಲ ಹುಚ್ಚನ ಗಾಳಿಗೋಪುರವೆನ್ನಿಸುತ್ತಿತ್ತು. ಆದರೆ ಸ್ನೇಹಿತನಲ್ಲಿ ಮಾತ್ರ ಈ ವಿಷಯದಲ್ಲಿ ವಿಲಕ್ಷಣವಾದ ಆತ್ಮ ವಿಶ್ವಾಸವಿತ್ತು. ಈ ವಿಷಯದಲ್ಲಿ ಸ್ವಲ್ಪ ಸಂದೇಹವನ್ನೆತ್ತಿದರೂ ಅದನ್ನು ಅವನು ಉಗ್ರವಾಗಿ ಖಂಡಿಸಿ ''ಇಂತಹ ನಿರಾಶಾವಾದಿಗಳಿಂದಲೇ ವೈಯಕ್ತಿಕ ಪತನವಾಗುವದಲ್ಲದೆ ದೇಶದ ಪತನವಾಗುತ್ತದೆ.'' ಘೋಷಿಸುತ್ತಿದ್ದ. ಒಮ್ಮೊಮ್ಮೆ ಅವನಿಗೆ ''ಸೃಷ್ಟಿಯ ಗರ್ಭದ ರಹಸ್ಯಗಳೆಲ್ಲ ಮುಗಿದುಹೋಗಿರಬಹುದೆ?'' ಎಂಬ ಸಂದೇಹ ಉಂಟಾಗುತ್ತಿತ್ತು. ಆದರೆ ಹೀಗೆ ಎಂದು ಅವನು ತನ್ನ ಸ್ನೇಹಿತನೆದುರು ಆಡಿತೋರಿಸಲಿಲ್ಲ.

ತನ್ನ ಸುತ್ತಮುತ್ತಲಿನ ಹುಡುಗರ ವಿಷಯದಲ್ಲಿ ಜುಗುಪ್ಸೆಯುಂಟಾಯಿತು. ಉಚ್ಚ ವಿಚಾರಸರಣಿಯೇ ಇಲ್ಲ. ''ಅವರೂ--ಆಕೃತಿಯಲ್ಲಿ ಮಾತ್ರ ಮನುಷ್ಯರು'' ಸ್ನೇಹಿತ ಅಭಿಪ್ರಾಯ. ನಾನು ಅದ್ವಿತೀಯ. ನನ್ನ ಹಾಗೆ ಇವರಲ್ಲಿ ಯಾರೂ ಇಲ್ಲ. ಈ ಭಾವ ಅವನಲ್ಲಿ ಧನ್ಯತೆಯನ್ನು ಅರಳಿಸುತ್ತಿತ್ತು. ಒಂದೊಂದು ಸಲ ಭವಿಷ್ಯದ ಯೋಜನೆಯನ್ನು ಕುರಿತು ಸ್ನೇಹಿತನೊಡನೆ ಚರ್ಚಿಸುತ್ತಿದ್ದ. ಆದರೆ ಸ್ನೇಹಿತನಿಗೆ ಅವನು ತುಂಬ ಹೆದರುತ್ತಿದ್ದ. ''ಒಂದೇ ಒಂದು ಹೆಜ್ಜೆಯನ್ನಿಡಬೇಕು. ಮುಂದಿನ ಹೆಜ್ಜೆಗೆ ದಾರಿ ತಾನೇ ತೆರೆಯುತ್ತದೆ. ನಾಲ್ಕು ಗೋಡೆಗಳ ಮಧ್ಯದಲ್ಲಿ ಕುಳಿತು ಭವಿಷ್ಯದ ಯೋಜನೆಯನ್ನು ಹಾಕುವವರು ಹೇಡಿಗಳು. ನಿಷ್ಕ್ರಿಯರು. ಸತ್ಯ ಎಂದರೆ ಹೆಜ್ಜೆಮೂಡದ ಕಡಲು. '' ಕೆಲವೊಂದು ಸಲ ತಾನೆ ಹೇಳುತ್ತಿದ್ದ:

''ಫಿಜಿಕ್ಸ್ ಮಾತ್ರ ಸೈನ್ಸ್. ಉಳಿದವುಗಳಲ್ಲಿ ಏನಿದೆ?''

''ನಮ್ಮ ಕಾಲೇಜಿನಲ್ಲಿ ಡಿ.ಎಸ್.ಸಿ. ಯಾರೂ ಇಲ್ಲವಲ್ಲ''

''ಡಿ.ಎಸ್.ಸಿ ಯಂತೆ ಪಿ.ಎಚ್.ಡಿ ಯೇ ಇಲ್ಲ. ಅದೇನು ಆರ್ಟ್ಸ್‌ನವೆ ಪಿ.ಎಚ್.ಡಿ ಹೇರಳವಾಗಿರಲು?''

''ವಿಜ್ಞಾನದ ಸಂಶೋಧನೆಗೆ ತೀವ್ರವಾದ ಬುದ್ಧಿ ಶ್ರಮಪಡುವ ಪ್ರವೃತ್ತಿ ಬೇಕು. ಬಡ ಪ್ರಾಧ್ಯಾಪಕರು, ಹೊಟ್ಟೆ ಹೊರೆದುಕೊಳ್ಳಲು ಬಂದವರು. ರಿಲೇಟಿವಿಟಿಯ ರಿಚರ್ ಟ್ರುಥ್ ಇವರ ಭಾಗ್ಯವಲ್ಲ.''

ಸ್ನೇಹಿತನಲ್ಲಿ ಎಂತಹ ಆತ್ಮವಿಶ್ವಾಸ ! ಅವನಿಗೆ ಅದನ್ನು ಕಂಡು ಆಶ್ಚರ್ಯವೆನ್ನಿಸುತ್ತಿತ್ತು. ಅಂತಹ ಶ್ರದ್ಧೆ ತನ್ನಲ್ಲಿ ಉರಿಯಲಾರದುದಕ್ಕಾಗಿ

ಅವನಿಗೆ ವ್ಯಥೆಯಾಗುತ್ತಿತ್ತು. ಸ್ನೇಹಿತನ ವ್ಯಕ್ತಿತ್ವ ನಿಜವೊ ಮುಖವಾಡವೊ ಎಂಬುದನ್ನು ಕೆಣಕುವ ಧೈರ್ಯ ಮಾತ್ರ ಅವನಿಗಿರಲಿಲ್ಲ.

ಪದವಿ ಪೂರ್ವ ಪರೀಕ್ಷೆ ಮುಗಿಯಿತು. ಅವನು ತಕ್ಕಮಟ್ಟಿಗೆ ಚೆನ್ನಾಗಿಯೇ ಮಾಡಿದ್ದ. ದ್ವಿತೀಯ ವರ್ಗವಾದರೂ ನಿಶ್ಚಿತವೆನ್ನಿಸುತ್ತಿತ್ತು. ಪರೀಕ್ಷೆಯ ಮಂಟಪದಲ್ಲಿ ಒಂದೆರಡು ಸಂಗತಿಗಳನ್ನು ನೋಡಿದ್ದ. ತಮ್ಮ ವರ್ಗದಲ್ಲಿಯೇ ಕಲಿಯುತ್ತಿದ್ದ ಥಿಯೇಟರ್ ಮಾಲಿಕನ ಮಗನ ಪರಾಕ್ರಮ. ಅವನ ಮುಂದೆಯೇ ಥಿಯೇಟರ ಮಾಲಿಕನ ಮಗ ಕುಳಿತಿದ್ದ- ಯಾರ ಭಯವೂ ಇಲ್ಲದೆ ಕಾಪಿ ಹೊಡೆಯುತ್ತಿದ್ದ. ಅವನು ಈ ಸಾಹಸವನ್ನು ಕಂಡು ದಿಙ್ಮೂಢನಾದ. ಪರ್ಯವೇಕ್ಷಕ ಇದು ತನಗೆ ಯಾವುದೂ ಸಂಬಂಧವಿಲ್ಲ ಎನ್ನುವ ಹಾಗೆ ನಡೆದುಕೊಳ್ಳುತ್ತಿದ್ದ. ''ಆದರೆ ಈ ಸಾಹಸವನ್ನು ನಾನು ಮಾಡಬಲ್ಲೆನೆ?'' ಸಾಧ್ಯವಿಲ್ಲ ಎನ್ನಿಸಿತು. ಈ ವಿಷಯದಲ್ಲಿ ತನ್ನ ಸ್ನೇಹಿತನ ಅಭಿಪ್ರಾಯ ಏನು ಎಂದು ತಿಳಿದುಕೊಳ್ಳುವುದು ಸಾಧ್ಯವಿರಲಿಲ್ಲ.

''ನನಗೆ ಕಾಪಿ ಮಾಡುವ ಅವಶ್ಯಕತೆಯಿಲ್ಲ.''

''ಅವಶ್ಯಕತೆ ಇಲ್ಲ ಎಂದರೇನು? ಪ್ರಶ್ನೆಪತ್ರಿಕೆಯಲ್ಲಿಯ ಎಲ್ಲ ಪ್ರಶ್ನೆಗಳನ್ನೂ ನೀನು ಬಿಡಿಸಬಲ್ಲೆಯಾ? ನಿನಗೆ ಹೆದರಿಕೆಯಿದೆ. ಭಯಗ್ರಸ್ತರಿಂದ ಯಾವ ಸಾಹಸವೂ ಆಗಲಾರದು.''

''ಇದೇನೂ ಸಾಹಸವಲ್ಲ. ಹೇಡಿತನ.''

''ನಿನ್ನ ದೌರ್ಬಲ್ಯವನ್ನು ಯಾವ ಹೆಸರಿನಿಂದ ಬೇಕಾದರೂ ಮುಚ್ಚಿಕೊಳ್ಳಬಹುದು. ಆದರೆ ದೌರ್ಬಲ್ಯವೇನೂ ಸುಳ್ಳಾಗದಲ್ಲ.''

''ನನಗೇಕೆ ಇದೆಲ್ಲ? ನನ್ನ ಕೆಲಸ ನಾನು ಮಾಡುತ್ತೇನೆ.''

ಅವನು ತಾನು ಬರೆದ ಪುಟಗಳನ್ನು ಎಣಿಸಿ ನೋಡಿದ. ಹತ್ತು ಪುಟ ಬರೆದಾಗಿತ್ತು. ಸ್ನೇಹಿತ ಹೇಳಿದ್ದ:

''ಮೂವತ್ತೂ ಪುಟಗಳನ್ನಾದರೂ ಬರೆಯಬೇಕು.''

ಇನ್ನು ಇಪ್ಪತ್ತು ಪುಟಗಳನ್ನು ಬರೆಯುವದು ಸಾಧ್ಯವಿರಲಿಲ್ಲ. ಈ ಪರೀಕ್ಷೆ ಅವನ ಜೀವನ ಮರಣದ ಪ್ರಶ್ನೆಯಾಗಿತ್ತು :How to write better

examinations' ಪುಸ್ತಿಕೆಯಿಂದ ಅವನು ಪಾಠಗಳನ್ನೆಲ್ಲ ತೆಗೆದುಕೊಂಡಿದ್ದ. ಪ್ರಯೋಗಗಳು ಕೂಡ ಚೆನ್ನಾಗಿದ್ದವು. ಇದೊಂದು ಪರೀಕ್ಷೆಯನ್ನು ದಾಟಿದರೆ ಮುಗಿದುಹೋಯಿತು. ತನ್ನ ದಾರಿಯಂತೂ ನಿಶ್ಚಿತವಾಗಿದೆ. ಭೌತವಿಜ್ಞಾನಿ. ಇತ್ತೀಚಿನ ಪತ್ರಿಕೆಗಳಲ್ಲಿ ' ಜಯಂತ ನಾರಳೀಕರ' ನ ಜೀವನ ಚರಿತ್ರೆಯನ್ನು ಓದಿದ್ದ. ಇಂತಹದೇನಾದರೂ ಓದಿದಾಗ ಅವನು ಅಸೂಯೆಯ ಅಗ್ನಿಯಲ್ಲಿ ಸುಟ್ಟು ಹುರುಪಳಿಸುತ್ತಿದ್ದ.

''ನಾರಳೀಕರರ ಸಂಶೋಧನೆಯ ವಿಷಯ ....''ಅವನು ತನ್ನ ಸ್ನೇಹಿತನ ಮುಖವನ್ನು ನೋಡುತ್ತ ಹೇಳಿದ. ಸ್ನೇಹಿತನ ಅಭಿಪ್ರಾಯ ತಿಳಿದಮೇಲೆ ಅವನು ತನ್ನ ಅಭಿಪ್ರಾಯ ರೂಪಿಸಿಕೊಳ್ಳುವವ.

'' ನನ್ನ ಅಭಿಪ್ರಾಯದಲ್ಲಿ '' ಹೊಯ್ಲ - ನಾರಳೀಕರ '' ಸಿದ್ಧಾಂತಕ್ಕೆ ಇನ್ನೂ ಸಿದ್ಧಾಂತದ ಸ್ವರೂಪ ಬಂದಿಲ್ಲ.''

''ಅದೇ ನಾನೂ ಅದನ್ನೇ ಹೇಳಬೇಕೆಂದು ಮಾಡಿದ್ದೆ.''

''ಮುಖ್ಯ ಮಾತೆಂದರೆ ಸಂಶೋಧನೆಗಳು ಅನೇಕವಿವೆ. ಆದರೆ ಅವೆಲ್ಲ ಅಷ್ಟೇ ಮಹತ್ವದವುಗಳಲ್ಲ. ಸಮಗ್ರ ಮಾನವಜೀವನವನ್ನೇ ಪರಿವರ್ತಿಸುವ ಸಂಶೋಧನೆಗೆ ಮಾತ್ರ ಅರ್ಥವಿದೆ.''

''ದೈವವಿರಬೇಕು ಮುಖ್ಯ. ನಮಗೆ ನಾರಳೀಕರನಿಗಿರುವಂತಹ ಹಿನ್ನೆಲೆ ಇಲ್ಲ. ಎಂತಹ ಅನುಕೂಲತೆಗಳು ತಂದೆಯಿಂದ - ಇಂಗ್ಲಂಡದಲ್ಲಿ ಶಿಕ್ಷಣ ... ಹೊಯ್ಲರಂತಹರ ಸ್ನೇಹ, ಮಾರ್ಗದರ್ಶನ''

''ಇಂತಹ ನಿರಾಶಾವಾದ ನನಗೆಂದಿಗೂ ಸೇರುವುದಿಲ್ಲ. ನಮಗೆ ಹಿನ್ನೆಲೆ ಆಧಾರವಿಲ್ಲವಲ್ಲ. ಆದರೂ ಅದನ್ನು ನಿರ್ಮಿಸಿಕೊಂಡು ನಾವು ಮುಂದುವರಿಯಬೇಕು. ಅಸಂಭವವೆನ್ನುವದು ನಮ್ಮ ಶಬ್ದಕೋಶದಲ್ಲಿರ ಬಾರದು.''

''ನಾನೂ ಅದನ್ನೇ ಹೇಳಬೇಕೆಂದು ಮಾಡಿದ್ದೆ.''

ಫಲಿತಾಂಶ ಬಂದಾಗ ಅವನು ತಾನು ಪಾಸಾದುದನ್ನು ಕಂಡು ಸಂತೋಷ ಪಟ್ಟ. ದ್ವಿತೀಯ ವರ್ಗದಲ್ಲಿ ಬಂದಿದ್ದ. ತನ್ನ ಸ್ನೇಹಿತನೂ ದ್ವಿತೀಯ ವರ್ಗದಲ್ಲಿ

ಪಾಸಾಗಿದ್ದ. ಆದರೆ ತಂದೆಗೆ ಮಾತ್ರ ಇದರಿಂದ ಯಾವ ಸಂತೋಷವೂ ಆಗಲಿಲ್ಲ. ``ಎರಡನೆಯ ವರ್ಗ ಬಂದರೇನು ಬಹಳಾಗಲಿಲ್ಲ Late is better than never. ಈಗಾದರೂ ಏನು ರೇಲ್ವೆದಲ್ಲಿ ಜಾಗ ಇವೆ`` ಎನ್ನಬೇಕೆ? ಅವನು ತನ್ನ ತಾಯಿಗೆ ಮೊರೆಹೊಕ್ಕ. ತಾನು ಮುಂದೆ ಕಲಿತರೆ ಮನೆತನಕ್ಕಾಗಬಹುದಾದ ಒಳಿತನ್ನೆಲ್ಲ ಮನದಟ್ಟುವಂತೆ ಚಿತ್ರಿಸಿದ. ತಾಯಿ ಗಟ್ಟಿಯಾಗಿ ಮಗನ ಪರವಾಗಿ ನಿಂತಳು. ರಾತ್ರಿ ಅವಳು ತಂದೆಗೆ ಹೇಳುತ್ತಿದ್ದಳು:

''ಅವನನ್ನು ಕಾಲೇಜಿಗೆ ಹಾಕದಿದ್ದರೆ ನಾನು ಯಾವುದಕ್ಕೂ ಹಿಂದೆ ಸರಿಯುವದಿಲ್ಲ. ಇಲ್ಲಿಯವರೆಗೆ ನಾನು ಯಾವುದಕ್ಕೂ ಪ್ರತಿಯಾಡಲಿಲ್ಲ. ಎಲ್ಲವನ್ನೂ ಸಹಿಸಿದ್ದೇನೆ. ಮನೆಯೊಡೆದರೂ ಚಿಂತೆಯಿಲ್ಲ. ನಾನು ಮಗನ ಬದಿಗೆ ನಿಲ್ಲುತ್ತೇನೆ. ರಟ್ಟೆಗಳಲ್ಲಿ ಬಲವಿರುವವರೆಗೆ ದುಡಿದು ಅವನನ್ನು ಕಲಿಸುತ್ತೇನೆ.'' ತಂದೆ ಈ ನಿರ್ಧಾರವನ್ನು ಹಿಂದೆ ಎದುರಿಸಿರಲಿಲ್ಲ - ತನ್ನ ಹೆಂಡತಿಯಲ್ಲಿಯ ಸ್ಥಿರತೆಯಿಂದ ಮೂಕವಿಸ್ಮಿತನಾದ.

''ಖರ್ಚಿನ ಪ್ರಶ್ನೆ ಹೇಗೆ ?'' ಭೀತಭೀತನಾಗಿ ತಂದೆ ಕೇಳಿದ.

''ನಾನು ಹೆಣ್ಣುಮಗಳು - ನನಗೇನೂ ತಿಳಿಯುವುದಿಲ್ಲ. ಎಲ್ಲ ಅನುಕೂಲತೆಗಳನ್ನು ಮಾಡಿ ಮಗನ ಭವಿತವ್ಯ ಒಳ್ಳೆಯದಾಗುವಂತೆ ನೋಡಿಕೊಳ್ಳುವುದು ನಿಮ್ಮ ಕರ್ತವ್ಯ. ನಿಮ್ಮಿಂದ ಆಗುವುದಿಲ್ಲ ಎಂದಾದರೆ ಮಾತ್ರ ನಾನು ನನ್ನ ದಾರಿಯನ್ನು ಕಂಡುಕೊಳ್ಳುತ್ತೇನೆ. ನಾನು ನನಗಾಗಿ ಯಾವುದನ್ನೂ ಬೇಡಿಲ್ಲ. ನನಗಿರುವುದು ಎರಡು ಗಂಡು ಒಂದು ಹೆಣ್ಣು. ಹಿರಿಯ ಹುಡುಗ ಕಲಿತು ಮುಂದಾದರೆ....'' ಅವಳ ಬಾಯಿಂದ ಮುಂದೆ ಮಾತು ಹೊರಡಲಿಲ್ಲ. ತಂದೆ ಒಪ್ಪಿಗೆಯನ್ನು ಕೊಟ್ಟರು. ಅವನು ತನ್ನ ತಾಯಿಗೆ ಕೃತಜ್ಞತೆಗಳನ್ನು ಅರ್ಪಿಸಿದ.

ತಂದೆ ಮಗನೊಡನೆ ಮಾತನಾಡಿದ. ಪ್ರಮುಖ ಸಂಗತಿಯೆಂದರೆ ವೆಚ್ಚದ್ದು ಅವನು ಹೇಳಿದ:

''ಏನಾದರೂ ಮಾಡಿ ಆರ್ಥಿಕ ರೀತಿಯಿಂದ ಹಿಂದುಳಿದ ಸರ್ಟಿಫಿಕೇಟ್ ಕೊಡುವ ವ್ಯವಸ್ಥೆ ಮಾಡಬೇಕು.''

''ಅಂದರೇನಾಗುತ್ತದೆ?''

''ಕಾಲೇಜು ಫೀ ಕೊಡುವ ಕಾರಣವಿಲ್ಲ.''

''ಅದನ್ನು ಹೇಗೆ ತರಬೇಕು?''

''ವಾರ್ಷಿಕ ಉತ್ಪನ್ನ ೧೨೦೦ ರೂಪಾಯಿಗಳ ಒಳಗೆ ತೋರಿಸಬೇಕು. ನಮ್ಮ ಕಾಲೇಜಿನಲ್ಲಿ ಅರ್ಧಕ್ಕರ್ಧ ಹುಡುಗರು ಈ ಸವಲತ್ತನ್ನು ಪಡೆಯುತ್ತಾರೆ.''

''ಈಗಿನದಾಯಿತು. ಮೆಡಿಕಲ್ ವೆಚ್ಚದ್ದು ಹೇಗೆ ?''

''ನಾನು ಮೆಡಿಕಲ್‌ಗೆ ಹೋಗುವುದಿಲ್ಲ. ನಾನು ಪ್ಯೂಅರ್ ಫಿಜಿಕ್ಸ್ ತೆಗೆದುಕೊಂಡು ಡಿ.ಎಸ್.ಸಿ. ಮಾಡಬೇಕೆಂದಿದ್ದೇನೆ.''

''ಅದಕ್ಕಿಂತ ರೇಲ್ವೆ ನೋಕರಿ ಏನು ಕೆಟ್ಟ?'' ತಂದೆ ಕೇಳಿದರು - ''ಆದರೆ ಎಮ್.ಎಸ್.ಆಗಬೇಕು.''

''ಬಿ.ಎಸ್.ಸಿ. ಪ್ರಥಮ ಭಾಗ ಮುಗಿದರೆ ಎರಡು ವರ್ಷ ಇಲ್ಲಿಯೆ ಪ್ರಿನ್ಸಿಪಲ್ ಫಿಜಿಕ್ಸು ಕಲಿಯುವದು. ಅದಾದಮೇಲೆ ವಿಶ್ವವಿದ್ಯಾಲಯದಲ್ಲಿ ಎರಡು ವರ್ಷ ಎಮ್.ಎಸ್.ಸಿ. ಮುಂದೆ ಮೂರು ವರ್ಷ ಡಿ.ಎಸ್.ಸಿ.''

''ಇನ್ನೂ ಆರು ವರ್ಷ. ಇಷ್ಟೆಲ್ಲ ಕಲಿತು ಮುಂದೇನು?''

''ಮುಂದೆ ಒಳ್ಳೊಳ್ಳೆ ಚಾನ್ಸ''

''ನೀನು ಮೆಡಿಕಲ್ ಇಲ್ಲವಾದರೆ ಆರ್ಟ್ಸ್ ಲೈನಿಗೇಕೆ ಸೇರಬಾರದು?''

''ನನಗೆ ವಿಜ್ಞಾನಿಯಾಗುವ ಅಭಿಲಾಷೆಯಿದೆ.''

''ನಿನ್ನನ್ನು ಆರು ವರ್ಷ ಹಿಡಿಯಬೇಕು.''

ಅವನು ತಂದೆಗೆ ಉತ್ತರ ಕೊಡಲಿಲ್ಲ.

''ನಮಗೊಬ್ಬರು ಶಿಕ್ಷಕರಿದ್ದರು. ಯೋ ಧ್ರುವಾಣಿ ಪರಿತ್ಯಜ್ಯ ಎಂಬ ಸಂಸ್ಕೃತ ಶ್ಲೋಕವನ್ನು ಹೇಳುತ್ತಿದ್ದರು. ಕನ್ನಡಿಯಲ್ಲಿಯ ಗಂಟಿಗಿಂತ ಕೈಯಲ್ಲಿಯ ದಂಟೇ ಲೇಸು. ಬಿಸಿಲುಗುದುರೆಯ ಹಿಂದೆ ಓಡುವದನ್ನು ಬಿಟ್ಟುಬಿಡು.''

ಈ ಮಾತಿಗೂ ಅವನು ಉತ್ತರವನ್ನು ಕೊಡಲಿಲ್ಲ. ಅವನಿಗೆ ತಾಯಿಯ ಆಧಾರವಿತ್ತು. ಕೊನೆಗೆ ಅವನು ಕಾಲೇಜ ಅಧ್ಯಯನವನ್ನು ಮುಂದುವರಿಸಿದ.

ಆದರೆ ಅವನ ಸತ್ವಪರೀಕ್ಷೆ ಇಲ್ಲಿಗೇ ನಿಲ್ಲಲಿಲ್ಲ. ಅವನ ತಂದೆಗೆ ಒಂದು ದೂರದ ಊರಿಗೆ ವರ್ಗವಾಯಿತು. ತಂದೆ ನಿರುಪಾಯನಾದ. ''ನಾನು ನನ್ನ ಮಗನು ಮುಂದೆ ಹೋಗಬಾರದೆಂದು ಬಯಸುವುದಿಲ್ಲ. ಆದರೆ ಎರಡು ಮನೆ ಹೇಗೆ ಸಾಧ್ಯ?'' ಹೆಂಡತಿಯ ಮುಂದೆ ಕೈಯೂರಿದ. ತಾಯಿ ಯೋಚಿಸಿದಳು. ಅವನು ಹಾಸ್ಟೆಲ್ ಯೋಜನೆಯನ್ನು ಹೇಳಿದ. ''ವರ್ಷಕ್ಕೆ ಐದುನೂರು

ರೂಪಾಯಿಯಾದರೆ ಸಾಕು. ನನಗೆ ಪುಸ್ತಕ ಬೇಡ. ಅಷ್ಟರಲ್ಲಿಯೇ ಎಲ್ಲ ಮಾಡಿಕೊಳ್ಳುತ್ತೇನೆ. ಅವನ ತಾಯಿಯ ತಲೆಯಲ್ಲಿ ಒಂದು ಯೋಚನೆ ಸುಳಿಯಿತು. ಅವಳ ಗೆಳತಿ ತುಂಬ ದೊಡ್ಡ ಅಂತಸ್ತಿಗೆ ಏರಿದ್ದಳು. ಅವಳದು ದೊಡ್ಡ ಬಂಗಲೆ. ಅವಳ ಕಂಪೌಂಡಿನಲ್ಲಿ ಇರುವ ರೂಮುಗಳಲ್ಲಿ ತನ್ನ ಮಗನಿಗಾಗಿ ಒಂದನ್ನು ಪುಕ್ಕಟೆಯಾಗಿ ಕೇಳಬೇಕು ಎಂಬ ಯೋಚನೆ ಬಂತು. ಗೆಳತಿ ತನ್ನ ವಿಷಯದಲ್ಲಿ ಆರ್ದ್ರಹೃದಯಿಯಾಗಿದ್ದಾಳೆಂಬುದು ಅವಳಿಗೆ ಗೊತ್ತಿತ್ತು. ಗೆಳತಿಯ ನೆನಪಾದೊಡನೆ ಅವಳ ಕಣ್ಣು ತುಂಬಿ ಬಂದವು. ''ಅವರವರ ದೈವ ಅವರ ಬೆನ್ನುಹಿಂದೆ. ಅವಳು ಹೆಚ್ಚಲ್ಲ ತಾನು ಕಡಿಮೆಯಲ್ಲ. ದೈವ ಅವಳ ಮೇಲೆ ದೃಷ್ಟಿಹಾಕಿತು. ಇಂದು ಕಾರಿನಲ್ಲಿದ್ದಾಳೆ. ದೈವ ನಾಳೆ ನನ್ನ ಮಗನ ಮೇಲೆ ದೃಷ್ಟಿ ಬೀರಿತು. ಆಗ ನಾನೂ......'' ಅವಳು ತನ್ನ ಗೆಳತಿಯನ್ನು ಕಂಡು ಮಾತನಾಡಿದಳು. ಗೆಳತಿ ''ಯಜಮಾನರೊಡನೆ ಮಾತನಾಡುತ್ತೇನೆ. ಹೇಳುತ್ತೇನೆ.''

''ಇಷ್ಟು ಸಣ್ಣ ಮಾತಿಗೆ ?''

''ಹಾಗಲ್ಲ ನಿನ್ನ ಮಗನಿಗೆ ರೂಮು ಕೊಡುತ್ತೇನೆ. ಆದರೂ ಅವರನ್ನೊಂದು ಮಾತು ಕೇಳದೆಯೇ....''

''ಅವರು ಬೇಡ ಎಂದರೆ.....''

''ಹಾಗೆ ಹೇಗಂದಾರು ?''

''ನೋಡು ನನ್ನ ಭವಿತವ್ಯ ನಿನ್ನ ಕೈಯಲ್ಲಿದೆ.'' ಅವಳ ಕಂಠ ಗದ್ಗದಿತವಾಗಿತ್ತು.

''ನೀನು ಏನೂ ಯೋಚನೆ ಮಾಡಬೇಡ.''

''ನಿನ್ನ ಉಪಕಾರವನ್ನು ನಾನು ಎಂದಿಗೂ ಮರೆಯಲಾರೆ....''

ಅವಳು ತನ್ನ ಯೋಜನೆಯನ್ನು ತನ್ನ ಮಗನಿಗೂ ಗಂಡನಿಗೂ ಹೇಳಿದಳು.

ಕಾಲೇಜ ಪ್ರಾರಂಭವಾದ ಮೇಲೆ ಅವನಿಗೆ ಆದ ಆಘಾತವೆಂದರೆ ಅವನ ಸ್ನೇಹಿತ ಕಾಲೇಜಿಗೆ ಬಂದಿರಲಿಲ್ಲ . ಏಕೆಂಬುದೂ ಗೊತ್ತಾಗಲಿಲ್ಲ. ಪತ್ರ ಬರೆದು ತಿಳಿದುಕೊಳ್ಳಬೇಕೆಂದರೆ ಅವಳ ವಿಳಾಸವಿರಲಿಲ್ಲ. ಹೆಜ್ಜೆಹೆಜ್ಜೆಗೆ ಬೆಳಕು ಕೊಟ್ಟು

ಕೈಹಿಡಿದು ನಡೆಯಿಸುಕೊಂಡು ಬಂದ ಸ್ನೇಹಿತ ದೂರ ಹೋದುದರಿಂದ ಅವನ ಕಣ್ಣೆದುರು ಕತ್ತಲೆ ಕವಿಯಿತು. ಅವನ ಹೃದಯ ಬರಿದೊ ಬರಿದು ತೆರವೊ ತೆರವು ಎಂಬಂತಾಯಿತು. ಸ್ನೇಹಿತನ ಪ್ರೇರಣೆಯಿಂದ ಅವನು ತನ್ನ ಹೃದಯದಲ್ಲಿ ಅಗ್ನಿಕುಂಡವೊಂದನ್ನು ಹೊತ್ತಿಸಿಕೊಂಡಿದ್ದ. ತರಗೆಲೆಗಳನ್ನು ತಂದು ತಂದು ಅದರಲ್ಲಿ ಹಾಕಿ ಅದನ್ನು ಉರಿಯುತ್ತಿರುವಂತೆ ಮಾಡಿದ್ದ. ಇದಕ್ಕೆಲ್ಲ ಪ್ರೇರಕಶಕ್ತಿಯಾದ ಸ್ನೇಹಿತನೇ ಹೋದಾಗ ಅವನು ದಾರಿ ತಪ್ಪಿದವರಂತೆ ಚಡಪಡಿಸಿದ. ಈಗ ಎರಡು ದಾರಿಗಳಿದ್ದವು ಅವನೆದುರು. ಸ್ನೇಹಿತನಿಗೆ ತಾನೇ ಕೊಟ್ಟಿದ್ದ ಅಧಿಕಾರವನ್ನು ತಾನು ಇನ್ನೊಬ್ಬರ ಮೇಲೆ ನಡೆಸುವದು. ಇಲ್ಲವೆ ಬರಿದಾದ ತನ್ನ ಹೃದಯ ಸಿಂಹಾಸನದಲ್ಲಿ ಇನ್ನೊಬ್ಬರನ್ನು ತಂದು ಕೂಡಿಸುವುದು. ಒಂದು ರೀತಿಯಿಂದ ತನ್ನ ತಂದೆತಾಯಿಗಳೊಂದಿಗೆ ಎಂದೂ ಅಗಲಿರದಿದ್ದರೂ ಅವರಿಂದ ದೂರವಾಗುತ್ತಿರುವುದರಿಂದ ಅವನಿಗೆ ಸಂತೋಷವೇ ಆಗಿತ್ತು. ಅವನಿಗೇ ಆಶ್ಚರ್ಯವೆನಿಸಿತು- ಸ್ನೇಹಿತ ಹೋದದ್ದರಿಂದ ತನಗಾದ ದುಃಖವನ್ನು ಕಂಡು. ಒಂದು ವಾರದಲ್ಲಿಯೇ ಅವನು ಹೊಸ ಪರಿಸ್ಥಿತಿಗೆ ಹೊಂದಿಕೊಂಡ. ನಡುನಡುವೆ ಸ್ನೇಹಿತನ ಬಗ್ಗೆ ಯೋಚನೆ ಬರುತ್ತಿದ್ದವು. ಅವನು ಕಾಲೇಜ ಬಿಟ್ಟನೆ ? ಬಿಟ್ಟಿರಲಾರ. ಅವನ ಧೈರ್ಯ ದೊಡ್ಡದು. ''ನನಗೇಕೆ ಅವನ ಯೋಚನೆ'' ಎಂದು ನಿಶ್ಚಿಂತನಾದ.

ತಾಯಿಯ ಗೆಳತಿಯ ಬಂಗಲೆಯ ಕಾಂಪೌಂಡಿನಲ್ಲಿ ಸ್ಥಳಪಡೆದ ಅವನಿಗೆ ವಸತಿಯ ಚಿಂತೆಯಿರಲಿಲ್ಲ. ಅಭ್ಯಾಸಕ್ಕೂ ತುಂಬ ಅನುಕೂಲವಿತ್ತು. ಮನೆ ಮಾತ್ರ ಕಾಲೇಜಿನಿಂದ ತುಂಬ ದೂರ. ರಭಸದಿಂದ ಅಭ್ಯಾಸ ನಡೆಸಿದ. ಎನ್.ಸಿ.ಸಿ. ಯನ್ನು ಬಿಟ್ಟುಬಿಡಲೆ ಎಂದು ಯೋಚಿಸಿದ. ಆದರೆ ಅದನ್ನು ಬಿಡುವುದು ಸಾಧ್ಯವಿರಲಿಲ್ಲ. ಈಗಾಗಲೆ ಒಂದು ತಿಂಗಳು ಕಳೆದಿತ್ತು. ಈ ವರ್ಷಕ್ಕೆ ಅವನು ಅಷ್ಟು ಮಹತ್ವ ಕೊಟ್ಟಿರಲಿಲ್ಲ. ಮುಂದಿನ ಎರಡು ವರ್ಷಗಳಲ್ಲಿ ತನ್ನ ಭವಿತವ್ಯ ನಿರ್ಣಯವಾಗುವುದು, ಎಂಬ ಶಿಥಿಲತೆ ಬಂತು. ಈಗಾಗಲೇ ಅವನ ಹೃದಯದ ಅಗ್ನಿಕುಂಡದಲ್ಲಿಯ ತರಗೆಲೆಗಳ ಬೆಂಕಿ ಆರುತ್ತ ಬಂದಿತ್ತು. ''If the bow is big you grow bigger'' ಎಂಬ ತರಗೆಲೆಯನ್ನು ಅದನ್ನು ಆಹುತಿ ಕೊಟ್ಟು ಮಲಗಿಕೊಂಡ.

ಬೆಳಿಗ್ಗೆ ಎದ್ದವನೆ ಕನ್ನಡಿಯಲ್ಲಿ ತನ್ನ ಹಲ್ಲು ನೋಡಿಕೊಂಡ. ಅವೇ ಇದ್ದವು. ಏಕೆಂದರೆ ಅವನ ಕನಸಿನಲ್ಲಿ ಅವನ ಮೊದಲಿನ ಹಲ್ಲು ಹೋಗಿ ಹೊಸ

ಹಲ್ಲು ಬಂದಿದ್ದವು.

ತಾಯಿಯ ಗೆಳತಿಯ ಮನೆಯ ಬೆಳಕು ಅವನ ಕಣ್ಣನ್ನು ಕೋರೈಸಿತು. ಅವಳೇನೋ ಅವನನ್ನು ಕರುಣೆಯಿಂದ ನೋಡಿಕೊಂಡಳು. ಮನೆಯೊಡೆಯ ಅವನನ್ನು ಗಣನೆಗೆ ತರಲಿಲ್ಲ. ಅವರಿಗೂ ಮೂರೇ ಮೂರು ಮಕ್ಕಳು. ಏನು ಭಾಗ್ಯ ಅವರದು! ಮೊದಲನೆಯವ ತನ್ನ ಓರಗೆಯವ. ಅಂಗಾಂಗ ತುಂಬಿ ಪುಷ್ಟವಾಗಿ ಬೆಳದಿದ್ದಾನೆ. ತಾನು? ತನ್ನ ತಾಯಿಯಾದರೂ ಏನು? ಗೆಳತಿಗಿಂತ ಯಾವುದರಲ್ಲಿ ಕಡಿಮೆಯಿಲ್ಲ. ಆದರೆ ಬಡತನ ತಮ್ಮನ್ನು ಹಣ್ಣುಮಾಡಿದೆ. ತನ್ನ ತಂದೆಯೂ ಹೀಗೆಯೆ ತುಂಬ ಸಂಬಳದ ಅಧಿಕಾರಿಯಾಗಿದ್ದರೆ......... ತಾನೂ ಅಂಗಾಂಗ ತುಂಬಿ ಬೆಳೆದಿರುತ್ತಿದ್ದ. ಆದರೆ ಆದರೆ.... ಈ ಹೊಸ ಆವರಣಕ್ಕೆ ಬಂದಂದಿನಿಂದ ಅವನನ್ನು ಹೊಸತೊಂದು ಕನಸು ಪೀಡಿಸುತ್ತಿದೆ. ಹದಿನೈದರ ಹೊಸ್ತಿಲಲ್ಲಿಯ ಅವರ ಹುಡುಗಿಯನ್ನು ಕಂಡು ಅವನ ಕನಸಿನ ಬಣ್ಣವೇ ಬದಲಾಗಿದೆ. ನಾನೂ ಕೈತುಂಬ ಸಂಬಳ ತರುವ ತಂದೆಯ ಮಗನಾಗಿದ್ದರೆ.... ಇವಳ ಜತೆ ಸಲುಗೆ..... ಈಗಲಾದರೂ ಏನಾಯಿತು? ಅವಳು ತನ್ನನ್ನೇಕೆ ನೋಡಬಾರದು? ಎಷ್ಟು ಸಿನೇಮಾಗಳಲ್ಲಿ ಹೀಗಾಗಿಲ್ಲ? ಬಡ ಹುಡುಗ- ಶ್ರೀಮಂತ ಕನ್ನಿಕೆ - ಅವರ ನಡುವೆ ಪ್ರೇಮದ ಬಂಧನ - ತಂದೆತಾಯಿಗಳ ವಿರೋಧ- ಹುಡುಗನ ಔದಾರ್ಯಕ್ಕೆ ಹುಡುಗಿಯ ತಾಯಿತಂದೆ ಮಾರುಹೋಗುವುದು- ಕೊನೆಗೆ ಅವರ ಒಪ್ಪಿಗೆ - ಖಳನಾಯಕನ ಮುಖಭಂಗ - ಕೊನೆಗೆ ಪ್ರೇಮಿಗಳ ಶುಭಮಂಗಲ. ಎಷ್ಟು ಸುಲಭ ಜೀವನ. ತನಗೇಕೆ ಹೀಗಾಗಬಾರದು? ದೂರ ದೂರ ಕಾರಿನಲ್ಲಿ ಇವಳ ಜತೆ ಹೋಗಬೇಕು - ಮೇಲೆ ನೀಲಗಗನ ತಲ - ಕೆಳಗೆ ಅರೆಯ ಹಸುರ ನೆಲ - ಸುಂದರ ಸುರತರುಣಿ ಜತೆ. ಓ! ಇಂದಿನತನಕ ಅವನಲ್ಲಿ ಈ ಬಯಕೆ ದಾರಿತಪ್ಪಿಯೂ ಬಂದಿರಲಿಲ್ಲ. ತನಗೇನಾಗಿದೆ ? ತನ್ನನ್ನು ಇವಳೇಕೆ ಪ್ರೀತಿಸಬಾರದು? ಅವಳನ್ನು ಕಾಣುವಾಸೆ. ಕದ್ದು ನೋಡಿದ. ಮಾತನಾಡುವ ಆಸೆ - ಧೈರ್ಯ ಸಾಲದು - ಅವಳ ಮಾತನ್ನು ಕೇಳುವಾಸೆ - ಅವಳ ನಗೆ ಎಷ್ಟು ಮೋಹಕ. ನಿಲುವು ಎಷ್ಟು ಆಕರ್ಷಕ. ಯಾವ ತ್ಯಾಗಕ್ಕೂ ಅವನು ಸಿದ್ಧ. ಅವನು ಕಾಲೇಜಿನಲ್ಲಿರಲಿ - ಹೇರ ಕಟ್ಟಿಂಗ್ ಸಲೂನಿನಲ್ಲಿರಲಿ ಅವಳ ರೂಪದಿಂದ ತ್ರಸ್ತನಾದ. ಬಡತನ ಎಂತಹ ಶಾಪವಾಗಿ ಬಂತು ತನಗೆ. ಮನೆಯವರೆಲ್ಲ ಸಂಜೆ ಮನೆಯ ಕಾಂಪೌಂಡಿನಲ್ಲಿಯೇ ಟೆನಿಸ್ ಆಡುತ್ತಾರೆ. ಒಂದು ದಿವಸವಾದರೂ ಕರೆಯಬಾರದೆ ತನ್ನನ್ನವರು? ಹುಡುಗಿಯ ಹತ್ತಿರ ಕುಳಿತು ತಾನು ಮಾತನಾಡಬಹುದಲ್ಲ. ''ನೀನು ಆಡುತ್ತೀಯಾ?'' ಎಂದು

ನನ್ನನ್ನು ಕೇಳಬಾರದೆ ? ಅವರ ಆಟವನ್ನು ಆಸೆಗಂಗಳಿಂದ ನೋಡುತ್ತಲೇ ಇರುತ್ತಾನೆ. ಧನದ ಸೊಕ್ಕು ! ನಮ್ಮ ಮುಂದೆ ಯಾರು ಎಂಬ ಅಹಂಕಾರ.

''ಅವಳು ನಿನ್ನಲ್ಲಿ ಏನಿದೆಯೆಂದು ನೋಡಬೇಕು?'' ಒಳದನಿಯೊಂದು ಅವನನ್ನು ಕೇಳುತ್ತಿತ್ತು. ಜೀವನ ಸಿನೆಮಾದಷ್ಟು ಸುಲಭವಲ್ಲ ಎಂಬುದು ಅಂದು ತಿಳಿಯಿತು ಅವನಿಗೆ.

ಸ್ನೇಹಿತ ದೂರಹೋದಮೇಲೆ ಅವನು ತನ್ನ ತಲೆಯ ಮೇಲೆ ಹೊತ್ತ ಭಾರವನ್ನು ಕೆಳಗೆ ಇಳಿಸಿಬಿಟ್ಟ. ವಿಜ್ಞಾನದ ಸಂಶೋಧನೆ ತನ್ನ ಅಳವಲ್ಲವೆಂದು ಅವನಿಗೆ ಈಗ ನಿಚ್ಚಳವಾಗಿ ತಿಳಿದಿತ್ತು. ಅಂತಹ ಹುಚ್ಚು ಆಸೆಯ ಹೊರೆಯನ್ನು ಹೊತ್ತುಕೊಂಡು ಒಂದು ವರ್ಷ ತಿಣುಕಿದ್ದುದನ್ನು ಕಂಡು ತಾನೇ ನಕ್ಕ. ಆದರೆ ತೆರವಾದ ಸ್ಥಾನವನ್ನು ಆ ಹುಡುಗಿ ತುಂಬಿದ್ದಾಳೆ. ಈಗ ಅವನು ನಿಯಮಿತವಾದ ವ್ಯಾಯಾಮವನ್ನು ಆರಂಭಿಸಬೇಕೆನ್ನುವ ಎತ್ತುಗಡೆಯಲ್ಲಿದ್ದಾನೆ. ಆ ಹುಡುಗಿ ಟೆನಿಸ್ ಚ್ಯಾಂಪಿಯನ್ ಆಗಬೇಕೆನ್ನುವ ಹಂಬಲದಲ್ಲಿದ್ದಾಳೆ ಎಂಬುದು ಅವನಿಗೆ ಗೊತ್ತಾಯಿತು. ಆಹಾ ತನ್ನ ಬಯಕೆ ಎಷ್ಟು ಸುಲಭದರಲ್ಲಿ ಫಲಿಸುತ್ತಿತ್ತು. ತಾನು ರಾಮನಾಥನ್ ಕೃಷ್ಣನ್‌ನಂತೆ ಅಂತರರಾಷ್ಟ್ರೀಯ ಖ್ಯಾತಿಯ ಟೆನಿಸ್‌ಪಟುವಾಗಿದ್ದರೆ. ಅದೇನು ಅಸಾಧ್ಯವಾಗಿರಲಿಲ್ಲ. ತನ್ನ ದೈವ ತನಗೆ ವಿರೋಧಿಯಾಗಿದೆ. ಅವನಿಗೆ ಲೋಕವೆ ತನ್ನ ವಿರುದ್ಧ ಒಳಸಂಚು ಹೂಡಿದೆ ಎನ್ನಿಸಿತು. ತನ್ನ ಬದುಕು ನಿರರ್ಥಕ. ಏನು ಜನ - ತನ್ನ ತಂದೆ ಒಮ್ಮೆಯಾದರೂ ತನ್ನ ಬದುಕನ್ನು ಕಂಡು ಮರುಗಿದನೆ? ತಾಯಿ? ಛೀ. ಈ ವಯಸ್ಸಿನಲ್ಲಿಯೂ ಅವಳ ಗೆಳತಿ ಎರಡು ಜಡೆ ಕಟ್ಟಿ ಹುಡುಗಿಯಂತೆ ಟೆನಿಸ್ ಆಡುತ್ತಾಳೆ. ತನ್ನ ತಂದೆಯೇ ಆಗಲಿ, ತಾಯಿಯೇ ಇರಲಿ. ಪ್ರತಿಭಟಿಸದ ಹುಳುಗಳು. ಇವರ ಮನೆಯಲ್ಲಿಯಾದರೋ ದೈವ ಬಾಗಿಲಲ್ಲಿ ಬಿದ್ದಿದೆ.

ಮಾಡಿದ ತಿಂಡಿಯನ್ನು ಆಳುಗಳಿಂದ ಕಳಿಸಿಕೊಡುತ್ತಾನೆ. ಮೊದಲನೆಯ ಸಲ ಆಳು ತಿನಿಸನ್ನು ತಂದಾಗ ಅವನಿಗೆ ಕೃತಜ್ಞತೆಯಿಂದ ಕಣ್ಣು ಮಂಜಾದವು. ನಾಲ್ಕು ತಿಂಗಳಾದವು. ಆಳು ತಿನಿಸನ್ನು ತಂದು ಇಟ್ಟು ಹೋಗುತ್ತಾನೆ. ಇಂದು ಅವನಿಗೆ ಜುಗುಪ್ಸೆ ಬಂತು. ತಾವು ಶ್ರೀಮಂತರಿರಬಹುದು. ನಾನು ಬಡವನಿರಬಹುದು. ನನಗೆ ಆತ್ಮಗೌರವವೆಂಬುದು ಇಲ್ಲವೆ? ತಾನೆ ಏಕೆ

ಬರಬಾರದು ಮನೆಯೊಡತಿ? ಮಗಳನ್ನೇಕೆ ಕಳಿಸಬಾರದು? ಮಗ ಏಕೆ ಬರಬಾರದು? ಏನು ಠೀವಿ ಅವನದು. ಕಲಿಯಲು ಯಾವ ಊರಲ್ಲಿರುವನೊ? ಏನು ಕಲಿಯುತ್ತಿರುವನೊ? ಒಂದು ಸಲವಾದರೂ ತನ್ನೊಡನೆ ಮಾತನಾಡಬಾರದೆ? ``ನೀನು ಏನು ಕಲಿಯುತ್ತಿ?`` ಎಂದು ತನ್ನನ್ನು ಕೇಳಬಾರದೆ! ಅವರ ಮನೆಯ ಆಳುಗಳೂ ತನಗೆ ಬೆಲೆಯನ್ನು ಕೊಡುತ್ತಿಲ್ಲ. ಮನೆಯವರು ಬೆಲೆಯನ್ನು ಕೊಟ್ಟರೆ ಆಳು ಕೊಟ್ಟಾನು. ಆತ್ಮಗೌರವವೆಂಬುದು ನನಗಿದ್ದರೆ ನಾನಿಲ್ಲಿ ಒಂದು ನಿಮಿಷ ಇರಬಾರದು. ಹಾಗಾದರೆ ಏನು ಮಾಡಬೇಕು? ಇರಲಿಕ್ಕೆ ನೆಲೆಯಾದರೂ ಎಲ್ಲಿ ? ಹೀಗೆ ದಿನವೂ ನೂರಾರು ಚಿಂತೆಗಳಿಂದ ಅವನು ಹಣ್ಣಾಗುತ್ತಿದ್ದಾನೆ. ದಾರಿ ಯಾವುದೂ ಕಾಣುತ್ತಿಲ್ಲ. ಆರು ತಿಂಗಳ ಪರೀಕ್ಷೆ ಹತ್ತಿರ ಬರುತ್ತಿದೆ. ಪುಸ್ತಕ ಹಿಡಿದರೆ ಅಕ್ಷರ ಕೂಡ ಕಾಣಿಸದಂತೆ ಮನಸ್ಸು ಹರಿದಾಡುತ್ತದೆ. ಅಜ್ಞೇಯದ ಕಡಲಲ್ಲಿ ಏಕಾಕಿಯಾಗಿ ಬರಿ ದೋಣಿಯಲ್ಲಿ ಹೋಗುವುದಕ್ಕಿಂತ ತನ್ನ ತಂದೆ ಹೇಳಿದ ಹಾಗೆ ರೇಲ್ವೆ ನೋಕರಿಯಲ್ಲಿ ಸೇರುವುದೆ? ತಟ್ಟನೆ ನಕ್ಷತ್ರಲೋಕದಿಂದಿಳಿದು ಬಂದ ಬೆಳಕಿನ ಕನ್ಯೆಯಂತೆ ಅವನೆದುರು ಆ ಹುಡುಗಿಯ ಚಿತ್ರ ನಿಲ್ಲುತ್ತದೆ.

ಇವರ ಬದುಕಿನ ಮುಂದೆ ನನ್ನ ಬದುಕು ಬರಿ ನೆರಳಿನ ಬದುಕು. ಅದರಲ್ಲಿ ಸಾರವಿಲ್ಲ - ರಕ್ತವಿಲ್ಲ - ಆಳವಿಲ್ಲ ಅಗಲಿಲ್ಲ. ಬರಿ ನೆರಳು. ಒಂದು ದಿನದ ರಾತ್ರಿಯೆಲ್ಲ ನಿದ್ರೆ ಬರಲೇ ಇಲ್ಲ. ಹುಡುಗಿಯ ನೆನಪು ಅವನನ್ನು ಕಾಡುತ್ತಿತ್ತು. ಅವಳಿಗೆ ನನ್ನ ಯೋಚನೆ ಬಂದಿರಬಹುದೆ? ನನ್ನ ಹೃದಯದ ನೋವನ್ನು ವ್ಯಥೆಯನ್ನು ಅವಳಿಗೆ ಏನಾದರೂ ಮಾಡಿ ತಿಳಿಹೇಳಬಹುದೆ? ಅವಳಿಗೊಂದು ಪತ್ರ ಬರೆಯಬೇಕು. `` ನನ್ನ ಕನಸಿನ ರಾಣಿ'' ಎಂದು ಆರಂಭಿಸಿದ. ಬರೆಯುವಾಗ ಕೈ ನಡುಗುತ್ತಿತ್ತು. ನಿನ್ನವನೇ ಆದ ದೀನ.....'' ಎಂದು ಮುಗಿಸಿದ. 'ಇಸ್ ಪ್ರೇಮಪತ್ರ ಘಡಕರ್' ಗೀತವನ್ನು ಗುಣುಗುಣಿಸಿದ. ಅವರ ಮನೆಗೆ ಬಂದಂದಿನಿಂದ ಸಿನೆಮಾದ ಹಾಡುಗಳೆಷ್ಟೊ ಬರುತ್ತಿವೆ ಅವನಿಗೆ. ಬೆಳಗಿನ ಆರರಿಂದ ರಾತ್ರಿಯ ಹನ್ನೊಂದರವರೆಗೆ ರೇಡಿಯೋ ಕಿರುಚುತ್ತದೆ. ತಾಯಿ ಕೂಡ 'ಯಾದ್ ಆಯೇಗಿ' ಎಂದು ಹಾಡುತ್ತಿರುತ್ತಾಳೆ. ತನ್ನ ತಾಯಿ ಎಂದಾದರೂ ಹಾಡಿದ್ದು? ಮಗ `` ಬೋಲ್ ರಾಧಾ ಬೋಲ್ ಸಂಗಮ್' ಹಾಡುತ್ತಾನೆ. ಮಗಳು 'ಸಖಿಯೋಂಕೆ ಸಂಗ ಬೈಟ ಜರಾ' ಮನೆಗೆ ಮನೆಯೇ ಭಾವಲೋಕದಲ್ಲಿ ತೇಲುತ್ತಿರುತ್ತದೆ. ತಾನೇಕೆ ಅವರಂತೆ ನಿರ್ಭಯವಾಗಿ ಹಾಡಬಾರದು? ಅವರು

ಹಾಡುವದು ಸ್ವಾಭಾವಿಕ ಎನ್ನಿಸಿದರೆ ನಾನು ಹಾಡುವದು ಅಸ್ವಾಭಾವಿಕ ಏಕಾಗಬೇಕು? 'ಪ್ಯಾರಿ ಪ್ಯಾರಿ ಸೂರತ್‌ಕೊ' ಒಂದು ಸಲ ತನ್ನಷ್ಟಕ್ಕೆ ತಾನೆ ಹಾಡಿಕೊಂಡ. ತಾನು ಬರೆದ ಪ್ರೇಮಪತ್ರವನ್ನು ಮತ್ತೊಮ್ಮೆ ಓದಿದ. ಆದರೆ ಅಂಚೆಗೆ ಹಾಕುವ ಸಾಹಸವನ್ನು ಮಾಡಲಿಲ್ಲ. ಹುಡುಗಿಯ ತಂದೆಯ ಮುಖದಲ್ಲಿ ಕ್ರೌರ್ಯ ಮಡುಗಟ್ಟಿದಂತೆ ಕಂಡಿತು. ಏನು ಬದುಕು ನನ್ನದು?

ಹುಡುಗಿಯ ಹೆಸರನ್ನು ಪ್ರಯತ್ನಪೂರ್ವಕವಾಗಿ ತಿಳಿದುಕೊಂಡಿದ್ದ. ಐದಾರು ಸಲ ಅದನ್ನು ಕಳ್ಳದನಿಯಲ್ಲಿ ಹೇಳಿ ಬಾಯಿ ಚಪ್ಪರಿಸಿದ. ನೋಟಬುಕ್ಕಿನ ಒಂದು ಪುಟದ ತುಂಬ ಅವಳ ಹೆಸರನ್ನು ತನ್ಮಯತೆಯಿಂದ ಬರೆದು ತೆಗೆದ. ಕೊನೆಗೆ ಅವಳಿಗೆ ಬರೆದ ಪತ್ರವನ್ನೂ ಅವಳ ಹೆಸರನ್ನು ಬರೆದ ಕಾಗದವನ್ನೂ ಹರಿದು ಚೂರು ಚೂರು ಮಾಡಿ ಕಡ್ಡಿಯನ್ನು ಕೊರೆದು ಹಚ್ಚಿದ. ಇಷ್ಟೇ ನನ್ನ ಸಾಹಸ ! ಅಹುದು ಇದಕ್ಕಿಂತ ಹೆಚ್ಚಿಗೆ ಏನನ್ನು ಮಾಡಲು ಸಾಧ್ಯ !

ತನ್ನ ಬದುಕಿನಲ್ಲಿ ಅದೇತನವಿದೆ. ಅವರ ಬದುಕಿನಲ್ಲಿಯೂ ಇದೆಯಲ್ಲ. ಅವರಿಗೂ ಅದೇ ಬೆಳಗು. ಅದೇ ಬೆಳಗು ನನಗೂ. ಅದೇ ರಾತ್ರಿ ಇಬ್ಬರಿಗೂ. ಆದರೆ ಅವರ ಬದುಕಿನಲ್ಲಿ ಬೇಸರವಿಲ್ಲ. ನನ್ನ ಬದುಕು ಎಂದೂ ಮುಗಿಯದಂತಹ ದುಸ್ವಪ್ನವೆ? ಬೆಳಗಾದರೆ ಏಕೆ ಬೆಳಗಾಯಿತು ಎಂದು ನಿರುತ್ಸಾಹ. ರಾತ್ರಿ ಬಂದರೆ ಏಕೆ ಬಂತು ಎಂಬ ನಿರುತ್ಸಾಹ. ತನ್ನ ಬದುಕಿನಲ್ಲಿ ಕತ್ತಲೆ ಕಳೆಯುವ ದಾರಿಯೆಂದರೆ ಒಂದೇ ಒಂದು. ಆದರೆ ಇದು ಹುಚ್ಚಾಸೆ ಎಂದು ಅವನಿಗೂ ಎನಿಸುತ್ತಿತ್ತು. ತನ್ನ ಯೋಚನೆ ಸರಿಯ ? ಏಕೆ ಸರಿಯಾಗಬಾರದು? ಬೆಳಗಿನಲ್ಲಿ ಅವನು ನಿರುತ್ಸಾಹದಿಂದಲೇ ಎದ್ದ. ಎಚ್ಚರಿದ್ದಾಗ ಚಿಂತೆ ನಿದ್ರೆಯಲ್ಲಿದ್ದಾಗ ಕನಸು. ಕಾಲೇಜಿಗೆ ಹೋಗುವ ಮನಸ್ಸೂ ಬರಲಿಲ್ಲ. ಕಾಲೇಜಿಗೆ ಹೋಗುವ ಅವಸರವಿದ್ದರೆ ತಾನೆ ಬೇಗನೆ ಏಳುವದು? ತಣ್ಣೀರಿನ ಸ್ನಾನದಲ್ಲಿ ಯಾವ ಹಿತವೂ ಇರಲಿಲ್ಲ. ಅದು ಅನಿವಾರ್ಯ. ಅವರಿಗೆ ದೊಡ್ಡ ಸ್ನಾನಗೃಹವಿದೆ. ಸಂಗಮವರಿಯ ಟಬ್, ತುಷಾರ ಸ್ನಾನ, ಗೀಸರ್ ಏನೆಲ್ಲ ಅನುಕೂಲತೆ. ಸುಗಂಧಿತ ಎಣ್ಣೆ, ಲೆಕ್ಮೆ ಸೋಪು, ಲೆಕ್ಮೆಂ ಟಾಲ್ಕಂ ಸ್ನಾನವೆಂದರೆ ಎಂತಹ ಸೌಖ್ಯ. ತಾನಾದರೊ ಹರುಕಲು ಟಾವೆಲ್, ಹರುಕಲು ಬನಿಯನ್, ಒಳಚಡ್ಡಿ ತೆಗೆದುಕೊಂಡು ಲಕ್ಸ್‌ಸೋಪಿನಿಂದ ಹೌದಿನ ನಳದ ಮೇಲೆ ತಣ್ಣೀರು ಮೈಮೇಲೆ ಸುರುವಿಕೊಂಡು ಉಜ್ಜಿ ಸ್ನಾನದ ಶಿಕ್ಷೆ ಅನುಭವಿಸಬೇಕು. ಒಂದು ಬಕೆಟ್ ಬಿಸಿನೀರು ಕೊಡಬಾರದೆ ತನಗೆ ? " ನೀನು

ಸ್ನಾನವನ್ನು ಬಾತರೂಮಿನಲ್ಲಿಯೇ ಮಾಡು'' ಎಂದರೆ ಇವರಿಗಾಗುವ ನಷ್ಟವೇನು? ``ನಾನು ಅವಳ ಗೆಳತಿಯ ಮಗನಲ್ಲವೆ? ಇಂತಹ ಪರಿಯಿಂದ ರೂಮು ಕೊಡುವುದಕ್ಕಿಂತ ಕೊಡುವುದಿಲ್ಲ ಎಂದಿದ್ದರೆ ಎಷ್ಟು ಒಳಿತಾಗುತ್ತಿತ್ತು ! ಈಗಲಾದರೂ ಏನಾಯಿತು - ನೀನೆ ಈ ಮನೆಯನ್ನು ಬಿಟ್ಟು ಹೋಗಬಹುದಲ್ಲ ನಿನಗೆ ಇರಲು ನೆಲೆ ಇರಲಿಲ್ಲ ಇರಲು ಸ್ಥಳ ಬೇಕು ಎಂದೆ. ಅವರು ಹೂಂ ಎಂದರು. ನಿನ್ನನ್ನೂ ಅವರೇನು ಹುಡುಕಿಕೊಂಡು ಬರಲಿಲ್ಲ.'' ಬಿಟ್ಟು ಹೋಗಿಬಿಡಬೇಕು ಎನ್ನಿಸಿತು. ಕಾಲೇಜಿನ ಎಷ್ಟೋ ಹುಡುಗರು ರೂಮುಗಳನ್ನು ಕೊಂಡಿರುವರು. ಹತ್ತು ರೂಪಾಯಿಗೊಂದು ಸಣ್ಣ ಕೋಣೆ ಸಿಕ್ಕಬಹುದು. ಅಲ್ಲಿಯೇ ಇರಬಹುದು. ಆದರೆ ಹತ್ತು ರೂಪಾಯಿಗಳನ್ನು ಎಲ್ಲಿಂದ ತರಬೇಕು? ರೂಪಾಯಿಗಳ ಮಾತು ಹೇಗೋ ಆದೀತು. ತಾನು ಇಲ್ಲಿಂದ ಹೋದರೆ ಈ ಹುಡುಗಿಯನ್ನು ನೋಡುವ ಸುಖವು ಹೋಗುತ್ತದೆ. ಅವಳ ನಗೆಯನ್ನು ಕೇಳುವ ಸುಖ ಹೋಗುತ್ತದೆ. ನಾನು ಬಿ.ಎಸ್.ಸಿ. ಮುಗಿಸಿಕೊಂಡು ಎಂ.ಎಸ್.ಸಿ.ಗೆ ಸೇರಿದರೆ ಈ ಹುಡುಗಿಯ ತಂದೆತಾಯಿಗಳು ನನಗೆ ತಮ್ಮ ಮಗಳನ್ನು ಕೊಡಲು ವಿಚಾರಿಸಬಹುದು. ಅವಳಿಗಾಗಿಯಾದರೂ ಇಲ್ಲಿರಬೇಕು. ಎಲ್ಲ ರೀತಿಯಿಂದಲೂ ಅವಳಿಗೆ ತಕ್ಕವನಾಗಲು ಪ್ರಯತ್ನಿಸಬೇಕು. ಇದೇನು ಅಸಂಭವವಲ್ಲ ಎಂಬ ಯೋಚನೆ ಪುಸ್ತಕಗಳನ್ನು ತೆರೆಯಲು ಹಚ್ಚಿತು. ಕಾಲೇಜು ತಪ್ಪಿಸಿದ್ದು ಒಳ್ಳೆಯದಾಗಲಿಲ್ಲ ಎನ್ನಿಸಿತು. ಇನ್ನು ಮೇಲೆ ಒಂದು ದಿನವೂ ಕಾಲೇಜ ತಪ್ಪಿಸಬಾರದು. ಆ ದಿನ ಅವನು ಸ್ನಾನ ಮಾಡಲಿಲ್ಲ. ಊಟಕ್ಕೆ ಹೋಗಲಿಲ್ಲ. ಆರೆಂಟು ಸಲ ಚಹಮಾಡಿಕೊಂಡು ಕುಡಿದ. ಸಂಜೆಯವರೆಗೆ ಹೀಗೆ ಕಾಲ ಕಳೆದ. ಉಂಡೆಯಾ ಎಂದು ಯಾರೂ ಕೇಳಲಿಲ್ಲ. 'ಏನಾಗಿದೆ' ಎಂದು ಯಾರೂ ಮಾತನಾಡಿಸಲಿಲ್ಲ. ``ಈ ಜಗತ್ತು ಕಟುಕರದಿದೆ'' ಎಂದು ತನ್ನಷ್ಟಕ್ಕೆ ತಾನೇ ಕೂಗಿಕೊಂಡ. ಅವರ ಮನೆಯಿಂದ ತೇಲಿಬಂದ ಕಿಲಕಿಲ ನಗು ಅವನ ಕರುಳಲ್ಲಿ ಕೆಂಡವನ್ನು ಸೂಸಿತು. ಒಂದಲ್ಲ ಹತ್ತು ಜಲಜನಕಬಾಂಬು ಬಿದ್ದು ಈ ಲೋಕವೆಲ್ಲ ಉರಿದು ಭಸ್ಮವಾಗಬೇಕು. ಅವನಿಗೆ ಎಲ್ಲಿಲ್ಲದ ಕೋಪ ಉಕ್ಕಿ ಬಂತು. ಕಾಟಿನ ಮೇಲಿಂದ ಎದ್ದು ಅಡ್ಡಾಡಲು ಹೊರಗೆ ಬಿದ್ದ. ನೇರವಾಗಿ ರೇಲ್ವೆ ಸ್ಟೇಶನ್ನಿನ ದಾರಿಯನ್ನು ಹಿಡಿದ.

ತಾನು ಇಂದಿನವರೆಗೆ ಬೆನ್ನೆಲುಬಿಲ್ಲದ ಪ್ರಾಣಿಯಂತೆ ವರ್ತಿಸಿದ್ದೇನೆ. ಕಿಲಕಿಲ ನಕ್ಕನೆ? ಕುಣಿದೆನೆ? ಹಾರಾಡಿದೆನೆ? ಊಹೂಂ. ಇಂದಿನಿಂದ ನಾನೊಬ್ಬ

ಬೇರೆಯೇ ವ್ಯಕ್ತಿ. ದಬ್ಬಾಳಿಕೆಯ ವಿರುದ್ಧ, ಅನ್ಯಾಯದ ವಿರುದ್ಧ ನಾನು ಬಂಡೇಳುತ್ತೇನೆ. ಇಂದಿನಿಂದಲೇ ನಾನು ನನ್ನ ಸ್ವರೂಪವನ್ನು ತಿಳಿದುಕೊಂಡೆ. ಏನು ಮಾಡಬಹುದು? ಮೊದಲು ಸ್ನೇಹಿತನ ಭಾರವನ್ನು ತೆಗೆದೊಗೆಯುತ್ತೇನೆ. ತಂದೆಯ ಅಧಿಕಾರವನ್ನು ಕಿತ್ತೊಗೆಯುತ್ತೇನೆ. ತಾಯಿಯ ಮಮತೆಯ ಬಲೆಯನ್ನು ಕತ್ತರಿಸಿಹಾಕುತ್ತೇನೆ. ಸಂಸ್ಕೃತಿಯ ವಿರುದ್ಧವೇ ಹೋರಾಟ ಹೂಡುತ್ತೇನೆ. ಇಂತಹ ಏನನ್ನು ಮಾಡಬಹುದು? ಲಾಕ್ಷಣಿಕವಾಗಿ ಮೊದಲ ಹೆಜ್ಜೆಯೆಂದು ಏನನ್ನಾದರೂ ಮಾಡುತ್ತೇನೆ. ಪ್ರಾಚಾರ್ಯ ಹೇಳುತ್ತಿದ್ದರು: ''ಧೂಮ್ರಪಾನ ಮಾಡಬಾರದು'' ಅವರು ಕಾಲೇಜಿನಲ್ಲಿ ಧೂಮ್ರಪಾನ ಮಾಡಬಾರದೆಂದು ನಿರ್ಬಂಧ ಹಾಕಿದ್ದರು. ಕಾಲೇಜಿನ ಬದಿಗಿರುವ ರೋಡಿನ ಮೇಲೆ ವಿದ್ಯಾರ್ಥಿಗಳೂ ಪ್ರಾಧ್ಯಾಪಕರೂ ಧೂಮ್ರಪಾನವನ್ನು ತಮಗೆ ಅವಕಾಶ ಸಿಕ್ಕಾಗಲೆಲ್ಲಾ ಮಾಡುತ್ತ ನಿಲ್ಲುತ್ತಿದ್ದರು. ತನಗೆ ಇಂದಿನವರೆಗೆ ಸಿಗರೇಟ್ ಸೇದಬೇಕೆಂಬ ಚಪಲವಾಗಿರಲಿಲ್ಲ. ತನಗೆ ಯಾವ ಚಟಗಳೂ ಇಲ್ಲ. ಚಹ ಮಾತ್ರ ಕುಡಿಯುತ್ತಿದ್ದೇನೆ. ಇಂದಿನಿಂದ ಸಿಗರೇಟು ಸೇದಬೇಕು. ಇದು ನನ್ನ ಕ್ರಾಂತಿಯ ಹೆಜ್ಜೆ. ಸ್ಟೇಶನ್ ದಾರಿಯಲ್ಲಿ ಒಂದು ಅಂಗಡಿ. ಸ್ಕರ್ಟ್ ಉಟ್ಟು, ದೇಹದ ವಿನ್ಯಾಸವನ್ನೆಲ್ಲ ಎತ್ತಿ ತೋರಿಸುವ, ಕೈಯಲ್ಲಿ ಸಿಗರೇಟನ್ನು ಹಿಡಿದು ವಿಶಿಷ್ಟ ಮುಖಭಾವದಿಂದ ನಿಂತ ಚೆಲುವೆಯ ಭಾವಚಿತ್ರ ಅವನ ಮನಸ್ಸನ್ನು ಎಳೆಯಿತು. ಎರಡು ನಿಮಿಷ ತನ್ಮಯನಾಗಿ ಆ ಚಿತ್ರವನ್ನು ನೋಡಿದ. ದೇಹದಲ್ಲಿ ವಿದ್ಯುತ್ ಹರಿದಾಡಿದಂತಾಯಿತು. ಏನೊ ಒಂದು ಸುಖದ ಕನಸು ಮೊಳೆತು ಬೆಳೆದು ನೂರಾರು ಅರಳಿದ ಹೂಗಳಿಂದ ತುಂಬಿದಂತೆ ಭಾಸವಾಯಿತು. ಈ ಹಿಂದೆ ತನಗೆ ಹುಡುಗೆಯರನ್ನು ನೋಡಬೇಕೆಂಬ ಚಪಲ ಉಂಟಾಗಿತ್ತೆ? ಆಗಿದ್ದರೆ ಎಂದು ಎಂಬುದನ್ನು ನೆನಸಿಕೊಂಡ. ಆ ಹುಡುಗಿ ಕಣ್ಮುಂದೆ ಕುಣಿದಳು. ಹೌದು ಈ ಚಪಲ ಬಹಳ ದಿನಗಳಿಂದ ಬಂದುದು. ನೋಡಬಾರದು. ನೋಡಿದರೆ ಜನ ಏನು ಎಂದಾರು ಎಂಬ ಭೀತಿಯಿಂದ ಇಷ್ಟು ವರ್ಷಗಳವರೆಗೆ ಎಂತಹ ದಿವ್ಯ ಸುಖವನ್ನು ಕಳೆದುಕೊಂಡೆ ! ಇದೂ ಒಂದು ನನ್ನ ಕ್ರಾಂತಿಯ ಸಕ್ರಿಯ ಸ್ವರೂಪ. ಯಾರ ಭಯವೂ ಇಲ್ಲದೆ ಹುಡುಗಿಯರನ್ನು ನೋಡುತ್ತೇನೆ. ಅಂಗಡಿಗೆ ಹೋಗಿ ಒಂದು ಪ್ಯಾಕೆಟ್ ಸಿಗರೇಟ್ ತೆಗೆದುಕೊಂಡ. ಒಂದು ಬೀಡಾ ತೆಗೆದುಕೊಂಡ. ಎರಡನ್ನೂ ತೆಗೆದುಕೊಳ್ಳುವಾಗ ಕೈ ನಡುಗಿದವು. ಕಣ್ಣಿಗೆ ಮಂಜು ಮುಸುಕಿತು. ಆದರೂ ಕ್ರಾಂತಿಯ ಪಥದಿಂದ ಹಿಂದೆ ಸರಿಯುವದಿಲ್ಲ ಎಂಬ ನಿರ್ಧಾರದಿಂದ ಮುಂದೆ ನಡೆದ. ಧೂಮ್ರಪಾನದ

ದುಷ್ಪರಿಣಾಮಗಳನ್ನು ಪ್ರಾಚಾರ್ಯರು ಮನಸ್ಸಿನಲ್ಲಿ ಮೂಡುವಂತೆ ವಿವರಿಸಿದ್ದರು. ಸೇದಬೇಕೊ ಸೇದಬಾರದೊ ಎಂದು ಮನ ಮತ್ತು ಎರಡು ನಿಮಿಷ ತೂಗುಯ್ಯಾಲಾಡಿತು. ''ಇಂತಹ ಬದುಕಿನಲ್ಲಿ ಇರುವ ಭಾಗ್ಯವಾದರೂ ಏನು?'' ಯಾವುದೊ ಒಂದು ಧ್ವನಿ ಅಣಕಿಸಿತು ಅವನನ್ನು. `ನನ್ನ ಹತ್ತಿರ ಇರುವ ಏಕಮೇವ ಅಸ್ತ್ರವೆಂದರೆ ಸಿಗರೇಟು. ಅದು ನನ್ನ ಕ್ರಾಂತಿಯ ಸಂಕೇತ. ನನ್ನ ಮೇಲಿರುವ ಪರಂಪರೆಯ ನೊಗವನ್ನು ಅನ್ಯರ ಅಧಿಕಾರವನ್ನು ಒಂದು ಕಡ್ಡಿ ಕೊರೆದು ಸುಟ್ಟು ಬೂದಿ ಮಾಡುತ್ತೇನೆ. ದಾರಿಯಲ್ಲಿ ತುಂಬ ಗದ್ದಲವಿತ್ತು. ಆದರೆ ಅವನ ಪಾಲಿಗೆ ಅದಾವುದೂ ಇರಲಿಲ್ಲ. ಅವನು ತನ್ನ ಸ್ವಪ್ನಲೋಕದ ಚಕ್ರವರ್ತಿಯಾಗಿದ್ದನು.

ಎರಡು

ಅಂದಿನ ಬೆಳಗು ಅವನಿಗೆ ಬರಿ ಬೆಳಗಾಗಿರಲಿಲ್ಲ. ಅವನು ಕಾಲೇಜಿಗೆ ಬಂದಾಗ ಕಾಲೇಜು ಅವನ ಕಣ್ಣಿಗೆ ಹೊಸದಾಗಿ ಕಂಡಿತು. ಕಾಲೇಜಿನ ಆತ್ಮದಲ್ಲಿ ಯಾವುದೋ ಒಂದು ಅರಕೆ ಇತ್ತು ಇಂದಿನ ವರೆಗೆ. ತನ್ನ ವ್ಯಕ್ತಿತ್ವ ಅದನ್ನು ಇಂದು ತುಂಬಿಕೊಟ್ಟಿತು ಎಂದು ಭಾವಿಸಿದ. ಎಂದಿನಂತೆ ಅವನು ಕಾಲೇಜಿಗೆ ಬಂದರೂ ಎಂದಿನಂತೆ ಏಕಾಕಿಯಾಗಿ ನಿಲ್ಲಲಿಲ್ಲ. ಕಣ್ಣು ಅಗಲವಾಗಿ ತೆರೆದ. ಅವನ ಕಾಲು ಒಯ್ದಲ್ಲೆಲ್ಲಾ ಹೋದ. ಅವನು ನಿರ್ಭಯನಾಗಿದ್ದ. ಆದರೂ ಹೊಸ ಜೀವನದ ಮೊದಲ ಹೆಜ್ಜೆ ಇಟ್ಟ ತನಗೆ ಈ ವಿಷಯದಲ್ಲಿ ಅನುಭವ ಸಾಲದು. ಇಂದಿನವರೆಗೆ ವಿಜ್ಞಾನ ವಿದ್ಯಾರ್ಥಿಗಳ ವಿಷಯದಲ್ಲಿ ಅವನಿಗೊಂದು ಬಗೆಯ ಅಭಿಮಾನವಿತ್ತು. ರಸಾಯನ ಶಾಸ್ತ್ರದ ಪ್ರಾಧ್ಯಾಪಕರು ವಿಜ್ಞಾನ ವಿಭಾಗದ ವಿದ್ಯಾರ್ಥಿಗಳನ್ನು ತುಂಬ ಎತ್ತಿಹಿಡಿಯುತ್ತಿದ್ದರು. ಆದರೆ ಅವನಿಗೆ ಇಂದೇಕೊ ವಿಜ್ಞಾನದ ವಿದ್ಯಾರ್ಥಿಗಳನ್ನು ಕಂಡಾಗ ಬೆನ್ನಮೇಲೆ ಕೊಳೆಯ ಬಟ್ಟೆಗಳನ್ನು ಹೊತ್ತುಕೊಂಡು ಸಾಲಾಗಿ ಹೋಗುವ ಕತ್ತೆಗಳ ನೆನಪು ಬಂತು. ವಿಜ್ಞಾನವೆಂದರೆ ಜೀವನವನ್ನು ಅನುಭವಿಸಬಾರದೆಯ? ಈ ವಿಷಯದಲ್ಲಿ ಕಲಾ ವಿದ್ಯಾರ್ಥಿಗಳು ಮುಂದೆ ಎನ್ನಿಸಿತು. ಈ ಯೋಚನೆಯಲ್ಲಿ ಅವನು ಸಿಗರೇಟು ಸೇದುವುದನ್ನೇ ಮರೆತಿದ್ದ. ಜೇಬಿಗೆ ಕೈ ಹಾಕಿದ-ಸಿಗರೇಟ್ ಪ್ಯಾಕೆಟ್ ಇರಲಿಲ್ಲ. ''ಇನ್ನೂ ಹೊಸಬನಲ್ಲವೆ ನಾನು!''

ಕಾಲೇಜಿನ ವಿದ್ಯಾರ್ಥಿಗಳು ಪ್ರಾಧ್ಯಾಪಕರು ಒಂದು ಬದಿಗೆ ನಿಂತು ಸಿಗರೇಟು ಸೇದುತ್ತಿದ್ದರು. ಅಲ್ಲಿಗೆ ಹೋದ. ಅಲ್ಲಿಯ ಕ್ಯಾಂಟೀನದಲ್ಲಿ ಒಂದು ಪ್ಯಾಕೆಟ್ ಸಿಗರೇಟು ಕೊಂಡುಕೊಳ್ಳಲು ಹೋದ. ಆದರೆ ಜೇಬಿನಲ್ಲಿ ಹಣವಿರಲಿಲ್ಲ. ಸುಮ್ಮನೆ ಮರಳಿ ಬಂದ. ದಾರಿಯಲ್ಲೊಂದು ಗುಂಪು ಅವನನ್ನು ವಿಶೇಷವಾಗಿ ಆಕರ್ಷಿಸಿತು. ಸಿನೆಮಾ ಥಿಯೇಟರದ ಮಾಲಿಕನ ಮಗನು ಆರೆಂಟು ಜನ ತನ್ನ ಅನುಚರರೊಂದಿಗೆ ಧೂಮ್ರಪಾನವನ್ನು ಮಾಡುತ್ತ ನಿಂತಿದ್ದ. ಆ ಗುಂಪಿನ ಎಲ್ಲರೂ ಕೌ ಬಾಯ್ ಜಿನ್ ತೊಟ್ಟಿದ್ದರು. ಕಾಲಲ್ಲಿ ಶೂಸ್. ಬೆಲೆಯುಳ್ಳ ಅಂಗಿ. ತನಗೆ ಅವರ ಹತ್ತಿರ ಹೋಗಲು ನಾಚಿಕೆಯಾಯಿತು. ಕಾಲಲ್ಲಿ ಹಳೆಯ ಚಪ್ಪಲಿ, ತಾನೆ ಮನೆಯಲ್ಲಿ ಮಡಿ ಮಾಡಿದ ಪಾಯಿಜಾಮ, ಅಂಗಿ ಹೀಗೆಯೇ ಅವರ ಹತ್ತಿರ ಹೋಗುವುದೇ? ಬೇರೆ ಯಾರಾದರೂ ಗುಂಪು

ನೋಡುವುದೆ? ಆದರೆ ಈ ಕ್ರಾಂತಿಕಾರರ ಗುಂಪಿನಲ್ಲಿ ತನ್ನಂತಹವರು ಯಾರೂ ಇರಲೇ ಇಲ್ಲ. ಇಂದು ಸಿಗರೇಟ್ ಸೇದುವುದು ಹೇಗೆ? ಕ್ಯಾಂಟೀನನಲ್ಲಿ ಇಂದು ಯಥೇಚ್ಛ ತಿನ್ನಬೇಕೆಂದು ಮಾಡಿಕೊಂಡಿದ್ದ. ಇನ್ನು ಮೇಲೆ ಮನೆಯಲ್ಲಿ ಆ ದುರಹಂಕಾರಿಗಳು ಆಳಿನ ಕೈಯಿಂದ ಕಳುಹಿಸಿಕೊಡುವ ತಿನಿಸನ್ನು ಕಣ್ಣೆತ್ತಿ ನೋಡುವುದಿಲ್ಲ ಎಂದುಕೊಂಡಿದ್ದ. ಆದರೆ ಅವನ ಜೇಬು ಅವನ ಅಸಮರ್ಥತೆಯನ್ನು ಎತ್ತಿ ತೋರಿಸಿತು. ಜೋಲುಮಾರಿ ಹಾಕಿಕೊಂಡು ಕಾಲೇಜಿನ ಕಡೆಗೆ ಬಂದ. ಅವನಿಗೆ ತುಂಬಾ ನಿರಾಶೆಯಾಗಿತ್ತು.

ಪಾಠದಲ್ಲಿ ಪ್ರಯೋಗದಲ್ಲಿ ಗಮನ ನಿಲ್ಲಲೊಲ್ಲದು. ಕಿಟಕಿಯಿಂದ ಕುಳಿತಲ್ಲಿಂದಲೇ ಕಣ್ಣು ಹಾಕಿದ. ಓಪನ್ ಎಅರ್. ಥಿಯೇಟರಿನ ದೃಶ್ಯವಿತ್ತು. ಹುಡುಗ ಹುಡುಗಿಯರು ಎದುರುಬದುರಾಗಿ ನಿಂತು ಮಾತನಾಡುತ್ತಿದ್ದಾರೆ. ''ಇಷ್ಟು ವರ್ಷಗಳಾದವು. ಒಮ್ಮೆಯಾದರೂ ಧೈರ್ಯದಿಂದ ಕೆಲೆಯುತ್ತ ನಗುತ್ತ ಹುಡುಗಿಯನ್ನು ಮಾತನಾಡಿಸಿದ್ದು. ಹುಡುಗಿಯರಾದರೂ ಒಬ್ಬರಾದರೂ ತನ್ನನ್ನು ಮಾತನಾಡಿಸಿದ್ದು.'' ಆ ಲೋಕವೇ ಬೇರೆ. ಅವರು ಬದುಕನ್ನು ಅನುಭವಿಸುತ್ತಾರೆ. ಅವರಿಗೆ ಅನುಭವಿಸಲು ವ್ಯಕ್ತಿತ್ವವಿದೆ. ಎರಡು ಸಾವಿರ ವಿದ್ಯಾರ್ಥಿಗಳಿರುವ ಈ ಕಾಲೇಜದಲ್ಲಿ ಇಂತಹವರು ನೂರಕ್ಕೆ ಹತ್ತರಷ್ಟು ಇರಲಿಕ್ಕಿಲ್ಲ. ಹೌದು ಇವರಿಂದಲೇ ಕಾಲೇಜಾಗಿದೆ. ಉಳಿದ 1800 ಲೆಕ್ಕಕ್ಕೆ ಮಾತ್ರ. ತನ್ನ ಪದಾಘಾತದಿಂದ ಕ್ರೀಡಾಂಗಣ ಕುಸಿದಿಲ್ಲ. ತನ್ನ ನಗೆಯಿಂದ ಕಾಲೇಜು ಪುಲಕಿತವಾಗಿಲ್ಲ. ಒಂದೇ ಒಂದು ಹುಡುಗಿ ತನ್ನತ್ತ ಹೊರಳಿ ನೋಡಿಲ್ಲ. ಸ್ನೇಹಸಮ್ಮೇಲನದಲ್ಲಿ ನಾಟ್ಯರಂಗದಲ್ಲಿ ಮೆರೆದಿಲ್ಲ. ಎದುರಾಳಿಯನ್ನು ಸೋಲಿಸಿ ಕಾಲೇಜಿಗೆ ವಿಜಯಶ್ರೀಯನ್ನು ತಂದಿಲ್ಲ. ತನ್ನ ಸ್ನೇಹಿತ ಬಂದಿದ್ದ ಒಂದು ವರ್ಷ ಕಾಲೇಜದಲ್ಲಿ. ಹೋದ ಕಾಲೇಜು ಬಿಟ್ಟು - ತನ್ನ ಯಾವ ಕುರುಹನ್ನೂ ಬಿಟ್ಟು ಹೋಗಲಿಲ್ಲ. ಯಾವುದೋ ಹುಚ್ಚು ಕನಸಿನಿಂದ ಬಳಲಿ ಕಂಗೆಟ್ಟ.

ಇದೇ ಯೋಚನೆಯಲ್ಲಿ ಒಂದು ದಿವಸ ಕಳೆಯಿತು. ಪ್ರಯೋಗದಲ್ಲಿ ಅವನಿಗೆ ಮೊದಲಿದ್ದ ಆಸಕ್ತಿ ಉಳಿದಿರಲಿಲ್ಲ. ಮೊದಲಿನ ವರ್ಷ ಎಂತಹ ಪ್ರಯೋಗವೇ ಇರಲಿ-ಪದಾರ್ಥ ವಿಜ್ಞಾನದಲ್ಲಿಯ ಪಿನ್ ಮೆಥಡ್ ಇರಲಿ, ರಸಾಯನ ಶಾಸ್ತ್ರದಲ್ಲಿಯ ವಾಯು ನಿರ್ಮಾಣವೇ ಇರಲಿ ತುಂಬ ನಿಷ್ಠೆಯಿಂದ ಅವನು ಮಾಡಿದ್ದ. ಸಸ್ಯಶಾಸ್ತ್ರದಲ್ಲಿ ಅವನು ವಿಶೇಷ ಆಸಕ್ತಿಯನ್ನು ವಹಿಸಿದ್ದರೂ ಅವನಿಗೆ ಆದರತ್ತ ಸಾಕಷ್ಟು ಗಮನ ಕೊಡಲು ಸಾಧ್ಯವಾಗಿರಲಿಲ್ಲ. ಆದರೆ ಅವನ

ಸ್ನೇಹಿತನ ಆದರ್ಶ ಭೌತಶಾಸ್ತ್ರಜ್ಞನಾಗಿದ್ದ. ಆದರೂ ಅದರಲ್ಲಿಯ ಪ್ರಯೋಗಗಳು ಅವನಲ್ಲಿ ವಿಸ್ಮಯವನ್ನುಂಟು ಮಾಡಿದ್ದವು. ಒಂದು ನೀರಕಣದಲ್ಲಿಯ ಜಂತುಗಳು ಅವನ ಕಲ್ಪನಾ ಲೋಕವನ್ನು ಕೆರಳಿಸಿದ್ದವು. ಇಂದು ಅದರಲ್ಲಿಯ ಪ್ರಯೋಗಗಳಿಗೆ ಅವನು ಎರವಾಗಿದ್ದಾನೆ. ಏಕೆಂದರೆ ಅವನು ಜೀವವಿಜ್ಞಾನವನ್ನು ತೆಗೆದುಕೊಂಡಿಲ್ಲ. ಉಳಿದೆರಡು ವಿಷಯಗಳ ಪ್ರಯೋಗಗಳಲ್ಲಿಯೂ ಅವನಿಗೆ ಆಸಕ್ತಿ ಉಳಿದಿಲ್ಲ. ''ಬದುಕು ಮುಖ್ಯ. ನನ್ನ ಬದುಕಿಗೆ ಪಕ್ಷಘಾತವಾಗಿದೆ. ಅಂದರೆ ಅದು ಆರೋಗ್ಯವಾಗಿ ಬೆಳೆಯಬೇಕಾದರೆ ಅದು ಮೊದಲು ರೋಗಮುಕ್ತವಾಗಬೇಕು.'' ಫುಟ್‌ಬಾಲ್ ಆಟವಿದ್ದಂತೆ ಬದುಕು. ಆಡುವುದರಲ್ಲಿಯ ಸೌಖ್ಯ ಕುಳಿತು ನೋಡುವುದರಲ್ಲಿ ಹೇಗೆ ಬಂದೀತು! ತಾನು ಇಂದಿನ ವರೆಗೆ ಸತ್ತುಹೋಗಿದ್ದ. ಆಟವನ್ನು ಆಡುವದಂತೂ ದೂರೇ ಉಳಿಯಿತು. ಅದನ್ನು ನೋಡಿಯೂ ಇರಲಿಲ್ಲ. ಜೀವನ ಸ್ಪಂದನ ವಿಹೀನನಾಗಿ ಬಂಗಾರದಂತಹ ಬದುಕಿನ ಒಂದು ವರ್ಷವನ್ನು ಹಾಳು ಮಾಡಿಕೊಂಡೆ. ಈಗ ಏನು ಮಾಡಬೇಕು? ಏನು ಮಾಡಬೇಕು? ಮೊದಲು ಸ್ನೇಹಿತರನ್ನು ಮಾಡಿಕೊಳ್ಳಬೇಕು. ಕೊಳೆಯದ ಹೆಣಗಳನ್ನಲ್ಲ. ಬದುಕಿನ ಉತ್ಸಾಹದಿಂದ ಸ್ಪಂದಿಸುವವರ ಸ್ನೇಹ ಮಾಡಿಕೊಳ್ಳಬೇಕು.

ಅವನಿಗೆ ತನ್ನ ಕಾಲೇಜ ಶಿಕ್ಷಣ ತನ್ನ ಆಳವನ್ನು ಮೀರಿದ್ದು ಎಂದು ಸ್ಪಷ್ಟವಾಗಿ ಎನ್ನಿಸುತ್ತಿತ್ತು. ತಂದೆಯಿಂದ ಒಂದು ಪತ್ರವೂ ಬಂದಿರಲಿಲ್ಲ. ತಾನು ಮಾತ್ರ ನಾಲ್ಕಾರು ಪತ್ರಗಳನ್ನು ಬರೆದಿದ್ದ. ಅವುಗಳಿಗೆ ಯಾವ ಪ್ರತಿಕ್ರಿಯೆಯೂ ಇರದಿದ್ದರಿಂದ ಅವನು ಪತ್ರಗಳನ್ನು ಬರೆಯುವುದನ್ನೇ ನಿಲ್ಲಿಸಿದ್ದ. '' ನಿನ್ನಿಂದ ಪತ್ರಗಳಿಲ್ಲ. ಏಕೆ ಬರೆದಿಲ್ಲ? ನಿನ್ನ ಆರೋಗ್ಯ ಹೇಗಿದೆ? ನಿನ್ನ ಅಭ್ಯಾಸ ಹೇಗೆ ನಡೆದಿದೆ?'' ಹೀಗೆ ಒಂದಾದರೂ ಪತ್ರವಿಲ್ಲ ತಂದೆಯಿಂದ. ತಾಯಿ ಮಾತ್ರ ಎರಡು ಪತ್ರಗಳನ್ನು ಬರೆಯಿಸಿದ್ದಳು. ''ಮೇಲಿಂದ ಮೇಲೆ ಪತ್ರ ಬರೆಯುತ್ತಿರು. ಆರೋಗ್ಯ ಕಾಪಾಡಿಕೋ. ಅಭ್ಯಾಸ ಮಾಡು.'' ತಮ್ಮನಿಂದ ಒಂದು ಪತ್ರವನ್ನು ಬರೆಯಿಸಿದ್ದಳು. ''ನನ್ನ ಎಲ್ಲ ಭಾರ ನಿನ್ನ ಮೇಲೆಯೇ ಇದೆ.'' ಆ ಪತ್ರ ತನ್ನನ್ನು ಕಲಕಿತ್ತು. ಹೌದು ನನ್ನ ತಮ್ಮನ, ತಂಗಿಯ ಭಾರ ನನ್ನ ಮೇಲಿದೆ. ನನಗಾದಂತೆ ನನ್ನ ತಮ್ಮನಿಗೆ ಸಂಕಷ್ಟ ಬರಬಾರದು. ತಂದೆಯೋ ರೇಲ್ವೆಯಲ್ಲಿ ನೋಕರಿ ಹಿಡಿಯಲು ಹೇಳುತ್ತಾನೆ. ಹೀಗಾಗಬಾರದು ಎಂದು ನಿರ್ಧಾರ ಮಾಡಲು ಹಚ್ಚಿತ್ತು. ತಾಯಿಯ ಪತ್ರಗಳಲ್ಲಿ ಮೇಲಿಂದ ಮೇಲೆ ''ನಿನಗೆ ತುಂಬ ತೊಂದರೆ, ಆದರೆ ಅನಿವಾರ್ಯ. ಈ ಕಾಲ ಕಡೆಯವರೆಗೆ ಇರುವುದಿಲ್ಲ. ನಿನ್ನ ಕನಸುಗಳೆಲ್ಲ

ಸಫಲವಾಗಲಿ' ಸಂದೇಶವಿರುತ್ತಿತ್ತು. ಅವಳು ತನ್ನ ಗೆಳತಿಗೂ ಒಂದೆರಡು ಪತ್ರಗಳನ್ನು ಬರೆದು ಕೃತಜ್ಞತೆಗಳನ್ನು ಅರ್ಪಿಸಿದ್ದಳು. ಆದರೆ ಬರಿ ಪ್ರೇರಣೆಯೊಂದೆ ಎಲ್ಲಿಯವರೆಗೆ ಪ್ರಾಣವನ್ನು ತುಂಬೀತು?

ಅವನಿಗೆ ಒಂದೇ ಯೋಚನೆ! ತನ್ನ ಬದುಕು ಸಮೃದ್ಧವಾಗಿಲ್ಲ ಎಂದು. ಆದರೆ ಸಮೃದ್ಧಿಗೆ ದಾರಿಯೇನು? ಸಿಗರೇಟು ಸೇದುವುದೆ? ಅಲ್ಲವೇ ಅಲ್ಲ. ಆದರೇನು? ನೆರಳಿನಂತೆ ಓಡಾಡುವುದು ಮಾತ್ರ ತನಗೆ ಹಿಡಿಸದು. ರಕ್ತ ಮಾಂಸಗಳಿಂದ ತುಂಬಿದ ಜೀವದಂತೆ, ವ್ಯಕ್ತಿಯಂತೆ ಬದುಕಬೇಕು. ಅಭ್ಯಾಸಮಾಡಬಾರದೆಂದು ಏನೂ ಅಲ್ಲ. ಆದರೆ ಅದಕ್ಕೆ ಅನುಕೂಲತೆ ಬೇಡವೆ? ಮಲಗಿಕೊಳ್ಳಲು ಒಂದು ಹಳೆಯ ಗಾದಿಯನ್ನು ಕೊಟ್ಟಿದ್ದಾರೆ. ಒಂದು ಹಳೆಯ ಕಾಟು. ಅವನಿಗೆ ನಗೆ ಬಂತು. ಅದನ್ನಾದರೂ ಕೊಟ್ಟಿರುವರಲ್ಲ. ಅವರೇಕೆ ಕೊಡಬೇಕು? ನಾನೂ ಅದನ್ನೇ ಎನ್ನುವುದು. ಅವರೇಕೆ ಕೊಡಬೇಕು? ತನ್ನ ತಂದೆಗೇನಾಗಿದೆ? ಇನ್ನೊಂದು ಇಪ್ಪತ್ತು ರೂಪಾಯಿ ತಿಂಗಳಿಗೆ ಕೊಟ್ಟರೆ ತಾನೂ ಹಾಸ್ಟೆಲ್‌ನಲ್ಲಿರಬಹುದಲ್ಲ. ತನಗೆರಡು ಒಳ್ಳೆಯ ಬಟ್ಟೆಗಳನ್ನು ಹೊಲಿಸಿಕೊಡಬಹುದಲ್ಲ. ಇಂದಿನವರೆಗೆ ಅವನ ಅಭಿರುಚಿಯನ್ನೆಂದೂ ಅವನ ತಂದೆ ಗಮನಿಸಿರಲಿಲ್ಲ. ''ನನಗೆ ಅಭಿರುಚಿಯಾದರೂ ಎಲ್ಲಿತ್ತು? ಇಲ್ಲವೆಂದರೇನು? ಅದನ್ನು ಪೋಷಿಸಲೇ ಇಲ್ಲ.'' ಬಟ್ಟೆಯ ಬಣ್ಣದ ವಿಷಯದಲ್ಲಿ ತಂದೆ ತನ್ನನ್ನು ಒಂದು ಮಾತೂ ಕೇಳಲಿಲ್ಲ. ಚಳಿಗೆ ನಡುಗಿದರೂ ಉಣ್ಣೆಯ ಬಟ್ಟೆ ಕೊಡಲಿಲ್ಲ. ತಾನೂ ಬೇಡಲಿಲ್ಲ. ಗೊತ್ತಿದ್ದರೆ ತಾನೆ ಬೇಡುವುದು? ಬೇಡಿದರಾದರೂ ತಂದೆ ಕೊಡುವದಂತೂ ಸಾಧ್ಯವಿರಲಿಲ್ಲ. ಈಗ ನನಗೊಂದು ಒಳ್ಳೆಯ ಪ್ಯಾಂಟ್ ಬೇಕೇಬೇಕು. ಒಂದು ಒಳ್ಳೆಯ ಟೆರಿಲಿನ್ ಶರ್ಟ್ ಬೇಕೇಬೇಕು. ತಂದೆಗೊಂದು ಪತ್ರವನ್ನು ಬರೆದ. ''ಒಂದು ಟೆರಿವೂಲ್ ಪ್ಯಾಂಟ್, ಟೆರಿಲಿನ್ ಶರ್ಟ್ ನನಗೆ ತೀರ ಅವಶ್ಯಕ. ಕಾಲಲ್ಲಿ ಶೂಸ್ ಬೇಕೇಬೇಕು. ಏನೂ ತಪ್ಪು ತಿಳಿದುಕೊಳ್ಳದೆ 200 ರೂಪಾಯಿಗಳನ್ನು ಕಳಿಸಿಕೊಡಬೇಕು. ಮನಿ ಆರ್ಡರದ ದಾರಿ ಕಾಯುತ್ತೇನೆ.'' ಅದಕ್ಕೆ ತಂದೆಯಿಂದ ಉತ್ತರ ಬರಲಿಲ್ಲ. ಕ್ಷೇಮಸಮಾಚಾರದ ಪತ್ರಕ್ಕೇ ಉತ್ತರವನ್ನು ಬರೆಯದ ತಂದೆ ಈ ಪತ್ರಕ್ಕೆ ಉತ್ತರ ಬರೆದಾನೆಯೇ? ಅವನು ತನ್ನ ಮನೆಯಲ್ಲಿಯ ಚಿತ್ರವನ್ನು ಕಣ್ಣುಮುಂದೆ ತಂದುಕೊಂಡ. ತಾಯಿ ''ಕಳಿಸಿಕೊಡಬಾರದೆ?'' ಕೇಳುತ್ತಿದ್ದಾಳೆ. ''ದುಡ್ಡೆಂದರೇನೆಂದು ತಿಳಿದಿದ್ದೀಯಾ? ಟೆರಿವೂಲ್, ಟೆರಿಲಿನ್ ಭಪ್ಪರೆ, ಕೇಳಲಿಕ್ಕೆ

ನಾಚಿಕೆ ಬರಬೇಕು.''

ತಾಯಿಗೇ ಪತ್ರವನ್ನು ಬರೆದ ಹಣಕ್ಕಾಗಿ. ತಾಯಿ ಎಲ್ಲಿಂದ ಕಳಿಸಬೇಕು? ತನ್ನ ಸ್ನೇಹಿತೆಗೆ ಪತ್ರ ಬರೆದು 200 ರೂಪಾಯಿಗಳನ್ನು ಕೊಡಿಸಬಹುದು. ಅವರಿಗೆ 200 ರೂಪಾಯಿಗಳೇನು ಬಹಳೇ? ತಾನು ಮುಂದೆ ಮುಟ್ಟಿಸುವದಶಕ್ಯವೇ? ಇದೆಲ್ಲ ತನ್ನ ತಲೆಯಲ್ಲೇಕೆ ಹಾಕಿಕೊಳ್ಳಬೇಕು? ಕಣ್ಣೆದುರೇ ಒಂದು ಕುಟುಂಬದ ಕತೆಯಿದೆ. ಯಾರ ಆಧಾರವೂ ಇಲ್ಲದೆ ತಂದೆ ತೀರಿಹೋದ. ತಾಯಿ ತೀರಿಹೋದಳು. ಮೂರು ಗಂಡು ಒಂದು ಹೆಣ್ಣು. ಆ ಕುಟುಂಬವನ್ನು ಅಜ್ಜಿ ಪೋಷಿಸಿದಳು. ಹಿರಿಯವ ಬಿ.ಎಸ್‌ಸಿ., ಮುಗಿಸಿ ಒಳ್ಳೆಯ ಸ್ಥಾನದಲ್ಲಿದ್ದಾನೆ. ತಮ್ಮ ಬಿ.ಇ. ಮುಗಿಸಿದ. ಮೂರನೆಯ ಹುಡುಗ ಹೈಸ್ಕೂಲಿನಲ್ಲಿದ್ದಾನೆ. ತನಗೆ ತಂದೆತಾಯಿ ಇದ್ದಾರೆ. ಇದ್ದಾರೆ ಎಂದರೇನು? ಇದ್ದಾದರೂ ತಂದೆ ಮಾಡಿದ್ದೇನು? ತಾಯಿ ಯಾವ ಸಹಾಯವನ್ನೂ ಮಾಡುತ್ತಿಲ್ಲ. ಮಾಡುತ್ತಿಲ್ಲವೆಂದರೇನು? ತಿಂಗಳ ಊಟದ ವೆಚ್ಚವನ್ನು ತಂದೆ ಕೊಡುತ್ತಿಲ್ಲವೇ? ಅಭ್ಯಾಸವನ್ನು ಮಾಡಿ ಪ್ರಥಮ ವರ್ಗದಲ್ಲಿ ಬರುವುದು ಸಾಧ್ಯ. ಅಭ್ಯಾಸ ಮಾಡಬೇಕು. ಅಭ್ಯಾಸ ಮಾಡಬೇಕು ತಾನೀಗ ಮಾಡುತ್ತಿರುವುದು ತಪ್ಪು. ಈ ರೀತಿಯಲ್ಲಿ ಹೊಣೆಗಾರಿಕೆಯಿಲ್ಲದೆ ವರ್ತಿಸುವುದು ತಪ್ಪು. ಈ ದ್ವಂದ್ವ ನಿತ್ಯ ಅವನಲ್ಲಿ ನಡೆಯುತ್ತಿತ್ತು. ಇದಕ್ಕೆ ಪರಿಹಾರ ಹೇಗೆ? ತಾನು ಯಾರನ್ನಾದರೂ ಸ್ನೇಹಿತರನ್ನು ಕೇಳಬೇಕು. ಒಂದು ಸಲ ಅಂತಹ ಅವಕಾಶ ಬಂದೊದಗಿತು. ತನ್ನ ಹಾಗೇ ಪಾಯಿಜಾಮಾ, ಶರ್ಟ್, ಚಪ್ಪಲಿ. ಕೈಯಲ್ಲಿ ವಾಚ್ ಇರಲಿಲ್ಲ. ಆದರೂ ಎಂತಹ ಸಂತೃಪ್ತಿ. ಅವನ ನಡಿಗೆಯಲ್ಲಿ ದುಡುಕು ಇರಲಿಲ್ಲ. ಆ ಮುಖದ ಮೇಲೆ ಕಾತರ ಚಿಂತೆ ಎಂದೂ ತಮ್ಮ ಹೆಜ್ಜೆಗಳನ್ನೇ ಇಟ್ಟಿರಲಿಲ್ಲವೊ ಎಂಬಂತೆ ಕಾಣುತ್ತಿತ್ತು. ಮಾಸದ ಮುಗುಳುನಗೆ, ಬೆಳೆಯುತ್ತಿರುವ ದೇಹ. ಯಾವ ಕೊರತೆಯೂ ಇಲ್ಲದವರ ಹಾಗೆ ಇರುವ ರವಿ ಇವುಗಳನ್ನು ಕಂಡು ಒಂದು ಬಗೆಯ ಮತ್ಸರವಿತ್ತು.

''ಒಂದು ನಿಮಿಷ ನಿಮ್ಮೊಡನೆ ಮಾತನಾಡಬೇಕೆಂದು.....''

''ಓ ಅದಕ್ಕೇನು? ಅಭ್ಯಾಸ ಎಲ್ಲ ಚೆನ್ನಾಗಿ ನಡೆದಿದೆಯೇ? ಏ ಗ್ರೂಪ್ ನಿಮ್ಮದು. ನಿಮ್ಮ ಅಭ್ಯಾಸ ಚೆನ್ನಾಗಿ ನಡೆದಿದೆಯೇ?''

ಅವನಿಗೆ ತನ್ನ ಹೃದಯದ ದುಃಖವೆಲ್ಲವನ್ನೂ ಒಮ್ಮೆಲೆ ಕಾರಿಕೊಂಡು ಬಿಡಬೇಕೆನ್ನಿಸಿತು. ಆದರೆ ಆ ಚಪಲವನ್ನು ತಡೆ ಹಿಡಿದ. ಏನು ಮಾತನಾಡಬೇಕು?

ಈ ಸ್ನೇಹ ಮಾಡಿಕೊಳ್ಳಬೇಕು.

''ನನಗೆ ಗಣಿತದಲ್ಲಿ ಪ್ರಗತಿ ಸ್ವಲ್ಪ ಕಡಿಮೆ. ನಿಮ್ಮ ಸಹಾಯವನ್ನು ನಾನು ಅಪೇಕ್ಷಿಸಬಹುದೇ?''

''ನಾನೇನು ಅಂತಹ ಸ್ಕಾಲರನಲ್ಲ. ಆದರೂ ನನಗೆ ಬಂದಮಟ್ಟಿಗೆ ಹೇಳುವೆ.'' ಸಹಜ ವಿನಯದಿಂದ ಉತ್ತರ ಬಂತು.

''ನೀವು ಟ್ಯೂಷನ್ನಿಗೆ ಯಾರ ಕಡೆಗೆ ಹೋಗುತ್ತೀರಿ?''

''ಯಾರ ಕಡೆಗೂ ಇಲ್ಲ. ನೀವು?''

''ಇರಲು ಸ್ಥಳವಿಲ್ಲ. ಉಣ್ಣಲು ಅನುಕೂಲತೆ ಇಲ್ಲ. ಟ್ಯೂಷನ್ ಹೇಗೆ ಸಾಧ್ಯ?''

ಈ ಉತ್ತರ ಬಾಯಿಂದ ಜಾರಿಹೋದಮೇಲೆ ಅವನಿಗೆ ಎನ್ನಿಸಿತು ತಾನು ಹೀಗನ್ನಬಾರದಾಗಿತ್ತು ಎಂದು. ಎಷ್ಟು ನಂಜು ತನ್ನ ಮಾತಿನಲ್ಲಿ. ಸ್ನೇಹಿತ ನಸು ನಕ್ಕ. ಸ್ನೇಹಿತ ಹೋದವರುಷ ಪ್ರಥಮ ವರ್ಗದಲ್ಲಿ ಬಂದಿದ್ದ. ಕಾಲೇಜಿಗೆ ಮೊದಲನೆಯವನಾಗಿದ್ದ. ಆದರೂ ಯಾವ ಸದ್ದೂ ಇರದೆ ಇದ್ದ.

''ಟ್ಯೂಷನ್ನಿಗೆ ನೀವೇಕೆ ಹೋಗುವುದಿಲ್ಲ?''

ಹಣವು ಸಾಲದು ಎಂದು ಉತ್ತರ ಕೊಡುವನೆ? ತಂದೆಯನ್ನು ಬಯ್ಯುವನೆ?

''ತಪ್ಪು ತಿಳಿದುಕೊಳ್ಳಬಾರದು. ನನಗೆ ಅದರ ಅವಶ್ಯಕತೆ ಕಾಣುತ್ತಿಲ್ಲ.''

''ಸ್ವತಂತ್ರವಾಗಿ ಅಭ್ಯಾಸ ಮಾಡಲು ಸಾಧ್ಯವೆ?''

''ಸ್ವತಂತ್ರವಾಗಿ ಎಂದರೇನು? ಕಾಲೇಜದಲ್ಲಿ ನಿತ್ಯ ಕಲಿಸುತ್ತಾರಲ್ಲ. ಲಕ್ಷ ಕೊಟ್ಟರಾಯ್ತು. ಮನೆಯಲ್ಲಿ ಅಭ್ಯಾಸ. ಬರದಿದ್ದರೆ ಪ್ರಾಧ್ಯಾಪಕರಿಗೆ ವಿಶ್ರಾಂತಿ ಇದ್ದಾಗ ಅವರನ್ನು ಕಾಣುವುದು.''

''ನಾನು ಗಣಿತವನ್ನು ನಿಮ್ಮೊಡನೆ ಅಭ್ಯಾಸ ಮಾಡಬಹುದೆ?''

''ಅದಕ್ಕೇನು?''

''ಯಾವಾಗ ಬರಬಹುದು.''

''ನಿಮಗೆ ಯಾವಾಗ ಅನುಕೂಲವಾದೀತು?''

''ನಿಮ್ಮ ಅನುಕೂಲ ಮುಖ್ಯ''

''ಅದು ಹೇಗೆ ಸ್ನೇಹದಲ್ಲಿ ಪರಸ್ಪರ ಕೊಡುಕೊಳೆ ಇರಬೇಕು. ನಾನೀಗ ಗಣಿತವನ್ನು ಬೆಳಿಗ್ಗೆ ಮಾಡುತ್ತೇನೆ. ನಿಮಗೆ ಬೆಳಿಗ್ಗೆ ಅನುಕೂಲವಾಗಲಿಕ್ಕಿಲ್ಲ. ರಾತ್ರಿ ಎರಡು ತಾಸು ಮಾಡಬಹುದು.''

''ಆಗಲಿ''

''ರಾತ್ರಿ ಎಂಟರಿಂದ ಹತ್ತರವರೆಗೆ.''

ಅವನಿಗೆ ಈ ಹೊಸ ಸ್ನೇಹಿತನ ಬದುಕು ಅದ್ಭುತ ಪವಾಡವೆನ್ನಿಸಿತು. ಕಾಲೇಜದಲ್ಲಿ ಪೂರ್ಣ ಮಾಫಿ. ಆದರೆ ತನ್ನಂತೆ ಖೊಟ್ಟಿ ಸರ್ಟಿಫಿಕೇಟ್‌ನಿಂದ ಪಡೆದದ್ದಲ್ಲ. ತನ್ನ ಸತತ ಪ್ರಯತ್ನದಿಂದ. ನಿತ್ಯ ಕಾಲೇಜಿನಲ್ಲಿ ಬರ್ಸಾರಿಯಲ್ಲಿ ಎರಡು ತಾಸು ದುಡಿಯುತ್ತಾನೆ. ಅದು ತಿಂಗಳಿಗೆ ಮೂವತ್ತು ರೂಪಾಯಿ. ತನ್ನ ತಂದೆಯಿಂದ ಒಂದು ಕಾಸೂ ಬರುವುದಿಲ್ಲ. ಇಂತಹ ಪ್ರಸನ್ನತೆಯನ್ನು ಸ್ನೇಹಿತ ಹೇಗೆ ಪಡೆದ. ತಂದೆಯಿಂದ ವಾರಕ್ಕೊಂದು ಪತ್ರ ಬರುತ್ತದೆ ತನ್ನ ಸ್ನೇಹಿತನಿಗೆ. ಸ್ನೇಹಿತನೂ ಬರೆಯುತ್ತಾನೆ. ಈ ಹದಿನೈದು ದಿನಗಳಲ್ಲಿ ಇಬ್ಬರಲ್ಲಿಯೂ ಸಾಕಷ್ಟು ಸಲುಗೆಯಾಗಿದೆ. ಸಹಜವಾಗಿ ಮಾತನಾಡುತ್ತಾ ಸ್ನೇಹಿತನಿಗೆ ಅವನು ತನ್ನ ಕನಸುಗಳನ್ನು ಹೇಳಿದ. ಸ್ನೇಹಿತ ಹೇಳಿದ:

''ನಾನೇನೂ ಹೆಚ್ಚು ಓದಿಕೊಂಡವನಲ್ಲ. ನನಗೆ ಕನಸು ಬೀಳುವುದಿಲ್ಲ ಎಂದು ಹೇಳಲಾರೆ. ನಮ್ಮ ಸುಪ್ತ ಪ್ರಜ್ಞೆಯು ಸ್ವಪ್ನದಲ್ಲಿ ಜಾಗ್ರತವಾಗುತ್ತದೆಂದು ಹೇಳುತ್ತಾರೆ. ಆದರೂ ಇದನ್ನು ಅಷ್ಟಾಗಿ ತಲೆಗೆ ಹಚ್ಚಿಕೊಳ್ಳಬಾರದು.''

''ನಾವಿಬ್ಬರೂ ಒಂದೇ ದೋಣಿಯಲ್ಲಿ ತೇಲುತ್ತಿದ್ದೇವೆ. ನಿಮಗೂ ಮನೆಯಿಂದ ಸಹಾಯವಿಲ್ಲ. ನನಗೂ ಇಲ್ಲ. ನಿಮ್ಮ ತಂದೆ ಏನು ಮಾಡುತ್ತಾರೆ?''

''ಪ್ರಾಥಮಿಕ ಶಾಲಾ ಶಿಕ್ಷಕರಿದ್ದಾರೆ.''

ಯಾವ ವಿಶೇಷ ಭಾವನೆಗಳಿಲ್ಲದೆಯೇ ಸ್ನೇಹಿತ ಉತ್ತರಿಸಿದ. ತನ್ನ ತಂದೆ ಏನಿದ್ದಾರೆ ಎಂದು ಹೇಳಲು ಅವನು ನಾಚುತ್ತಿದ್ದ. ತಂದೆಯ ಸ್ಥಾನ ಕಿರಿದು ಎಂಬ ತಿರಸ್ಕಾರ ತನ್ನ ಸ್ನೇಹಿತನಲ್ಲಿ ಎಳ್ಳಷ್ಟೂ ಇರಲಿಲ್ಲ.

''ನನ್ನ ತಂದೆ ಕಾಲೇಜಿಗೆ ಹೋಗಲು ನನಗೆ ಬೇಡ ಎಂದರು. ಆದರೂ ನಾನು ಅವರನ್ನು ವಿರೋಧಿಸಿ ಬಂದೆ.''

ಸ್ನೇಹಿತ ಇದಕ್ಕೆ ಏನನ್ನೂ ಹೇಳಲಿಲ್ಲ. ಸ್ನೇಹಿತನ ಜತೆ ಅಭ್ಯಾಸದಲ್ಲಿ ಆವನ ಪ್ರಗತಿಯಾಗುತ್ತಿತ್ತು. ಆದರೆ ಅವನಲ್ಲಿಯ ದ್ವಂದ್ವ ಕಡಿಮೆಯಾಗಿರಲಿಲ್ಲ. ಸಿಗರೇಟಿನ ವಾಸನೆಯಿಂದ ಜುಗುಪ್ಸೆ ತಾಳುವ ತಾನು ಈಗ ಸಿಗರೇಟಿನ ದಾಸನಾಗಿದ್ದಾನೆ. ಒಂದೆರಡು ಸಲ ಸ್ನೇಹಿತ ಅವನ ಹತ್ತಿರ ಬಂದಾಗ ವಾಸನೆಯಿಂದ ಹಿಂಜರಿದದ್ದುಂಟು. ಆದರೂ ತನ್ನನ್ನು ಕೇಳಿರಲಿಲ್ಲ. ಸ್ನೇಹಿತನೆದುರು ಅವನು ಸೇದುತ್ತಿರಲಿಲ್ಲ. ಆದರೆ ಅದನ್ನು ಮುಚ್ಚಿಡುವುದೂ ಸಾಧ್ಯವಿರಲಿಲ್ಲ.

" ಜೀವನ-ವಿಶೇಷತಃ ನಮ್ಮಂತಹ ಬಡವರ ಜೀವನ ವ್ಯರ್ಥವೆಂದು ನಿಮಗನಿಸಿಲ್ಲವೇ?"

ಈ ಆಕಸ್ಮಿಕ ಪ್ರಶ್ನೆಯಿಂದ ಸ್ನೇಹಿತ ಒಮ್ಮೆಲೆ ಎಚ್ಚೆತ್ತ.

"ನಾನು ತತ್ವಜ್ಞಾನಿಯಲ್ಲ. ಯಾವುದೇ ವಿಷಯದಲ್ಲಿ ಅಭಿಪ್ರಾಯವನ್ನು ಕೊಡುವ ಯೋಗ್ಯತೆ ನನಗಿಲ್ಲ."

"ನೋಡಿ. ನನ್ನಲ್ಲಿಯ ದ್ವಂದ್ವ ತಡೆಯದೆಯೆ ಇದ್ದುದರಿಂದ ನಿಮ್ಮ ಸ್ನೇಹವನ್ನು ಬಯಸಿದೆ. ನೇರವಾಗಿ ಮಾತನಾಡಿದರೆ ನಾನು ಎಷ್ಟು ಕೀಳು ಎಂದು ನೀವು ಭಾವಿಸಬಹುದು ಎಂಬ ಶಂಕೆಯಿಂದ ನಾನು ಬಳಸಾಗಿ ಮಾತಾಡುತ್ತಿದ್ದೇನೆ. ನೀವು ನಿಮ್ಮ ತಂದೆಯನ್ನು ಪ್ರೀತಿಸುತ್ತೀರಿ. ನಾನೋ ತುಂಬ ದ್ವೇಷಿಸುತ್ತೇನೆ. ನಿಮ್ಮನ್ನು ಕಂಡಾಗ ನಾನು ಮಾಡುವುದು ತಪ್ಪು ಎಂಬ ಯೋಚನೆ ಬರುತ್ತದೆ. ನಿಮ್ಮಿಂದ ದೂರಾದ ಮೇಲೆ ಮತ್ತೆ ದ್ವೇಷ ಭುಗಿಲೆನ್ನುತ್ತದೆ. ನಾನು ನಿಮ್ಮಲ್ಲಿ ಮುಚ್ಚಿಡುವುದಿಲ್ಲ. ತಂದೆಯ ಮೇಲೆ ದ್ವೇಷವನ್ನು ಸಾಧಿಸಿಕೊಳ್ಳಲು ನಾನು ಇತ್ತೀಚೆಗೆ ಸಿಗರೇಟನ್ನು ಸೇದುತ್ತಿದ್ದೇನೆ."

ಸ್ನೇಹಿತ : "ಉಪದೇಶವನ್ನು ಕೊಡುವಂತೆ ಜನರು ಧಾರಾಳವಾಗಿ ಬೇರೆ ಏನನ್ನೂ ಕೊಡುವುದಿಲ್ಲ. ನಾನು ಉಪದೇಶವನ್ನು ಕೊಡಲಾರೆ. ಆದರೆ ನಿಮ್ಮ ತಂದೆಯ ಮೇಲಿನ ದ್ವೇಷವನ್ನು ಸಿಗರೇಟು ಸೇದಿ ಸಾಧಿಸುತ್ತೇನೆ ಎನ್ನುತ್ತೀರಲ್ಲ. ಇದರ ಅರ್ಥವಾಗಲಿಲ್ಲ."

"ನನಗೂ ಅರ್ಥವಾಗಿಲ್ಲ. ಆದರೆ ಮೊದಲನೆಯ ಸಲ ನಾನು ಸೇದುವಾಗ ಒಂದು ಬಗೆಯ ಸಂತೃಪ್ತಿಯನ್ನು ಅದರಿಂದ ಪಡೆದೆ. ಈಗ ಅದರ

ದಾಸನಾಗಿದ್ದೇನೆ.''

''ಚಟದ ಅಂತರಂಗ ನನಗೆ ಗೊತ್ತಿಲ್ಲ. ಅದನ್ನು ಬಿಡಲು ಹೇಳುವುದು ಸುಲಭ. ಆದರೆ ಬಿಡುವುದು ಕಠಿಣ.''

ಸ್ನೇಹಿತನ ಪಕ್ವಬುದ್ಧಿಯಿಂದ ಅವನು ವಿಸ್ಮಿತನಾಗುತ್ತಿದ್ದ. ತಾನು ಹೀಗೇಕೆ? ಸ್ನೇಹಿತ ಹಾಗೇಕೆ? ಸ್ನೇಹಿತನ ವಿಷಯದಲ್ಲಿ ಅವನಿಗೆ ಮಾತ್ಸರ್ಯವುಂಟಾಯಿತು. ಮನೆಗೆ ಬಂದು ಮಲಗಿಕೊಂಡಾಗ ಮತ್ತೆ ಸಿಗರೇಟನ್ನು ಹಚ್ಚಿದ.

ಸ್ನೇಹಿತನ ಜತೆ ಒಂದು ದಿವಸ ಮಾತನಾಡುವಾಗ ಅವನು ''ನಿಮ್ಮ ಇರುವಿಕೆಯನ್ನು ಕುರಿತು ನಿಮಗೆ ಎಂದೂ ವ್ಯಥೆಯಾಗುವುದಿಲ್ಲವೇ?'' ಎಂದು ಕೇಳಿದ.

''ನನಗೆ ನಿಮ್ಮ ಮಾತಿನ ಅರ್ಥವಾಗಲಿಲ್ಲ.''

ಅವನಿಗೆ ಏನು ಹೇಳಬೇಕೆಂಬುದೇ ಅರ್ಥವಾಗಲಿಲ್ಲ.

''ಮೈಮೇಲೆ ನಮಗಿಬ್ಬರಿಗೂ ಒಳ್ಳೆಯ ಬಟ್ಟೆಗಳಿಲ್ಲ. ಅದಕ್ಕಾಗಿ ನಿಮಗೆಂದೂ ಕೆಡಕು ಎನ್ನಿಸುವುದಿಲ್ಲವೆ?''

''ನನಗೆ ಎಂದೂ ಎನ್ನಿಸಿಲ್ಲ. ಇಷ್ಟೂ ಬಟ್ಟೆಯಿಲ್ಲದೆ ನಡುಗುವ ಜನ ನಮ್ಮ ದೇಶದಲ್ಲಿ ಕೋಟಿಗಟ್ಟಲೆ ಉಂಟು.''

''ನಮ್ಮ ಅವಶ್ಯಕತೆಗಳನ್ನೆಲ್ಲ ಪೂರೈಸುವದು ತಂದೆತಾಯಿಗಳ ಕರ್ತವ್ಯವಲ್ಲವೆ?''

''ಯೋಗ್ಯತೆಗೆ ತಕ್ಕಂತೆ ಪೂರೈಸುತ್ತಾರೆ.''

''ನೀವು ಸಿನೇಮಾಕ್ಕೆ ಹೋಗುವುದಿಲ್ಲವೆ?''

''ಹೋಗುತ್ತೇನೆ. ಆದರೆ ಅದೊಂದು ಚಟವಾಗಿಲ್ಲ ನನಗೆ.''

''ನೀವು ತಪ್ಪು ತಿಳಿದುಕೊಳ್ಳದಿದ್ದರೆ ಹೇಳುತ್ತೇನೆ. ನನಗೆ ನನ್ನಲ್ಲಿ ಏನೂ ಇಲ್ಲದುದನ್ನು ಕಂಡು ವ್ಯಥೆಯಾಗುತ್ತದೆ. ಅಷ್ಟೇ ಅಲ್ಲ. ಇದ್ದವರನ್ನು ಕಂಡು ತುಂಬ ವ್ಯಥೆಯಾಗುತ್ತದೆ. ಅಷ್ಟೇ ಅಲ್ಲ. ಇದ್ದವರನ್ನು ಕಂಡು ತುಂಬ ಅಸೂಯೆಯಾಗುತ್ತದೆ. ಆ ಮತ್ಸರ ನನ್ನನ್ನು ಸುಟ್ಟು ಸುಟ್ಟು ಹಾಕುತ್ತದೆ. ನಿಮಗೆ

ಹೀಗೆಂದು ಎನ್ನಿಸಿಲ್ಲವೆ?''

''ಇಲ್ಲವೆಂದರೆ ನಾನು ಅಪ್ರಾಮಾಣಿಕನಾದೇನು. ಆದರೆ ನನ್ನ ಮನಸ್ಸು ಒಂದಿಲ್ಲ ಒಂದು ರೀತಿಯಿಂದ ತೊಡಗಿರುತ್ತದೆ. ಅಭ್ಯಾಸ, ವಾಚನ, ಅಂಗಸಾಧನೆ ಹೀಗೆ ಒಂದಿಲ್ಲೊಂದು ಯೋಚನೆ ಇರುತ್ತದೆ.''

''ನಿಮಗೆ ನಿಮ್ಮ ಬದುಕು ವ್ಯರ್ಥ ಎನ್ನಿಸಿಲ್ಲವೇ?''

''ಹಾಗೇಕೆ ಎನ್ನಿಸಬೇಕು?''

''ಕ್ರೀಡಾಂಗಣದಲ್ಲಿ ನೀವು ಮಿಂಚಿಲ್ಲ. ನಾಟಕಗಳಲ್ಲಿ ಮೆರೆದಿಲ್ಲ.''

''ಲೋಕ ಬಹಳ ವಿಶಾಲವಾಗಿದೆ. ವ್ಯಕ್ತಿಯ ಶಕ್ತಿಗೆ ಪರಿಮಿತಿಯಿದೆ. ಹಲವನ್ನೂ ಹಂಬಲಿಸುವದು ಅನಾರೋಗ್ಯದ ಲಕ್ಷಣವಲ್ಲವೆ?''

''ನನಗೆ ಮಾತ್ರ ತುಂಬ ದುಃಖವಾಗುತ್ತದೆ.''

''ಆಗಬಾರದು. ಮುಂದಿದ್ದ ಕರ್ತವ್ಯವನ್ನು ನಿಷ್ಠೆಯಿಂದ ಮಾಡುವುದಷ್ಟೇ ನನಗೆ ತಿಳಿದಿದೆ.''

ಸ್ನೇಹಿತನ ಜತೆ ಮಾತನಾಡಿದಾಗ ಅವನಿಗೆ ಒಂದು ಬಗೆಯ ಹೊಸ ಅನುಭವವುಂಟಾಗುತ್ತದೆ. ಇದನ್ನೆಲ್ಲಾ ಅವನು ಎಲ್ಲಿ ಕಲಿತ? ಇಂದು ಕೇಳಿಯೇ ಬಿಡಬೇಕು. ಸ್ನೇಹಿತನ ನೆರವಿನಿಂದ ಅವನ ಅಭ್ಯಾಸವೊಂದು ಕ್ರಮಕ್ಕೆ ಬಂದಿದೆ. ಇಂದು ಅಭ್ಯಾಸ ಹಗುರವೆನ್ನಿಸುತ್ತಿದೆ. ಸ್ನೇಹಿತನ ಟಿಪ್ಪಣಿ ಪುಸ್ತಕಗಳನ್ನು ತಂದು ಕಾಪಿ ಮಾಡಿಕೊಂಡ. ಪುಟಪುಟದಲ್ಲೂ ಸ್ನೇಹಿತನ ವ್ಯಕ್ತಿತ್ವ ಸ್ಫುಟವಾಗಿ ಮೂಡಿತ್ತು. ಸುಂದರ ಅಕ್ಷರಗಳಲ್ಲಿ ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ, ಇಂಗ್ಲೀಶ್ ಇವೆಲ್ಲವುಗಳ ಟಿಪ್ಪಣಿಗಳನ್ನು ಬರೆದುಕೊಂಡಿದ್ದ. ನೀಟಾಗಿ ಬಿಡಿಸಿದ ಆಕೃತಿಗಳು ಎದ್ದು ಕಾಣುತ್ತಿದ್ದವು.

''ನಿಮಗೆ ಇದನ್ನೆಲ್ಲ ಯಾರು ಹೇಳಿದರು?''

''ಯಾವುದನ್ನು?''

''ಅಭ್ಯಾಸ ಮಾಡುವ ರೀತಿಯನ್ನು?''

''ನಿಮಗೆ ಹೀಗೊಂದು ಕ್ರಮ ಇದೆ ಎಂಬುವುದು ಗೊತ್ತೇ ಇಲ್ಲವೆಂದರೆ ನಾನು ನಂಬಲಾರೆ.''

''ಹೋಗಲಿ ನಿಮಗೆ ಯಾರು ಹೇಳಿದರು?''

"ಈ ಪ್ರಶ್ನೆಯ ಹಿಂದಿನ ಮನೋಭಾವ ಸರಿಯಾಗಿಲ್ಲ. ನನಗೆ ಯಾರೋ ಹೇಳಿದರು - ನಿಮಗೆ ಯಾರೂ ಹೇಳಲಿಲ್ಲ ಎಂದು ನಿಮ್ಮ ವಾದ. ತಪ್ಪನ್ನೂ ಸಮರ್ಥಿಸಿಕೊಳ್ಳುವ ರೀತಿ. ಬದುಕಿನಲ್ಲಿ ಆಗುವ ಕೆಡುಕಿನ ಹೊಣೆಯನ್ನು ಇನ್ನೊಬ್ಬರ ಮೇಲೆ ಹಾಕುವುದು ಯೋಗ್ಯವೆ? ನೀವು ಕೋಪಿಸಿಕೊಳ್ಳಬಾರದು."

"ನಿಮ್ಮ ಪುಸ್ತಕವನ್ನು ಇನ್ನೆರಡು ದಿನ ಇಟ್ಟುಕೊಳ್ಳುತ್ತೇನೆ."

"ಆಗಬಹುದು."

"ಇನ್ನು ಮೂವತ್ತು ಪುಟ ಉಳಿದಿದೆ. ಬರೆದುಕೊಂಡು ಕೊಡುತ್ತೇನೆ."

"ಇನ್ನೊಬ್ಬರ ವ್ಯವಹಾರದಲ್ಲಿ ಕೈ ಹಾಕುವುದು ತಪ್ಪು. ನೀವು ನನ್ನ ಸ್ನೇಹಿತರಾದುದರಿಂದ ಹೇಳುತ್ತೇನೆ. ಹೀಗೆ ನಾನು ತೆಗೆದ ಟಿಪ್ಪಣಿಗಳನ್ನು ನೀವು ಬರೆದುಕೊಂಡರೆ ನಿಮಗೆ ಆಗಬಹುದಾದ ಲಾಭವೇನು ಎಂಬುದು ನನಗರಿಯದು. ನೀವೇ ಟಿಪ್ಪಣಿಗಳನ್ನು ತೆಗೆದರೆ ಒಳ್ಳೆಯದು."

ತಾನೇ ಎಲ್ಲ ವಿಷಯಗಳ ಟಿಪ್ಪಣಿ ತೆಗೆಯುವುದು ಅಸಾಧ್ಯವೆನ್ನಿಸಿ ಕೇಳಿದ:

"ಪರೀಕ್ಷೆಗೆ ತೀರ ಕಡಿಮೆ ದಿನಗಳುಳಿದಿವೆ! ಇಷ್ಟರಲ್ಲಿ ಇದು ಹೇಗೆ ಮುಗಿಯಬಹುದು?"

"ನಿಮ್ಮ ವಾಚನದ ವೇಗವೆಷ್ಟು?"

"ನನಗೆ ಗೊತ್ತಿಲ್ಲ."

"ನಿಜವಾಗಿ ಹೇಳಬೇಕೆಂದರೆ ನಿಮ್ಮ ಅಭ್ಯಾಸ ಕ್ರಮದಲ್ಲಿ ಇಷ್ಟು ಕೊರತೆಗಳಿದ್ದೂ ಪದವಿಪೂರ್ವ ಪರೀಕ್ಷೆಯಲ್ಲಿ ಒಳ್ಳೆಯ ಗುಣಗಳನ್ನು ಪಡೆದಿದ್ದೀರಿ."

"ಹೋದ ವರುಷವೇ ನೀವು ನನ್ನ ಸ್ನೇಹಿತರಾಗಿದ್ದರೆ....."

"ಆಗಿ ಹೋದ ಮಾತು. ಈ ವರುಷ ಏನಾದರೂ ಮಾಡಿರಿ."

"ನೀವು ಈ ಕ್ರಮವನ್ನು ಎಂದಿನಿಂದ ಅನುಸರಿಸುತ್ತಿದ್ದೀರಿ?"

"ನಾಲ್ಕೈದು ವರುಷಗಳಾದವು."

ಅವನ ಮನಸ್ಸು ಮತ್ತೆ ಮುದುಡಿತು. ನಾಲ್ಕೈದು ವರ್ಷಗಳಿಂದ ಹೀಗೆ ಶ್ರಮವಹಿಸಿದ್ದಾನೆ. ನಾನು ಮಾಡಿದ್ದರೆ... ವಿಶ್ವವಿದ್ಯಾಲಯಕ್ಕೆ ಪ್ರಥಮ

ಬರಬಹುದಿತ್ತು. ಅವನ ದ್ವೇಷ ಮತ್ತೆ ತಂದೆಯ ಕಡೆಗೆ ಹೋಯಿತು. ''ನನಗೆ ಮಾರ್ಗದರ್ಶನವನ್ನು ಮಾಡಲಿಲ್ಲ.''

ತನ್ನನ್ನು ಕಾಡುತ್ತಿರುವ ಇನ್ನೊಂದು ಪ್ರಶ್ನೆ - ಲೈಂಗಿಕ ಪ್ರವೃತ್ತಿ. ಅದನ್ನು ಕುರಿತು ಸ್ನೇಹಿತನನ್ನು ಕೇಳಬೇಕೆಂದು ಅವನು ಪ್ರಯತ್ನಿಸುತ್ತಾನೆ. ಆದರೆ ಹೇಗೆ ಕೇಳಬೇಕೆಂಬುದು ತಿಳಿಯುವುದಿಲ್ಲ. ಎಲ್ಲಿಯಾದರೂ ಸ್ನೇಹಿತ ನನ್ನನ್ನು ತಪ್ಪಾಗಿ ತಿಳಿದುಕೊಂಡರೆ.... ಆ ಹುಡುಗಿ ಇನ್ನೂ ಅವನ ಕನಸಿನಿಂದ ಮಾಯವಾಗಿಲ್ಲ. ಸಿಗರೇಟನ್ನು ಸೇದಬೇಕೋ ಸೇದಬಾರದೊ ಎಂಬ ವಾದದಲ್ಲಿ ಸೇದಬಾರದೆಂದು ತಾನು ನಿರ್ಧರಿಸಿದ್ದರೂ ನಿತ್ಯ ಒಂದು ಪ್ಯಾಕೇಟನ್ನು ಸೇದಿಯೇ ಸೇದುತ್ತಾನೆ ''ನಿನ್ನ ಮನಸ್ಸನ್ನು ಯಾವುಳಾದರೂ ಹುಡುಗಿ ಸೆಳೆದಿದ್ದಾಳೆಯೆ?'' ಈ ಪ್ರಶ್ನೆಯನ್ನೂ ಅವನು ಕೇಳಬೇಕೆಂದು ಎಷ್ಟೋ ಸಲ ಪ್ರಯತ್ನಿಸಿ ಆಗದೆ ಬಿಟ್ಟಿದ್ದಾನೆ. ಅವನಿಗೆ ತಾನು ಏನು ಮಾಡಬೇಕೆಂಬುದೇ ತಿಳಿಯುವುದಿಲ್ಲ. ದಿವಸಕ್ಕೆ ಎರಡು ತಾಸು ಮಾತ್ರ ಸ್ನೇಹಿತನ ಜತೆಯಲ್ಲಿ ಗಣಿತ ಅಭ್ಯಾಸದಲ್ಲಿ ಕಳೆಯುತ್ತವೆ. ರಾತ್ರಿಯೆಲ್ಲ ಸಿಗರೇಟು ಸೇದುತ್ತ ಕಾಲ ಕಳೆಯಬೇಕು. ಸಿಗರೇಟು ತುಂಬ ಭಾರವಾಗುತ್ತಿದೆ. ಸಿನೆಮಾದ ಎಳೆತವೊಂದು ಕಡೆ. ತನ್ನ ಸ್ನೇಹಿತನ ಕಡೆ ಇವುಗಳಿಗೆಲ್ಲ ಉತ್ತರ ಸಿಕ್ಕದು. ಅವನು ಮನೆಯಿಂದ ಹಣ ತರಿಸುವುದಿಲ್ಲ. ದೀವಳಿಗೆಗೆ ತಂಗಿಗೆ ಐದು ರೂಪಾಯಿಗಳನ್ನು ಕಳಿಸುತ್ತಾನೆ. ತಂದೆಯಿಂದ ಸ್ನೇಹಿತನಿಗೆ ಪತ್ರ ಬರುತ್ತವೆ. ತಾನು ಮಾತ್ರ ಹೀಗೆ ಹೀಗೆ ಹೀಗೆ.....

ಸ್ನೇಹಿತನೊಮ್ಮೆ ಸಿನೆಮಾಕ್ಕೆ ಹೋಗೋಣವೆಂದು ಅವನನ್ನು ಕರೆದ.

''ನೀವು ಸಿನೆಮಾಕ್ಕೆ ಹೋಗುವುದೆ ?''

''ಯಾಕೆ ನಾನು ಸಿನೆಮಾ ನೋಡಬಾರದೇನು?''

''ನೋಡಬಾರದೆಂದೇನೂ ಅಲ್ಲ....'' ಏನು ಹೇಳಬೇಕೆಂಬುದು ಅವನಿಗೆ ತಿಳಿಯಲಿಲ್ಲ. ಆದರೆ ಈಗ ಹೋಗಲು ಒಪ್ಪುವುದು ಅವನಿಂದ ಆಗದ ಕೆಲಸವಾಯಿತು. ಜೇಬಿನಲ್ಲಿ ಹಣವಿರಲಿಲ್ಲ. ಸ್ನೇಹಿತನ ಮುಂದೆ ಹೇಳುವುದು ಹೇಗೆ? ಟಿಕೆಟ್ ತೆಗೆಯುವ ಬಗೆ ಹೇಗೆ ಎಂದು ಯೋಚಿಸುತ್ತಾ ನಿಂತ.

''ಯಾಕೆ ಏನು ಯೋಚನೆ? ಬೇಡವಾದರೆ ಎಲ್ಲಿಯಾದರೂ ಹೊರಗೆ ಹೋಗಿ ಬರಬಹುದು. ಸಿನೆಮಾಕ್ಕೇ ಹೋಗಬೇಕೆಂದೇನೂ ಇಲ್ಲ.''

ಇಷ್ಟು ನೇರವಾಗಿ ಸ್ನೇಹಿತ ಹೃದಯ ಬಿಚ್ಚಿ ಮಾತನಾಡುವಾಗ ತಾನು

ಮುಚ್ಚಿಕೊಳ್ಳುವುದು ಸರಿಯೆನಿಸಲಿಲ್ಲ ಅವನಿಗೆ.

"ನನಗೆ ನಾಚಿಕೆಯಾಗುತ್ತದೆ. ನನ್ನ ಹತ್ತಿರ ಹಣವಿಲ್ಲ."

"ನಾಚಿಕೆ ಯಾಕಾಗಬೇಕು? ನಾನು ನಿಮ್ಮನ್ನು ಹಣ ಕೇಳಲಿಲ್ಲ. ನನ್ನ ಹತ್ತಿರ ಹಣವಿದೆ."

"ನಾವಿಬ್ಬರೂ ತುಂಬ ಹತ್ತಿರ ಹತ್ತಿರ. ಆದರೆ ಸ್ವಭಾವದಲ್ಲಿ ಎಷ್ಟು ವ್ಯತ್ಯಾಸ. ಯಾರಿಗೂ ಅಭಿಮಾನ ಎನ್ನಿಸಬೇಕು ಇಂತಹ ಸ್ನೇಹಿತನವನ್ನು ಪಡೆದಿದ್ದರೆ. ಆದರೆ ನನಗೊಂದು ವಿಷಾದ- ನಾನು ನಿಮ್ಮ ಸ್ನೇಹಕ್ಕೆ ಅನರ್ಹ."

"ನಾನು ಬಹಳ ವಿಚಾರಮಾಡುವ ಮನುಷ್ಯನಲ್ಲ."

"ಆದರೆ ನಿಮ್ಮಲ್ಲಿಯ ವಿಚಾರವಂತಿಕೆಯನ್ನು ಕಂಡಿದ್ದೇನೆ."

"ಸಿನೇಮಾಕ್ಕೆ ಹೊತ್ತಾದೀತು."

ಅವನು ಅಂಜುತ್ತಂಜುತ್ತ ಗೆಳೆಯನ ಬೆನ್ನು ಹತ್ತಿದ.

ಸಿನೆಮಾ ನೋಡಿ ಹೊರಗೆ ಬಂದಾಗ ಅವನ ತಲೆಯಲ್ಲಿ ಒಂದು ವಾಕ್ಯ ಗೊಣಗುತ್ತಿತ್ತು. ಸಿನೆಮಾದಲ್ಲಿಯ ನಾಯಕ "ನ ಮೇರಿ ಆತ್ಮಾ ದುಃಖಿ ನ ಮೇರಾ ದಿಲ್ ಜಖ್ಮೋಂ ಸೆ ಚೂರ್ ಹೈ, ಬಲ್ಕಿ, ಏ ದುನಿಯಾ - ಜಿಸಮೆ ಮೈ ರಹತಾ ಹೂಂ - ದುಃಖ ಔರ್ ದರ್ದಸೆ ಭರೀ ಹೈ." ಹೇಳುತ್ತಾನೆ.

"ನಾಯಕ ಹೇಳುವ ಮಾತನ್ನು ಕೇಳಿದಿರಲ್ಲ." ಸ್ನೇಹಿತನನ್ನು ಅವನು ಕೇಳಿದ:

"ಯಾವ ಮಾತು?"

ಅವನು ಆವೇಶಪೂರಿತನಾಗಿ ಈ ಮಾತನ್ನು ಹೇಳುತ್ತಾನೆ. ಸ್ನೇಹಿತ ನಕ್ಕ. ಅವನ ನಗೆಯನ್ನು ಅಪೇಕ್ಷಿಸಿರಲಿಲ್ಲ.

"ಈ ಮಾತಿನಿಂದ ನಿಮ್ಮ ಮೇಲೆ ಯಾವ ಪರಿಣಾಮವೂ ಆಗಲಿಲ್ಲವೇ?"

ಸ್ನೇಹಿತ ಸುಮ್ಮನೆ ಇದ್ದ. ಪಾತ್ರಧಾರಿ ಈ ಮಾತನ್ನು ಬಹಳ ಸುಂದರವಾಗಿ ಹೇಳಿದ. ನಾಯಕಿಯ ಸಮಗ್ರ ಸಹಾನುಭೂತಿಯನ್ನು ಅವನು ಈ ಒಂದು ಮಾತಿನಿಂದ ಸೆಳೆದುಕೊಂಡಿದ್ದ. ಪ್ರೇಕ್ಷಕರು 'ವಾಹವ್ಹಾ' ಎಂದಿದ್ದರು. ಅವನಂತೂ ಥಿಯೇಟರಿನಲ್ಲಿ ಕುಳಿತಾಗ ಭಾವನೆಯ ಉತ್ಕಟತೆಯ ಪರಮ

ಬಿಂದುವನ್ನು ತಲುಪಿದ್ದ. ಇಂತಹ ಸನ್ನಿವೇಶ, ವಾಕ್ಯ ತನ್ನ ಸ್ನೇಹಿತನ ಮೇಲೆ ಯಾವ ಪರಿಣಾಮವನ್ನೂ ಮಾಡಬಾರದೆಂದರೆ!

''ನಿಮ್ಮ ಮೌನ ನನಗೆ ಅರ್ಥವಾಗಲಿಲ್ಲ. ನಾನು ಅನೇಕಸಲ ಅಸಹಾಯಕನಾಗಿ ನಿಮ್ಮೊಡನೆ ಮಾತನಾಡುತ್ತೇನೆ.''

''ಅದೇ ನನಗೆ ಬೇಡಾದುದು. ನೀವು ಅಸಹಾಯಕರೇಕಾಗಬೇಕು. ನನಗೆ ಈ ಮಾತು ತಿಳಿಯದಾಗಿದೆ. ನನ್ನ ಸ್ನೇಹಿತ ನನಗಿಂತ ಕೀಳೆಂದು ಭಾವಿಸಲಾರೆ.''

''ನಾನು ಕೀಳಿದ್ದುದೇನು ಸುಳ್ಳೆ?''

''ನನಗೆ ಇಂತಹ ಮಾತು ಅರ್ಥವಾಗುವುದಿಲ್ಲ.''

''ನಾನು ತುಂಬ ಸಿಗರೇಟು ಸೇದುತ್ತೇನೆ. ಎರಡು ದಿನಗಳಾದವು. ಅದಕ್ಕೆ ಹಣವಿಲ್ಲ. ನನ್ನನ್ನು ಲೈಂಗಿಕ ಪ್ರವೃತ್ತಿ ತೀರ ಕಾಡುತ್ತದೆ. ಇದನ್ನು ಕಳೆದ ಕೆಲವಾರು ದಿನಗಳಿಂದ ಹೇಳಬೇಕೆಂದು ಮಾಡಿದ್ದೆ. ಹೇಳಿರಲಿಲ್ಲ. ನಾನು ತುಂಬ ಕೀಳಲ್ಲವೆ? ಆದರೆ ಇಂದು ಸಿನೆಮಾದಲ್ಲಿಯ ನಾಯಕ ನನ್ನ ಭಾವನೆಗಳನ್ನು ಸರಿಯಾಗಿ ಅಭಿವ್ಯಕ್ತಗೊಳಿಸಿದ. ನನಗೂ ಹಾಗೆಯೇ ಅನಿಸುತ್ತದೆ.''

ಸ್ನೇಹಿತ ಏನೂ ಮಾತನಾಡದೆ ಹೋಗಿ ಒಂದು ಬೀಡ ಒಂದು ಸಿಗರೇಟು ಪ್ಯಾಕೆಟ್ ಒಂದು ಕಡ್ಡಿಡಬ್ಬಿ ತೆಗೆದುಕೊಂಡು ಬಂದ.

''ಇಂದಿನ ಆತಿಥ್ಯ ನನ್ನದು.''

ಬೀಡ ಸಿಗರೇಟು ನೋಡಿ ಅವನಿಗೆ ಕಡುಕೆನಿಸಿತು.

''ತೆಗೆದುಕೊಳ್ಳಿ. ಯಾವ ಸಂಕೋಚವೂ ಬೇಡ.''

''ನನಗೆ ಸಿಗರೇಟು ಬೇಕಿರಲಿಲ್ಲ. - ನನ್ನ ಪ್ರಶ್ನೆಗೆ ಉತ್ತರ ಬೇಕಿತ್ತು.''

''ನಿಮ್ಮ ಪ್ರಶ್ನೆಯ ಅರ್ಥವೇ ನನಗಾಗಿಲ್ಲ.''

''ನಾನು ಹೀಗೆ ಕೆಟ್ಟುದಕ್ಕೆ ನಾನು ಕಾರಣನಲ್ಲ.''

''ನಾನು ಹಿಂದೊಂದು ಸಲ ಹೇಳಿರಬೇಕು ಈ ವಿಷಯದಲ್ಲಿ ನಿಮಗೆ. ನೀವೀಗ ಭಾವಲೋಕದಲ್ಲಿದ್ದೀರಿ. ಈಗ ನಾನು ಕೊಡುವ ಉತ್ತರ ಸಮರ್ಪಕ ಎನ್ನಿಸಲಿಕ್ಕಿಲ್ಲ. ಆದುದರಿಂದ ನಿಮ್ಮ ಮನಸ್ಸು ಶಾಂತವಾದಾಗ ಎಂದಾದರೊಮ್ಮೆ ಈ ವಿಷಯ ಮಾತಾಡೋಣ.''

''ನಿಮ್ಮ ವಿಚಾರವಂತಿಕೆ ನಿಮ್ಮ ವಯಸ್ಸನ್ನು ಮೀರಿದ್ದು.''

ಇದಕ್ಕೆ ಸ್ನೇಹಿತ ಏನನ್ನೂ ಹೇಳಲಿಲ್ಲ.

''ತಪ್ಪು ತಿಳಿದುಕೊಳ್ಳಬೇಡಿ. ಮತ್ತೊಮ್ಮೆ ಅವಕಾಶ ಸಿಕ್ಕುವುದಿಲ್ಲ. ನಿಮಗೆ ವೇಳೆಯಿಲ್ಲ ನಿಜ. ಆದರೂ ಅರ್ಧತಾಸು ಪಾರ್ಕಿನಲ್ಲಿ ಕೂಡೋಣ.''

ಸ್ನೇಹಿತ ಆಗಲಿ ಎಂದುಕೊಂಡು ಅವನ ಜತೆ ಹೋದ.

''ವ್ಯಕ್ತಿ ಹಾಳಾಗುವದಕ್ಕೆ ಸಮಾಜ ಕಾರಣವೊ ಹೇಗೆ?''

''ನಾವು ಹೀಗೆ ತಾತ್ವಿಕವಾಗಿ ಚರ್ಚಿಸುವುದಕ್ಕಿಂತ ನೇರವಾಗಿ ಮಾತನಾಡುವದು ಒಳ್ಳೆಯದು. ನಿಮ್ಮ ಅಭಿಪ್ರಾಯ ಒಂದಿರಬಹುದು. ನನ್ನ ಅಭಿಪ್ರಾಯ ಒಂದಿರಬಹುದು. ಅಭಿಪ್ರಾಯಗಳಿಂದ ಆಗಬಹುದಾದುದೇನು? ನೀವು ಹೇಳುತ್ತೀರಿ - ನಿಮ್ಮ ಚಾರಿತ್ರ್ಯ ಸುತ್ತಲಿನ ವಾತಾವರಣದ ಪ್ರತಿಕ್ರಿಯೆ ಎಂದು ಒಪ್ಪಿಕೊಳ್ಳೋಣ. ಒಪ್ಪಿಕೊಂಡದ್ದರಿಂದ ಏನು ಬಂತು? ನಿಮ್ಮ ಚಾರಿತ್ರ್ಯ ಬದಲಾಯಿತೆ? ನಿಮ್ಮ ಸಮಸ್ಯೆಗೆ ಪರಿಹಾರ ದೊರೆಯಿತೆ? ಬಹಳವಾದರೆ ಹೊಣೆ ನನ್ನದಲ್ಲ ಎಂಬುದರಿಂದ ಒಂದಿಷ್ಟು ಮನಸ್ಸಿಗೆ ಸಮಾಧಾನವಾಗಬಹುದು. ಆದರೆ ಸಮಾಧಾನದಿಂದ ಏನು ಲಾಭ?''

ಅವನಿಗೆ ಈ ಮಾತಿಗೆ ಏನು ಹೇಳಬೇಕೊ ತಿಳಿಯಲಿಲ್ಲ. ಆದರೂ ಹೇಳಿದ:

''ನನಗೆ ಏನೂ ತಿಳಿಯಲೊಲ್ಲದು. ಆದರೆ ನೀವು ಅನುಭವಿಸುತ್ತಿರುವ ಪ್ರಸನ್ನತೆ ನನಗೆ ಬೇಕಾಗಿದೆ. ನಿಮ್ಮ ಪರಿಸರ ನನ್ನ ಪರಿಸರ ಎರಡೂ ಒಂದೇ. ಆದರೆ ನೀವು ಅರಳಿದ ಹೂವಾಗಿದ್ದೀರಿ. ನಾನು ಕೊಳೆಯಾಗಿದ್ದೇನೆ.''

''ಏನೇ ಇರಲಿ. ನಿಮಗೆ ಬಂದ ತಿಳಿವಿನಿಂದ ನಿಮಗೆ ಒಳ್ಳೆಯದಾದೀತು.''

ಪಾರ್ಕಿನಲ್ಲಿಯ ರೇಡಿಯೊ ''ಮುಝುಕೊ ಅಪನೆ ಗಲೆ ಲಗಾ ಲೊ'' ಎಂದು ಹಾಡುತ್ತಿತ್ತು. ಜತೆಜತೆಯಾಗಿ ಜನ ಬಂದು ತಮ್ಮ ದಿನದ ಬದುಕನ್ನು ಮರೆವ ಪ್ರಯತ್ನದಲ್ಲಿತ್ತು. ಅವನು ಅನಿವಾರ್ಯವಾಗಿ ಎದ್ದ. ಸ್ನೇಹಿತನನ್ನು ಬೀಳ್ಕೊಂಡ. ''ನಿಮ್ಮ ಮನಸ್ಸನ್ನು ನಾನು ನೋಯಿಸಿರಬೇಕು. ದಯವಿಟ್ಟು ಕ್ಷಮಿಸಿರಿ. ಇಂದು ಗಣಿತದ ಅಭ್ಯಾಸಕ್ಕೆ ಬರುವಿರಲ್ಲವೆ?'' ಸ್ನೇಹಿತ ಕೇಳಿದ.

ಈ ಸ್ನೇಹಿತ ತನಗೆ ಮೊದಲೇ ದೊರೆತಿದ್ದರೆ? ನಾನು ಹೀಗಾಗುತ್ತಿರಲಿಲ್ಲ.

ಹೌದು, ನಾನು ಸಿಗರೇಟನ್ನು ಸೇದಿ ತಂದೆಯ ಮೇಲೆ ದ್ವೇಷ ತೀರಿಸಿಕೊಳ್ಳಬಲ್ಲೆ. ಸಿಗರೇಟಿನ ಬದಲಾಗಿ ಒಂದು ಕಪ್ಪು ಹಾಲು ತೆಗೆದುಕೊಂಡಿದ್ದರೆ ಎಷ್ಟು ಹಿತವಾಗುತ್ತಿತ್ತು. ಆರ್ಥಿಕ ಪರಾವಲಂಬನದಲ್ಲಿ ಈ ದುರಭ್ಯಾಸದ ಹೊರೆಯೊಂದು. ಆದರೆ, ಆದರೆ, ನಾನು ಈ ಸೌಖ್ಯವನ್ನು ಅನುಭವಿಸಬಾರದೆ? ಅವನ ಪ್ರೀತಿಯ ಕನಸು: ಕೈಯ್ಯಲ್ಲೊಂದು ಟ್ರ್ಯಾಂಜಿಸ್ಟರ್. ಮೈಮೇಲೆ ಒಳ್ಳೆಯ ಬಟ್ಟೆ. ಜತೆಯಲ್ಲಿ ಚೆಲುವೆ..... ಅವಳೇ ಅವಳೇ ಹುಡುಗಿಯೇ. ಮುಂದೆ ವಿಸ್ತಾರವಾದ ಕಡಲು. ಆ ಕಡಲಿನ ಭೋರ್ಗರೆವ ನಾದದಂತೆ ಅವಳ ಹೃದಯದ ನಾದ ಸಮುದ್ರ - ಕೈಯಲ್ಲಿ ಉರಿಯುತ್ತಿರುವ ಸಿಗರೇಟು - ಅವಳ ಕೈಯಲ್ಲಿ ಮದ್ಯದ ಬಾಟಲಿ... ಹೀಗೆ ಅನಂತಕಾಲದವರೆಗೆ ತಮ್ಮ ಬದುಕು ಹರಿಯಬೇಕು. ಸ್ನೇಹಿತನ ಕನಸೇನು? ಅವನು ಒಮ್ಮೆಯೂ ಹೇಳಿಲ್ಲ. ನಾನೂ ಕೇಳಿಲ್ಲ. ''ಕನಸು ನನಗೂ ಬೀಳುತ್ತವೆ'' ಎಂದು ಸ್ನೇಹಿತ ಹೇಳುತ್ತಾನೆ. ಆದರೂ ನನಗಿಂತ ಅವನು ತೀರ ಬೇರೆ ಇದ್ದಾನೆ. ನನ್ನ ಅನುಭವಕ್ಕೆ ಎರಡೇ ಎರಡು ಭಾವನೆಗಳು ಬಂದಿವೆ. ಒಂದು ಭಯ. ಇನ್ನೊಂದು ಮಾತ್ಸರ್ಯ. ಹೋದ ವರುಷದ ಸ್ನೇಹಿತನಿಗಿಂತ ಇಂದಿನ ಸ್ನೇಹಿತನು ಬೇರೆ ಇದ್ದಾನೆ. ಅವನ ಅಂತರಂಗದ ಆಳವೇ ತನಗಾಗುವದಿಲ್ಲ. ಆದರೆ ಅವನು ಪ್ರಥಮ ವರ್ಗದಲ್ಲಿ ಬರುತ್ತಾನೆ. ನಾನೂ ಬರಬಹುದು. ಎಷ್ಟು ಚೆನ್ನಾಗಿ ಅಭ್ಯಾಸವಾಗಿದೆ. ''ನನಗಿರುವ ಸಮಸ್ಯೆಯಾದರೂ ಏನು? ಅಭ್ಯಾಸ ಚೆನ್ನಾಗಿ ನಡೆದಿದೆ. ಪ್ರಥಮವಿಲ್ಲದಿದ್ದರೂ ದ್ವಿತೀಯ ವರ್ಗದಲ್ಲಾದರೂ ಬರುತ್ತೇನೆ. ಹಾಗಾದರೆ ಇರುವ ಸಮಸ್ಯೆಯೇನು? ಹಣ ಹಣ. ಎರಡು ವರ್ಷಗಳಂತೂ ಕಳೆಯುವವು. ಮುಂದೆ ಎರಡೇ ವರ್ಷ. ಈ ಎರಡು ಕಳೆದಂತೆ ಮುಂದಿನ ಎರಡು ಕಳೆಯುವದು ತಡವೆ? ಅಲ್ಲಿಯವರೆಗೆ ಇರಲು ವಸತಿಯಂತೂ ಇದೆ. ಕಾಲೇಜ ಫೀ ಯೋಚನೆಯಿಲ್ಲ. ಊಟದ ಸಮಸ್ಯೆಯನ್ನು ತಂದೆಯೇ ಪರಿಹರಿಸಿದ್ದಾರೆ. ತಂದೆಯನ್ನು ನಾನೇಕೆ ದ್ವೇಷಿಸಬೇಕು? ತನಗೆ ತಿಳಿದಂತೆ ತಂದೆ ನನ್ನ ಹಿತವನ್ನು ತನ್ನ ದೃಷ್ಟಿಯಲ್ಲಿ ಕಂಡುಕೊಂಡು ಅಭ್ಯಾಸ ಮಾಡಬೇಕು'' ಎಂಬ ದೃಢ ಸಂಕಲ್ಪದಿಂದ ಅವನು ನಿದ್ದೆಹೋದ.

ಬೆಳಿಗ್ಗೆ ಎದ್ದಾಗ ಅವನ ಹೃದಯ ತುಂಬ ಹಗುರಾಗಿತ್ತು. ಈ ಲಘುತ್ವವನ್ನು ಅವನು ತುಂಬ ಪ್ರೀತಿಸುತ್ತಾನೆ. ಆದರೆ ಅದನ್ನು ಅನುಭವಿಸದೆ ಯುಗವೇ ಕಳೆದುಹೋದಂತಾಗಿದೆ. ಕಾಲೇಜಿನಲ್ಲಿಯೂ ಗೆಲುವಾಗಿದ್ದ. ಸ್ನೇಹಿತನೊಡನೆ ಸಮಾನಭಾವದಿಂದ ನಡೆದುಕೊಂಡ. ಕಾಲೇಜ ಕ್ಯಾಂಪಸ್ ದಾಟಿ

ಸಿಗರೇಟು ಸೇದಿ ಬಂದ.

''ನಾನು ಬರ್ಸರಿಯಲ್ಲಿ ಕೆಲಸ ಮಾಡಬೇಕೆಂದಿದ್ದೇನೆ.''

''ಈಗ ಹೇಗೆ ಸಾಧ್ಯ?''

''ಮತ್ತೆ ಯಾವಾಗ?''

''ಫಸ್ಟ್ ಟರ್ಮಿನಲ್ಲಿ ನೋಟೀಸು ಬಂದಾಗ ಅಪ್ಲಿಕೇಶನ್ ಹಾಕಬೇಕು.''

''ಮುಂದಿನ ವರ್ಷದವರೆಗೆ ಇಲ್ಲ ಎಂದಂತಾಯಿತು.''

''ಈಗೇಕೆ? ಹೇಗೂ ವರ್ಷ ಮುಗಿಯುತ್ತ ಬಂದಿದೆ.''

ಅವನು ಈ ಮಾತಿಗೆ ಏನೂ ಉತ್ತರ ಕೊಡಲಿಲ್ಲ. ಅವನ ಮೌನ ಸ್ನೇಹಿತನಿಗೆ ಅರ್ಥವಾಯಿತು. ಆದರೆ ಈ ವಿಷಯದಲ್ಲಿ ತಾನೇನಾದರೂ ಮಾಡಬಹುದಿದೆ ಎಂಬುದು ಸ್ನೇಹಿತನಿಗೆ ಒಪ್ಪಿಗೆಯಾಗಲಿಲ್ಲ.

''ಸುಮ್ಮನೆ ಕೇಳುತ್ತೇನೆ. ಸಿಗರೇಟಿನ ತಿಂಗಳ ವೆಚ್ಚ ಎಷ್ಟು?''

ಸ್ನೇಹಿತನ ಈ ಪ್ರಶ್ನೆಯ ಹಿಂದಿನ ಭಾವನೆ ಅವನಿಗೆ ತಿಳಿಯಿತು.

''ಹೇಳಲು ನನಗೇ ನಾಚಿಕೆಯಾಗುತ್ತದೆ-ಹದಿನೈದರಿಂದ ಇಪ್ಪತ್ತು ರೂಪಾಯಿಗಳವರೆಗೆ.''

ಸ್ನೇಹಿತ ಏನೂ ಹೇಳಲಿಲ್ಲ. ಈ ಚಟವನ್ನು ಬಿಡು ಎಂದು ಹೇಳುವುದರಲ್ಲಿ ಯಾವ ಅರ್ಥವೂ ಇರಲಿಲ್ಲ.

''ನನಗೊಂದು ಪರಿಹಾರ ಕಾಣುತ್ತದೆ. ಅದು ಎಷ್ಟರಮಟ್ಟಿಗೆ ಸಾಧ್ಯವೋ ನಾನರಿಯೆ. ಈಗ ಪರೀಕ್ಷೆಯ ದಿವಸಗಳೂ ಸಮೀಪಿಸಿವೆ.''

''ಏನು?''

''ಬೆಳಿಗ್ಗೆ ಒಂದು ತಾಸು ಕಳೆದರೆ ತಿಂಗಳಿಗೆ ಇಪ್ಪತ್ತು ರೂಪಾಯಿಗಳು ಬರಬಹುದು.''

''ಹೇಗೆ?''

''ಮೊನ್ನೆಯೊಬ್ಬರು ತುಂಬ ಶ್ರೀಮಂತರು ತಮ್ಮ ಎರಡು ಮಕ್ಕಳಿಗೆ ಟ್ಯೂಷನ್ ಹೇಳುವಿಯಾ? ಎಂದು ಕೇಳಿದರು. ನಾನು ನನಗಾಗದು; ಕಾಲೇಜಿನಲ್ಲಿ ಬರ್ಸರಿಯಲ್ಲಿ ದುಡಿಯುತ್ತಿದ್ದೇನೆ ಎಂದು ಹೇಳಿದೆ. ಯಾರನ್ನಾದರೂ ನೋಡು

ಎಂದು ಹೇಳಿದರು. ಸಾಧ್ಯವಿದ್ದರೆ ನೀವು....''

''ನನ್ನಿಂದಾದೀತೆ?''

''ಆದರಲ್ಲೇನು ತೊಂದರೆ? ಎಂಟನೆಯ ಒಂಬತ್ತನೆಯ ವರ್ಗದ ವಿದ್ಯಾರ್ಥಿಗಳು. ಇಬ್ಬರಿಗೂ ಒಮ್ಮೆಯೇ ಹೇಳುವುದು. ಬಹಳ ಒಳ್ಳೆಯವರು. ಅವರು ನಿಮ್ಮನ್ನು ಮೆಚ್ಚಿಕೊಂಡರೆ, ನಿಮ್ಮ ಶಿಕ್ಷಣದ ಸಮಸ್ಯೆಯೇ ಮುಗಿದಂತೆ.''

''ಉಪಕಾರವಾಗುತ್ತದೆ.''

''ಆದರೆ..... ಆದರೆ ಒಂದೇ ಮಾತು. ಬೇರೆ ಏನನ್ನೂ ತಿಳಿದುಕೊಳ್ಳಬಾರದು. ಅವರ ಮನೆಗೆ ಹೋಗುವಾಗ ಸಿಗರೇಟಿನ ವಾಸನೆ ಬರದಂತೆ ಮಾತ್ರ ನೋಡಿಕೊಳ್ಳಬೇಕು.''

ಅವನ ಮುಖ ಸಣ್ಣದಾಯಿತು.

''ಪ್ರಯತ್ನಿಸುತ್ತೇನೆ.''

''ಅವರ ಅಪೇಕ್ಷೆ ತಾವು ಕೊಡುವ ಹಣ ಸದುಪಯೋಗವಾಗಬೇಕೆಂದು ಅವರ ಬಯಕೆ. ಅವರ ಮನೆಗೆ ಹೋಗಿ ಟ್ಯೂಷನ್ ಹೇಳಲು ಸಾಕಷ್ಟು ಜನರಿದ್ದಾರೆ. ಆದರೆ ಅವರಿಗೆ ಬಡಹುಡುಗರಿಗೆ ಸಹಾಯಮಾಡಬೇಕೆಂದು ಆಸೆ. ನೀವು ಸಿಗರೇಟು ಸೇದುತ್ತೀರಿ ಎಂದು ತಿಳಿದರೆ ಅವರಿಗೆ ವಿಷಾದವಾಗುವುದು ಸಹಜ.''

ಅವನ ಬಾಯಿಂದ ಮಾತೇ ಹೊರಡಲಿಲ್ಲ.

ಮನೆಗೆ ಬಂದಕೂಡಲೆ ಅವನ ಮನಸ್ಸನ್ನು ಮಬ್ಬು ಕವಿಯುತ್ತಿತ್ತು. ಸ್ನೇಹಿತನ ಹತ್ತಿರ ಇರುವಾಗ ಸಮಸ್ಯೆಗಳು ಪರಿಹಾರವಾದಂತೆ ಎನ್ನಿಸಿದರೂ ತಾನೊಬ್ಬನೇ ಇದ್ದಾಗ ನೂರಾರು ಪ್ರಶ್ನೆಗಳು ಬಂದು ಮುತ್ತುತ್ತಿದ್ದವು. ಸಿನೆಮಾದಲ್ಲಿಯ ಪಾತ್ರಗಳಿಂದ ಅವನು ತನ್ನ ಜೀವನವನ್ನು ಅಳೆಯುತ್ತಿದ್ದ. ಅವರದು ನಿಜವಾದ ಜೀವನ. ನನ್ನದು ವ್ಯರ್ಥ ಜೀವನ. ಮೈಮೇಲೆ ಸರಿಯಾದ ಬಟ್ಟೆ ಇಲ್ಲ ಎಂದರೆ ಸ್ನೇಹಿತ ಹೇಳುತ್ತಾನೆ:

''ನಿನಗೆ ಸರಿಯಾದ ಬಟ್ಟೆಯಿರದಿದ್ದರೂ ಬಟ್ಟೆಯಾದರೂ ಇದೆಯಲ್ಲ.''

ಇದೇನು ಉತ್ತರವೆ? ದೂರದಲ್ಲಿ ನಿಂತಾಗ ಅವನಿಗೆ ತನ್ನ ಸ್ನೇಹಿತನಲ್ಲಿ

ಜೀವನದ ಸತ್ವವೇ ಇಲ್ಲವೆಂದು ಎನಿಸುವುದು. ನಾವು ಬಾಳಿ ಬದುಕಿದ ನೆಲದ ಪರಿಣಾಮವಾಗುತ್ತದೆ. ನಮ್ಮ ಸಂಸ್ಕೃತಿಯೇ ಹಾಳು. ಅದನ್ನು ಮಾಡಬೇಡ. ಇದನ್ನೂ ಮಾಡಬೇಡ. ಸಚಿತ್ರ ಇಂಗ್ಲಿಶ್ ಪತ್ರಿಕೆಗಳಲ್ಲಿ ಬರುವ ಚಿತ್ರಗಳನ್ನವನು ನೋಡಿದ್ದಾನೆ. ''ವರ್ಲ್ಡ್‌ಬಾಯ್ ನಾಯಿಟ್'' ''ಪ್ಯಾರಿಸ್ ಬಾಯ್ ನಾಯಿಟ್'' ಏನು ಅದ್ಭುತ ಚಿತ್ರಗಳವು. ಇಲ್ಲಿ ಸ್ಕರ್ಟ್ ಹಾಕಿದರೇ ಗಾಬರಿಯಾಗುವ ಜನ. ಕೂಪಮಂಡೂಕ. ಏಕೆ ಕುಡಿಯಬಾರದು? ಅವನು ಕುಡಿತದ ದೃಶ್ಯಗಳನ್ನು ಚಲನಚಿತ್ರಗಳಲ್ಲಿ ಮಾತ್ರ ನೋಡಿದ್ದಾನೆ. ಆದರೆ ಅವನಿಗೆ ಅವಾಸ್ತವ ಎನ್ನಿಸಿವೆ. ಚರ್ಚಿಲ್ ತುಂಬ ಕುಡಿಯುತ್ತಿದ್ದನಂತೆ. ಆದರೆ ಅವನು ಸಿನೆಮಾದ ನಾಯಕನಂತೆ ಸ್ಮೃತಿ ತಪ್ಪಿ ದುರಂತಕರವಾದ ನಿರ್ಣಯಗಳನ್ನು ತೆಗೆದುಕೊಂಡ ದಾಖಲೆಯಿಲ್ಲ. ಎಂತಹ ಆರೋಗ್ಯವನ್ನನುಭವಿಸಿದನವ. ಬಾಯಿಂದ ಸಿಗರೇಟು ತಪ್ಪಿದ ಕ್ಷಣವೇ ಇಲ್ಲ. ನಮ್ಮ ಪ್ರಿನ್ಸಿಪಾಲನೊ-ಮಾತೆತ್ತಿದರೆ-ಸಿಗರೇಟು ಸೇದಬಾರದು-ಅಮೇರಿಕೆ ಬ್ರಿಟನ್‌ಗಳಲ್ಲಿ ತಂಬಾಕಿನ ವಿಷಯದಲ್ಲಿ ಸಂಶೋಧನೆಯಾಗಿದೆ. ಅದು ಆರೋಗ್ಯಕ್ಕೆ ಅಹಿತಕರ. ದೂರದೃಷ್ಟಿಯೇ ಇಲ್ಲ. ಭಾರತೀಯರ ಹಣೆಬರಹವೇ ಇಷ್ಟು. ನೀತಿ. ನೀತಿ. ದೌರ್ಬಲ್ಯದ ಪರಮಾವಧಿ. ತನ್ನ ಸ್ನೇಹಿತನ ಬುದ್ಧಿಯ ಓಟವೇ ಇಷ್ಟಿರಬೇಕು. ಏನು ಅವರ ದೇಹಯಷ್ಟಿ. ಪಶ್ಚಿಮ ದೇಶಗಳೇ ಹೀಗೆ. ನಮ್ಮಲ್ಲಿಯೊ ''ಹಾಸಿಗಿದ್ದಷ್ಟು ಕಾಲುಚಾಚು. ಅಂಬಲಿ ಕುಂಬಳಿ ರಾಸ್ತು. ಮಿಕ್ಕದ್ದೆಲ್ಲ ಓಸ್ತು.'' ಅಯ್ಯೊ ನಮ್ಮ ಊಟವೇ - ರೊಟ್ಟಿಯಿದ್ದರೆ ಪಲ್ಯ ಇಲ್ಲ. ಹಾಲಿಲ್ಲ. ಮೊಸರಿಲ್ಲ. ಅಡುಗೆಯಲ್ಲಿ ವಿವಿಧತೆಯಂತೂ ಮೊದಲಿಲ್ಲ. ಸ್ನೇಹಿತನಿಗೆ ಹೇಳಬೇಕು - ಹೀಗಾಗಿ ನಮ್ಮ ದೇಶ ಹಾಳಾಗಿದೆ. ನಾಡಿನ ತುಂಬ ದ್ರಾಕ್ಷಿ ಬೆಳೆಸಿ ಮದ್ಯ ಮಾರಿದರೆ - ಕಾಲೇಜದಲ್ಲಿ ಒಂದು ಬಾರ್ ತೆರೆದರೆ -ಸ್ನೇಹಿತ ಪತ್ರಿಕೆಗಳನ್ನೇ ನೋಡುತ್ತಿರಲಿಕ್ಕಿಲ್ಲ. Life push ಇರಬೇಕು ಬದುಕಬೇಕಾದರೆ. ನನ್ನಲ್ಲಿದೆ ಅದು. ಅದನ್ನು ನಾನು ಕೆಡುಕೆಂದು ಭಾವಿಸುತ್ತಿದ್ದೇನೆ. ದಾರಿದ್ರ್ಯ ದುಷ್ಟ ದಾರಿದ್ರ್ಯ ಇದೆಲ್ಲ ಅಭಾವ ವೈರಾಗ್ಯ. ನಾನು ಸರಿದಾರಿಯಲ್ಲಿಯೇ ಇದ್ದೇನೆ. ಸಿಗರೇಟಿನಿಂದ ರೋಗವಾಗುತ್ತದಂತೆ. ಯಾವುದರಿಂದ ರೋಗವಾಗುವುದಿಲ್ಲ. ನಮ್ಮ ಬದುಕೇ ಇಷ್ಟು - ದುಡಿ ದುಡಿ - ಅರೆ ಹೊಟ್ಟೆ ಉಣ್ಣು. ನನಗೆ ಈಗಿರುವ ಸ್ನೇಹ ಅಷ್ಟು ಒಳ್ಳೆಯದಲ್ಲ. ಬಿಟ್ಟುಬಿಡಬೇಕು.'' ಆದರೆ ಅವನ ಕಲ್ಪನೆಯ ವಿಮಾನ ವಾಸ್ತವಿಕತೆಯ ಅರಿವಾದೊಡನೆ ನೆಲಕ್ಕೆ ಕುಸಿಯುತ್ತಿತ್ತು. ಹಣ... ಹಣ.

''ನಿಮಗೆ ಗಡಿಯಾಳವಿಲ್ಲವೆಂದು ದುಃಖವೆನಿಸುವುದಿಲ್ಲವೆ?''

''ನನಗೆ ಈ ವಿಚಾರವೇ ಬಂದಿಲ್ಲ.''

''ಕಾಲೇಜಿನಲ್ಲಿ ಎಷ್ಟು ಜನರಿದ್ದಾರೆ ರಿಸ್ಟ್‌ವಾಚ್ ಇದ್ದವರು. ಅವರನ್ನು ನೋಡಿ ನಿಮಗೆ ಏನೂ ಎನಿಸಿಲ್ಲವೆ?''

''ಇದ್ದವರು ಇರಬಹುದು ನೂರಕ್ಕೆ ಇಪ್ಪತ್ತರಷ್ಟು. ಇರಲಾರದವರು ನೂರಕ್ಕೆ ೮೦ರಷ್ಟಾಯಿತಲ್ಲ.''

''ಇದು ನನ್ನ ಪ್ರಶ್ನೆಗೆ ಉತ್ತರವಾಗಲಿಲ್ಲ.''

''ನಿಮ್ಮ ಪ್ರಶ್ನೆಯ ಅರ್ಥವೇ ನನಗಾಗಿರಲಿಕ್ಕಿಲ್ಲ.''

ಅವನು ಇಂದು ಸ್ನೇಹಿತನಿಂದ ತನ್ನ ವಿಚಾರಸರಣಿಯು ಸರಿ ಎಂದು ಎನ್ನಿಸುವ ಹಟದಿಂದ ಬಂದಿದ್ದ.

''ಹಾಗಾದರೆ ಗಡಿಯಾಳ ಅನಾವಶ್ಯಕ ಎಂದು ನಿಮ್ಮ ಭಾವನೆಯೇ?''

''ಇಲ್ಲ ನಾನು ಹಾಗೆಂದಿಲ್ಲ.''

''ಅದು ಅವಶ್ಯಕ ಎಂದು ನೀವು ಒಪ್ಪುತ್ತೀರಿ.''

ಅವನ ತರ್ಕಸರಣಿಯ ಹಿಂದೆ ತನ್ನನ್ನು ಕತ್ತರಿಯಲ್ಲಿ ಹಿಡಿಯುವ ಪ್ರಯತ್ನ ಸ್ನೇಹಿತನಿಗೆ ಸ್ಪಷ್ಟವಾಗಿ ಕಂಡಿತು.

''ಇಲ್ಲ ನಾನು ಒಪ್ಪುವುದಿಲ್ಲ.''

''ಚೇಷ್ಟೆ ಮಾಡಬೇಡಿರಿ.''

''ಇಲ್ಲ ಸತ್ಯವಾಗಿ ಚೇಷ್ಟೆ ಮಾಡುತ್ತಿಲ್ಲ ನಾನು.''

''ಹಾಗಾದರೆ ನನ್ನ ಪ್ರಶ್ನೆಗೆ ಉತ್ತರ ಹೇಳಿರಿ.''

''ಹೇಳಿದೆನಲ್ಲ. ನನ್ನ ಕೈಯಲ್ಲಿ ಗಡಿಯಾರ ಇಲ್ಲದುದನ್ನು ಕಂಡು ನನಗೆ ವ್ಯಥೆಯಾಗಿಲ್ಲ. ಗಡಿಯಾರ ಅನಾವಶ್ಯಕ ಎಂದು ನಾನು ಹೇಳುತ್ತಿಲ್ಲ. ಆದರೆ ಅವಶ್ಯಕ ಎಂದು ಸಾಧಿಸಲಾರೆ.''

''ನಿನ್ನ ಮಾತಿನೊಳಹುದು ಒಡಪಿನಂದ.''

''ನನ್ನ ಹತ್ತಿರದೊಂದೆ ಉಳಿದಿಹುದು ಕಂದ.''

''ಚೇಷ್ಟೆ ಬೇಡ. ನನಗೆ ನಿಮ್ಮ ಪ್ರತಿಕ್ರಿಯೆಗಳ ಯಥಾರ್ಥ ನಿರೂಪಣೆ ಬೇಕು.''

''ನಿಮ್ಮಲ್ಲಿ ಒಂದು ಬಗೆಯ ಉದ್ವೇಗವಿದೆ.''

''ಅದನ್ನೇ ನಾನು Life push ಎಂದು ಕರೆಯುತ್ತಿರುವುದು. ಅದು ನಿಮ್ಮಲ್ಲಿ ಏಕಿಲ್ಲ?''

''ಅದನ್ನು ನೀವು ಏನೆಂದೂ ಕರೆಯಬಹುದು. ಒಂದೆರಡು ಕ್ಷುಲ್ಲಕ ಸಂಗತಿಗಳಿಗಾಗಿ ಯೋಚನೆ ಮಾಡಿ ತಲೆಕೆಡಿಸಿಕೊಳ್ಳಲಾರೆ. ನೀವು ಎರಡು ಭಿನ್ನ ಸಂಸ್ಕೃತಿಗಳ ತುಲನೆ ಮಾಡುತ್ತೀರಿ. ನೂರು ವರುಷಗಳ ಹಿಂದೆ ಅಮೇರಿಕ ಏನಿತ್ತು? ಇಂಗ್ಲಂಡದ ಸ್ಥಿತಿ ಏನಿತ್ತು? ಐವತ್ತು ವರ್ಷಗಳ ಹಿಂದೆ ರಸಿಯ ಏನಿತ್ತು? ನಮ್ಮ ನಿಮ್ಮ ಮೇಲೆಯೇ ನಮ್ಮ ದೇಶದ ಅಭಿವೃದ್ಧಿ. ಎರಡು ದಶಕಗಳಲ್ಲಿ ಈ ದೇಶದ ಸ್ವರೂಪವೇ ಬದಲಾಗುವುದು.''

''ಭಾರಿ ಕನಸುಗಾರರು.....''

''ನಾನೊ? ಖಂಡಿತವಾಗಿ ಅಲ್ಲ. ಇಂದಿನ ಪಶ್ಚಿಮದೇಶಗಳ ಸಮೃದ್ಧಿಯನ್ನೇ ನೀವು ಕಂಡಿದ್ದೀರಿ. ಅದಕ್ಕೆ ಒಂದು ಶತಮಾನದ ಸಾಧನೆ ಇದೆ ಎನ್ನುವುದನ್ನು ಏಕೆ ಗಮನಿಸಬಾರದು?''

''ನಾವು ಕೈಕಟ್ಟಿಕೊಂಡು ಕುಳಿತರೆ ಯಾವ ಸಾಧನೆ?''

''ಕೈಕಟ್ಟಿಕೊಂಡು ಎಲ್ಲಿ ಕುಳಿತಿದ್ದಾರೆ? ಸಿಗರೇಟು ಸಮಾರಾಧನೆ ನಡೆದೇ ಇದೆಯಲ್ಲ.''

ಅವನು ನಸುನಗೆ ನಕ್ಕ. ಆದರೂ ಸ್ನೇಹಿತನ ಮಾತಿನಲ್ಲಿಯ ಕಟುಕಿ ಅವನ ಹೃದಯವನ್ನು ಚುಚ್ಚಿತು. ಸ್ನೇಹಿತನಿಗೆ ತನ್ನ ಮಾತು ಹದ್ದುಮೀರಿತು ಎಂದೆನಿಸಿತು.

''ಕ್ಷಮಿಸಿ. ನಿಮ್ಮನ್ನು ಅಪಹಾಸ್ಯ ಮಾಡಬೇಕೆಂದೇನೂ ನಾನೀ ಮಾತನ್ನಾಡಲಿಲ್ಲ.''

''ಹಾಗಾದರೆ ನಾವು ಇನ್ನೆರಡು ದಶಕಗಳಲ್ಲಿ ಮುಂದುವರೆಯುತ್ತೇವೆ.''

''ನಿಶ್ಚಿತವಾಗಿ. ಆದರೆ ಅಭಿವೃದ್ಧಿಯಲ್ಲಿ ಅನಾಹುತಗಳೂ ಇವೆ. ನಾನು ನಮ್ಮದೆಲ್ಲ ಶ್ರೇಷ್ಠ ಎಂದು ವಾದಿಸುತ್ತಿಲ್ಲ. ಮೊನ್ನೆಯ ಪತ್ರಿಕೆಯಲ್ಲಿ

ನೋಡಿರಬಹುದಲ್ಲ. ನ್ಯೂಯಾರ್ಕ್ 'a city of fear' ಹಾಗಾಗಬೇಕು ಎನ್ನುತ್ತೀರಾ? ಹಾಗೂ ಆದೀತು. ಆದೀತು ಏಕೆ? ಈಗಲೇ ಆಗಿವೆಯಲ್ಲ. ನೀವು ಧೈರ್ಯವಾಗಿ ಹೆಜ್ಜೆಯನ್ನಿಡಿರಿ. ನಿಮಗೆ ಮದ್ಯವೂ ಸಿಕ್ಕೀತು. ವೈಯಕ್ತಿಕ ದೌರ್ಬಲ್ಯಕ್ಕಾಗಿ ಸಮಾಜವನ್ನೇಕೆ ದೂರುತ್ತೀರಿ?''

ಅವನ ಬತ್ತಳಿಕೆ ಬರಿದಾಗಿತ್ತು.

ಏನೇ ಆದರೂ ಅವನಿಗೆ ಸ್ನೇಹಿತನಿಂದ ಒಳ್ಳೆಯದಾಗಿತ್ತು. ಸ್ನೇಹಿತನನ್ನು ಒಂದು ದಿವಸ ಅವನು ಸಿನೆಮಾಕ್ಕೆ ಕರೆದ. ಸ್ನೇಹಿತ ಕೇಳಿದ:

''ಈಗ ತುಂಬ ಅವಶ್ಯಕವೆ ಸಿನೆಮಾ?''

''ಹಾಗೇನಿಲ್ಲ. ನಾನು ಈ ಸಲ ತೋರಿಸಬೇಕೆಂದಿದ್ದೆ''

''ಅದಕ್ಕೇನಂತೆ! ಮುಂದಿನ ವಾರ ಒಳ್ಳೆಯ ಚಿತ್ರ ಬರಲಿದೆಯಂತೆ. ಆಗ ಹೋದರೆ ಒಳ್ಳೆಯದು.''

''ಯಾವುದು? ನಿಮಗೆ ಹೇಗೆ ಗೊತ್ತು?''

''ಇಂದು ಪತ್ರಿಕೆಯಲ್ಲಿ ಪ್ರಕಟಣೆ ನೋಡಿದೆ. ಹೋದ ತಿಂಗಳು ಟಾಯಿಮ್ಸ್ ದಲ್ಲಿ ಅದರ ವಿಮರ್ಶೆ ಓದಿದ್ದೆ.''

ಅವನಿಗೆ ಆಶ್ಚರ್ಯವಾಯಿತು. ತಾನು ಚಿತ್ರಪ್ರಪಂಚದಲ್ಲಿಯ ಹುಳು ಎಂದು ತಿಳಿದುಕೊಂಡಿದ್ದ. ಆದರೆ ಒಮ್ಮೆಯೂ ವಿಮರ್ಶೆ ಓದಿರಲಿಲ್ಲ. ಸಿನೆಮಾಗಳಲ್ಲಿ ಆಯ್ಕೆ ಮಾಡಿರಲಿಲ್ಲ. ಎಲ್ಲ ಸಿನೆಮಾ ಒಂದೇ ಎಂಬ ಭಾವನೆ ಅವನದು.

''ವಿಮರ್ಶೆ ಏನಿದೆ?''

''ಚಿತ್ರ ತುಂಬ ಹೊಸ ದಾರಿಯನ್ನು ತುಳಿದಿದೆ. ಮೇಲಾಗಿ ಹೊಸ ಮುಖಗಳಿವೆಯಂತೆ. ಸಂಗೀತ ಇಲ್ಲ. ಜೀವನದ ಬೃಹತ್ಸಮಸ್ಯೆಯ ಸಮಾಲೋಚನೆಯಿದೆಯಂತೆ.''

''ಆಗಲಿ'' ಎಂದಿದ್ದ ಅವನು.

ಹದಿನೈದು ದಿನಗಳೇ ಕಳೆದಿದ್ದವು. ಸ್ನೇಹಿತನೇ ನೆನಪು ಮಾಡಿದ : ಸಿನೇಮಾಕ್ಕೆ ಹೋಗಬಹುದೆ ಎಂದು.

''ಹಣ ನಾನು ಕೊಡುತ್ತೇನೆ.''

''ಅಗತ್ಯವಾಗಿ.''

ಅವನು ಸಿನೆಮಾದಿಂದ ಹೊರಗೆ ಬಂದಾಗ ಅವನು ಸ್ನೇಹಿತನನ್ನು ಕೇಳಿದ:

''ಸಿನೆಮಾ ಹೇಗಿತ್ತು?''

''ನಿಮ್ಮ ಅಭಿಪ್ರಾಯವೇನು?''

''ಮೊದಲು ನೀವು ಹೇಳಿರಿ. ವಿಮರ್ಶೆ ಓದಿದವರು ನೀವಲ್ಲವೆ?''

''ಕತೆಯಲ್ಲಿ ಲೇಖಕ ಒಂದು ತತ್ವಜ್ಞಾನವನ್ನು ಹೇರಲೆಂದು ಪ್ರಯತ್ನಿಸುತ್ತಿದ್ದಾನೆ ಎನಿಸಲಿಲ್ಲವೆ ನಿಮಗೆ ?''

ಅವನಿಗೆ ಇದೊಂದು ಹೊಸ ಬಗೆಯ ಅನುಭವವೇ ಆಗಿತ್ತು. ಸಿನೆಮಾಕ್ಕೆ ಹೋಗುವದು ತನ್ಮಯತೆಯಿಂದ ಅನುಭವಿಸುವದು ಇದೊಂದೇ ಗೊತ್ತು.

''ಯಾವ ತತ್ವಜ್ಞಾನ?''

''ಯಾಕೊ ಏನೊ ನನಗೆ 'ದುನಿಯಾ ಗಲತಿಯೋಂಕಾ ಹಸೀನ ಜಾಲ ಹೈ' ಎಂಬ ಮಾತೇ ಒಪ್ಪಿಗೆಯಾಗುವುದಿಲ್ಲ.''

''ಮತ್ತೇನು ಹೇಳುತ್ತೀರಿ. ನಾನು ಮೊದಲೇ ಹೇಳಿದ್ದೇನೆ ದುನಿಯಾ ಗಲತಿಯೊಂಕಾ ಹಸೀನ ಜಾಲ ಹೈ ಎಂದು.''

''ದೃಷ್ಟಿಕೋಣವೇ ಕಾರಣವಿರಬಹುದು. ಗುನಾಹಹೀ ಇನ್ಸಾನ್‌ಕೆಲಿಯೆ ಏಕಮಾತ್ರ ವಿಧಾಯಕ ಕಾಮ್‌ರಹಗಯಾ ಹೈ-ನಾಯಕನ ಈ ಮಾತು.....''

''ಅದು ಲೇಖಕನ ತತ್ವಜ್ಞಾನವೆಂದೇಕೆ ಭಾವಿಸಬೇಕು?''

''ಆದರೆ ಕತೆಯ ಓಟ-ನಾಯಕನ ವಿಷಯದಲ್ಲಿ ಲೇಖಕನಿಗಿರುವ ಸಹಾನುಭೂತಿ-ನಾಯಕನ ಕೃತಿಗಳ ಸಮರ್ಥನೆ ಇವೆಲ್ಲವುಗಳಿಂದ ತಿಳಿದುಕೊಳ್ಳಬಹುದಲ್ಲ.''

''ನಾನು ಎಂದೂ ಸಿನೆಮಾವನ್ನು ಈ ದೃಷ್ಟಿಯಿಂದ ನೋಡಿಯೇ ಇಲ್ಲ.''

ಅವನ ಧ್ವನಿಯಲ್ಲಿ ದುಃಖದ ಛಾಯೆ ಇತ್ತು. ತನ್ನ ಸ್ನೇಹಿತನ ಮುಂದೆ ತಾನು ಕೀಳು ಎಂಬ ಭಾವನೆ ಅದರ ಹಿಂದೆ ಇತ್ತು. ಅವನು ಹೇಳಿದ:

''ನಾಯಕನದೇನು ತಪ್ಪು? ಅವನ ಪರಿಸರ ಅವನಿಂದ ಹಾಗೆ

ಮಾಡಿಸಿತು.''

ಸ್ನೇಹಿತ ಹೇಳಿದ:

''ಅದನ್ನೆ ನಾನು ಹೇಳುವುದು. ಪರಿಸರ ಇಷ್ಟು ಭಯಂಕರ ಶಾಪವೆ? ಯಾವುದೊ ಒಂದು ಸಣ್ಣ ಸಂಗತಿಯ ಪರಿಣಾಮ ಜೀವನವನ್ನೇ ಕಬಳಿಸುವಷ್ಟು ಪ್ರಬಲವಾಗಬೇಕೆ? ಒಪ್ಪೋಣ. 'ದಿಲ್ ಔರ್ ಕಠೋರ್ ದಿಲ್‌ಹೀ ''ಇನ್ಸಾನ್'' ಬನನೇಕಿ ಪಹಲಿ ಸೀಢೀ ಹೈ'' ಎಂದು ನಾಯಕ ಕೂಗಿದಾಗ ನಾವು ಅವನಿಗೆ ಸಹಾನುಭೂತಿಯ ತಂಪೆರೆಯೋಣ. ಆದರೆ ತಿಳಿವು ಮೂಡದೆ ಇದ್ದೀತೆ?''

''ಮೂಡದೆ ಇರಬಹುದು''

''ಆದರೆ ಮಾನವನ ಕೈಯಲ್ಲಿಯೇ ಇದೆ - ತಿಳಿವು ಮೂಡುವಂತೆ ಮಾಡುವದು.'' ಸ್ನೇಹಿತನ ಹೃದಯದ ಆಳ ಬಹಳ ಎಂದು ಅವನಿಗೆ ಎನಿಸುತ್ತಿತ್ತು.

''ಇವೆಲ್ಲ ನಿಮಗೆ ಹೇಗೆ ಗೊತ್ತಾಯಿತು? ನೀವು ಆಡುವ ತೂಕದ ಮಾತು!''

''ನನಗೆ ಇಲ್ಲಿಯೇ ಕೆಡುಕೆನಿಸುವುದು. ಇವು ತೂಕದ ಮಾತಾದರೆ ನಿಮಗೂ ತಿಳಿಯಬೇಕು. ಕೊಳೆಯಾದರೆ ಕೊಳೆ ಎಂದೆನಿಸುವುದಿಲ್ಲವೆ-ಅಷ್ಟೇ ಸುಲಭ ಈ ಜ್ಞಾನವೂ.''

''ನನಗೆ ಎನ್ನಿಸುವುದಿಲ್ಲ.''

ಅಂದು ರಾತ್ರಿ ಗಣಿತದ ಅಭ್ಯಾಸವನ್ನು ಮುಗಿಸಿದರು.

''ನೋಡಿ ಗಣಿತದ ಅಭ್ಯಾಸಕ್ಕೆ ಪ್ರಯತ್ನ, ಬುದ್ಧಿ ಅವಶ್ಯಕ. ಆದರೆ ಜೀವನದ ತಿಳಿವಿಗೆ ಪ್ರಯತ್ನ ಬುದ್ಧಿ ಅಷ್ಟು ಅವಶ್ಯಕವಲ್ಲ.''

''ಅದು ಹೇಗೆ?''

''ಹೆಚ್ಚೇನೂ ಇಲ್ಲ. ನೋಡುವ ಸಾಮರ್ಥ್ಯ ಮಾತ್ರ ಬೇಕು. ಇಂದು ಸಿನೆಮಾ ನೋಡಿ ಬಂದಮೇಲೆ ನಿಮಗೊಂದು ಮಾತು ಹೇಳಬೇಕೆಂದು ಮಾಡಿದ್ದೆ. ಆಗ ಹೇಳಲಿಲ್ಲ. ಈಗ ಹೇಳುತ್ತೇನೆ. ನಿಮಗೆ ತುಂಬ ಬುದ್ಧಿಯಿದೆ. ಅದರ ಸದುಪಯೋಗ ಮಾಡಿಕೊಂಡರೆ ನಿಮ್ಮ ಸ್ಥಿತಿ ಉತ್ತಮವಾಗುತ್ತದೆ. ನೀವು ಪರಿಸರದ ವಿರುದ್ಧ ಅನ್ಯಾಯದ ವಿರುದ್ಧ ದಂಗೆ ಏಳುತ್ತೇನೆ ಎಂದರೆ ಏಳಬಹುದು.

ಆದರೆ ಏಳುವ ರೀತಿ ಇದಲ್ಲ. ನೀವು ಇನ್ನೊಬ್ಬರಿಂದ ಅನುಕಂಪವನ್ನು ಬಯಸುತ್ತೀರಿ. ನಾನು ಜಂಭ ಕೊಚ್ಚುತ್ತೇನೆ ಎಂದಲ್ಲ. ನಾನು ಅನುಕಂಪಕ್ಕಿಂತ ಮರಣವನ್ನೇ ಬಯಸಿಯೇನು. ಇನ್ನೊಂದು ತಿಂಗಳು ಮಾತ್ರ ಉಳಿದಿದೆ ಪರೀಕ್ಷೆಗೆ. ಹೇಗೂ ವರ್ಷ ಎರಡು ಉರುಳಿದವು.''

ಅವನಿಗೆ ಸ್ನೇಹಿತನ ಮಾತಿನಲ್ಲಿ ಸತ್ಯವಿದೆಯೆನ್ನಿಸಿತು. ತಾನೂ ಅನೇಕ ಸಲ ಸಿನೆಮಾ ನಾಯಕನ ನಿಲುವಿನಲ್ಲಿ ನಿಂತು ಇಂತಹ ವಾಕ್ಯಗಳನ್ನಾಡಿದ್ದೇನೆ. ಆದರೆ ಅವು ಸ್ವಂತ ಪ್ರತಿಭೆಯ ಕಿಡಿಗಳಲ್ಲ. '' ದೂಸರೋಂಕಿ ರಹಮ್ ಪರ್ ಜಿಂದಾ ರಹನೆಕೆ ಬಜಾಯ್ ಮೈ ಮೌತ್ ಬೆಹತರ್ ಸಮಝತಾ ಹೂಂ.'' ಎಂಬ ಸಿನೇಮಾದ ವಾಕ್ಯವನ್ನೇ ಸ್ನೇಹಿತ ಹೇಳಿದ್ದಾನೆ. ಆದರೆ ಸ್ನೇಹಿತನ ಬಾಯಿಂದ ಬಂದ ಅದೇ ವಾಕ್ಯ ಮೀಸಲುವಾಕ್ಯವಾಗಿ ಸ್ಪಂದಿಸುತ್ತದೆ. ನನ್ನ ಬಾಯಲ್ಲಿ ಎಂಜಲಾಗುತ್ತದೆ.

''ನಿಮ್ಮ ಸಹವಾಸದಿಂದ ನನಗೆ ತುಂಬ ಉಪಕಾರವಾಯಿತು. ನಾನು ಮಾತ್ರ ನಿಮಗೆ ಭಾರವಾದೆ. ಹೋದ ವರುಷವೇ ನಿಮ್ಮನ್ನು ನಾನು ಕಂಡಿದ್ದರೆ..... ಎನ್ನಿಸುತ್ತದೆ. ಹೋಗಲಿ ಈಗಲೇ ಬೀಳ್ಕೊಡುವ ಮಾತೇಕೆ? ಮುಂದಿನ ವರ್ಷ ನಿಮ್ಮ ಸಹವಾಸ.....''

''ಅದನ್ನು ಹೀಗೇ ಎಂದು ಹೇಳಲಾರೆ. ನಾನು ಕಾಂಪಿಟಿಟಿವ್ಹ ಪರೀಕ್ಷೆಗೆ ಕೂತುಕೊಳ್ಳುತ್ತೇನೆ. ಪಾಸಾದರೆ ಬೇರೆ ಕಡೆಗೆ ಹೋಗುತ್ತೇನೆ. ನನ್ನ ಸಹವಾಸದಿಂದ ನಿಮಗೆ ಉಪಕಾರವಾದಂತೆ ನನಗೂ ಆಗಿದೆ.''

ಅವನ ಮನಸ್ಸು ಭಾರವಾಯಿತು. ಈ ಕೊನೆಯ ಮಾತು ಔಪಚಾರಿಕ ಅನಿಸಿತು. ಆದರೆ ತನ್ನ ಸ್ನೇಹಿತ ಔಪಚಾರಿಕವಾಗಿ ಮಾತನಾಡುವವನಲ್ಲ ಎಂದೆನಿಸಿತು.

ಅವನ ಬದುಕಿನಲ್ಲಿ ಸ್ಥಿತ್ಯಂತರ ಬಂತು. ಅವನ ತಾಯಿಯ ಗೆಳತಿಗೆ ಅವನು ಸಿಗರೇಟು ಸೇದುತ್ತಿರುವದು ಗೊತ್ತಾಗಿತ್ತು. ನಮಗೇಕೆ ಬೇಕು ಎಂಬ ಔದಾಸೀನ್ಯದಲ್ಲಿಯೇ ಅವಳಿದ್ದಳು. ಅವಳ ಮಗಳಂತೂ ಅವನನ್ನು ಕಂಡು ತುಂಬ ಅಸಹ್ಯಪಟ್ಟುಕೊಳ್ಳುತ್ತಿದ್ದಳು. ತನ್ನ ರೂಮನ್ನು ಅವನು ತಾನೇ ಗುಡಿಸಿಕೊಳ್ಳಬೇಕಾಗುತಿತ್ತು. ಆ ಹುಡುಗಿ ತನ್ನ ತಾಯ ಎದುರು ಅವನ

ವಿಷಯದಲ್ಲಿ ಒಂದೆರಡು ತಕರಾರುಗಳನ್ನು ಹೇಳಿದ್ದಳು.

''ನಾನು ಸ್ನಾನಮಾಡುವಾಗ ಕಿಟಕಿಯಲ್ಲಿ ನೋಡುತ್ತ ನಿಲ್ಲುತ್ತಾನೆ. ಸಿಳ್ಳು ಹೊಡೆಯುತ್ತಾನೆ.'' ಹೀಗೆಲ್ಲ ಹೇಳಿದ್ದಳು.

''ಏನೇ ಇರಲಿ. ಅವರ ಕಿವಿಗೆ ಇದನ್ನೆಲ್ಲಾ ಹಾಕಬೇಡ. ಯಾವುದೋ ಒಂದು ವಿಷಮಗಳಿಗೆಯಲ್ಲಿ ಹೂಂ ಎಂದು ಒಪ್ಪಿಗೆ ಕೊಟ್ಟದ್ದಾಯಿತು. ಮುಂದೆ ನಮ್ಮಿಂದಾಗುವುದಿಲ್ಲ ಎಂದು ಹೇಳಿ ಬೇರೆ ದಾರಿ ನೋಡಿಕೊ ಎಂದರಾಯಿತು.''

ತಾಯಿ ಸಲಹೆ ಹೇಳಿದಳು. ಅವರ ಮನೆಯ ಆಳುಗಳೂ ತೊಂದರೆ ಕೊಡಹತ್ತಿದರು. ಒಂದು ದಿವಸ ಆಳು ಬಂದಿರಲೇ ಇಲ್ಲ. ಇನ್ನೊಬ್ಬ ಆಳು ತಪ್ಪಿಸಿಕೊಂಡು ಹೋದ. ಮನೆಯಲ್ಲಿ ಯಾವುದೋ ಒಂದು ಸಣ್ಣ ಕೆಲಸವಿತ್ತು. ಮೂರನೆಯ ಆಳು ಅದನ್ನು ತಾನು ಮಾಡದೆ ಅವನಿಗೆ ಮಾಡಲು ತಿಳಿಸಿದ. ಅವನಿಗೆ ತುಂಬ ಕೋಪ ಬಂತು.

''ಸೊಕ್ಕು ಬಂದಿದೆ ಸೊಕ್ಕು ಇವರಿಗೆ'' ಮನಸ್ಸಿನಲ್ಲಿ ಗುಡುಗಿದ.

ಆದರೆ ವಿವೇಕ ಎಚ್ಚತ್ತು ''ನೋಡು ದುಡುಕಬೇಡ'' ಎಚ್ಚರಿಕೆ ಹೇಳಿತು.

''ಏನು ನನ್ನ ದೈವ. ಒಂದು ಆಳು ನನಗೆ ಆಜ್ಞೆ ಮಾಡುತ್ತಾನೆ.''

ಅವನು ಚಿಂತನೆಯಲ್ಲಿ ಕುಳಿತಲ್ಲಿಂದ ಏಳಲಿಲ್ಲ. ಆಳು ಮತ್ತೆ ಅಪ್ಪಣೆಯನ್ನೂ ಮಾಡಿಹೋಗಿಬಿಟ್ಟ. ಅವನು ತನ್ನ ಸ್ನೇಹಿತನ ಕಡೆಗೆ ಹೋದ.

''ನೀವು ತುಂಬ ಬಲ್ಲವರು ನಿಜ. ಆದರೆ ದಿನದ ಜೀವನವೇ ಬೇರೆ. ತತ್ತ್ವಜ್ಞಾನವೇ ಬೇರೆ.''

''ಏನಾಯಿತು?''

''ಆಗುವುದೇನು? ಅವರ ಮನೆಯಲ್ಲಿ ಕೆಲಸ ಹೇಳಿದರು.''

''ನೀವು ತುಂಬ ಕೋಪದಲ್ಲಿದ್ದೀರಿ.''

''ಯಾವ ಸ್ವಾಭಿಮಾನಿಗೂ ಕೋಪ ಬರುವದು.''

''ನಾನು ಈ ಸ್ಥಿತಿಯಲ್ಲಿದ್ದರೆ ಕೆಲಸ ಮಾಡಿಬಿಡುತ್ತಿದ್ದೆ.''

''ಹೇಳುವುದು ಸುಲಭ.''

''ಇಲ್ಲಿ ನೋಡಿ. ಅವರು ಬಾಡಿಗೆಯಿಲ್ಲದೆ ರೂಮು ಕೊಟ್ಟರು. ಅದು

ಉಪಕಾರವೇ ಅಲ್ಲವೆ? ನಿತ್ಯ ಒಂದು ಕೆಲಸ ಅವರಲ್ಲಿ ಮಾಡಿದರೆ ಅವರ ಋಣದ ಭಾರವನ್ನು ತುಸುವಾದರೂ ಕಡಮೆ ಮಾಡಿಕೊಂಡಂತಲ್ಲವೆ? ಇನ್ನೊಬ್ಬರ ಹಂಗಿನಲ್ಲಿರುವುದಕ್ಕಿಂತ ದುಡಿದು ತಿನ್ನುವದೇನೂ ಅನಿಷ್ಟವಲ್ಲ. ಈಗ ನಾವಾದರೂ ಇಲ್ಲಿ ಕೆಲಸ ಮಾಡಿಕೊಂಡೇ ಇರುವೆವು.''

''ಮನೆಯವರು ಹೇಳಿದರೆ ಆ ಮಾತು ಬೇರೆ. ಅವರ ಮನೆಯ ಆಳು ಹೇಳಿದ.''

''ನೀವು ಅವರ ಮನೆಗೆ ಹೋದ ಮೊದಲನೆಯ ದಿವಸವೇ ತುಸು ಕೆಲಸವನ್ನು ಮಾಡಿದ್ದರೆ ಅವರ ಮನಸ್ಸನ್ನು ಎಳೆದುಕೊಳ್ಳಬಹುದಿತ್ತು.''

''ಈಗ ನಾನು ಹೋಗಿ ಆಳು ಹೇಳಿದ ಕೆಲಸ ಮಾಡಬೇಕೆ?''

''ಹೌದು. ಅದರಲ್ಲಿ ಏನು ತಪ್ಪು?''

''ನಾನು ಮಾಡದಿದ್ದರೆ...''

''ಅದು ಅವರವರ ದೃಷ್ಟಿಕೋಣ. ಇನ್ನು ಒಂದು ತಿಂಗಳಿಗೆ ಪರೀಕ್ಷೆ. ಈಗ ನೆಲೆ ತಪ್ಪಿದರೆ ಏನು ಮಾಡಬಹುದು?''

''ಆತ್ಮಗೌರವದ ಪ್ರಶ್ನೆ ಹೇಗೆ ?''

''ಇದರಲ್ಲಿ ಆತ್ಮಗೌರವದ ಪ್ರಶ್ನೆ ಎಲ್ಲಿ ಬಂತು?''

''ನನಗೆ ಅನಾಥಾಶ್ರಮದ ವಿಷಯ ಗೊತ್ತೇ ಇರಲಿಲ್ಲ.''

''ಹಳೆಯ ಮಾತು ಈಗ ಬೇಡ. ಮುಂದಿನ ವರುಷವಾದರೆ ನೋಡ ಬಹುದು. ನೀವು ನನ್ನ ಸ್ನೇಹಿತ ಎಂಬ ಕಾರಣಕ್ಕಾಗಿ ಹೇಳುತ್ತೇನೆ. ನಿಮ್ಮ ತಾಯಿಯ ಗೆಳತಿ ಅವರು. ಒಂದು ವರುಷದಲ್ಲಿ ನೀವು ಅವರಲ್ಲೊಬ್ಬ ಆಗಬಹುದಿತ್ತು.

''ನೀವು ನನ್ನ ಮೇಲೆಯೇ ತಪ್ಪು ಹೊರಿಸುತ್ತೀರಿ.''

''ಇಲ್ಲಿ ಒಪ್ಪುತಪ್ಪುಗಳ ಪ್ರಶ್ನೆಯೇ ಇಲ್ಲ. ಸುಮ್ಮನೆ ಇಲ್ಲದ ಕಲ್ಪನೆಗಳಿಗೆ ಬಲಿಬಿದ್ದು ದೊರೆತ ಆಶ್ರಯವನ್ನು ಕಳೆದುಕೊಳ್ಳಬೇಡಿರಿ. ಮೇಲಾಗಿ ಅನಾಥಾಶ್ರಮದ ಜೀವನ ಕಡು ಕಷ್ಟ. ಸಿಗರೇಟು ಇಲ್ಲದೆ ನೀವು ಬದುಕಲಾರಿರಿ. ಅನಾಥಾಶ್ರಮದಲ್ಲಿ ಚಹ ಕೂಡ ಸಿಕ್ಕುವುದಿಲ್ಲ.''

''ಅವರು ಹೆಚ್ಚು ಕೆಲಸ ಕೊಟ್ಟು ನನ್ನ ಅಭ್ಯಾಸ ಹಾಳು ಮಾಡಿದರೆ?''

'' ಈ ಸಂದೇಹ ಸರಿಯಾದುದಲ್ಲ. ಇಂದಿನವರೆಗೆ ಹಾಗೆ ಮಾಡದ ಅವರು ಈಗ ಮಾಡುತ್ತಾರೆ ಎಂದು ಭಾವಿಸಬಾರದು. ಅವರನ್ನು ಒಲಿಸಿಕೊಂಡರೆ ತೀರಿತು.''

''ಅವರನ್ನು ಒಲಿಸಿಕೊಳ್ಳುವುದಂತೆ ಧನದ ಮದ...''

''ನನ್ನದೊಂದೇ ಮಾತು. ನಿಮ್ಮಲ್ಲಿ ಯೋಗ್ಯತೆಯಿದೆ. ಪರೀಕ್ಷೆಗೆ ಕುಳಿತರೆ ನಿಮಗೆ ಖಂಡಿತ ಕ್ಲಾಸ್ ಬರುತ್ತದೆ. ಅದು ಮುಖ್ಯ ಗುರಿ. ಈಗ ಉಳಿದದ್ದೆಲ್ಲ ಅಪ್ರಸ್ತುತ.''

ಅವನು ಮನೆಗೆ ಬಂದು ತಾಯಿಯ ಗೆಳತಿಯನ್ನು ಕಂಡು ಕೇಳಿದ:

''ಏನು ಕೆಲಸ ಇದೆ ಹೇಳಿ.''

''ನೀನೇಕೆ. ಆಳು ಮಾಡುತ್ತಾನೆ.''

''ಅವನೇ ನನಗೆ ಹೇಳಿದ.''

''ನೀನು ಬೇಡವಪ್ಪ.''

''ಅದರಲ್ಲೇನು ಬಿಡಿ. ಎರಡು ಆಳು ಇಂದು ಬಂದಿಲ್ಲ. ನಾನು ಮಾಡುತ್ತೇನೆ''ಎಂದ.

ಅವರಿಗೆ ಆಶ್ಚರ್ಯವಾಯಿತು. ಕೆಲಸವನ್ನು ಮಾಡಗೊಡಲಿಲ್ಲ. ಅವರು ಅವನನ್ನು ಕರೆದುಕೊಂಡು ಅವನ ರೂಮಿಗೆ ಹೋದರು. ಅವರ ಕಣ್ಣಲ್ಲಿ ನೀರು ಬಂದಿತ್ತು.

''ನೋಡು, ನಿನ್ನ ತಾಯಿಗೂ ನನಗೂ ಜೀವದ ಗೆಳೆತನ. ಅವಳು ತುಂಬ ನೊಂದಿದ್ದಾಳೆ. ನೀನೇ ಅವಳ ಆಶೆಗೆ ಆಶ್ರಯ. ಅವಳ ಕುತ್ತಿಗೆಯನ್ನು ಕೊಯ್ಯ ಬೇಡ. ನಾನು ಇಂದಿನವರೆಗೆ ನಿನಗೆ ಏನನ್ನೂ ಹೇಳಿಲ್ಲ. ನನ್ನನ್ನು ತೊಡಕಿಗೆ ಸಿಕ್ಕಿಸುವ ಏನನ್ನೂ ಮಾಡಬೇಡ. ನಿನಗೆ ತುಂಬ ಬುದ್ಧಿಯಿದೆ.''

ಇಷ್ಟು ಹೇಳಬೇಕಾದರೆ ಅವಳ ಕಂಠ ಗದ್ಗದಿತವಾಗಿತ್ತು. ಅವನು ಸುಮ್ಮನೆ ತಲೆತಗ್ಗಿಸಿಕೊಂಡು ನಿಂತಿದ್ದ. ಅವರು ಅವನಿಗೆ ಮತ್ತೊಮ್ಮೆ ಅಭ್ಯಾಸ ಮಾಡಲು ಹೇಳಿ ಹೊರಗೆ ಹೋದರು.

ಹೌದು ನನ್ನಿಂದ ತುಂಬ ತಪ್ಪಾಯಿತು. ಸ್ನೇಹಿತ ಹೇಳಿದ ಹಾಗೆ ಅವರ

ಮನಸ್ಸನ್ನು ಎಳೆದುಕೊಳ್ಳುವುದು ಸಾಧ್ಯವಿತ್ತು. ನನ್ನ ಬದುಕು ಇನ್ನೂ ಸಹ್ಯವಾಗಿರುತ್ತಿತ್ತು. ಆದರೆ, ಆದರೆ ನಾನು ಹಾಗೆ ಮಾಡಲಿಲ್ಲ. ಅವರ ಒಲವನ್ನು ನಾನು ಗಳಿಸಿದ್ದರೆ..... ಅವನ ಕಲ್ಪನೆಯ ಕಾಡು ಹೊತ್ತಿಕೊಂಡಿತು. ಆಶೆಯ ಉರಿ ಬಾನಿಗೇರಿ ಧಗಧಗಿಸುತ್ತಿತ್ತು. ಆದರ ಆಚೆ ಆ ಹುಡುಗಿ ಕುಲುಕುಲು ನಗುತ್ತ ನಿಂತಿದ್ದಳು. ನಾನು ಎಂತಹ ದಡ್ಡತನ ಮಾಡಿದೆ? ನಾನಿರದೆ ನನ್ನ ಸ್ನೇಹಿತನೇ ಇವರಲ್ಲಿದಿದ್ದರೆ.....? ನನಗೇಕೆ ಮೊದಲೇ ತಿಳಿಯಲಿಲ್ಲ ?

ದಟ್ಟವಾದ ಕಾಡು. ಕತ್ತಲೋ ಕತ್ತಲು. ಅವನು ಕಾಡಿನಲ್ಲಿ ಅಲೆದಾಡುತ್ತಿದ್ದಾನೆ. ಮನಸ್ಸಿನಲ್ಲಿ ಯಾವುದೋ ಒಂದು ಭೀತಿ. ಆದರೆ ಕಾಡು ಮಾಯವಾಯಿತು. ಸುಂದರವಾದ ಸರೋವರ. ಸರೋವರದ ದಂಡೆಯಲ್ಲಿ ಮೂರು ಮರ. ತಾನು ಕೆಳಗೆ ಸರೋವರದ ಕಡೆಗೆ ಬೆನ್ನುಮಾಡಿ ನಿಂತಿದ್ದಾನೆ. ಒಂದು ಗಿಡದ ಮೇಲೆ ಆ ಹುಡುಗಿ. ಇನ್ನೊಂದು ಗಿಡದ ಮೇಲೆ ತನ್ನ ಸ್ನೇಹಿತ. ಅವನಿಗೆ ತುಂಬ ಕೋಪ ಬಂತು. ತನ್ನ ಸ್ನೇಹಿತ ಇಲ್ಲಿ ಹೇಗೆ? ವಿಶ್ವಾಸಘಾತಕಿ! ಇಬ್ಬರೂ ವಂಚಕರೇ ಇರಬೇಕು. ಇಬ್ಬರಲ್ಲೂ ಒಂದು ಬಗೆಯ ಸಲುಗೆ ಬೆಳೆದು ಬಂದಂತೆ ಕಾಣುತ್ತದೆ. ತನ್ನ ಸ್ನೇಹಿತ ಗೋಮುಖ ವ್ಯಾಘ್ರ. ಅವನು ಗರ್ಜಿಸಿದ. ಅವಳು ಮೆಲುನಗೆ ನಕ್ಕಳು. ಸ್ನೇಹಿತ ಅವಳನ್ನು ನೋಡಿ ಮುಗುಳುನಗೆ ನಕ್ಕ. ಅವರಿಬ್ಬರೂ ತನ್ನನ್ನು ಲೆಕ್ಕಕ್ಕೆ ತೆಗೆದುಕೊಂಡಂತೆಯೇ ಇಲ್ಲ ಎಂಬುದರಿಂದ ಅವನ ಮನಸ್ಸಿಗೆ ತುಂಬ ವ್ಯಥೆಯಾಯಿತು. ಅವರು ಕುರ್ಚಿಯ ಮೇಲೆ ಕುಳಿತಷ್ಟು ಸಲೀಸಾಗಿ ಕಾಲು ಕೆಳಗೆ ಇಳಿಬಿಟ್ಟು ಕುಳಿತಿದ್ದಳು. ಸ್ನೇಹಿತನು ಅವಳಿಗೆದುರಾಗಿ ಇನ್ನೊಂದು ಮರದ ಮೇಲೆ ಕಾಲು ಇಳಿಬಿಟ್ಟು ಕುಳಿತಿದ್ದ. ಒಂದು ಸಮಾಧಾನ- ಅವನಿಗೆ ; ಇಬ್ಬರೂ ಒಂದೇ ಮರದ ಮೇಲೆ ಕುಳಿತಿಲ್ಲ. ಏನು ತಿಳಿಯಿತೋ ಏನೋ ಅವನು ಅವಳು ಕುಳಿತಿರುವ ಮರವನ್ನು ಏರಹೊರಟ. ಆದರೆ ಅದರ ಬೊಡ್ಡೆಗೆ ಒಂದು ದೊಡ್ಡ ಕೃಷ್ಣಸರ್ಪ ಸುತ್ತುವರಿದು ತನ್ನನ್ನೇ ನೋಡುತ್ತ ಹೆಡೆಬಿಚ್ಚಿ ಆಡುತ್ತಿತ್ತು. ಹತ್ತಿರ ಹೋಗಲು ಧೈರ್ಯ ಸಾಲಲಿಲ್ಲ. ತಾನು ಕಪ್ಪು ಮುಖ ಮಾಡಿಕೊಂಡು ಹಿಂದೆ ಸರಿದ. ಸ್ನೇಹಿತನ ನಗೆ ಕಿವಿಗೆ ತಟ್ಟಿತು. ಅಯ್ಯೋ ಎಂತಹ ಕ್ರೂರ ನಂಜು ಆ ನಗೆಯಲ್ಲಿ !

''ಕೆಳಗಿಳಿದು ಬಾ ತೋರಿಸುತ್ತೇನೆ'' ಅವನು ಗರ್ಜಿಸಿದ.

ಸ್ನೇಹಿತ ಅವನ ಮಾತನ್ನೇ ಕಿವಿಯಲ್ಲಿ ಹಾಕಿಕೊಳ್ಳಲಿಲ್ಲ.

''ನೀನಾದರೂ ಆ ಮರವನ್ನು ಹತ್ತಬಲ್ಲೆಯೇನು?''

ಸ್ನೇಹಿತ ಉತ್ತರಿಸಲಿಲ್ಲ. ಆದರೆ ತಂಪಾಗಿ ನಕ್ಕ. ಎಂತಹ ಆತ್ಮವಿಶ್ವಾಸವಿತ್ತು, ಆ ನಗೆಯಲ್ಲಿ. ಮುಂದೆ ಏನು ಮಾಡಬೇಕೆಂಬುದೇ ತಿಳಿಯಲಿಲ್ಲ. ಸ್ನೇಹಿತ ಕುಳಿತ ಮರದಕೆಳಗೆ ಹೋಗಿ ನಿಂತು ತೊಡೆಯನ್ನು ತಟ್ಟಿದ. ಅದಕ್ಕೂ ಉತ್ತರ ಸ್ನೇಹಿತನ ಮುಗುಳುನಗೆಯೇ. ಅವನು ಕರಗಿ ಹೋದ. ಆದರೆ ಅದನ್ನು ಹೊರಗೆ ತೋರಗೊಡಲಿಲ್ಲ.

''ನಿನ್ನ ನಗೆಯಿಂದ ಯಾವ ಪ್ರಯೋಜನವೂ ಇಲ್ಲ. ನಾನು ನಿನ್ನನ್ನು ನಂಬಿದ್ದೇ ನನ್ನ ಮೂರ್ಖತನವಾಯಿತು. ಇಂದು ಇದರ ಇತ್ಯರ್ಥವಾಗಲೇಬೇಕು.''

''ಯಾವುದರ ಇತ್ಯರ್ಥ?'' ಸ್ನೇಹಿತ ಕೇಳಿದ.

''ವಾ. ಏನೂ ತಿಳಿಯದವರಂತೆ ಮಾತನಾಡುತ್ತೀಯಲ್ಲ.''

''ನಿಜವಾಗಿ ನನಗೇನೂ ತಿಳಿದಿಲ್ಲ.''

''ಈ ಕೂಸಾಟ ಸಾಕು.''

''ಇತ್ಯರ್ಥ ಮಾಡುವವರು ಯಾರು?''

''ನಾನು - ನೀನು.''

''ಹೇಗೆ?''

''ಇಬ್ಬರಲ್ಲಿ ಒಬ್ಬರಿಗೇ ಬದುಕುವ ಹಕ್ಕು.''

''ನಾನೀ ಮಾತಿಗೆ ಒಪ್ಪಲಾರೆ.''

''ಹಾಗಾದರೆ ನೀನು ಮನೆಗೆ ಹೋಗು.''

''ನಾನು ಹೋಗುವುದಿಲ್ಲ.''

''ಹಾಗಾದರೆ ಕೆಳಕ್ಕೆ ಬಾ.''

''ನಾನು ಕೆಳಗೂ ಬರುವುದಿಲ್ಲ.''

''ನಾನು ನಿನ್ನಾಟವನ್ನು ನಡೆಯಗೊಡಲಾರೆ.''

ಅವನು ಅವಳ ಮುಖದ ಕಡೆಗೆ ನೋಡಿದ.

"ನೀನು ಏನು ಹೇಳುತ್ತಿ?"

ಅವಳು ಕಿಲಕಿಲನೆ ನಕ್ಕಳು. ಸರೋವರದ ಮೇಲೆ ತೇಲಿ ಬೆಳಗಿತು ಆ ನಗೆ. ಕಾಡಿನ ಗಿಡಮರಗಳೆಲ್ಲ ಅವಳ ಹೃದಯಕ್ಕೆ ಸಂವಾದಿಯಾದವು. ಕಾಡಿನೆದೆ ಜುಮ್ಮೆಂದಿತು. ಅವಳ ಕೈಲೊಂದು ತರದ ತಂತುವಾದ್ಯವಿತ್ತು. ಅದನ್ನು ಮಿಡಿಯುತ್ತ "ನಿಂತ್ರೆ ಕುಂತ್ರೆ ಅವನ ಧ್ಯಾನಾ" ಎಂದು ಹಾಡತೊಡಗಿದಳು. ಪ್ರತಿ ನುಡಿಯು ಪಲ್ಲವಿಯಾಗಿ "ಅವನೆ ನನ್ನ ಗೆಣೆಕಾರ' ಎಂಬ ಸಾಲು ಕಾಡಿನಲ್ಲಿ ದುಮುದುಮಿಸುತ್ತಿತ್ತು. ಈ ಸಾಲು ಬಂದಾಗಲೊಮ್ಮೆ ಅವನು ಬೆಚ್ಚುತ್ತಿದ್ದ. ಅವಳು ತೋರಿಸುವದು ಯಾರನ್ನು ಎಂದು. ಅವಳ ಹಾಡು ನಿಂತಿತು. ಮತ್ತೊಮ್ಮೆ ಕಿಲಕಿಲ ನಕ್ಕಳು. ಸ್ನೇಹಿತನೂ ನಕ್ಕ. ನಕ್ಕು ಅವನ ಕಡೆಗೆ ನೋಡಿದ. ಆ ನೋಟದಲ್ಲಿ "ಇತ್ಯರ್ಥವಾಯಿತೇ?"ಎಂಬ ಧ್ವನಿಯಿತ್ತು. ಅವನು ಅವಳ ಕಡೆಗೆ ನೋಡಿದ.

"ನಾವಿಬ್ಬರನ್ನೂ ಪರೀಕ್ಷಿಸುತ್ತೇನೆ."

"ಪರೀಕ್ಷೆ ಗಿರೀಕ್ಷೆ ಏನೂ ಬೇಡ. ನೀನು ನನ್ನನ್ನು ಒಪ್ಪಿಕೊಳ್ಳಬೇಕು." ಸ್ನೇಹಿತ ಪರೀಕ್ಷೆಗೂ ವಿರೋಧಿಸಲಿಲ್ಲ. ತನ್ನ ಮಾತಿಗೂ ವಿರೋಧಿಸಲಿಲ್ಲ.

"ನಿನ್ನನ್ನೇ ಏಕೆ ಒಪ್ಪಿಕೊಳ್ಳಬೇಕು?"

ಅವನು ನಿರುತ್ತರನಾದ. ಆದರೆ ಚೇತರಿಸಿಕೊಂಡು ಹೇಳಿದ:

"ನಾನು ನಿನ್ನನ್ನು ಪ್ರೀತಿಸುತ್ತೇನೆ. ನೀನು ನನ್ನನ್ನು ಪ್ರೀತಿಸುತ್ತಿ?"

"ಹೋಗಲಿ. ನೀನು ನನಗಾಗಿ ಏನು ಕೊಡಬಲ್ಲೆ?"

"ಮೇರಿ ತಾಕತ್ ತುಮ್ಹಾರಿ ರಕ್ಷಾಕೆ ಲಿಯೆ ಹೈ, ಮೇರಿ ವಫಾದಾರಿ ತುಮ್ಹಾರೆ ಇತ್‌ಮಿನಾನ್‌ಕೆ ಲಿಯೆ ಹೈ, ಮೇರಿ ಯೋಗ್ಯತಾ ಔರ್ ಮೆಹನತ್ ತುಮ್ಹಾರಿ ಜಿಂದಗೀಕೆ ಲಿಯೆ ಹೈ ಔರ್ ಮೇರಾ ಅಧಿಕಾರ್ ಔರ್ ಶಖ್ಸಿಯತ್ ತುಮ್ಹಾರಿ ಇಜ್ಜತ್ ಔರ್ ಶೋಹರತ್ ಕೆ ಲಿಯೆ ಹೈ ಹೈ."

"ನೀನೇನು ಕೊಡಬಲ್ಲೆ?" ಅವಳು ಸ್ನೇಹಿತನನ್ನು ಕೇಳಿದಳು. ಅವನು ಅವರಿಬ್ಬರ ಮುಖಗಳ ಮೇಲಿನ ಭಾವವಿನ್ಯಾಸವನ್ನು ಗಮನಿಸಿದ. ಆದರೆ ಅವನಿಗೊಂದು ಸಮಾಧಾನ. ತಾನು ಹೇಳಿದ ಉತ್ತರಕ್ಕಿಂತ ಬೇರೆ ಒಳ್ಳೆಯ ಉತ್ತರವೇ ಇಲ್ಲ. ಒಂದು ಬಗೆಯ ಅಹಂಕಾರದಿಂದ ಅವನು ಸ್ನೇಹಿತನ

ಉತ್ತರವನ್ನು ನಿರೀಕ್ಷಿಸಿದ.

''ನನ್ನ ದೌರ್ಬಲ್ಯವನ್ನು, ನನ್ನ ಏಕಾಕಿತನವನ್ನು ನನ್ನ ಹೃದಯದ ಹಂಬಲವನ್ನು.''

ಈ ಉತ್ತರಕ್ಕೆ ಕಾಡಿನ ಎದೆ ಕಂಪಿಸಿತು. ಅವಳು ನಿರ್ಣಯವನ್ನು ಹೇಳಿದಳು:

''ನಾನು ದುರ್ಬಲರ ಸೊತ್ತು.''

ಅವನ ಹೃದಯವನ್ನು ಯಾರೋ ಅಲಗಿನಿಂದ ಚುಚ್ಚಿದಂತಾಯಿತು. ಕಣ್ಣು ಹೊಸಕುತ್ತ ಅವನು ಹಾಸಿಗೆಯಲ್ಲಿ ಎದ್ದು ಕುಳಿತ. ಎಂತಹ ಸ್ವಪ್ನ ಇದು. ಎಂದೂ ತನ್ನ ಸ್ನೇಹಿತ ಸ್ವಪ್ನದಲ್ಲಿ ಬಂದಿರಲಿಲ್ಲ. ತನ್ನ ಜೀವನದಲ್ಲಿ ಏನೋ ದುರಂತ ಬಂದವರಂತೆ ಗದಗದ ನಡುಗಿದ.

ಮರುದಿನ ತನ್ನ ಸ್ನೇಹಿತನನ್ನು ಕಂಡಾಗ ಅವನು ಕೇಳಿದ:

''ನಾನು ಎಂದಾದರೂ ನಿಮ್ಮ ಕನಸಿನಲ್ಲಿ ಬಂದಿದ್ದೇನೆಯ?''

''ಇಲ್ಲ.''

ಸ್ನೇಹಿತ:

''ಯಾಕೆ?''

''ನಾನು ನಿಮ್ಮ ಕನಸಿನಲ್ಲಿ ಬಂದಿದ್ದೇನೆಯೆ?'' ಎಂದು ಕೇಳಲಿಲ್ಲ. ಈ ಮಾತು ಅಲ್ಲಿಗೇ ನಿಂತಿತು. ಅವನ ಚಿತ್‌ಪ್ರಾಂತದಲ್ಲಿ ಸ್ನೇಹಿತ ಖಳನಾಯಕನಾಗಿ ಪ್ರವೇಶಿಸಿದ. ಅವಳನ್ನು ಸ್ನೇಹಿತ ನೋಡಿದ್ದಾನೆಯೆ? ಅವಳು ನೋಡಿದ್ದಾಳೆಯೆ? ಇಲ್ಲಿಯಂತೂ ಸ್ನೇಹಿತ ಬಹಳ ಸಲ ಬಂದಿಲ್ಲ. ಈ ಸ್ವಪ್ನವನ್ನು ಮರೆಯಲು ಯತ್ನಿಸಿದ. ಇಂದಿನಿಂದ ಸ್ನೇಹಿತನಿಂದ ದೂರಾಗಬೇಕು. ಆದರೆ ಪರೀಕ್ಷೆ ಹತ್ತಿರ ಬಂದಿದೆ. ಒಂದರ ಹಿಂದೆ ಒಂದರಂತೆ ಸಿಗರೇಟು ಸೇದಿದ. ಸ್ನೇಹಿತನೊಡನೆ ಆ ಹುಡುಗಿಯ ವಿಷಯ ಮಾತನಾಡಬೇಕು ಎಂದುಕೊಂಡ. ಏನೆಂದು ಮಾತನಾಡುವುದು? ಆದರೆ ತನ್ನನ್ನು ತನ್ನ ಸ್ನೇಹಿತನೊಡನೆ ಹೋಲಿಸಿಕೊಂಡಾಗ ಅವನಿಗೆ ವ್ಯಥೆಯಾಯಿತು.

ಸ್ನೇಹಿತನ ವಿಷಯದಲ್ಲಿ ಅವನ ಮನಸ್ಸು ಕಲುಷಿತವಾಗಹತ್ತಿತು. ಆದರೂ

ಅವನಿಗೆ ಸ್ನೇಹವನ್ನು ಕಡಿದು ಹಾಕುವುದು ಸಾಧ್ಯವಾಗಲಿಲ್ಲ. ಗಣಿತದ ಅಭ್ಯಾಸ ಮುಗಿದಿತ್ತು. ಒಂದು ನಿಯಮಿತ ಕ್ರಮದಿಂದ ಎಲ್ಲವನ್ನೂ ಅಭ್ಯಾಸ ಮಾಡಿದ್ದ. ತನ್ನ ಪರಾವಲಂಬನವನ್ನು ಮುಚ್ಚಿಕೊಳ್ಳುವುದಕ್ಕಾಗಿ ಸ್ನೇಹಿತನೊಡನೆ ಸಮಾನತೆಯಿಂದ ನಡೆಯುತ್ತಿದ್ದ. ಅವನು ತಮಗೆ ಪಠ್ಯವಾದ ' Two on a Tower' ಕಾದಂಬರಿಯ ನೆಪದಿಂದ ಸ್ನೇಹಿತನನ್ನು ಕೆಣಕಿದ ಬಳಸು ಪ್ರಶ್ನೆಗಳಿಂದ.

''ಸ್ವಿದಿನದು ತಪ್ಪೋ - ಕಾನಸ್ಟಾಂಟಿನಳದು ತಪ್ಪೋ?'' ಅವನ ಪ್ರಶ್ನೆ.

''ಕಾದಂಬರಿಯನ್ನು ಪೂರ್ಣ ಓದಿದೆ. ಆದರೆ ಇನ್ನೊಬ್ಬರ ಜೀವನದ ನಿರ್ಣಯ ನಾವು ಕೊಡಬೇಕೆ?''

''ಏಕೆ ಕೊಡಬಾರದು?''

''ನಮಗಿರುವ ಅಧಿಕಾರವೇನು?''

''ಪಠ್ಯವಿದೆ ಪುಸ್ತಕ. ಪರೀಕ್ಷೆಯಲ್ಲಿ ಪ್ರಶ್ನೆಗಳಿಗೆ ಉತ್ತರ ಕೊಡಬೇಕು.''

''ಪರೀಕ್ಷೆಗಾಗಿ ಈ ಪ್ರಶ್ನೆಯೆ? ನಿಮ್ಮದೇನು ಅಭಿಪ್ರಾಯ?''

ಸ್ನೇಹಿತ ಎಂದೂ ಇನ್ನೊಬ್ಬರನ್ನು ಕುರಿತು ಗಾಳಿಮಾತು ಹಬ್ಬಿಸುವುದಕ್ಕೆ ಆಸ್ಪದವನ್ನು ಕೊಡುತ್ತಿರಲಿಲ್ಲ. ಅವನಿಗೋ ಏನನ್ನಾದರೂ ಆಡಬೇಕು ಎಂದು ಚಪಲ. ನಿತ್ಯ ಗಣಿತ, ಇಂಗ್ಲಿಶ್ ಹೀಗೆ ಓದಿ ಮಾತನಾಡಿ ಬಾಯಿ ಕೆಟ್ಟಿತ್ತು. ಒಮ್ಮೆ ಅವನು ಸ್ನೇಹಿತನನ್ನು ಕೇಳಿದ:

''ಟ್ರಿಪ್ಪಿಗೆ ಹೋಗೋಣವೆ?''

''ನಾನು ಬರಲಾರೆ?'' ಸ್ನೇಹಿತ ಹೇಳಿದ.

''ಏಕೆ?''

''ಕಾರಣ ಬೇಕೇಬೇಕೆ?''

''ಹೌದು.''

''ಸದ್ಯಕ್ಕೆ ನನಗೆ ಅನುಕೂಲತೆಯಿಲ್ಲ.''

ಈ ಮಾತಿನಿಂದ ಅವನಿಗೆ ಸಮಾಧಾನವೆನ್ನಿಸಲಿಲ್ಲ. ಬಿಡುವು ಮಾಡಿಕೊಂಡು ಕಾಲೇಜು ಪಂದ್ಯಗಳನ್ನು ನೋಡಲು ಬಂದ ಸ್ನೇಹಿತ ಟ್ರಿಪ್ಪಿಗೆ ಬಾರದಿರುವುದಕ್ಕೆ ಬೇರೆ ಕಾರಣಗಳಿರಬೇಕು. ಆದರೆ ಸ್ನೇಹಿತ ಮುಂದೆ

ಮಾತನಾಡಲಿಲ್ಲ.

``ನಾನಾದರೂ ಹೋಗಿ ಬರಲೆ?''

``ನನ್ನ ಅಪ್ಪಣೆ ಬೇಕೆ?''

ಈ ಪ್ರಶ್ನೆಯಿಂದ ನಿರುತ್ತರನಾಗಿದ್ದ.

ಟ್ರಿಪ್ಪಿಗೆ ಹೋಗಿ ಬಂದ ಅವನಿಗೆ ಒಂದು ಬಗೆಯ ಮಾದಕತೆಯ ಅನುಭವ ಬಂತು. ಇಷ್ಟು ವರ್ಷಗಳಲ್ಲಿ ಇದೇ ಮೊದಲ ಸಲ ಅವನು ಟ್ರಿಪ್ಪಿಗೆ ಹೋಗಿದ್ದು. ಮೂವರು ತರುಣ ಪ್ರಾಧ್ಯಾಪಕರು ಸ್ವಚ್ಛಂದವಾಗಿ ಹರಟೆ ಹೊಡೆದರು. ವಿದ್ಯಾರ್ಥಿನಿಯರೂ ಸ್ಫೈರವಾಗಿ ಮಾತನಾಡಿದರು. ಅವನಿಗೆ ಕೆಡುಕೆನಿಸಿದ ಸಂಗತಿಯೆಂದರೆ ಒಂದೇ ಒಂದು - ತಾನು ಅಲ್ಲಿ ಪ್ರೇಕ್ಷಕನಾಗಿಯೇ ಹೋದ. ತನ್ನ ಬಟ್ಟೆ ಬರೆ ಆ ಗುಂಪಿನಿಂದ ತನ್ನನ್ನು ಎತ್ತಿಟ್ಟಿತ್ತು. ತಾನು ಬಾಯಿ ಹೊಲಿದುಕೊಂಡು ಕುಳಿತ.

``ಎಷ್ಟೆಷ್ಟು ಜೋಕು?''

ಸ್ನೇಹಿತನನ್ನು ಕೇಳಿದ:

``ನಾನ್ ವ್ಹೆಜಿಟೇರಿಯನ್ ಜೋಕು ಎಂದರೇನು?''

``ನನಗೆ ಗೊತ್ತಿಲ್ಲ.''

ಎಲ್ಲ ನಗೆಹನಿಗಳು ಮರೆತಿದ್ದರೂ ಅವನ ಮನಃಪ್ರಷ್ಠದ ತೊಟ್ಟಿಲಲ್ಲಿ ಇನ್ನೂ ಒಂದು ನಗೆಹನಿಯ ಇಬ್ಬನಿ ಹೊಳೆಯುತ್ತಿತ್ತು:

``ಮಗನಿಗೆ scarlet fever ಇದೆ ಡಾಕ್ಟೆ''

``ಆಗಲಿ ಚಿಂತೆಗೆ ಕಾರಣವಿಲ್ಲ.''

``ಆದರೆ ಡಾಕ್ಟೆ ನನ್ನ ಮಗ ಕೆಲಸದಾಕಿಯನ್ನು ಮುದ್ದಿಸಿದ.''

``ಹೀಗೋ ನೋಡೋಣ.''

``ಡಾಕ್ಟೆ ನಾನು ಅವಳನ್ನು ಮುದ್ದಿಸಿದೆ.''

``ಚಿಂತೆಯಿಲ್ಲ.''

``ಆದರೆ ಡಾಕ್ಟೆ ನಾನು ಹೆಂಡತಿಯನ್ನು ಮುದ್ದಿಸಿದೆ.''

``ಅಯ್ಯೊ ಇನ್ನೇನು ಗತಿ - ನಾನೂ ಆಹುತಿಯಾದೆನಲ್ಲ''

ಸ್ನೇಹಿತ ಇದರಲ್ಲಿ ಆಸಕ್ತಿ ವಹಿಸಲಿಲ್ಲ

''ನಿನಗೆ College queen ಗೊತ್ತೊ?

''ಇಲ್ಲ.''

''ಅವಳೂ ಬಂದಿದ್ದಳು. ಅವಳ ಬಗ್ಗೆ...''

''ಇಲ್ಲಿ ನೋಡು ನಿನಗೆ ಕೋಪ ಬಂದರೂ ಚಿಂತೆಯಿಲ್ಲ. ನಾನು ಇನ್ನೊಬ್ಬರನ್ನು ಕುರಿತು ಕೇಳಲಾರೆ ಮಾತನಾಡಲಾರೆ.''

''ಎಂತಹ ನೀರಸ ಮನುಷ್ಯ'' ಎನಿಸಿತು ಅವನಿಗೆ. ಆ ನೆಪದಿಂದ ಸ್ನೇಹಿತನನ್ನೂ ಅಶ್ಲೀಲ ಮಾತುಗಳಲ್ಲಿ ಎಳೆಯಬೇಕೆಂಬ ಅವನ ಯುಕ್ತಿ ನಿಷ್ಫಲವಾದಾಗ ಕಾದಂಬರಿಯ ಸಿಕ್ಕನ್ನು ಬಲಪಡಿಸಲೆತ್ನಿಸಿದ ಅಭ್ಯಾಸದ ನೆಪದಿಂದ.

''ನೀನು ಕಾದಂಬರಿಗಳನ್ನೋದುವುದೇ ಇಲ್ಲವೆ?''

''ಓದಿದ್ದೇನೆ ಕೆಲವನ್ನು.''

ಅವನು ಮತ್ತೇನನ್ನೋ ಮಾತನಾಡಲು ಬಾಯಿ ತೆರೆದ. ಸ್ನೇಹಿತ ಹೇಳಿದ:

''ಇದಕ್ಕಿಂತ ತೀರ ಮಹತ್ವದ ಸಂಗತಿಗಳಿವೆ.'' '' ಈ ಸ್ನೇಹಿತ ಬೆಳೆದ್ದಾದರೂ ಹೇಗೆ? ಇವನಲ್ಲಿ ಕಾಣದ ಚಪಲ ನನ್ನಲ್ಲಿ ಏಕೆ? ನನ್ನದು ತಪ್ಪೊ? ಸ್ನೇಹಿತನದು ತಪ್ಪೊ ?'' ಸಮಸ್ಯೆಗೆ ಪರಿಹಾರ ದೊರಕಲಿಲ್ಲ. ಈ ವಿಷಯದಲ್ಲಿ ಯಾವ ಚರ್ಚೆಗೂ ಸ್ನೇಹಿತ ಅವಕಾಶ ಕೊಡಲಿಲ್ಲ.

ಪರೀಕ್ಷೆ ಬಂದಿತು. ಈ ಸಲ ಅವನಲ್ಲಿ ವಿಲಕ್ಷಣವಾದ ಆತ್ಮವಿಶ್ವಾಸವಿತ್ತು. ಎರಡನೆಯ ವರ್ಗದಲ್ಲಂತೂ ಸಹಜವಾಗಿ ಉತ್ತೀರ್ಣನಾಗುವೆನೆಂದು ಅವನು ಈ ಸಲ ಹುರುಪಿನಲ್ಲಿದ್ದ. ಈ ಸಲ ಅವನು ಪರೀಕ್ಷೆಗೆ ಮೊದಲು ತುಸು ಸಮಯ ಮೊದಲು ಯಾವುದೋ ಗಿಡದಡಿಯಲ್ಲಿ ವಿಮನಸ್ಕನಾಗಿ ಕೂಡಲಿಲ್ಲ. ಸ್ನೇಹಿತನೊಡನೆ ಬಂದ. ಹೆಜ್ಜೆಯಲ್ಲಿ ಗೆಲುವಿನ ಠೀವಿಯಿತ್ತು. ಎಲ್ಲ ಪೇಪರುಗಳೂ ಮುಗಿದವು. ಅಗಲುವ ಸಮಯ ಬಂದಿತು. ಸ್ನೇಹಿತ ತನ್ನ ವಿಳಾಸವನ್ನು ಕೊಟ್ಟ. ಅವನೂ ತನ್ನ ವಿಳಾಸವನ್ನು ಕೊಟ್ಟ. ಸ್ನೇಹಿತ ಹೇಳಿದ:

``ಬಹುಶಃ ನಾನು ಮುಂದಿನ ವರ್ಷ ಬರಲಿಕ್ಕಿಲ್ಲ.''

``ನನ್ನಿಂದ ಆಗಬಹುದಿತ್ತೇನೊ ಅಭ್ಯಾಸ ಮಾಡಿದ್ದರೆ ಕಾಂಪಿಟಿಟಿವ್ ಎಕ್ಸಾಮಿನೇಶನ್.''

``ಆಗದೇ ಏನು?''

``ನನಗೆ ಗೊತ್ತಾಗಲಿಲ್ಲ''

``ಅವನ ಧ್ವನಿಯಲ್ಲಿ ತನಗೆ ಈ ಮೊದಲು ಯಾರೂ ಹೇಳಲಿಲ್ಲ ಎಂಬ ದೂರಿತ್ತು. ಸ್ನೇಹಿತ ಅದನ್ನು ಗಮನಿಸಿದರೂ ಅದಕ್ಕೆ ಏನನ್ನೂ ಹೇಳಲಿಲ್ಲ.

``ಮುಂದೆ ನಾನೇನು ಮಾಡಬಹುದು?''ಅವನು ಕೇಳಿದ.

``ದಾರಿ ತೀರ ಸುಗಮವಾಗಿದೆಯಲ್ಲ.''

``ಏನು?''

``ಬಿ.ಎಸ್‌ಸಿ. ಮುಂದುವರಿಸುವುದು. ಇನ್ನೆರಡು ವರ್ಷಗಳಾದ ಬಳಿಕ ಎಮ್.ಎಸ್‌ಸಿ.''

``ಅಲ್ಲಿಯವರೆಗೆ......''

``ನಾನು ಅಹಂಕಾರದಿಂದ ಹೇಳುತ್ತಿಲ್ಲ. ಲೋಕ ನಮಗೆ ಸಹಾಯ ಮಾಡಲು ಹಾತೊರೆಯುತ್ತದೆ. ಅನಂತ ಹಸ್ತಗಳಿಂದ ಸಹಾಯ ಬರುತ್ತದೆ . ಒಮ್ಮೆ ನಿರ್ಧಾರ ಬೇಕು. ನನ್ನದೇ ಉದಾಹರಣೆಯನ್ನು ತೆಗೆದುಕೊ. ನನಗೆ ತಂದೆಯಿಂದ ಒಂದು ಕಾಸೂ ದೊರೆಯಲಿಲ್ಲ. ನಾನು ಅವನನ್ನು ದೂರುತ್ತಿಲ್ಲ. ಎರಡು ವರ್ಷ ಕಳೆದವೀಗ. ಮುಂದೆ ಹೇಗೊ ಸಾಗುತ್ತದೆ.''

ತನ್ನ ತಂದೆ ಹೇಳುತ್ತಿದ್ದ:

``ಬರುವ ದಿನ ತೀರ ಕಷ್ಟದವು. ಘೋರ ಸ್ಪರ್ಧೆ.''

ಅವನಿಗೆ ಈ ಸತ್ಯದ ಸಾಕ್ಷಾತ್ಕಾರ ಜೀವಶಾಸ್ತ್ರದ ಅಧ್ಯಯನ ಮಾಡುವಾಗ ಆಗಿತ್ತು. ಮೈಕ್ರೋಸ್ಕೋಪಿನಲ್ಲಿ ಕಣ್ಣಿಟ್ಟು ನೋಡಿದಾಗ ಜೀವನ ರಹಸ್ಯವೇ ವಿಶ್ವರೂಪವನ್ನು ಧರಿಸಿ ನಿಂತಿತ್ತು. ಒಂದು ನೆನೆದ ಬತ್ತವನ್ನು ವಿಶ್ಲೇಷಿಸಿ ನೋಡಿ ಅಬ್ಬಾ ಏನು ಗಾತ್ರ ಕ್ರಿಮಿಗಳದು! ಆರೆಂಟು ಕ್ರಿಮಿಗಳು. ಬದುಕಿಗಾಗಿ ಹೋರಾಟವನ್ನು ನಡೆಯಿಸಿದ್ದವು. ಮನುಷ್ಯರ ಜೀವನದ ಪಾಡೂ ಅದೇ ! ಹೋರಾಟ! ಹೋರಾಟ1 ಅವಿರತ ಹೋರಾಟ! ``ಆಗಿನ ದಿನಮಾನಗಳು

ಈಗಿಲ್ಲ'' ಇದು ತಂದೆಯ ಎಚ್ಚರ.

''ಈಗ ನೋಡು. ಹಿಂದುಳಿದ ಜಾತಿಯಲ್ಲಿದ್ದರೇ ಸೌಖ್ಯ. ಅವರಿಗೆ ಎಲ್ಲ ಅನುಕೂಲತೆಗಳು !'' ಅವನ ತಂದೆ ಕಳ್ವದನಿಯಲ್ಲಿ ಹೇಳಿದ್ದ. ಜಾತೀಯತೆಯ ವಿಷಮ ಹೊಗೆ ಸಮಾಜಜೀವನವನ್ನು ನಿಸ್ಸತ್ವವನ್ನಾಗಿ ಮಾಡಿಬಿಟ್ಟಿದೆ. ತಂದೆ ಚಿತ್ರಿಸಿದ ಜಗತ್ತಿನ ಚಿತ್ರ ಹೀಗಿದ್ದರೆ ಸ್ನೇಹಿತ ಚಿತ್ರಿಸಿದ ಜಗತ್ತು ಅದಕ್ಕೆ ವಿಪರೀತವಾಗಿದೆ.

''ಸಮಾಜ ಶತ್ರುವಲ್ಲ. ಹೋರಾಟ ಏಕಿರಬೇಕೊ ನನಗಂತು ತಿಳಿಯದು'' ಸ್ನೇಹಿತ ಹೇಳಿದ.

''ಜೀವನದ ನಿಯಮವೇ ಹೋರಾಟವಲ್ಲವೆ?''

''ಪ್ರಕೃತಿಯ ಪ್ರಾಥಮಿಕ ಅವಸ್ಥೆಯಲ್ಲಿ ಹೋರಾಟವು ನಿಯಮವಾದೀತು. ವಿಕಸಿತ ಸಮಾಜಜೀವನದಲ್ಲಿ ಹೋರಾಟದ ಕಲ್ಪನೆ ಮಾಯವಾಗದಿದ್ದರೆ ಸಂಸ್ಕೃತಿಗೆ ಉಳಿಗಾಲವಿಲ್ಲ.''

''ನೀನು ಏನೇ ಹೇಳು. ಹಿಂದುಳಿದವರಿಗೆ ಇರುವ ಸವಲತ್ತುಗಳನ್ನು ನೀನು ನೋಡು.''

''ಅದರಿಂದ ನಿನಗಾದ ಅನ್ಯಾಯವೇನು?''

ಒಮ್ಮೆಲೆ ಅವನಿಗೆ ಹೇಳಲು ಬರಲಿಲ್ಲ.

''ಈ ಪ್ರವೃತ್ತಿ ಸಮಾಜಕ್ಕೆ ಘಾತಕವಾಗಿದೆ.''

''ಏಕಾಗಬೇಕು?'' ಸಹಸ್ರಾರು ವರ್ಷ ನಿಷ್ಕಾರಣವಾಗಿ ತೊತ್ತುಳಿಗೆ ಸಿಕ್ಕ ಒಂದು ಜನಾಂಗ ಮೇಲಕ್ಕೆ ಬರಲು ಹವಣಿಸುತ್ತಿದೆ. ಅದಕ್ಕೆ ನನ್ನ ನಿನ್ನ ಸಹಕಾರ ದೊರೆತರೆ ಒಳ್ಳೆಯದಲ್ಲವೆ?''

ಅವನು ಮಾತನಾಡಲಿಲ್ಲ. ಸ್ನೇಹಿತ ಹೇಳಿದ:

''ನಮಗೆ ಈ ಚರ್ಚೆಗಳೆಲ್ಲ ಏಕೆ? ಇನ್ನೂ ಒಮ್ಮೆ ಹೇಳುತ್ತೇನೆ. ನಿನ್ನ ಬುದ್ಧಿಯು ಪ್ರಖರವಾಗಿದೆ. ನೀನು ಸ್ವಲ್ಪ ಶ್ರಮಪಟ್ಟರೆ ನಿನ್ನ ಬದುಕಿಗೊಂದು ಸ್ವರೂಪ ಬರುತ್ತದೆ. ನಾನೇನೂ ಹಿರಿಯನಲ್ಲ. ಆದರೆ ಈ ಮಾತನ್ನು ಹೇಳದೆ ಇರುವುದು ನನ್ನಿಂದಾಗಲಿಲ್ಲ.''

``ನನ್ನ ಬದುಕಿಗೊಂದು ನೆಲೆಯನ್ನು ಒದಗಿಸಿಕೊಟ್ಟ ನಿನಗೆ ನಾನು ತುಂಬ ಕೃತಜ್ಞನಾಗಿದ್ದೇನೆ.''

ಈ ಮಾತು ಅವನ ಬಾಯಿಂದ ಹೇಗೋ ಜಾರಿ ಬಂತು. ಸ್ನೇಹಿತನ ವಿಷಯದಲ್ಲಿ ಅವನಲ್ಲಿದ್ದ ಕಲುಷಿತ ಭಾವನೆ ತುಸು ಹೊತ್ತು ರಾಡಿಗಟ್ಟಿ ತಳದಲ್ಲಿ ಕುಳಿತಿತ್ತು. ಮನಸ್ಸಿನ ಮೇಲುಭಾಗ ತಿಳಿಯಾಗಿತ್ತು.

``ನಾನೇನು ಮಾಡಿದ್ದೇನೆ? ನಿನಗೆ ಸ್ಥಳಕೊಟ್ಟವರಿಗೆ ಕೃತಜ್ಞತೆಗಳನ್ನು ಹೇಳು.''

``ನಿನ್ನಿಂದ ನನ್ನ ಬದುಕಿಗೆ ಸ್ಥಿರತೆ ಬಂತು.''

``ನಿನ್ನಲ್ಲಿ ಇಲ್ಲದ ಆಲೋಚನೆಗಳನ್ನು ಮಾಡಿ ದಣಿಯುವ ಸ್ವಭಾವವಿದೆ.''

``ನಿನ್ನನ್ನೂ ಕಂಡಾಗ ನನಗೆ ಏನೆನ್ನಿಸುತ್ತದೆ ಗೊತ್ತೆ?''

ಸ್ನೇಹಿತ ಅವನ ಉತ್ತರಕ್ಕಾಗಿ ಕಾದು ನಿಂತ.

``ನೀನು ರಕ್ತಮಾಂಸಗಳ ಮನುಷ್ಯನಲ್ಲ. ಮಂದಿರಗಳಲ್ಲಿ ಪ್ರತಿಷ್ಠಿಸಿದ ಅಮೃತಮೂರ್ತಿ.''

``ನಿನ್ನ ಮಾತನ್ನು ನಾನು ಒಪ್ಪಲಾರೆ.''

``ನಿನಗೆ ಈ ತಿಳಿವು, ಈ ಬಲ ಹೇಗೆ ಬಂತು?''

``ನೀನೀ ಪ್ರಶ್ನೆಯನ್ನು ಅನೇಕ ಸಲ ಕೇಳಿರುವೆ. ಮೈಯ ರಕ್ತವನ್ನು ವಿಶ್ಲೇಷಿಸಿ ಇದು ಗೋದಿಯಿಂದಾಯ್ತು? ಹಣ್ಣಿನಿಂದಾಯ್ತು? ಎಂದು ಹೇಳುವುದು ಸಾಧ್ಯವಿದೆಯ? ಬದುಕಿನಲ್ಲಿ ಮೈಯೆಲ್ಲ ಕಣ್ಣಾಗಿದ್ದರೆ ಬದುಕಿಗೆ ಚೆಲುವು ಬಂದೀತು ಎನ್ನಿಸುತ್ತದೆ.''

``ನಿನ್ನ ಮುಂದಿನ ಯೋಜನೆ ಏನು?''

``ದುಡಿ. ದುಡಿ. ಇದೇ ನನ್ನ ಯೋಜನೆ. ಬದುಕಿನಲ್ಲಿ ಗಣಿತ ಶಾಸ್ತ್ರದ ನಿಯಮಗಳಿವೆ. ಆದರೆ ಅವೆಲ್ಲವುಗಳನ್ನು ಅಂಕಿಮಗ್ಗಿಯನ್ನು ಪಾಠಮಾಡಿದಂತೆ ಮಾಡುವುದು ಸಾಧ್ಯವಿಲ್ಲ. ಬದುಕಿನ ಸಮಸ್ಯೆಗೆ ಪರಿಹಾರ ಬದುಕಿನಲ್ಲಿಯೇ.''

ಅಂದು ಅವರು ಸಿನೇಮಾ ನೋಡಿ ಬಂದರು: ಸ್ನೇಹಿತ ಹಾಗೂ ಅವನು ಇಬ್ಬರೂ ಪಾರ್ಕಿನಲ್ಲಿ ಕುಳಿತರು. ತಿಂಗಳ ಬೆಳಕು ಹಸಿರು ಹುಲ್ಲಿನ ಮೇಲೆ ಮೃದುವಾಗಿ ಹರಡಿತ್ತು. ಅವನ ಮನಸ್ಸು ವಿವಿಧ ಯೋಚನೆಗಳಿಂದ ತುಂಬಿತುಳುಕುತ್ತಿತ್ತು. ಮುಂದಿನ ಯೋಚನೆಯಿಂದ ಅವನ ಮನಸ್ಸು ದಣಿದಂತಾಗಿತ್ತು. ಸ್ನೇಹಿತ ತನ್ನಿಂದ ದೂರ ಹೋಗುತ್ತಾನೆ ಎಂದು ವ್ಯಥೆಯಾಗಿತ್ತು. ಅದರ ಜತೆ ''ಈ ಸ್ನೇಹಿತ ನನ್ನ ಬದುಕಿನಲ್ಲಿ ನನಗೆ ಎದುರಾಳಿಯಾಗಿ ಬರಲಿದ್ದಾನೆ. ಅವನು ದೂರ ಹೋದರೆ ನನ್ನ ದಾರಿ ನಿಷ್ಕಂಟಕ......''ಎಂಬ ಒಂದು ಬಗೆಯ ಆನಂದವೂ ಇತ್ತು. ಅವನ ಚಿತ್ರದಲ್ಲಿ ಒಮ್ಮೆಲೆ ಮಿಂಚು ಹೊಳೆದಂತಾಯಿತು. ಆ ಹುಡುಗಿ ಅಲ್ಲಿ ಅವನ ಹೃದಯದಲ್ಲಿ ಮೂಡಿದಳು. ಹಸಿರು ಹುಲ್ಲಿನ ಮೇಲೆ ಮುಗಿಲ ಕಡೆಗೆ ಮುಖಮಾಡಿ ಅವನು ಒರಗಿದ. ಮೈಗೆ ಸುಖವೆನಿಸಿತು. ಚಲನಚಿತ್ರದಲ್ಲಿಯ ಒಂದು ದೃಶ್ಯ ಅವನ ಕಣ್ಣೆದುರು ಸುಳಿಯಿತು. ಅವನು:

''ಕಿಸಿ ಚೀಜ್‌ಕೊ ಪಾನೆಕಿ ಆಶಾ ಕರನಾ ಔರ್ ಉಸೆ ನ ಪಾನಾ ಫಿರ್ ನ ಪಾನೆಕೆ ಕಾರಣ್ ಶರ್ಮ್ ಕಾ ಅನುಭವ ಕರನಾ ಇಸ್‌ಸೆ- ಮೈ ಅಪನೆ ಆಪಕೊ ಬಚಾಯೆ ರಖನಾ ಚಾಹತಾ ಹೂಂ.'' ಎಂಬ ವಾಕ್ಯವನ್ನು ಹೇಳಿದ.

ಸ್ನೇಹಿತ ಅದಕ್ಕೇನೂ ಉತ್ತರವನ್ನು ಕೊಡಲಿಲ್ಲ. ಅವನಿಗೆ ಉತ್ತರದ ಅಪೇಕ್ಷೆಯೂ ಇರಲಿಲ್ಲ. ಸಿನೇಮಾದಲ್ಲಿಯೇ ಉತ್ತರವಿತ್ತು. ಅವನಿಗೆ ಪ್ರಶ್ನೆಯ ಅರ್ಥವಾಗಿತ್ತು. ಚಲನಚಿತ್ರದಲ್ಲಿಯ ಉತ್ತರವನ್ನೇ ಅವನು ಬಯಸಿದ್ದ. ಅವನಿಗೆ ಬಯಕೆಯಿಂದ ಮುಕ್ತಿಯೂ ಬೇಕಿರಲಿಲ್ಲ. ವಿಫಲತೆಯ ಲಜ್ಜೆಯಿಂದ ವಿಮೋಚನೆಯೂ ಬೇಕಿರಲಿಲ್ಲ. ಆ ಹುಡುಗಿ ತನ್ನವಳಾಗಿರಬೇಕು. ಇದು ಅವನ ಬಯಕೆ. ಚಲನಚಿತ್ರ ಸುಖಾಂತವಾಗಿ ಮುಗಿದಂತೆ ತನ್ನ ಬದುಕಿನಲ್ಲಿ ಅದ್ಭುತ ಪರಿವರ್ತನೆಯಾಗಬೇಕೆಂದು ಅವನು ಆಶಿಸಿದ್ದ.

ಮರುದಿನ ಸಂಜೆ ಅವನ ಸ್ನೇಹಿತ ತನ್ನ ಊರಿಗೆ ಹೋದ. ಅವನು ಮನೆಗೆ ಬಂದು ಕಿಟಕಿ ಬಾಗಿಲನ್ನು ಮುಚ್ಚಿ ಸಿಗರೇಟನ್ನು ಹಚ್ಚಿದ. ಕಣ್ಣಿಗೆ ಜಂಪು ಹತ್ತಿತು. ಅವನ ಮೈ ಶಿಥಿಲವಾಯಿತು. ಹಿಡಿದುಕೊಂಡ ದೆವ್ವ ಬಿಟ್ಟು ಹೋದಹಾಗೆ ಆಯಿತು. ಸಿಗರೇಟಿನ ಧೂಮದಲ್ಲಿ ಸ್ವರ್ಗದಿಂದಿಳಿದು ಬಳುಕುತ್ತ ಬರುವ ಅಪ್ಸರೆಯಂತೆ ಆ ಹುಡುಗಿಯ ಚಿತ್ರ ಮೂಡಿತು.

``ಕಿಸೀಕೆ ಲಿಯೆ ಇಸಸೆ ಬಢಕರ್ ಔರ್ ಸಜಾ ಕ್ಯಾ ಹೋ ಸಕತಿ ಹೈ ಕಿ ಕಿಸೀಕೆ ಚಾಹತ್‌ಮ ತೊ ಜಲೆ ಪರ್ ಉಫ್‌ತರ್ ನ ಕರ.''

ಈ ಮಾತು ಅವನ ಬಾಯಿಗೆ ಬಂತು. ಸ್ನೇಹಿತನೊಡನೆ ಮುನ್ನಾದಿನ ನೋಡಿದ ಚಲನಚಿತ್ರದಲ್ಲಿ ನಾಯಕ ಈ ಮಾತನ್ನಾಡಿಯತ್ತಾನೆ.

ಮೂರು

ಕಾಲೇಜಿಗೆ ಸ್ನೇಹಿತನಿಂದ ಪತ್ರ ಬಂದಮೇಲೆ ಅವನಿಗೆ ತಿಳಿಯಿತು--ತನ್ನ ಸ್ನೇಹಿತ ಮುಂಬೈಗೆ ಹೋದನೆಂದು. ಈ ಮೊದಲೇ ಬೇಸಿಗೆಯ ಬಿಡುವಿನಲ್ಲಿ ಅವನು ತನ್ನ ಮನೆಗೆ ಹೋದಾಗ ತನ್ನ ವೇದನೆಗಳನ್ನೆಲ್ಲ ತಂದೆಯ ಮುಂದೆ ಸ್ಪಷ್ಟವಾಗಿ ತೋಡಿಕೊಂಡಿದ್ದ.

''ನೀನೆ ನನ್ನ ಭವಿತವ್ಯವನ್ನು ಹಾಳುಮಾಡಿದವ.''

ಅವನು ರೇಗಾಡಿದ್ದ.

ತಂದೆ ಮೊಟ್ಟಮೊದಲು ಸಲ ಮಗನೆದುರು ವಾದಿಸದೆ ನಿಂತ. ದೂರದಲ್ಲಿ ಗಾಬರಿಯಾಗಿ ತಂಗಿ ತಮ್ಮ ನಿಂತಿದ್ದರು. ಅವರಿಗೆ ತಮ್ಮ ಅಣ್ಣನ ವಿಷಯದಲ್ಲಿ ಒಂದು ಬಗೆಯ ಅದ್ಭುತ ಭಾವನೆಯುಂಟಾಯಿತು. ತಾಯಿ ಹೇಳಿದಳು:

''ಹಾಗೆಲ್ಲ ಅನ್ನಬಾರದು.''

ತಂದೆಗೆ, ಮನೆಯಲ್ಲಿ ತನ್ನ ವಿರುದ್ಧ ಒಳಸಂಚು ನಡೆದಿದೆ ಎಂಬುದು ಸ್ಪಷ್ಟವಾಗಿ ಗೋಚರಿಸಿತು. ತಾಯಿಗೆ ಅವನು ಹೇಳಿದ:

''ಎಂತೆಂತಹ ದಡ್ಡರು ಹೋಗಿದ್ದಾರೆ ಮುಂದೆ. ನನ್ನ ಸ್ನೇಹಿತ ಕನ್ನಡ ಶಾಲೆಯ ಶಿಕ್ಷಕನ ಮಗ - ಮುಂದೆ ಹೋದ. ಅವನು ಪರೀಕ್ಷೆಯಲ್ಲಿ ಪಾಸಾಗುವುದು ಕಠಿಣವಿತ್ತು. ನಾನು ಅವನಿಗೆ ಅಭ್ಯಾಸ ತಿಳಿಸಿಕೊಟ್ಟೆ.''

ತಾಯಿ ಹೇಳಿದಳು:

''ಮಾಡುವುದೇನು? ನಮ್ಮ ದೈವ ನಮ್ಮ ಸುತ್ತ.''

''ದೈವ! ದೈವ! ಯಾವಾಗ ನೋಡಿದರೂ ಇದೇ ಹಳೆಯ ಅಪಲಾಪ.''

''ಈಗ ಏನು ಮಾಡೆನ್ನುತ್ತೀ? ನಾನು ನನ್ನ ಕೈಲಾದುದನ್ನು ಮಾಡಿದೆ. ಎರಡು ವರ್ಷಗಳಂತೂ ಮುಗಿದವು. ಇನ್ನೆರಡು ವರ್ಷ ಕಳೆಯುವುದು ತಡವಲ್ಲ. ಇಷ್ಟು ವರ್ಷ ಕಾದಿದ್ದೇನೆ.''

''ಇನ್ನೆರಡು ವರ್ಷ ಕಲಿತರೆ ಆಗುವುದೇನು? ಮುಂದೆ ಎರಡು ವರ್ಷ ಕಲಿಯಬೇಕು.''

``ಆಗಲಿ ನನಗೆ ಇನ್ನು ನಾಲ್ಕು ವರ್ಷ ಕಾಯುವುದು ಬಹಳ ದೊಡ್ಡ ಮಾತಲ್ಲ.''

ತಾಯಿ ಹೆಮ್ಮೆಯಿಂದ ತನ್ನ ಮಗನನ್ನು ನೋಡಿದಳು.

``ನನಗೆ ಏನೂ ಬೇಕಿಲ್ಲ. ನಿನ್ನ ತಮ್ಮ ನಿನ್ನ ತಂಗಿ..........''

ಅವಳಿಗೆ ಮುಂದೆ ಮಾತನಾಡುವುದಾಗಲಿಲ್ಲ. ಅವನಿಗೆ ತನ್ನ ಸ್ಥಾನ ಅದ್ವಿತೀಯವೆನಿಸಿತು. ತನ್ನ ಕರ್ತೃತ್ವಶಕ್ತಿಗೆ ಇಲ್ಲೊಂದು ಆಹ್ವಾನವಿದೆ ಎನ್ನಿಸಿತು.

ಬಟ್ಟೆಯ ವಿಷಯದಲ್ಲಿ ಒಂದು ದೊಡ್ಡ ಅನಾಹುತವೇ ಸಂಭವಿಸಿತು.

``ಪಾಯಿಜಾಮಾ ಹಾಕಿಕೊಳ್ಳುವುದಿಲ್ಲ ಇನ್ನು ಮೇಲೆ.''

ಅವನು ತಾಯಿಗೆ ಹೇಳಿದ.

``ನಾನು ನನ್ನ ತಂದೆಯ ಮೇಲೆ ಅವಲಂಬಿಸಲೇ ಇಲ್ಲ. ನಾನು ಚಪ್ಪಲಿಯನ್ನು ಕೊಂಡದ್ದು ನಾನು ನೋಕರಿ ಮಾಡಹತ್ತಿದ ಮೇಲೆ.'' ತಂದೆ ತನ್ನ ಬಾಲ್ಯದ ಸಾಹಸವನ್ನು ಹೇಳಿದ.

``ನೀನು ಗಳಿಸಿದ ಮೇಲೆ ಬೇಕಾದರೆ ರೇಷ್ಮೆ ಬಟ್ಟೆ ತೊಡು.''

ತಾಯಿ ಹೇಳಿದಳು :

``ನೀನು ಪ್ಯಾಂಟಿಗಾಗಿ ಹಟ ತೊಡಬೇಡ.''

``ನಾನು ನನಗಾಗಿ ಹೇಳುತ್ತಿಲ್ಲ. ಕಾಲೇಜಿನ ವಾತಾವರಣ ನಿನಗೆ ಗೊತ್ತಿಲ್ಲ. ಒಂದು ದಿನ ನಾನು ಬಿಸಿನೀರಿನ ಸ್ನಾನ ಕಂಡಿಲ್ಲ. ಚಳಿಯಿರಲಿ ಮಳೆಯಿರಲಿ ಬೆಳಿಗ್ಗೆ ಆರರ ಒಳಗೆ -- ಮನೆಯವರು ಏಳುವ ಮುನ್ನ ನಾನು ಕಟಕಟ ನಡುಗುತ್ತ ಮೈಮೇಲೆ ಹೌದಿನಲ್ಲಿಯ ತಣ್ಣೀರು ಹುಯ್ದುಕೊಳ್ಳಬೇಕು. ತಿಂಗಳಿಗೆ ಹತ್ತು ರೂಪಾಯಿ ಕೊಟ್ಟರೆ ಕಾಲೇಜಿನಲ್ಲಿ ಹಾಸ್ಟೆಲ್‌ನಲ್ಲಿ ರಾಜಕುಮಾರನಂತೆ ಇರಬಹುದು. ಅಬ್ಬಾ, ನಿನ್ನ ಗೆಳತಿ ಇರಬಹುದು. ಏನು ಸೊಕ್ಕು ಅವರೆಲ್ಲರದು. ಅವರು ನನ್ನನ್ನು ಒಬ್ಬ ಮನುಷ್ಯ ಎಂದು ಗಣಿಸಿಯೇ ಇಲ್ಲ. ಆದರೂ ಇದನ್ನೆಲ್ಲ ಸಹನೆ ಮಾಡಿದೆ. ಯಾರಿಗಾಗಿ? ನಿಮಗಾಗಿ ಅಲ್ಲವೆ? ಮೇಲೆ ಅವರ ಉಪಕಾರ ಬೇರೆ. ಸರಿ ನೀವು ಉಳಿಸಿದ್ದೆಷ್ಟು? ಬರಿ ಹತ್ತು ರೂಪಾಯಿ. ಬೇನೆ ಬಂದರೆ ಕೇಳುವವರಿಲ್ಲ. ಎಷ್ಟು ದೂರ ಕಾಲೇಜಿನಿಂದ. ಬೈಸಿಕಲ್ ಇಲ್ಲ. ಬಸ್ಸಿಗೆ ದುಡ್ಡೂ ಇಲ್ಲ. ಮೊನ್ನೆ ಮೊನ್ನೆ ಅವರ ಮನೆಯ ಆಳೂ ನನಗೆ ಕೆಲಸ ಹೇಳಿದ.''

ತಾಯ ಮನಸ್ಸು ನೊಂದಿತು.

''ನಿಮಗೆ ತಿಂಗಳಿಗೆ ಐವತ್ತು ರೂಪಾಯಿಗಳನ್ನು ಕೊಡುವ ತ್ರಾಣವಿಲ್ಲವೆ? ಅಭ್ಯಾಸವನ್ನು ಬಿಟ್ಟು ನಾನು ಕಂಡವರ ಮನೆಗೆ ಅಲೆದು ಟ್ಯೂಷನ್ ಮಾಡಿ ದುಡ್ಡು ಗಳಿಸಬೇಕು. ನಾನೇನು ಹೊರಗಿನವನೆ? ಮುಂದೆ ನನ್ನ ಗಳಿಕೆಯೆಲ್ಲ ನಿಮ್ಮದೇ ಅಲ್ಲವೆ?''

'' ನೀನು ಈ ಸಲ ಹಾಸ್ಟೆಲಿನಲ್ಲಿರುವಂತೆ ಮಾಡುತ್ತೇನೆ.''

''ಇನ್ನೇನು ಮಾಡುತ್ತೀರಿ. ಒಂದು ತಿಂಗಳು ಮೊದಲೇ ತಿಳಿಸಬೇಕು. ನಾನಿದೊಂದು ವರ್ಷ ಸಹಿಸುತ್ತೇನೆ. ಆದರೆ ನನಗೆ ಪ್ಯಾಂಟ್ ಇಲ್ಲದೆ ಕಾಲೇಜಿಗೆ ಹೋಗುವುದೇ ಸಾಧ್ಯವಿಲ್ಲ. ಕಾಲೇಜಿಗೆ ಚಪ್ಪಲಿ ಹಾಕಿಕೊಂಡು ಹೋಗುವ ಮನಸ್ಸಿಲ್ಲ.''

''ಆಗಲಿ ಪ್ಯಾಂಟನ್ನೇ ಹೊಲಿಸಿಕೊ.''

''ನೀನು ಹೇಳಿದರೇನು ಬಂತು?''

ತಂದೆ ಮಗನ ಕೈಯಲ್ಲಿ ನೂರೈವತ್ತು ರೂಪಾಯಿಗಳನ್ನು ಕೊಟ್ಟ. ಅವನಿಗೆ ಆಶ್ಚರ್ಯ ಎನ್ನಿಸಿತು. ತನ್ನ ಜೀವನದಲ್ಲಿ ಮೊದಲನೆಯ ಸಲ ತನ್ನ ಇಚ್ಛೆಯಂತೆ ಬಟ್ಟೆ ಕೊಳ್ಳಲಿದ್ದಾನೆ. ಹಾಸ್ಟೆಲ್‌ನಲ್ಲಿ ಇರುವ ವ್ಯವಸ್ಥೆ ತಪ್ಪಿದರೂ ಮೇಲು ಖರ್ಚಿಗೆಂದು ತಿಂಗಳಿಗೆ ಹತ್ತು ರೂಪಾಯಿಗಳನ್ನು ಕಳಿಸುವುದಾಗಿ ತಂದೆ ಹೇಳಿದ. ಹೀಗೇಕೆ? ಎಂದು ತನ್ನಲ್ಲಿ ತಾನೇ ಅವನು ಪ್ರಶ್ನೆ ಕೇಳಿಕೊಂಡ. ಬಹುಶಃ ತಂದೆ ತನ್ನ ಪ್ರೇಮಸಂಪಾದನೆಗಾಗಿ ಯತ್ನಿಸುತ್ತಿದ್ದಾನೆ ಎಂದು ಊಹಿಸಿದ. ಆದರೂ ಈ ವರ್ಷ ಕಳೆದ ವರ್ಷಕ್ಕಿಂತ ಸುಖಕರವಾಯಿತೆಂದು ಭಾವಿಸಿದ. ತಾಯಿಯ ಗೆಳತಿಯ ಮನೆಯಲ್ಲಿಯೇ ಇದೊಂದು ವರ್ಷವನ್ನು ಕಳೆಯುವುದಾಗಿ ನಿರ್ಧರಿಸಿದ.

ಭೌತಶಾಸ್ತ್ರ, ಗಣಿತ, ರಸಾಯನಶಾಸ್ತ್ರ ಮೂರೇ ವಿಷಯ. ಕಾಲೇಜಿನ ಸಮಸ್ಯೆ ಈ ವರುಷವೂ ಇರಲಿಲ್ಲ. ಸ್ನೇಹಿತನೊಬ್ಬ ಇರಲಿಲ್ಲ. ಅವನಿಗೆ ಏಕಾಕಿಯಾಗಿರುವುದು ಒಪ್ಪಿಗೆಯಾಗಲಿಲ್ಲ. ಏಕೊ? ಅವನಿಗೆ ತಾನೆಂದೊ ಕಲಿತ ಸಂಸ್ಕೃತ ಶ್ಲೋಕ ನೆನಪಾಯಿತು. ಅದರಲ್ಲಿಯ ಮೂರು ಶಬ್ದಗಳನ್ನು 'ಪಂಡಿತಾ ವನಿತಾ ಲತಾ' ಎಂದು ಉಚ್ಚರಿಸಿದ. ಮತ್ತೊಮ್ಮೆ 'ವನಿತಾ ಲತಾ' ತನ್ನಷ್ಟಕ್ಕೆ ತಾನೇ ಹೇಳಿಕೊಂಡ. ಮನಸ್ಸು ಎಲ್ಲೆಲ್ಲಿಯೋ ಹೋಯಿತು. ಕೆರೆಯ ದಂಡೆಯ ಮೇಲೆ ನಿಂತ ಬಾಲಕರು ಕಲ್ಲೆಸೆದಾಗ ಕಪ್ಪೆ ಗುಂಪಾಗಿ ಜಿಗಿಯುವಂತೆ ಈ ಪದ

ಪುಂಜದಿಂದ ಅವನ ಮನಸ್ಸಿನಲ್ಲಿ ನೂರಾರು ಸ್ಮೃತಿಗಳು ಸದ್ದು ಮಾಡಿದವು.

ಒಂದೊಂದು ಸಲ ಕೆರಳಿದ ಕಾಮ ಒಂದು ಬಗೆಯ ಸುಖದ ಸಾಗರದಲ್ಲಿ ತೇಲಿಸಿದರೆ ಇನ್ನೂ ಒಮ್ಮೊಮ್ಮೆ ಕೆಂಡದಂತೆ ಪ್ರಜ್ವಲಿಸಿ ಸುಡುತ್ತಿತ್ತು. ಒಂದು ಕ್ಷುಲ್ಲಕ ಸಂಗತಿಯೂ ಅವನಲ್ಲಿ ಈ ವಾಸನೆಯನ್ನು ಜಾಗೃತಗೊಳಿಸುತ್ತಿತ್ತು. ಮಧ್ಯಾಹ್ನದ ಬಿಸಿಲಲ್ಲಿ ಒಂದೂ ಮೋಡಗಳಿಲ್ಲದ ಕಟು ನೀಲ ಗಗನದೆದೆಯನ್ನೇರಿ ರಮಿಸುವ ಹದ್ದಿನಂತಾಗುತ್ತಿತ್ತು. ಒಮ್ಮೊಮ್ಮೆ ಅವನ ಮನಸ್ಸು,

ಈ ಸಲ ಅವನು ಸ್ವಲ್ಪ ನಿರ್ಭಯನಾಗಿಯೇ ಬಂದ. ಅವನನ್ನು ಬೇರೆ ಬಗೆಯ ಬದುಕಿನ ರುಚಿ ಸೆಳೆಯಿತು. ಸಿಗರೇಟು ತೆಗೆದುಕೊಂಡು ಸೀಮಾರೇಖೆಯನ್ನು ದಾಟಿ ನಿಂತ. ಒಂದು ಗುಂಪು ಅವನ ಕಣ್ಣನ್ನು ಸೆಳೆಯಿತು.

''Excuse me'' ಎಂದು ಸಂಭಾಷಣೆಯನ್ನು ಆರಂಭಿಸಿದ. ಅವರಿಂದ ಕಡ್ಡಿಯನ್ನು ತೆಗೆದುಕೊಂಡು '' Thank you'' ಹೇಳಿದ.

ಆ ಗುಂಪಿನ ನಾಯಕ ಸಿನೆಮಾ ಥಿಯೇಟರಿನ ಮಾಲಿಕನ ಮಗ. ಹಿಂದೊಮ್ಮೆ ಟ್ರಿಪ್ಪಿಗೆ ಹೋದಾಗ ಅವನು ಸಿನೆಮಾ ಥಿಯೇಟರಿನ ಮಾಲಿಕನ ಮಗನನ್ನು ನೋಡಿದ್ದ. ಆ ಗುಂಪಿನಲ್ಲಿ ಆರೆಂಟು ಜನರಿದ್ದರು. '' ನಾನೇಕೆ ಸೇರಿಕೊಳ್ಳಬಾರದು ಇವರಲ್ಲಿ? ಈ ದಿನವೂ ಅವನ ಮೈಮೇಲಿನ ಬಟ್ಟೆ ಹಳೆಯವೇ ಇದ್ದವು. ಇನ್ನು ಒಂದೇ ವಾರದಲ್ಲಿ ಹೊಸ ಬಟ್ಟೆ. ಎಂತಹ ಬಟ್ಟೆಯನ್ನು ಆರಿಸುವುದು? ಎಲ್ಲಿ ಹೊಲಿಸುವುದು? ಇದಕ್ಕಾಗಿ ಆ ಗುಂಪಿನಲ್ಲಿಯ ಒಬ್ಬರ ಸ್ನೇಹವನ್ನು ಮಾಡುವದಾಗಿ ನಿರ್ಧರಿಸಿದ.

ತುಸು ಹೊತ್ತಿನಲ್ಲಿ ಗುಂಪು ಕ್ಯಾಂಟಿನಿಗೆ ಹೋಯಿತು. ಅವನೂ ಸ್ವತಂತ್ರವಾಗಿ ಒಳಗೆ ಹೋದ. ಅವರು ಆಮ್ಲೆಟ್ ತರಿಸಿದರು. ನಿಸ್ಸಂಕೋಚವಾಗಿ ಅವರು ಮನಸ್ಸಿಗೆ ಬಂದಂತೆ ಹರಟೆಹೊಡೆಯುತ್ತ ಕುಳಿತಿದ್ದರು. ನಾಯಕ ಹತ್ತಾರು ಚಿತ್ರಗಳನ್ನು ತೆಗೆದು ಉಳಿದವರ ಮುಂದೆ ಹಿಡಿಯುತ್ತಿದ್ದ. ಉಳಿದವರು ನೋಡಿ ಮತ್ತೆ ನಾಯಕನ ಅಭಿಪ್ರಾಯಕ್ಕೆ ತಲೆಹಾಕಿ ಉತ್ಸಾಹವನ್ನು ಪ್ರದರ್ಶಿಸುತ್ತಿದ್ದರು. ಮಾಣಿ ಅವನ ಹತ್ತಿರ ಬಂದ. ಅವನೂ ಆಮ್ಲೆಟ್ ತರ ಹೇಳಿದ. ಅವನ ಕಿವಿಯಲ್ಲಿ ಗುಂಪಿನ ಕೇಕೆ ಹರ್ಷ ಜೀವನೋತ್ಸಾಹ ನುಗ್ಗಿತು. ತಾನೂ ಅವರೊಡನೆ ಸೇರಬೇಕು. ಅವರ ಮಾತುಗಳಲ್ಲಿಯ ಕೆಲವಾರು ಮಾತುಗಳು ಅರ್ಥವಾಗುತ್ತಿರಲಿಲ್ಲ. N2 ಎಂದರೆ ಏನೊ?

''ಇಲ್ಲಿ ನೋಡು'' ನಾಯಕ ಹೇಳಿದ.

''ಮಾರ್ವೆಲಸ್'' ಕೂಗಿದರು ಉಳಿದವರು!

ಚಿತ್ರಗಳು ಹುಡುಗಿಯರವಿರಲೇಬೇಕು. ಅವುಗಳನ್ನು ನೋಡುವ ಕುತೂಹಲ. ಹೌದು ಜೀವನದ ಪ್ರತಿಯೊಂದು ಕ್ಷಣದ ತೊಟ್ಟನ್ನು ಅವರು ಸವಿಯುತ್ತಿದ್ದಾರೆ ಎಂದೆನಿಸಿತು.

ಕಾಲೇಜದಲ್ಲಿ ಇಲೆಕ್ಶನ್‌ದ ಗೊಂದಲ ಏಳಲಿತ್ತು. ಈಗಾಗಲೇ ಅವನು ಗುಂಪಿನಲ್ಲಿ ಸೇರಿಕೊಂಡಿದ್ದಾನೆ. ತನ್ನ ವ್ಯಕ್ತಿತ್ವಕ್ಕೆ ಒಂದು ಹೊಸ ತೂಕ ಬಂದು ಸೇರಿಕೊಂಡಿದೆ ಎಂದು ಅವನಿಗೆ ಎನಿಸುತ್ತದೆ. ಈಗ ಅವನು ಬೀದಿಯಲ್ಲಿ ಅಡ್ಡಾಡುವ ಯಾರೂ ಕೇಳುವವರಿಲ್ಲದ ಬೀಡಾಡಿ ನಾಯಿ ಅಲ್ಲ. ಗುಂಪಿನ ಉಪನಾಯಕನ ಮರ್ಜಿ ಅವನ ಮೇಲಿದೆ. ಉಪನಾಯಕನ ನೇತೃತ್ವದಲ್ಲಿ ಪ್ಯಾಂಟ್ ಶರ್ಟುಗಳ ಬಟ್ಟೆಗಳ ಆಯ್ಕೆ ಮಾಡಿ ಸೈಂಟಿಫಿಕ್ ಟೇಲರಿಂಗ್ ಫರ್ಮಿನಲ್ಲಿ ಅವುಗಳನ್ನು ಹೊಲಿಸಿಕೊಂಡಿದ್ದಾನೆ. ಉಪನಾಯಕ ಮೊದಲ ಸಲ ಅವನನ್ನು ತುಂಬ ಹೆದರಿಸಿದ್ದ:

''ನೀನೇನೋ ನಮ್ಮ ಸ್ನೇಹಿತನಾಗಬಹುದು. ಆದರೆ ಅದು ತುಂಬ ಕಷ್ಟದ್ದು.''

ಈ ಮಾತಿಗೆ ಅವನು ಕಕ್ಕಾಬಿಕ್ಕಿಯಾದ.

''ಇದೆಲ್ಲ ಹಣವಿದ್ದವರಿಗೆ ಮಾತ್ರ ದಕ್ಕುವ ಸಂಗತಿ.''

ಅವನ ಮುಖದ ಮೇಲೆ ನಿರಾಶೆಯ ನೆರಳು ಕವಿಯಿತು.

''ಆದರೂ ನಾನು ನಿನ್ನನ್ನು ಸೇರಿಸಿಕೊಳ್ಳುತ್ತೇನೆ.''

ಇಬ್ಬರೂ ಹೋಟೆಲಿಗೆ ಹೋದರು. ಉಪನಾಯಕನು ಅವನ ದೀಕ್ಷಾವಿಧಿಯನ್ನು ನೆರವೇರಿಸಿದ. ಮಧ್ಯೆ ಮಧ್ಯೆ ಅವನು ಉಪನಾಯಕನನ್ನು ಕೆಲವಾರು ಪ್ರಶ್ನೆಗಳನ್ನು ಕೇಳಿ ಅವನ ಹಿನ್ನೆಲೆ ತಿಳಿದುಕೊಂಡ. ಅವನು ನಾಯಕನ ಮನೆಗೆ ಹೋಗಿ ಬಂದ. ಅಬ್ಬಾ ! ಏನವನ ಕೋಣೆ. ನಿಲುವುಗನ್ನಡಿಗಳೇನು ! ಬಟ್ಟೆ ಒಂದೇ ಎರಡೆ ? ನೂರಾರು ತರಹ. ಆ ಫರ್ನಿಚರ, ನೆಲಕ್ಕೆ ಹಾಸಿದ

ಲಿನೋಲಿಯಮ್, ಫಿಲ್ಮ್‌ಫೇರ್, ಸ್ಕ್ರೀನ್ ಮೊದಲಾದ ಸಿನೆಮಾ ಪತ್ರಿಕೆಗಳು. ಕಾದಂಬರಿಗಳ ಸಂಗ್ರಹ. ಟ್ರಾಂಜಿಸ್ಟರ್. ಒಟ್ಟಾರೆ ಅವನು ಎಂದೂ ನೋಡಿರದಂತಹ ಯಕ್ಷಲೋಕವನ್ನು ಪ್ರವೇಶಿಸಿದ್ದ. ಇವನನ್ನು ಯಾರು ಕೇಳುವವರಿಲ್ಲವೆ? ಎಷ್ಟು ವೆಚ್ಚ ಇವನದು? ಟೆರಿಲಿನ್, ಡೆಕ್ರಾನ್, ಉಲನ್, ರೇಶ್ಮೆ ಎಷ್ಟು ಬಟ್ಟೆಗಳು ! ಕೌಬಾಯ್ ಜೀನ್, ಬುಶ್‌ಶರ್ಟ್, ಬುಶ್‌ಕೋಟ್ ನೂರಾರು. ಇವನ ಬದುಕು ಸಾರ್ಥಕ ಎನ್ನಿಸಿತು. ತಂದೆಯು ಈ ವೆಚ್ಚವನ್ನು ಹೇಗೆ ಸಹಿಸುತ್ತಾರೆ? ಇವನಿಗೆ ಸೈಕಲ್, ಸ್ಕೂಟರ್ ಕಾರೊಂದು ಮೇಲೆ. ಕಾಲೇಜಿಗೆ ಒಬ್ಬ ರಾಜಕುಮಾರನಂತೆ ಬರುತ್ತಾನೆ. ಸುತ್ತ ಹತ್ತು ಜನರ ತಂಡ. ಹುಡುಗಿಯರ ಜತೆ ತುಂಟ ಸಲುಗೆ. ''ನಾನು ಇವನಿಗಿಂತಲೂ ಮೇಲು. ನನ್ನ ತಂದೆ ನನಗೆ ಅನುಕೂಲತೆ ಮಾಡಿಕೊಡಬೇಕಿತ್ತು. ಆದುದರಿಂದಲೇ....'' ಹೀಗೆ ಎಚ್ಚರಿಲ್ಲದ ಕುಡುಕನ ವಿಚಾರಸರಣಿಯಂತೆ ಅವನ ತೂಕ ತಪ್ಪುತ್ತಿತ್ತು.

ಪ್ರವೇಶವಂತೂ ಆಯಿತು - ಆ ಗುಂಪಿನಲ್ಲಿ. ವಾರಕ್ಕೊಂದು ಸಲ ಮಾಂಸಾಹಾರವನ್ನು ಮಾಡಹತ್ತಿದ. ತನಗೆ ಎರಡೇ ಸಂಗತಿಗಳ ಕೊರತೆಯಿದೆ. ಒಂದು ಹಣ, ಇನ್ನೊಂದು.... ಎರಡೇನು? ಒಂದೇ ಸಂಗತಿ. ಹಣ ಒಂದಿದ್ದರೆ ಸಾಕು. ಬೇರೆ ಏನನ್ನೂ ತರಬಲ್ಲೆ. ತರಬಲ್ಲೆ ಎಂದೊಡನೆ ಅವನ ಮನದಲ್ಲಿ ಮಿಂಚಿದ್ದು ಆ ಹುಡುಗಿ. ಹಣವಿದ್ದರೆ.... ಎಳೆದು ತರುತ್ತಿದ್ದೆ ಅವಳನ್ನು. ಅವನಿಗೆ ತಾನು ಬೆಳೆದ ಸಂಸ್ಕೃತಿಯ ವಿಷಯದಲ್ಲಿಯೇ ಜಿಗುಪ್ಸೆ ಹುಟ್ಟಿತು.

''ಮಾಂಸವನ್ನು ಏಕೆ ತಿನ್ನಬಾರದು?'', ಹಿಂದೊಮ್ಮೆ ಸ್ನೇಹಿತನನ್ನು ಕೇಳಿದ್ದ.

''ತಿನ್ನಬಾರದು ಎಂದು ಯಾರು ಹೇಳಿದರು?''

''ನೀನೇಕೆ ತಿನ್ನುವುದಿಲ್ಲ?''

''ಆ ಮಾತು ಬೇರೆ. ಬೇಕಾದರೆ ನೀನು ತಿನ್ನಬಹುದು.''

ಈಗ ಅವನಿಗೆ ಆ ಸ್ನೇಹಿತನ ಮೇಲೆ ಕೋಪ ಬಂತು. ಸ್ನೇಹಿತ ನೆರಳಿನಂತೆ ಇದ್ದ. ಪ್ರತಿರೋಧವೇ ಇಲ್ಲ '' ನಮ್ಮ ದೇಶ ಮುಂದೆ ಬರಬೇಕಾದರೆ ಮಾಂಸಾಹಾರವನ್ನು ರಾಷ್ಟ್ರೀಯ ಧರ್ಮವನ್ನಾಗಿ ಮಾಡಿಕೊಳ್ಳದೆ ಬೇರೆ

ದಾರಿಯಿಲ್ಲ'' ಎಂಬ ನಿರ್ಧಾರಕ್ಕೆ ಬಂದ. ಒಂದೆರಡು ಸಲ ಇಸ್ಪೀಟನ್ನೂ ಆಡಿದ. ಆದರೆ ಕೈ ಸುಟ್ಟುಕೊಂಡ. ಅವನ ದೈವ ಒಳ್ಳೆಯದು. ಹತ್ತೇ ರೂಪಾಯಿಗಳನ್ನು ಕಳೆದುಕೊಂಡ. ಅವನ ಮನಸ್ಸಿನಲ್ಲಿ ಈಗ ಬದುಕನ್ನು ಕುರಿತು ಒಂದು ತಿಳಿವು ಬಂದಿದೆ.

'ಸಿನೆಮಾ' ಎಂಬ ಇಂಗ್ಲಿಶ್ ಪತ್ರಿಕೆಯಲ್ಲಿ ಒಂದು ಪ್ರಶ್ನೆ: ''ನಾನು ನೂರು ವರುಷ ಬದುಕಬೇಕೆಂಬ ಆಸೆ - ಬದುಕುವೆನೆ?''

ಅದಕ್ಕೆ ಪ್ರತಿಪ್ರಶ್ನೆ:

''ಕುಡಿಯುತ್ತೀಯ ?''

''ಇಲ್ಲ.''

''ಹೆಣ್ಣುಗಳ ಬೆನ್ನು ಹತ್ತಿದ್ದೀಯಾ?

''ಇಲ್ಲ.''

''ನಿದ್ದೆಗೆಡುತ್ತೀಯಾ?''

''ಇಲ್ಲ.''

''ಹಾಗಾದರೆ ಬದುಕುವದಾದರೂ ಯಾತಕ್ಕೆ?''

ಎಂತಹ ಸುಂದರ ಉತ್ತರ! ಇದೇನೂ ಇಲ್ಲದೆ ಬದುಕಿ ಮಾಡುವದೇನು? ನಾನು ಬದುಕಬೇಕು. ಆದರೆ ನೀರಸವಾಗಿ ಅಲ್ಲ.

ಆ ಗುಂಪಿನಲ್ಲಿ ಹೊತ್ತುಹೋದದ್ದೇ ತಿಳಿಯುತ್ತಿರಲಿಲ್ಲ. ಜೋಕು ದಿನವೂ ಹೊಸ ಹೊಸವು. ಕಾಲೇಜದ ಹುಡುಗಿಯರ ಕುರಿತು ಮಾತಾಡುವುದರಲ್ಲಿ ಎಷ್ಟು ಆಸಕ್ತಿ. ಅವನ ಮನಸ್ಸು ಈಗ ಒಂದು ಬಗೆಯಲ್ಲಿ ಹಗುರಾಗಿದೆ. ಆದರೆ ನಡುನಡುವೆ ಅವನ ದೌರ್ಬಲ್ಯ ಅವನನ್ನು ದುಃಖಕ್ಕೀಡುಮಾಡುತ್ತಿದೆ. ಅವರೆಲ್ಲರೂ ಕ್ರಿಕೆಟ್ ಪಂದ್ಯ ನೋಡಲು ಮುಂಬೈಗೆ ಹೋದರು. ತನಗೂ ಹೋಗಬೇಕೆಂಬಾಸೆ. ಆದರೆ ಕೈಯಲ್ಲಿ ಹಣವಿಲ್ಲ. ಸ್ನೇಹಿತರ ಕಡೆಯಿಂದ ತೆಗೆದುಕೊಳ್ಳುವದೆ? ಕೊಡುವವರಾರು? ಕೊಟ್ಟರೂ ಮುಟ್ಟಿಸುವ ಬಗೆ ಹೇಗೆ? ಮೇಲಿಂದ ಮೇಲೆ ನಾಯಕ ತನಗೆ ಬಯ್ಯುತ್ತಿರುತ್ತಾನೆ:

''ನೀನು ಹುಟ್ಟಿದ್ದಾದರೂ ಏಕೆ? Fool ಈಗಲಾದರೂ ಏನಾಯಿತು ಬೇಗನೇ ಕಣ್ಣು ಮುಚ್ಚಿಕೊ. ಏನು ನಿನಗೆ ಸುಖವಿದೆಯೆಂದು ಬದುಕಿದ್ದೀ.''

ಒಂದೆರಡು ಸಲ ಬೇಜಾರಾಯಿತು. ಇನ್ನುಮೇಲೆ ಅವನ ಕಡೆಗೆ ಹೋಗಬಾರದು ಎನ್ನಿಸಿತು. ಆದರೆ ಕೇಳಲಿಲ್ಲ. ಹೋಗಬೇಕು ಹೋಗಬಾರದು ಎಂಬ ದ್ವಂದ್ವದಲ್ಲಿಯೇ ಅವರ ಕೋಣೆಗೆ ಹೋದ.

''ರಮಿ ಆಡುತ್ತೀಯೇನೊ?''

ಅವನು ಉತ್ತರ ಕೊಡಲಿಲ್ಲ.

''ಓ, ನೀನೊ! ನಾನು ತಪ್ಪಿದೆ. ಇಂತಹ ಮಾತನ್ನೆಲ್ಲ ಗಂಡಸರನ್ನು ಕೇಳ ಬೇಕು. ಲೋ. ಶಿಖಂಡಿಯನ್ನೇಕೆ ಸೇರಿಸಿಕೊಂಡೆಯೊ ಈ ಗುಂಪಿನಲ್ಲಿ?''

''ಇಲ್ಲೇಕೆ ಬಂದೆಯಾ? ಹೂಬತ್ತಿ ಹೊಸೆಯಲೆಂದೊ?''

ಇಂತಹ ಮಾತುಗಳನ್ನು ಕೇಳಿ ಕೇಳಿ ಅವನಿಗೂ ದಡ್ಡುಬಿತ್ತು. ನಾಯಕ ತನಗೊಬ್ಬನಿಗೆ ಬಯ್ಯುತ್ತಾನೆಂದಲ್ಲ. ಗುಂಪಿನಲ್ಲಿಯ ಎಲ್ಲರಿಗೂ ಬಯ್ಯುತ್ತಾನೆ. ಅವರೆಲ್ಲ ನಗುತ್ತಾರೆ.

ಈ ಗೊಂದಲದಲ್ಲಿ ಅಭ್ಯಾಸ ನಿಂತುಹೋಗಿತ್ತು. ರೂಮಿಗೆ ಬರಲು ಒಂದೊಂದು ದಿನ ತಡವಾಗುತ್ತಿತ್ತು. ರಾತ್ರಿ ಹನ್ನೊಂದು ಗಂಟೆಯವರೆವಿಗೂ ತಡವಾದದ್ದುಂಟು. ತಾಯಿಯ ಗೆಳತಿ ಕೇಳಿದಳು:

''ಏನಪ್ಪ, ನಿನ್ನೆ ರಾತ್ರಿ ತುಂಬ ತಡವಾಗಿ ಬಂದೆ? ಎಲ್ಲಿಗೆ ಹೋಗಿದ್ದೆ?''

ಇವನ ಗಂಟಲು ಒಣಗಿತು.

''ಗಣಿತದ ಅಭ್ಯಾಸಕ್ಕೆ ಹೋಗಿದ್ದೆ'' ನಾಲಿಗೆ ಒಣಗಿ ಬಂದಿದ್ದರೂ ಹೇಗೋ ಹೇಳಿದ.

''ನೋಡು ಗೆಳತಿಯ ಮಗ ಎಂದು ನಿನಗೆ ನಾನು ಸ್ಥಳ ಕೊಟ್ಟಿದ್ದೇನೆ. ನೀನು ಸರಿಯಾಗಿ ನಡೆದುಕೊಂಡರೆ ನನಗೂ ಮನೆಯಲ್ಲಿ ಏನೂ ಎನ್ನುವುದಿಲ್ಲ. ಹೀಗೆಲ್ಲ ಮಾಡಿದರೆ ನನಗೆ...''

ಹೀಗೆಲ್ಲ ಎಂದರೇನು? ಹೀಗೆಲ್ಲ ಮಾಡಿದರೆ ಏನು ಮಾಡುತ್ತಾಳೆ? ಬಹಳವಾದರೆ ಮನೆಬಿಟ್ಟು ಹೋಗು ಎನ್ನಬಹುದು. ಎನ್ನಬಹುದೆ? ಹಾಗೆ ಹೇಳಿದರೆ...? ಇರಲು ಸ್ಥಳವೇ ಇಲ್ಲ. ಹೊರಗೆ ಹಾಕಿದರೆ ಮಾಡುವದೇನು? ಹೌದು ಇನ್ನು ಮೇಲೆ ಹೋಗಬಾರದು. ಹೀಗೆ ನಿರ್ಧರಿಸಿ ಮಲಗುತ್ತಿದ್ದ. ಆದರೆ ಮರುದಿನ ಎದ್ದು ಮತ್ತೆ ಹೋಗುತ್ತಿದ್ದ.

ಎಲೆಕ್ಶನ್ನಿಗೆ ನಿಲ್ಲಬೇಕೆಂದು ಅವನಿಗೆ ಆಸಕ್ತಿ. ಸಹಜ ಒಂದು ದಿನ ಉಪನಾಯಕನನ್ನು ಕೇಳಿದ:

''ನೀನು ಎಂದಾದರೂ ಎಲೆಕ್ಶನಿಗೆ ನಿಂತು ಆರಿಸಿ ಬಂದೆಯಾ?''

''ನಿಂತರೆ ತಾನೇ ಆರಿಸಿ ಬರುವ ಮಾತು?''

''ನಿಲ್ಲುವದಿಲ್ಲವೇ''

ಅವನ ಮುಖ ಬಾಡಿತು.

''ನಾನು ಕೇಳಿದ್ದು ತಪ್ಪಾಯಿತೇ? ತಪ್ಪಾಗಿದ್ದರೆ ಕ್ಷಮಿಸು.''

''ತಪ್ಪೇನಿಲ್ಲ. ನಾನು ಯಾವುದೋ ಒಂದು ವಿಷಮ ಸನ್ನಿವೇಶದಲ್ಲಿ ಈ ಶ್ರೀಮಂತನೊಡನೆ ಸ್ನೇಹ ಮಾಡಿಕೊಂಡೆ. ಅದು ನನ್ನನ್ನು ಪೂರ್ತಿ ಹಾಳು ಮಾಡಿದೆ. ನೀನೂ ಗುಂಪಿನಲ್ಲಿ ಸೇರುತ್ತಿ ಎಂದಾಗ ನಿಜವಾಗಿ ನನಗೆ ವ್ಯಥೆಯಾಯಿತು.''

''ವ್ಯಥೆಯೇನು ಬಂತು?''

''ಇಲ್ಲಿ ಸಾಧಿಸಿದ ಸುಖವಾದರೂ ಏನಿದೆ? ನೀನೇ ನೋಡುತ್ತೀಯಲ್ಲ. ಈ ತುಘಲಕನ ಛಂದೋನುವರ್ತಿಯಾಗಿರಬೇಕಾಯಿತು. ಇವನು ನಕ್ಕರೆ ನಗಬೇಕು. ನಮಗೇ ನಗುವ ಹಕ್ಕು ಇದೆಯ?''

''ನಿನಗೆ ತುಂಬ ಬೇಸರ ಬಂದಿದೆಯೇ?''

''ನಿನಗೆ ಬಂದಿಲ್ಲವೆ?''

''ಈ ಮಾತಿಗೆ ಏನು ಹೇಳಬೇಕೊ ತಿಳಿಯಲಿಲ್ಲ ಅವನಿಗೆ. ಕೈಯಲ್ಲಿಯ ಸಿಗರೇಟು ಧಗಧಗಿಸುತ್ತಿತ್ತು.

''ಏಕೆ ಸುಮ್ಮನಾದೆ?''

''ಏನು ಹೇಳಬೇಕೊ ತಿಳಿಯಲಿಲ್ಲ ನನಗೆ.''

''ಇರಲಿ. ಆದರೆ ನೀನು ನನ್ನವನೆಂದು ನಿನ್ನಲ್ಲಿ ತೋಡಿಕೊಂಡದ್ದನ್ನು ಪಾಳೆಯಗಾರನೆಂದು ಮಾತ್ರ ಹೇಳಬೇಡ.'' ಎಂತಹ ದೈನ್ಯವಿತ್ತು ಉಪನಾಯಕನ ಧ್ವನಿಯಲ್ಲಿ.

''ನಾನೇಕೆ ಹೇಳಲಿ?''

``ನಮ್ಮ ಆಳವು ಮೀರಿ ನಾವು ಉದ್ದ ನೀರಿನಲ್ಲಿ ಹೋಗಬಾರದಾಗಿತ್ತು.''

``ನಾವು ಹೋದ ನೀರು ಉದ್ದ ಎಂದರೇನು? ಸಿಗರೇಟು ಸೇದಬಾರದೆಂದೆ? ಮಾಂಸಾಹಾರ ಮಾಡಬಾರದೆಂದೆ? ಸೇದಿದರೆ ಏನು ತಪ್ಪು? ಮಾಂಸ ತಿಂದರೆ ಏನು ತಪ್ಪು? ಎಷ್ಟು ಜನ ಸೇದುವುದಿಲ್ಲ? ಎಷ್ಟು ಜನ ತಿನ್ನುವುದಿಲ್ಲ? ಎಷ್ಟು ಜನ ತಿನ್ನುವುದಿಲ್ಲ ? ಇಂಗ್ಲಂಡ ಅಮೇರಿಕ, ರಶಿಯ ಮೊದಲಾದ ಮುಂದುವರಿದ ದೇಶಗಳಲ್ಲಿ ಎಷ್ಟು ಮುಂದುವರಿದಿದ್ದಾರೆ ವಿದ್ಯಾರ್ಥಿ ವಿದ್ಯಾರ್ಥಿನಿಯರು. ಹಾಗೆ ನೋಡಿದರೆ ಎಂತಹ ದುರ್ಭಾಗ್ಯ ನಮ್ಮದು. ಮೊನ್ನೆ ನೋಡಲಿಲ್ಲವೆ ಆ ಪತ್ರಿಕೆಯಲ್ಲಿನ ಚಿತ್ರ.''

ಉಪನಾಯಕ ಮಾತನಾಡಲಿಲ್ಲ.

``ನಮ್ಮ ಆಳವು ಎಂದರೇನು? ನಾವೇನು ಗಂಡಸರಲ್ಲವೆ? ಒಂದೇ ಕೊರತೆಯೆಂದರೆ ನಮ್ಮಲ್ಲಿ ಹಣವಿಲ್ಲದಿರುವದು. ಅದನ್ನೆ ನಮ್ಮ ಆಳವು ಎಂದು ನೀನು ಹೇಳಿದ್ದರೆ ನಿನ್ನ ಮಾತನ್ನು ಒಪ್ಪಿಕೊಳ್ಳುತ್ತೇನೆ.''

ಉಪನಾಯಕ ಏನು ಮಾತನಾಡಬೇಕೆಂದು ತಿಳಿಯದ್ದರಿಂದ ಸುಮ್ಮನಾದ.

``ಹೋಗಲಿ, ನೀನು ಈ ಸಲವಾದರೂ ಎಲೆಕ್ಶನ್ನಿಗೆ ನಿಂತುಕೊಳ್ಳುತ್ತೀಯಾ?''

``ನೀನು ಚೇಷ್ಟೆ ಮಾಡುತ್ತೀಯಾ?''

ಈ ಉತ್ತರವನ್ನು ಅವನು ಅಪೇಕ್ಷಿಸಿರಲಿಲ್ಲ. ಅವನಿಗೆ ತಾನೇ ಎಲೆಕ್ಶನ್ನಿಗೆ ನಿಲ್ಲಬೇಕೆಂದು ಬಯಕೆಯಿತ್ತು. ಈ ಮಾತನ್ನು ಉಪನಾಯಕ ಹೇಳಿದ್ದರೆ ಒಳ್ಳೆಯದೆಂದು ಬಳಸಿ ಮಾತನಾಡಿದ. ಉಪನಾಯಕನ ವ್ಯಕ್ತಿತ್ವ ಮೇಲೆ ಬಲಿಷ್ಠ ಕಂಡಷ್ಟು ಒಳಗೆಲ್ಲ ಪೊಳ್ಳು ಎನ್ನಿಸಿತು. ಕಳೆದ ವರ್ಷದ ಜತೆಗಾರನ ನೆನಪಾಯಿತು. ಯಾವುದರಿಂದಲೂ ಕುಗ್ಗದ ಆ ಸ್ನೇಹಿತನ ವ್ಯಕ್ತಿತ್ವ ಇನ್ನೂ ಅವನ ಕಣ್ಣೆದುರು ನಿಂತಿತು.

``ನಿನ್ನೊಡನೆ ನಾನೇಕೆ ಚೇಷ್ಟೆ ಮಾಡಲಿ?''

``ಇಲೆಕ್ಶನ್ ಎಂದರೆ ಏನೆಂದು ತಿಳಿದಿದ್ದೀ? ವೆಚ್ಚ ಎಷ್ಟು ಬರುತ್ತದೆ?''

''ಈ ಸಲ ನಾಯಕನ ವಿರುದ್ಧ ಯಾರು ನಿಲ್ಲುತ್ತಾರೆ!''

''ಯಾರಾದರೂ ನಿಂತಾರು. ನಿಜ ಹೇಳಲಿಯಾ? ನಾನು ಈ ಗುಂಪಿನಲ್ಲಿ ಸೇರಬಾರದಾಗಿತ್ತು. ಚೆನ್ನಾಗಿ ಅಭ್ಯಾಸಮಾಡಿ ಮುಂದೆ ಹೋಗುವ ಬಯಕೆ ಇತ್ತು. ಯಾವುದೋ ಒಂದು ಸತ್ವ ನನ್ನನ್ನು ಕುಣಿಸುತ್ತದೆ. ಮನೆಗೆ ಹೋದರೆ ದಮ್ಮನೆ ದಣಿದಿರುತ್ತೇನೆ.''

''ಸ್ಟುಡೆಂಟ್ ಕೌನ್ಸಿಲಿಗಾದರೂ ನಿಲ್ಲಬಹುದು.''

''ನನಗೆ ಯಾವುದರಲ್ಲೂ ಉತ್ಸಾಹವಿಲ್ಲ.''

''ನಾಯಕನ ವಾರ್ಷಿಕ ಗಳಿಕೆಯೆಷ್ಟು?''

''ಹತ್ತು ತರದ ಗಳಿಕೆ.''

''ಅವನ ತಂದೆ ಅವನನ್ನು ನಿಯಂತ್ರಿಸುವುದಿಲ್ಲವೆ?''

''ನಾನಿದಾವುದನ್ನೂ ಯೋಚಿಸಿಲ್ಲ.''

ಜನತಾ ಬೀಡಿ ಕಾರ್ಖಾನೆಯ ಒಳದೃಶ್ಯ ಅವರು ಕುಳಿತಲ್ಲಿಂದ ಕಾಣುತ್ತಿತ್ತು. ಉಪನಾಯಕ ಹೇಳಿದ:

''ಅಲ್ಲಿ ನೋಡು, ಬೀಡಿಕಟ್ಟುವ ಹೆಣ್ಣುಮಕ್ಕಳನ್ನು. ನಮಗೂ ಅವರಿಗೂ ಏನೂ ಅಂತರವಿಲ್ಲ. ನಾಯಕನಾದರೊ ಸಿನೆಮಾ ನಟಿಯ ಹಾಗೆ.''

ನಾಯಕನ ಥಿಯೇಟರಿನಲ್ಲಿ ಒಂದು ಚಲನಚಿತ್ರದ ರಜತಮಹೋತ್ಸವ ನಡೆಯಲಿತ್ತು. ಅದಕ್ಕಾಗಿ ಚಿತ್ರದ ನಾಯಕ ಹಾಗೂ ನಾಯಕಿ ಬರಲಿದ್ದರು. ನಗರವೆಲ್ಲ ಹುಚ್ಚೆದ್ದು ಕುಣಿಯಿತು. ವಿದ್ಯಾರ್ಥಿಗಳು ಶಾಲೆ ಕಾಲೇಜುಗಳನ್ನು ತಪ್ಪಿಸಿದರು. ಅವನಿಗೂ ತುಂಬ ಆಸೆಯಾಯಿತು - ಆ ಚಿತ್ರದ ನಾಯಕ ನಾಯಕಿಯರನ್ನು ನೋಡಲು.

''ನೀನು ಹೋಗುತ್ತೀಯಾ ಅವರನ್ನು ನೋಡಲು?''

''ಹೋಗುತ್ತೇನೆ.''

''ನನಗೂ ಬರಬೇಕೆಂದು ಆಸೆ.''

''ಅವನನ್ನು ಕೇಳಿ ನೋಡು.''

''ನಮಗೆ ಬಾ ಎನ್ನುವುದಿಲ್ಲವೆ?''

''ನಿನಗೆ ಹುಚ್ಚು. ಏಕೆ ಬಾ ಎನ್ನಬೇಕು.''

''ನೀನು ಸ್ನೇಹಿತನಲ್ಲವೆ?''

''ನೀನು ಹೀಗೆ ಹೇಳುತ್ತಿ. ನಾನೂ ಸ್ನೇಹಿತನಲ್ಲ. ನೀನೂ ಸ್ನೇಹಿತನಲ್ಲ. ನೀನು ಕೋಪಿಸಿಕೊಳ್ಳದಿದ್ದರೆ ಹೇಳುತ್ತೇನೆ. ನಾವೆಲ್ಲ ನಾಯಕ ಸಾಕಿದ ನಾಯಿ.''

ಚಾಟಿಯ ಏಟಿನಂತಿತ್ತು ಈ ಮಾತು.

''ಹಾಗಾದರೆ ನೀನು ಹೇಗೆ ಹೋಗುತ್ತಿ ಕಾರ್ಯಕ್ರಮಕ್ಕೆ?''

''ಹೇಗಾದರೂ ಮಾಡಿ.''

''ನನ್ನನ್ನು ಕರೆದುಕೊಂಡು ಹೋಗಲಾರೆಯಾ?''

ಅವನಿಗೆ ತನ್ನ ಸ್ಕಾಲರ ಸ್ನೇಹಿತನ ನೆನಪಾಯಿತು-- ಅವನು ಕಾರ್ಯಕ್ರಮಕ್ಕೆ ಹೋಗುತ್ತಿರಲಿಲ್ಲ. ಆದರೆ ತಾನು ಹೋಗಲೇಬೇಕು.

ಉಪನಾಯಕ ಉತ್ತರ ಕೊಡಲಿಲ್ಲ.

''ನಾವು ಆರೆಂಟು ಜನ. ನೀನೊಬ್ಬನೇ ಹೋಗುವೆಯಾ?''

ಅದಕ್ಕೂ ಸ್ನೇಹಿತನಿಂದ ಉತ್ತರವಿಲ್ಲ.

''ಏನು ಫಲ ಈ ಸ್ನೇಹದಿಂದ? ಅವನು ಸಾಕಿದ ನಾಯಿಗಳಾಗಿ ನಾವು ಬದುಕುವುದಾದರೆ?''

''ನಾನೂ ಅದನ್ನೇ ಎನ್ನುತ್ತೇನೆ.''

''ಬರಿ ಬಾಯಿಂದ ಹೇಳಿ ಏನು ಪ್ರಯೋಜನ?''

''ಏನು ಮಾಡು ಎನ್ನುತ್ತಿ?''

''ನೀನೇ ಮುಂದಾಳುವಾಗು. ನಾವು ಅನುಚರರಾಗುತ್ತೇವೆ.''

''ನಾನು ಮುಂದಾಳಾದರೆ?''

''ಏಕಾಗಬಾರದು?''

''ಹೂಗಟ್ಟಿದ ಕಾಯಾಗದ ಮಾತುಗಳನ್ನಾಡಿ ಪ್ರಯೋಜನವಿಲ್ಲ.''

''ನಾನೀಗುಂಪಿನಲ್ಲಿ ಬಂದ ಕಾರಣವೆಂದರೆ ತುಂಬು ಜೀವನವನ್ನು ನಡೆಯಿಸುವ ಅಪೇಕ್ಷೆಯಿಂದ.''

''ನಿನ್ನ ಭ್ರಮೆ ನಿರಸನವಾಯಿತಲ್ಲ.''

''ನಿನ್ನದು?''

''ನನ್ನದಾಗಿದೆ.''

''ಹಾಗಾದರೆ ಹೊರಗೇಕೆ ಬೀಳಬಾರದು?''

''ಇದು ಚಕ್ರವ್ಯೂಹ - ಒಳಗೆ ಬರುವ ಹಾದಿ ಗೊತ್ತು.''

''ರಜತ ಮಹೋತ್ಸವದ ಕಾರ್ಯಕ್ರಮಕ್ಕೆ ನಾನೂ ಬರಬೇಕೆಂದು ಮಾಡಿದ್ದೇನೆ.'' ಅವನು ಒಂದು ದಿನ ಅಂಜುತ್ತಂಜುತ್ತ ನಾಯಕನಿಗೆ ಹೇಳಿದ.

''ನಿನಗಾರು ಬೇಡ ಎಂದರು?'' ನಾಯಕ ಕೇಳಿದ.

ಅವನಿಗೆ ತುಂಬ ಹಿಗ್ಗಾಯಿತು. ಈ ಸಂಗತಿಯನ್ನು ಉಪನಾಯಕನಿಗೆ ಅವನು ತಿಳಿಸಿದ.

''ನಿನಗೆಲ್ಲೋ ಭ್ರಮೆ. ಟಿಕೆಟ್ ತೆಗೆದುಕೊಳ್ಳದೆ ನಿನ್ನನ್ನು ಒಳಗೆ ಬಿಡುವುದಿಲ್ಲ. ಈ ಥಿಯೇಟರಿನಲ್ಲಿ ನಡೆದ ರಜತೋತ್ಸವ ಇದೊಂದೇ ಅಲ್ಲ. ನನ್ನ ಅನುಭವದಿಂದ ಹೇಳುತ್ತೇನೆ.''

''ಏನೆ ಇರಲಿ ನನಗೊಂದು ಕೌಬಾಯ್‌ಜಿನ್ ಹಾಗೂ ಬುಶ್‌ಶರ್ಟ್ ಬೇಕು ಆ ದಿವಸ.''

''ನಾನೆಲ್ಲಿಂದ ತರಲಿ?''

''ನನ್ನ ಭಾರ ನಿನ್ನ ಮೇಲೆ.''

''ನೀನು ನನ್ನ ಮೇಲೆ ಹಾಕುವ ಭಾರವನ್ನು ಹೊರಲು ಅಸಮರ್ಥನಿದ್ದೇನೆ.''

ಅವನ ಕನಸು ಹುಡಿಹುಡಿಯಾಗಿ ಮಣ್ಣಲ್ಲಿ ರಕ್ತ ಕಾರುತ್ತ ತಾನು ಬಿದ್ದಂತೆ ಎನಿಸಿತು. ನಗರದ ಪ್ರತಿಷ್ಠಿತರೆಲ್ಲ ಬಂದಿರುತ್ತಾರೆ. ನಾಯಕ ನಾಯಕಿಯರ

ಸಮೀಪದಲ್ಲಿ ತಾನೂ ನಿಲ್ಲುತ್ತಾನೆ. ಅವನ ಕಣ್ಣೆದುರು ಚಿತ್ರ ಬಂದಿತು. ಆ ಹುಡುಗಿಯೂ ಅಲ್ಲಿ ಬಂದಿರುತ್ತಾಳೆ. ತನ್ನನ್ನು ನೋಡುತ್ತಾಳೆ. ತನ್ನನ್ನು ಕುರಿತು ಆಗ ಅವಳಿಗೆ ಗೌರವ ಹುಟ್ಟಲು ಸಾಧ್ಯ. ಅಥವಾ.... ಆ ಹುಡುಗಿಗೆ ಕೂಡಲು ಸ್ಥಳವೇ ಇರುವುದಿಲ್ಲ. ತಾನು ಹೋಗಿ ಒಂದು ಕುರ್ಚಿಯನ್ನು ಹಾಕಿಸಿ ಕೊಟ್ಟು ಬರುತ್ತಾನೆ. ಅವಳು ಕೃತಜ್ಞತೆಯನ್ನು ವ್ಯಕ್ತಪಡಿಸುತ್ತಾಳೆ. ಅದು ಇಲ್ಲಿಗೇ ನಿಲ್ಲುವುದಿಲ್ಲ. ''ಮೇರೆ ಮನಕಿ ಗಂಗಾ ಔರ್ ತೇರೆ ಮನಕಿ ಜಮುನಾ ಕಾ ಬೋಲ್ ರಾಧಾ ಬೋಲ್ ಸಂಗಮ್ ಹೋಗಾ ಕಿ ನಹೀ'' ಇಲ್ಲಿಯವರೆಗೆ ಬರುತ್ತದೆ...... ಅವನ ಕನಸಿನ ಪಕ್ಕಗಳು ಕತ್ತರಿಸಿಬಿದ್ದವು. ಕೊನೆಗೆ ಉಪನಾಯಕ ಒಂದು ದಾರಿಯನ್ನು ಕಂಡುಹಿಡಿದ. ತಮ್ಮನ್ನು ತನ್ನ ಆಪ್ತಸ್ನೇಹಿತ ಎಂದು ಹೇಳಲು ಒಪ್ಪದ ನಾಯಕ ಥಿಯೇಟರಿನ ಸೇವಕ ವರ್ಗದವರೆಂದು ಪ್ರವೇಶ ಕೊಡಲು ಅನುಮತಿ ಕೊಟ್ಟ. ಸೇವಕ ವರ್ಗ...... ಅವನ ಮನಸ್ಸಿನಲ್ಲಿ ಮುಳ್ಳುಗಟ್ಟಿತ್ತು.

''ನಾವು ಸ್ನೇಹಿತರಲ್ಲವೆ?''

''ನಿನಗೆ ಹುಚ್ಚು ಎಲ್ಲೊ. ನಿನಗೆ ಇಷ್ಟವಿದ್ದರೆ ಬಾ. ನಾನಂತೂ ಹೋಗುತ್ತೇನೆ.''

''ಕೌ ಬಾಯ್ ಜಿನ್ ಹೇಳಿದ್ದೆ.''

''ಮತ್ತೆ ಅದೇ ಮಾತು. ಸೇವಕ ವರ್ಗದ ನಾನು ನೀನು ಕೌ ಬಾಯ್ ಜಿನ್ ಹಾಕಿಕೊಂಡರೆ ಬರುವ ಭಾಗ್ಯವೇನು?''

ಕೆರಳಿ ಉತ್ತರ ಕೊಟ್ಟ. ರಜತ ಮಹೋತ್ಸವದ ಮುಖ್ಯ ಅತಿಥಿಗಳೊಡನೆ ಕೈ ಕುಲುಕು... ಅವನ ತಲೆಯಲ್ಲಿ ಮೆಲುನಗೆ ಮೂಡಿತು...ನಾಯಕಿಯ ಕೈ ಕುಲುಕುವ... ಓ ಅವರೇನು ಕೈಕುಲುಕಿಸಿಕೊಳ್ಳದಷ್ಟು ಹಿಂದುಳಿದವರಲ್ಲ... ಏನು ಭಾಗ್ಯ... ಅವರ ಜೊತೆ ಸೋಫಾದಲ್ಲಿ ಕುಳಿತು ಅವರ ವರ್ತುಲದಲ್ಲಿ ನಾನೂ ಒಂದಾಗುವುದು... ಆದರೆ... ಈಗ ಗೇಟಕೀಪರರೊಡನೆ ದೂರ ನಿಂತು ಕೈ ಮುಗಿದು... ಊಹೂಂ. ''ಒಲ್ಲೆ ನಾನು ಸೇವಕ ವರ್ಗದವನಾದರೆ ಬರಲಾರೆ. ಬೇಕಾದರೆ ಆಪ್ತಮಿತ್ರ ಎಂದು ಹೇಳಿದರೆ ಬಂದೇನು'' ಹೀಗೆ ಹೇಳಿಬಿಡಬೇಕು ಎನ್ನಿಸಿತು. ಆದರೆ ಹೇಳಲಿಲ್ಲ. ಅವರೆಲ್ಲ ಕೂಡಿ ಥಿಯೇಟರಿನ ನೋಕರ ವರ್ಗದವರೊಡನೆ ನಿಂತು ರಜತಪರದೆಯ ದೇವದೇವಿಯರ ಅನುಗ್ರಹ ಪಡೆದರು.

ಅವನ ಮನಸ್ಸಿನ ಕ್ಷಿತಿಜ ಈಗ ಮತ್ತೂ ವಿಸ್ತಾರವಾಗಿದೆ. 'ಸಂಪಗೆಯ ಹಾಸಿಗೆ' ಕಾದಂಬರಿಯನ್ನೋದಿದ. ಅದರ ಮೇಲಿನ ಚಿತ್ರ ಒಳಗಿನ ವಿಷಯ ಅವನನ್ನು ಬೇರೊಂದು ಲೋಕಕ್ಕೆ ಎಳೆದೊಯ್ದುವು. ಇವುಗಳನ್ನು ಇಂದಿನವರೆಗೆ ಓದಿರದಿದ್ದಕ್ಕಾಗಿ ವ್ಯಥೆಪಟ್ಟ. ಏನೋ ಒಂದು ಬಗೆಯ ಹುರು ಹುರು. ಒಂದಲ್ಲ ಎರಡಲ್ಲ ನೂರು ಪುಸ್ತಕಗಳನ್ನು ಓದಿದ. ಓದಿದಷ್ಟು ಅವನ ದಾಹ ಹೆಚ್ಚುತ್ತಿತ್ತು. ಮದ್ಯಪಾನ-- ಮದಿರಾಕ್ಷಿಯರ ಸಹವಾಸ ಇಂತಹ ಲೋಕವೊಂದಿದೆಯೇ ಎಂದು ಸಂಶಯ ಬಂತು. ಇದ್ದರೆ ತಾನು ಅದರಲ್ಲಿ ಪ್ರವೇಶಿಸಬೇಕು. ಮುಂದೆ ಇಂಗ್ಲಿಶ್ ಪುಸ್ತಕಗಳನ್ನು ಓದಹತ್ತಿದ. ಮೊದಲು ಅಷ್ಟು ರುಚಿ ಎನ್ನಿಸಲಿಲ್ಲ.

''ನೀನು ಇಂಗ್ಲಿಶ್ ಕಾದಂಬರಿಯನ್ನು ಓದುತ್ತೀಯಾ?''

ಉಪನಾಯಕನನ್ನು ಕೇಳಿದ.

''ಏಕೆ?''

''ಏಕಿಲ್ಲ. ಸುಮ್ಮನೆ ಕೇಳಿದೆ.''

''ಓದುತ್ತೇನೆ.''

''ನಾನು ಓದಿದೆ; ಆದರೆ ಏಕೋ ಏನೋ ಕನ್ನಡ ಕಾದಂಬರಿ ಹಿಡಿಸಿದಂತೆ ರುಚಿಸಲಿಲ್ಲ ಅವು. 'ಗಿಣಿ ಕಚ್ಚಿದ ಮಾವು' ಅಬ್ಬಾ ಏನು ಕಾದಂಬರಿ ಅದು.''

''ಇಂಗ್ಲಿಶ್ ಕಾದಂಬರಿ ಓದಲು ಬುದ್ಧಿ ಬೇಕು.''

''ಹೌದೇ ಹೌದು. ನಾನು ಇಂದಿನವರೆಗೆ ಇಂತಹ ಕಾದಂಬರಿಗಳನ್ನೇ ಓದಿರಲಿಲ್ಲ.''

'''ಲೇಡಿ ಚಟರ್ಲೀಜ ಲವ್ಹರ್' ಓದಿದೆಯೇನು?''

''ಇಲ್ಲ.''

''ಥೂ ಓದದನ್ನು.''

''ಎಲ್ಲಿ ಸಿಕ್ಕುತ್ತದೆ?''

''ಪೇಟೆಯಲ್ಲಿಯ ಪ್ರತಿಯಲ್ಲ. ಕಳ್ಳಪೇಟೆಯಲ್ಲಿಯ ಪ್ರತಿ.''

''ಪುಸ್ತಕಗಳಿಗೆ ಕಳ್ಳಪೇಟೆ....''

''ಅಯ್ಯೋ ಪೆದ್ದ ನೀನೋದು ಅದನ್ನು....''

ಈಗವನು ಸಾಕಷ್ಟು ಇಂಗ್ಲಿಶ್ ಸಿನೆಮಾಗಳನ್ನು ನೋಡುತ್ತಿದ್ದಾನೆ. ಅವನಿಗೆ Life push ದ ಅನುಭವವಾಗುತ್ತದೆ. ಮಾದಕ ದೃಶ್ಯಗಳಿಂದ ಅವನು ಮದಿತನಾಗುತ್ತಾನೆ. ಹಿಂದಿ ಸಿನೆಮಾಗಳಿಂದಲೇ ಅವನ ಮನಸ್ಸು ಬೆಳೆಯುತ್ತಲಿದೆ. ಎಲೆಕ್ಶನ್ನಿನಲ್ಲಿ ಅವನು ತನ್ನ ನಾಯಕನ ಪರವಾಗಿ ದುಡಿಯುವದಾಗಿ ನಿರ್ಧರಿಸಿದ. ಹಸ್ತಪತ್ರಿಕೆಗಳನ್ನು ಅಚ್ಚು ಹಾಕಿಸಿದರು. ಹುಡುಗಹುಡುಗಿಯರಲ್ಲಿ ಅಡ್ಡಾಡಿ 'Vote and canvas' ಎಂದು ಕೂಗಿದ. ಕಾಲೇಜಿನ ತುಂಬ ಅವನಿಗೆ ತನ್ನ ಧ್ವನಿಯೇ ಕೇಳಿದಂತೆನಿಸಿತು. ತನ್ನ ಬದುಕಿಗೆ ಒಂದು ಅರ್ಥವಿದೆ ಎನ್ನಿಸಿತು. ಕ್ಯಾಂಟೀನಿನ ತುಂಬ ಅವನ ಧ್ವನಿ ಗುಡುಗಿತು. ಅವನಿಗೆ ಆ ವರ್ಷ ತುಂಬ ಭಾಗ್ಯದ್ದೆನಿಸಿತು. ಹುಡುಗಿಯರಿಗೆ ತೀರ ಹತ್ತಿರ ಹೋಗಿ ಅವರನ್ನು ಮಾತನಾಡಿಸಿ ಚುನಾವಣೆಯ ಪ್ರಕಟಣೆಗಳನ್ನು ಕೊಟ್ಟನು. ಅವನ ಉಚ್ಛಂಖಲತೆಗೆ ಎಲ್ಲೆ ಇರಲಿಲ್ಲ. ಮಾಂಸಾಹಾರ ಮೈಗೆ ಒಗ್ಗಿತ್ತು. ಅಭ್ಯಾಸದ ಯೋಚನೆಯೇ ಇರಲಿಲ್ಲ. ಅವನ ಮುಂದಿನ ಯೋಜನೆಯೂ ನಿಶ್ಚಿತವಾಗಿರಲಿಲ್ಲ. ಆದರೆ ಅವನನ್ನು ಲೈಂಗಿಕ ತೃಷೆ ಸುಡುತ್ತಿತ್ತು. ನಾಯಕ ಮೇಲಿಂದ ಮೇಲೆ ಹೇಳುತ್ತಿದ್ದ ''ಕಾಮ is a form of communication'' ಅದನ್ನು ಅವನಿಗೆ ಸಿದ್ಧಪಡಿಸುವ ಕಾರಣವಿರಲಿಲ್ಲ. ಅವನಿಗೆ ಅದರ ಅನುಭವ ಬೇಕಿತ್ತು. ಬರಿಯ 'ಜೋಕು' ಗಳಿಂದ ಅವನ ತೃಷೆ ಅಡಗುವಂತಿರಲಿಲ್ಲ. 'ಮೇರಿ ಮುಹಬ್ಬತ್ ಜವಾಂ ರಹೇಗಿ | ಸದಾ ರಹೀ ಹೈ, ಸದಾ ರಹೇಗಿ... ಚಿತಾಮೆ ಜಲಕರ್‌ಭೀ ನಾ ಮಿಟೇಗಿ'' ಎಂದು ಅವನು ಹಾಡಿಯೇ ಹಾಡಿದ. ಆದರೆ ಯಾರೂ ಬರಲಿಲ್ಲ. - '' ಪಹಲೀ ನಜರ್ ಮೇ ಅಪನಾ ಬನಾಯಾ | ತುಮನೆ ಪ್ಯಾರ್‌ಸೇ ಜೀನಾ ಸಿಖಾಯಾ'' ಎಂದು ಹಾಡುತ್ತ ಹುಡುಗಿಯರ ಬಗ್ಗೆ ಕತೆಗಳನ್ನು ಕೇಳಿದ್ದ. ಕಾಲೇಜಿನಲ್ಲಿ ಹುಡುಗಿಯರ ಕಡೆಗೊಮ್ಮೆ ನೋಡಿದ್ದ. ಆದರೆ ಅವನಿಗೆ ಅದು ಸ್ಮಶಾನ ಭೂಮಿಯಂತೇ ಕಂಡಿತು ಎಲ್ಲೊ ಎಂಟು ಹತ್ತು ಹುಡಿಗಿಯರು ಮಾತ್ರ ನೋಡುವಂತಿದ್ದರು. ಉಳಿದವರಿಗೆ ನಾಲ್ಕನೆಯ ಆಯಾಮದ ಕಲ್ಪನೆಯೆ ಇರಲಿಲ್ಲ. ಅತೃಪ್ತ ವಾಸನೆಗಳನ್ನಿಟ್ಟುಕೊಂಡು ಅವುಗಳಲ್ಲಿ ಸೀದು ಹೋಗುವ ಹೆಣಗಳಂತೆ ಕಂಡರು.

''ಈ ಹುಡುಗಿಯರನ್ನು ಕಂಡು ನನಗೆ ತುಂಬ ಬೇಸರವಾಗುತ್ತದೆ. ಚಲುವಿಕೆ ಬೇಡ ಬದುಕುವ ಹುಮ್ಮಸ್ಸಾದರೂ ಬೇಡವೆ? ಹಾಗಾದರೆ ನಮ್ಮ ದೇಶ ಮುಂದೆ ಬರಲು ಇನ್ನೂ ಸಾವಿರ ವರ್ಷ ಬೇಕು.''

ಉಪನಾಯಕನೆದುರು ಹೇಳಿದ.

''ಬದುಕುವ ಹುಮ್ಮಸು ಎಂದರೇನು?''

''ನಿನಗೆ ಗೊತ್ತಿಲ್ಲವೇನು? ಕಟುಕರ ಮನೆಗೆ ನಡೆದ ಕುರಿಯ ಹಿಂಡಿಗೂ ಇವುಗಳಿಗೂ ಏನು ಅಂತರವಿದೆ? ಅದೇ ನೋಡು ಆ ಹುಡುಗಿ, ನೀನೇ ಹೇಳಿದೆಯಲ್ಲ N_2 ಎಂದು. ದಿನ ಒಂದು ವೇಷ. ತುಲನೆಯಿಂದಲೇ ಗೊತ್ತಾಗುವುದಿಲ್ಲವೆ? Life push ಎಂದರೆ ? ಆ ಭಾವನೆಯನ್ನು ಬಾಯಿಂದ ಹೇಳಲಾಗದು. ಅನುಭವಿಸಿಯೇ ತೀರಬೇಕು.''

''ವಾ'' ಎಂದಿಷ್ಟೇ ಹೇಳಿದ ಉಪನಾಯಕ.

''N_2 ಳ ಹೆಸರೇನು?''

'' ಉಪನಾಯಕ ಸುತ್ತಮುತ್ತ ನೋಡಿ ಹೇಳಿದ :

'' N_2 ಹೆಸರನ್ನು ಕೇಳಲೇ ಬೇಡ.''

''ಏಕೆ?''

''ನಿನ್ನ ಮೈ ಎಲುಬು ಮುರಿಯಬಾರದೆಂದು ಅಪೇಕ್ಷೆ.''

''ಯಾರವರು ಮುರಿಯುವವರು?''

''ಹೇಳಲೇಬೇಕೆ?''

''ಹೌದು.''

''ನಿನ್ನ ತಂಡದ ನಾಯಕನೆ.''

''ಏಕೆ?''

''ಇಂತಹ ಮಾತುಗಳಲ್ಲಿ ಹೆಚ್ಚು ತಲೆಹಾಕಬಾರದು ಮಗು.''

ಅವನಿಗೆ ಈಗ N_2 ದ ಅರ್ಥ ತಿಳಿದಿತ್ತು. ಈ ಬಗೆಯ ಭಾಷೆ ಅವನಿಗೆ ಈ ಮೊದಲು ಗೊತ್ತಿರಲಿಲ್ಲವೆಂದೇ ಅವನಿಗೆ ಆ ಗುಂಪಿನಲ್ಲಿ ಮಗು ಎಂದು ನಾಮಕರಣವಾಗಿತ್ತು. ಈಗ N_2 ಗಣಿತದಲ್ಲಿಯೇ ಇರಲಿ ಎಲ್ಲಿಯೇ ಇರಲಿ 'ನೋಬಲ್ ನಿಪಲ್' ಅವನ ಕಣ್ಣೆದುರು ಕುಣಿಯುತ್ತದೆ.

ಉಪನಾಯಕನ ಜತೆ ಅವನಿಗೀಗ ತುಂಬ ಸಲುಗೆ ಬೆಳೆದಿತ್ತು.

''ನಿನಗೆ N_2 ಕಂಡರೆ ಏನೂ ಎನಿಸುವುದಿಲ್ಲವೆ?''

``ನಿನಗೆ ಒಮ್ಮೆ ಹೇಳಿಲ್ಲವೆ? ಅವಳ ಗೊಡವೆ ನಿನಗೆ ಬೇಡ ಎಂದು.''

``ನಾನು ನನಗಾಗಿ ಕೇಳಲಿಲ್ಲ. ನಿನಗಾಗಿ....''

``ನಾನೇನು ನೀನೇನು? ಯಾವ ತ್ರಾಣ ನಮ್ಮಲ್ಲಿದೆಯೆಂದು ಪ್ರಯತ್ನ?''

``ಹಾಗಾದರೆ ನಮ್ಮ ಬದುಕು ಸಿಗರೇಟು ಸೇದುವುದು, ಜೋಕು ಕೇಳುವುದು, ಕಾದಂಬರಿ ಓದುವುದು, ಇಷ್ಟೇ ಏನು?''

``ಇದಕ್ಕೆ ಉತ್ತರ ನನ್ನಲ್ಲಿಲ್ಲ.''

``ಯಾರಲ್ಲಿದೆ?''

``ನಿನ್ನಲ್ಲಿದ್ದರೆ ನೀನು ನೋಡಿಕೊ.''

``ಹಾಗಾದರೆ ಉರಿಯಲ್ಲಿ ಬಿದ್ದು ಸುಟ್ಟುಕೊಳ್ಳುವುದಷ್ಟೇ ನಮ್ಮ ಹಣೆಯ ಬರಹವೆ?''

``ನನ್ನನ್ನು ಕೇಳಿದರೆ ನಾನೇನು ಹೇಳಲಿ?''

``ನಿನ್ನದನ್ನಾದರೂ ನೀನು ಹೇಳಬಾರದೆ? ನಿನ್ನ ಹೆಜ್ಜೆಯಲ್ಲಿ ನಾನು ಹೆಜ್ಜೆ......''

``ನಾನು ಇನ್ನೂ ಆಳವಾದ ನೀರಲ್ಲಿ ಇಳಿಯಲಾರೆ.''

``ಇಷ್ಟರಲ್ಲಿಯೇ ನಿಂತರೆ ಬಂತೇನು?''

``ಬರಲಿ ಬಾರದಿರಲಿ. ನನ್ನ ಮಿತಿಯನ್ನು ಮೀರಿ ನಾನು ಮುಂದೆ ಹೋಗಲಾರೆ.''

``ನೀನು ಯಾರನ್ನಾದರೂ ಪ್ರೀತಿಸಿರುವೆಯಾ?''

``ಅವೆಲ್ಲ ನಮ್ಮ ಶಕ್ತಿಯ ಹೊರಗಿನವು ಎಂದು ಎಷ್ಟು ಸಲ ಹೇಳಲಿ ನಿನಗೆ. ನಾನು ಪ್ರೀತಿಸಿದ್ದೇನೆ. ಅದರಿಂದ ಆಗುವದೇನು?''

``ಪಶ್ಚಿಮ ದೇಶಗಳಲ್ಲಿಯ ಹಾಗೆ ಇಲ್ಲಿಯೂ ಸ್ವೈರಾಚಾರವಿದ್ದರೆ....''

``ನಿನಗಿಲ್ಲಿಲ್ಲ ಎಂದು ಯಾರು ಹೇಳಿದರು? ತೂರಲು ಹಣವಿದ್ದರೆ ಹೇಳು.''

``ಹಣ ಹಣ ಎಲ್ಲದಕ್ಕೂ ಹಣ. ನೀನೇನು ಯೋಚನೆ ಮಾಡಿರುವೆ?''

"ಯೋಚನೆಯೇನು? ಹುಟ್ಟಿದೆ, ಬೆಳೆದೆ. ಕಾಲೇಜಿಗೆ ಬಂದೆ, ಕಾಲೇಜಿನಿಂದ ಹೊರಗೆ ಹೋಗುತ್ತೇನೆ. ಎಲ್ಲಿಯಾದರೂ ಒಂದು ನೋಕರಿ ಹಿಡಿಯುತ್ತೇನೆ. ಪಾಲಿಗೆ ಬಂದ ಹೆಣ್ಣಿನ ಕೈ ಹಿಡಿಯುತ್ತೇನೆ. ಸಾಯುವವರೆಗೆ ಬದುಕುತ್ತೇನೆ."

"ಇದೆಂತಹ ಬದುಕು? ಇದಕ್ಕಿಂತ ಸಾವೇನು ಕೆಡಕು?"

"ನೀನೇನು ಮಾಡಲಿರುವೆ?"

ಅವನಿಗೆ ಬಾಯಿಂದ ಉತ್ತರ ಬರಲಿಲ್ಲ. "ಹೌದು ನಾನೇನು ಮಾಡಲಿದ್ದೇನೆ?"

"ಏಕೆ ಸುಮ್ಮನಾದೆ?"

"ನೀನು ಒಪ್ಪಿದರೆ ಒಂದು ಯೋಚನೆ ಇದೆ ....."

"ನಾವಿಬ್ಬರೂ ಕೂಡಿ N_2 ನ ಬೆನ್ನು ಎಂದೆಯೇನು?"

"ಹೇ ಹೇ ಅದಲ್ಲ. ಪಾಲುಗಾರಿಕೆಯಲ್ಲಿ ವ್ಯವಹಾರವನ್ನು ಆರಂಭಿಸೋಣ. ಹಣವಿಲ್ಲದೆ ನಮ್ಮ ಬದುಕಿಗೆ ಹೊಸ ಸತ್ವ ಬರಲಾರದು. ರೂಪಾಲೋಕ ಎಂಬ ಹೆಸರಿಂದ ಒಂದು ಕಂಪನಿ ತೆಗೆಯೋಣ. ವರುಷಕ್ಕೆ ಎರಡು ಕಾರ್ಯಕ್ರಮ. ಮೊದಲೊಮ್ಮೆ ವೈಜಯಂತಿಮಾಲಾಳನ್ನು ಕರೆಯಿಸಿ ನೃತ್ಯದ ಕಾರ್ಯಕ್ರಮವನ್ನಿಡಬೇಕು...."

ಉಪನಾಯಕ ನಕ್ಕುಬಿಟ್ಟ "ನೀನು ಹಿಂದಿನ ಜನ್ಮದಲ್ಲಿ ಸೇಕಮಹಮ್ಮದನಾಗಿರಬೇಕು."

"ಏಕೆ?"

"ಇದಕ್ಕೆ ಸ್ಪಷ್ಟೀಕರಣವೇ ಬೇಕಿಲ್ಲ."

ಉಪನಾಯಕ ನಕ್ಕ. ಅವನ ಕಿವಿಗೆ ಅದು ಖಳನಾಯಕನ ನಗೆಯಂತೆ ಕೇಳಿಸಿತು.

ಕೆಲವು ಮಾಸಪತ್ರಿಕೆಗಳು ಅವನಲ್ಲಿ ಮತ್ತೂ ಕೆಲವು ಯೋಚನೆಗಳನ್ನು ತುಂಬಿದವು. ಅವನಿಗೆ ತಾನೊಂದು ಉರಿಯ ಕಂಬ ಎನ್ನಿಸಿತು. ನನಗೆ ಇಪ್ಪತ್ತು ವರ್ಷ. ನನ್ನ ಸಹಪಾಠಿಯನ್ನು ನಾನು ಪ್ರೀತಿಸುತ್ತೇನೆ. ನಾನು ಕಾಲೇಜಿನಲ್ಲಿ ಇದ್ದೇನೆ. ನಾನೊಬ್ಬ ಹುಡುಗನನ್ನು ಪ್ರೀತಿಸುತ್ತೇನೆ. ಆದರೆ ನನಗವನ ಮನಸ್ಸು

ಗೊತ್ತಿಲ್ಲ. ಕಾಲೇಜದಲ್ಲಿ ನಾವು ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿದ್ದೇವೆ. ಆಗ ಈ ವಿಷಯವನ್ನು ನಾನು ಅವನಿಗೆ ಹೇಳಬಹುದೆ? ಎಷ್ಟು ಪ್ರಶ್ನೆಗಳು, ಉತ್ತರಗಳೂ ಅಷ್ಟೇ ಸ್ವಾರಸ್ಯಕರ. `ನನ್ನನ್ನು ಪ್ರೀತಿಸುವವರು ಯಾರೂ ಇಲ್ಲವೆ? ಹೀಗೇಕೆ ಆಗಬೇಕು? ಎಕ್ಸೈಟ್‌ಮೆಂಟ್ ಇರದ ಬದುಕು ಬದುಕೇ ಅಲ್ಲ. ಇತ್ತೀಚೆ ಅವನು ಉಪನಾಯಕನ ಜತೆ ಹೆಚ್ಚು ವೇಳೆ ಕಳೆಯುತ್ತಾನೆ. ನಾಯಕನ ಜತೆ ಹೋಗುವುದು ಕಡಮೆ.

''ನಿನಗೆ ಈ ಪತ್ರಿಕೆಗಳನ್ನು ನೋಡಿ ಏನೂ ಎನ್ನಿಸುವುದಿಲ್ಲವೆ?''

''ಏನೆನ್ನಿಸಬೇಕು?''

''ಇಲ್ಲಿ ನೋಡು ಹುಡಿಗೆಯರ ಪತ್ರ. ನಿನ್ನ ಬದುಕಿನಲ್ಲಿ ಹೀಗೆ ಒಂದಾದರೂ ಹುಡಿಗೆ ಬಂದಿದ್ದಾಳೆಯೆ ?''

''ನಾನು ಈ ಮೊದಲೇ ಹೇಳಿದ್ದೇನೆ. ಆ ಲೋಕ ಬೇರೆ. ನಮ್ಮ ಲೋಕ ಬೇರೆ.''

ಉಪನಾಯಕನ ಜತೆ ಮಾತನಾಡಿ ಅರ್ಥವಿಲ್ಲವೆಂದು ಅವನು ಭಾವಿಸಿದ. ಈಗ ಅವನು ಸ್ಟೇಶನ್ನಿಗೆ ಹೋಗಿ ಇಂತಹ ಪತ್ರಿಕೆಗಳನ್ನು ಕೊಳ್ಳುತ್ತಾನೆ. ನಾನಾ ಭಂಗಿಗಳಲ್ಲಿಯ ಹುಡುಗಿಯರ ಚಿತ್ರಗಳನ್ನು ನೋಡುತ್ತಾನೆ. ಒಂದು ಸಲ ಪತ್ರಿಕೆಯಲ್ಲಿ ಒಬ್ಬ ಹುಡುಗ ''ನನ್ನ ಬದುಕಿನಲ್ಲಿ ಇನ್ನೂ ಯಾವ ಹುಡುಗಿಯೂ ಪ್ರವೇಶಿಸಿಲ್ಲ. ನನಗೆ ತುಂಬ ವ್ಯಥೆಯಾಗಿದೆ. ನಾನೇನು ಮಾಡಲಿ?'' ಎಂದು ಪ್ರಶ್ನೆ ಕೇಳಿದ್ದ. ಅವನಿಗೆ ಎಷ್ಟು ಸಂತೋಷವಾಯಿತು. ತನ್ನಂಥವನೊಬ್ಬನಿದ್ದಾನೆ ಎಂದು ತಿಳಿದು. ಆ ಉತ್ತರವನ್ನು ತುಂಬ ಆಸಕ್ತಿಯಿಂದ ಓದಿದ. ಅದರಲ್ಲಿಯ ಸೂಚನೆಗಳನ್ನೋದಿದ. ''ಬಹುಶ್ರುತನಾಗು- ಸ್ಮಾರ್ಟ್ ಆಗಿರು.....''

ಅವನ ಯಾವುದೇ ಯೋಜನೆ ನಿಷ್ಫಲವಾಗುವ ಕಾರಣವೆಂದರೆ ಹಣದ ಅಭಾವ. ಹಂಚಿಕೆಗಳನ್ನು ಈಗ ಅವನು ಏಕಾಕಿಯಾಗಿಯೇ ಹಾಕುತ್ತಿದ್ದಾನೆ. ಏಕೆಂದರೆ ಅವನ ಸ್ನೇಹಿತರು ಅವುಗಳಲ್ಲಿ ಆಸಕ್ತಿಯನ್ನು ತೋರಿಸುತ್ತಿರಲಿಲ್ಲ. ವೃತ್ತಪತ್ರಿಕೆಗಳಲ್ಲಿಯ ಒಂದೆರಡು ಜಾಹೀರಾತುಗಳಿಂದ ಅವನಿಗೆ ದಾರಿ ನಿಚ್ಚಳವಾಗಿ ಕಾಣತೊಡಗಿತು. ಬಾರಾಬತ್ತಿ ರ್‍ಯಾಫೆಲ್ ಒಂದು ಕಲ್ಪವೃಕ್ಷದಂತೆಯೇ ಕಂಡಿತು. ಒಂದೇ ಒಂದು ರೂಪಾಯಿಯಲ್ಲಿ ಒಂದು ಲಕ್ಷ ರೂಪಾಯಿ. ಒಂದು

ದಿವಸ ಅದನ್ನು ತೆಗೆದುಕೊಂಡು ಬಂದ. ಆಕಸ್ಮಿಕವಾಗಿ ಧನ ಬಂದು ಶ್ರೀಮಂತರಾದವರ ಕತೆಗಳನ್ನೂ ಕೇಳಿದ್ದ. ಆ ಸಂತೋಷದ ಜತೆ ಒಂದು ಬಗೆಯ ಭಯವೂ ಆವರಿಸಿತು. ''ಒಬ್ಬ ರೋಗಿ ಆಸ್ಪತ್ರೆಯಲ್ಲಿದ್ದನಂತೆ . ಅವನಿಗೆ ಒಂದು ಲಕ್ಷ ರೂಪಾಯಿ ಲಾಟರಿ ಬಂದಿತಂತೆ. ಅವನಿಗೆ ಔಷಧೋಪಚಾರ ಮಾಡುವ ಡಾಕ್ಟರರು ಆ ರೋಗಿಗೆ ಈ ಸಂಗತಿಯನ್ನು ಹೇಗೆ ತಿಳಿಸಬೇಕು ಎಂದು ಯೋಚಿಸುತ್ತಿದ್ದರು. ಏಕೆಂದರೆ ಅತಿ ದುಃಖದಂತೆ ಅತಿ ಸಂತೋಷವೂ ಘಾತುಕವಾದುದು. 'ನೋಡಪ್ಪಾ ನಿನಗೆ ಅಕಸ್ಮಾತ್ತಾಗಿ ಒಂದು ಲಕ್ಷ ರೂಪಾಯಿ ಬಂದರೆ ಏನು ಮಾಡುತ್ತೀ?' ಡಾಕ್ಟರ ರೋಗಿಯನ್ನು ಕೇಳಿದರು. 'ನನಗೆಲ್ಲಿ ಬಂದೀತು ಡಾಕ್ಟರ್?'

'ಬಂದಿತು ಎಂದು ತಿಳಿದುಕೊ....' 'ನಿಮಗೆ ೫೦ ಸಾವಿರವನ್ನು ಕಾಣಿಕೆಯೆಂದು ಕೊಡುತ್ತೇನೆ.' 'ನಿಜವೆ? ನಿಜವೆ?' ಎಂದು ಮೂರು ಸಲ ಕೇಳಿ ಡಾಕ್ಟರ್ ಹರ್ಷದಿಂದ ಕುಣಿದಾಡಿದರು - ನಕ್ಕರು. ಹರ್ಷವಾಯುವಿನಿಂದ ಅಂದೇ ಸಂಜೆ ತೀರಿಕೊಂಡರು.''

ಇಲ್ಲ ಇಲ್ಲ ನನಗೆ ಹೀಗಾಗಲಾರದು.

ಲಾಟರಿ ನಿಷ್ಫಲವಾಯಿತು. ಆದರೂ ಅವನು ಮತ್ತೊಂದು ಟಿಕೆಟನ್ನು ಕೊಂಡ. ಇಷ್ಟರಲ್ಲಿಯೇ ಇನ್ನೊಂದು ಸುಯೋಗ ಅವನ ಪಾಲಿಗೆ ಬಂತು. ಲಕ್ಸ್ ಸಾಬೂನಿನ ಪ್ರಕಟಣೆಯೊಂದು ಅವನ ಕಣ್ಣನ್ನು ಸೆಳೆಯಿತು. ಸುಲೇಖಾ ನೆಹರೂ ಪ್ರಬಂಧ ಸ್ಪರ್ಧೆಗಿಂತ ಆಕರ್ಷಕ ಎನ್ನಿಸಿತು. ಸುಲೇಖಾ ಪೆನ್ನಿನವರು ಏರ್ಪಡಿಸಿದ ನೆಹರೂ ಪ್ರಬಂಧ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ಅವನು ನಿಶ್ಚಯಿಸಿದ. ಇಂಗ್ಲಿಶ್ ಪ್ರಾಧ್ಯಾಪಕರ ಸಹಾಯವನ್ನು ಪಡೆಯಲು ನಿಶ್ಚಯಿಸಿ ಪ್ರಾಧ್ಯಾಪಕರ ಕಾಮನ್ ರೂಮಿನ ಎದುರು ಬಂದು ನಿಂತ. ಅದು ಪ್ರಾಧ್ಯಾಪಕರ ಚಹದ ವೇಳೆ. ಅವರು ಒಳಗಡೆ ತಾವೇ ತಾವಿದ್ದಾಗ ಹೊರಗೆ ಸಿಪಾಯಿ ವಿದ್ಯಾರ್ಥಿಗಳನ್ನು ತಡೆದಿದ್ದ. ಕೆಲವರು ವಿದ್ಯಾರ್ಥಿನಿಯರು ಮಾತ್ರ ಒಳಗೆ ಹೋಗುತ್ತಿದ್ದರು. ಕೊನೆಗೆ ಅವನು ಪ್ರಯತ್ನಪಟ್ಟು ಒಳಗೆ ಹೋಗಿ 'ಸರ್' ಎಂದು ನಮಸ್ಕರಿಸಿದ. ಅವರ ಸಹಾಯವನ್ನು ಕೋರಿದ. ಅವರು ಅವನಿಂದ ಆ ವಿಷಯದ ವಿವರಗಳನ್ನು ತೆಗೆದುಕೊಂಡರು.

''ನೀನು ಮೊದಲೊಂದು ಪ್ರಬಂಧ ಬರೆದುಕೊಂಡು ಬಾ.''

"ತರುತ್ತೇನೆ ಸರ್. ಸಂದರ್ಭಗ್ರಂಥಗಳನ್ನು ಸೂಚಿಸಿರಿ."

"ಡಿಸ್‌ಕವ್ವರಿ ಆಫ್ ಇಂಡಿಯಾ, ಆತ್ಮಚರಿತ್ರೆ, ಪೊಲಿಟಿಕಲ್ ಬಾಯಾಗ್ರಾಫಿ ಆಫ್ ನೆಹರೂ, ಫ್ರಾಂಕ್ ಮೊರೆಸ್ ಬರೆದ ಜೀವನಚರಿತ್ರೆ...." ಹೀಗೆ ಪಟ್ಟಿಯನ್ನು ಕೊಟ್ಟರು.

ಅವನು ಮನೆಗೆ ಬಂದು ಎರಡು ವಾಕ್ಯವೃಂದವನ್ನು ಇಂಗ್ಲಿಶ್‌ನಲ್ಲಿ ಬರೆಯಲು ಪ್ರಾರಂಭಿಸಿದ. ಪ್ರಬಂಧ ಮೂರನೆಯ ವಾಕ್ಯವನ್ನು ದಾಟಲಿಲ್ಲ. ಈ ವಿವರಗಳನ್ನು ಪಡೆದ ಇಂಗ್ಲಿಶ್ ಪ್ರಾಧ್ಯಾಪಕರು ತಮ್ಮ ಮೆಚ್ಚಿನ ವಿದ್ಯಾರ್ಥಿನಿಯನ್ನು ಮೆಚ್ಚಿಸಲು ತಾವೇ ಆ ಪ್ರಬಂಧವನ್ನು ಬರೆದು ಅವರ ಹೆಸರಿನಿಂದ ಕಳಿಸಿದರು ಎಂಬುದು ಅವನಿಗೆ ತಿಳಿದದ್ದು ಎರಡು ತಿಂಗಳು ಕಳೆದ ಬಳಿಕವೇ. ಆದರೆ ಲಕ್ಸ್ ಸೋಪಿನ ಸ್ಪರ್ಧೆಗೆ ಯಾರ ಸಹಾಯವೂ ಅಗತ್ಯವಿರಲಿಲ್ಲ. ಸಂದರ್ಭ ಗ್ರಂಥ;.ಳ ಅವಶ್ಯಕತೆಯಿಲ್ಲ. ಲಕ್ಸ್ ನಿಮಗೆ ಏಕೆ ಸೇರುತ್ತದೆ? ಕೆಳಗೆ ಅದರ ಗುಣಗಳ ಪಟ್ಟಿ. ಸುಗಂಧ, ಮೈಯ ಕಾಂತಿಯನ್ನು ಹೆಚ್ಚಿಸುತ್ತದೆ. ಚರ್ಮವನ್ನು ಸಂರಕ್ಷಿಸುತ್ತದೆ. ಇವುಗಳನ್ನು ಒಂದು ಕ್ರಮದಲ್ಲಿ ಜೋಡಿಸುವುದು. ಲಕ್ಸ್ ಸಾಬೂನಿನ ಮೂರು ಹೊದಿಕೆಗಳನ್ನು ಕಳಿಸುವುದು. ಉತ್ತರ ಸರಿಯಾಗಿದ್ದರೆ ೨೫ ಸಾವಿರ ರೂಪಾಯಿ. ದಿನದಿನವೂ ಹಣಗಳಿಸುವ ಹೊಸ ಹಾದಿಗಳನ್ನು ಹುಡುಕ ತೊಡಗಿದ. ಟಿಟ್-ಬಿಟ್ಸ್‌ದಲ್ಲಿಯ ಅರೆನಗ್ನ ಚಿತ್ರಗಳನ್ನು ನೋಡುತ್ತಿದ್ದ ಹಾಗೆಯೇ ಅದರಲ್ಲಿಯ ಎರಡು ಪ್ರಕಟಣೆಗಳು ಕಣ್ಣು ಸೆಳೆದವು. ಅವುಗಳಲ್ಲಿಯೂ ಅಂತಹ ಬುದ್ಧಿವಂತಿಕೆ ಏನೂ ಇರಲಿಲ್ಲ. ೭೫೦ ಪೌಂಡು ಬಹುಮಾನ ! ಫ್ಯಾಶನ್ ಕಂಟೆಸ್ಟ್. ಒಂಬತ್ತು ಜನ ಚಲುವೆಯರು ವಿವಿಧ ಭಂಗಿಗಳಲ್ಲಿ ನಿಂತಿದ್ದಾರೆ. ಒಬ್ಬೊಬ್ಬರು ಒಂದೊಂದು ಬಗೆಯ ಸ್ವಿಮ್ ಸೂಟನ್ನ ತೊಟ್ಟುಕೊಂಡು. 'Prove your fashion skill' ಇದನ್ನು ತಾನು ತುಂಬಿ ಕಳಿಸಲೇಬೇಕು. ಆದರೆ 3 Pence each line ಎಂಬ ಸೂಚನೆ ಅವನ ಕಾಲನ್ನು ಕಟ್ಟಿತು. "ಮೂರು ಪೆನ್ಸ್ ಎಂದರೆ ಎಷ್ಟು? ಪರದೇಶಕ್ಕೆ ಹಣವನ್ನು ಕಳಿಸುವ ಬಗೆ ಯಾವುದು?" ಎಂಬ ವಿವರಗಳನ್ನು ಪಡೆಯಲು ವ್ಯರ್ಥ ಪ್ರಯತ್ನ ಮಾಡಿದ. ಅವನಿಗೆ ತನ್ನ ಬದುಕು ಕತ್ತಲೆ ಕೋಣೆಯಲ್ಲಿದ್ದಂತೆನಿಸಿತು.

ಏನು ಮಾಡಬೇಕೆಂಬುದೆ ಅವನಿಗೆ ತಿಳಿಯಲಿಲ್ಲ. ಕೊನೆಗೆ ಅವನಿಗೆ ಉಳಿದ ದಾರಿಯೆಂದರೆ ಕಾಲೇಜಿನಲ್ಲಿ ಅವಕಾಶ ಸಿಕ್ಕಲ್ಲೆಲ್ಲ ಮನಬಂದಂತೆ ಗೀಚುವುದು. ಬೇಕಾದ ಹುಡುಗಿಯರ ಹೆಸರುಗಳನ್ನೆಲ್ಲ ಗೋಡೆಗಳ ಮೇಲೆ ಬರೆದ. ಕಕ್ಕಸದ ಗೋಡೆಗಳಲ್ಲೂ ಬರೆದ. ಚಿತ್ರವಿಚಿತ್ರ ಆಕೃತಿಗಳನ್ನು ಬರೆದ. ಈಗಾಗಲೇ ವಿಪುಲವಾಗಿದ್ದ ಅಶ್ಲೀಲ ಸಾಹಿತ್ಯವನ್ನು ಮತ್ತೂ ಸಮೃದ್ಧವಾಗಿ ಮಾಡಿದ. ಕ್ಲಾಸ್‌ರೂಮುಗಳಲ್ಲಿ ಗದ್ದಲ ಮಾಡಿದ. ಸ್ಥೂಲಕಾಯದ ಹುಡುಗಿಯರನ್ನು ಕಂಡು ದಾರಾಸಿಂಗ ಎಂದು ಗೇಲಿ ಮಾಡಿದ. ಸೂಚ್ಯವಾಗಿ ಕೆಮ್ಮಿ ಹುಡುಗಿಯರನ್ನು ಅಪಮಾನಮಾಡಲು ಹೇಸಲಿಲ್ಲ. ಬಸ್ಸಿನಲ್ಲಿ ಧೈರ್ಯವಾಗಿ ಹುಡುಗಿಯರಿಗೆ ತೀರ ಹತ್ತಿರವಾಗಿ ಕುಳಿತ. ತಾನು ಕೇಳಿದ ಜೋಕುಗಳನ್ನೆ ಬಸ್ಸಿನಲ್ಲಿ ಗಟ್ಟಿಯಾಗಿ ಹೇಳಿ ಹೇಳಿ ಸುಪ್ರಸಿದ್ಧನಾದ. ವರ್ಗಗಳಲ್ಲಿಯ ಪ್ರಾಧ್ಯಾಪಕನಿಗೆ ತೀರ ಉದ್ಧಟತನದಿಂದ ಉತ್ತರ ಕೊಟ್ಟ. ಕಾಲೇಜ ಗಾರ್ಡನದಲ್ಲಿಯ ಹೂಗಳನ್ನು ಕಿತ್ತುಹಾಕಿದ. ಗಿಡಗಳ ಟೊಂಗೆಗಳನ್ನು ಮುರಿದು ಹಾಕಿದ. ನಡುದಾರಿಯಲ್ಲಿ ನಿಂತು, ಪ್ರಾಧ್ಯಾಪಕರು ಹೋಗುತ್ತಿದ್ದಾಗ ಕೈಯಲ್ಲಿಯ ಪುಸ್ತಕಗಳನ್ನು ಗಾಳಿಯಲ್ಲಿ ತೂರಿ ತೃಪ್ತಿಪಟ್ಟ. ವರ್ಗಗಳಲ್ಲಿ ಬಾಗಿಲಿಂದ ಒಳಸೇರದೆ ಕಿಟಕಿಯಿಂದ ನುಗ್ಗಿದ. ಏನಾದರೂ ಅವನಿಗೆ ಸಮಾಧಾನವಾಗಲಿಲ್ಲ.

''ನಾನೂ ಕ್ರಿಕೆಟ್ ಟೀಮಿನಲ್ಲಿ ಬರುತ್ತೇನೆ.'' ಹೋಗಿ ಕ್ರಿಕೆಟ್ ಟೀಮಿನ ವ್ಯವಸ್ಥಾಪಕರನ್ನು ಕೇಳಿದ. ಅವನು ನಕ್ಕು ಹೇಳಿದರು:

''ನೀನು ಮುಂದಿನ ಜನ್ಮದಲ್ಲಿ ಬಾ.''

ಯಾವ ಆಟದಲ್ಲೂ ಅವನನ್ನು ತೆಗೆದುಕೊಳ್ಳಲಿಲ್ಲ. ಬೇರೆ ಬೇರೆ ಕಡೆಗಳಲ್ಲಿ ಕಾಲೇಜಿನ ಹುಡುಗರು ಹುಡಿಗಿಯರು ಹೋಗಿ ಬಂದರು. ಅವನ ಮನಸ್ಸು ಕುದಿಯಿತು. ಏನು ಮಾಡಬೇಕು? ಸರಿ, ಸ್ಥಾನಿಕ ದೈನಿಕ ಪತ್ರಿಕೆಗಳಲ್ಲಿ ಪ್ರಾಧ್ಯಾಪಕರ ಮೇಲೆ ಮೂರು ನಾಲ್ಕು ಪತ್ರಗಳನ್ನು ಬರೆದು ತನ್ನ ನಂಜನ್ನೆಲ್ಲ ಕಾರಿಕೊಂಡ. ಮುಂದೇನು? ಎಂಬ ಪ್ರಶ್ನೆ ಅವನೆದುರು ಮತ್ತೆ ಧುತ್ತೆಂದು ನಿಂತು. ಬಸ್ ಕಂಡಕ್ಟರನೊಡನೆ ಕಾಲು ಕೆದರಿ ಜಗಳ ತೆಗೆದು ಪೊಲೀಸರ ಕಚೇರಿಯವರೆಗೆ ಹೋಗಿ ಬಂದ. ಆದರೆ ಯಾವ ವಿದ್ಯಾರ್ಥಿಯೂ ಅವನನ್ನು ಗಮನಿಸಲಿಲ್ಲ. ವಕ್ತೃತ್ವ ಸ್ಪರ್ಧೆಯಲ್ಲಿ ಭಾಗವಹಿಸಬೇಕೆಂದು ತನ್ನ ಹೆಸರನ್ನು ಕೊಟ್ಟು ಬಂದ. ಆದರೆ ಅವನ ಹೆಸರನ್ನು ತೆಗೆದುಹಾಕಲಾಯಿತು. ವಾಚನಾಲಯದಲ್ಲಿ ಸಿಪಾಯಿಗಳೊಡನೆ ಜಗಳ ತೆಗೆದು ಪ್ರಾಚಾರ್ಯರ ಎದುರು ಅವರ ಮೇಲೆ ದೂರು ಒಯ್ದ. ''ಕಾಲೇಜಿಗೆ

'ಫಿಲ್ಮ್ ಫೇರ್' ಹಾಗು 'ಸ್ಕ್ರೀನ್' ತರಿಸಬೇಕು'' ವಾಚನಾಲಯದ ಅಧಿಕಾರಿಗಳಿಗೆ ಸೂಚನೆ ಕೊಟ್ಟ. '' ಇದು ಕಾಲೇಜು. ಅವುಗಳನ್ನು ನೀವು ಊರಲ್ಲಿ ಬೇರೆ ಕಡೆಗೆ ನೋಡಬಹುದು'' ಅವರು ಹೇಳಿದರು. ಪತ್ರಿಕೆಗಳಲ್ಲಿ ಈ ವಿಷಯ ಟೀಕೆಮಾಡಿ ಒಂದೆರಡು ಪತ್ರ ಬರೆದ. ಈಗ ನಿರ್ಭಯವಾಗಿ ತನ್ನ ಹೆಸರನ್ನು ಕೊಟ್ಟು ಸಂಪಾದಕರಿಗೆ ಪ್ರಶ್ನೆಗಳನ್ನು ಕೇಳಿದ. ''ನಾನು ಒಂದು ಹುಡುಗಿಯನ್ನು ಮದುವೆಯಾದಂತೆ ದಿನವೂ ಕನಸು ಕಾಣುತ್ತೇನೆ. ಇದು ಸತ್ಯವೇಕಾಗಲೊಲ್ಲದು?'' ಎಂಬಂತಹ ಪ್ರಶ್ನೆಗಳನ್ನು ಕೇಳಿದ. ಸಿನೆಮಾ ನಟಿಯರಿಗೆ ಪತ್ರಗಳನ್ನು ಬರೆದ. ಅವರಿಂದ ಉತ್ತರಗಳನ್ನು ಪಡೆದ. ಈಗ ಅವನು ಯಾರಿಂದಲೂ ಸಲಹೆಗಳನ್ನು ಪಡೆಯುವುದಿಲ್ಲ. ತನಗೆ ತಿಳಿದಂತೆ ಮಾಡುತ್ತಾನೆ. ಕಾಲೇಜದಲ್ಲಿಯ ಪತ್ರಿಕೆಗಳಲ್ಲಿಯ ನಟಿಯರ ಚಿತ್ರಗಳನ್ನು ಕತ್ತರಿಸಿಕೊಂಡೊಯ್ದ.

ಕಾಲೇಜ ಪತ್ರಿಕೆಯ ವಿದ್ಯಾರ್ಥಿ ಪ್ರತಿನಿಧಿಗಳ ಹೆಸರು ನೋಟೀಸ್ ಬೋರ್ಡಿನ ಮೇಲೆ ಬಂದಾಗ ಅವನು ತುಂಬ ಕೋಪಗೊಂಡ. ಈ ಸಲ ತಾನು ವಿದ್ಯಾರ್ಥಿಗಳ ಪ್ರತಿನಿಧಿಯಾಗಬೇಕೆಂದು ಹಾರೈಸಿದ್ದ. ಅವನು ಪ್ರಾಧ್ಯಾಪಕ ಸಂಪಾದಕರ ಕಡೆಗೆ ನೇರವಾಗಿ ಹೋದ.

''ವಿದ್ಯಾರ್ಥಿಗಳ ಪ್ರತಿನಿಧಿಯನ್ನು ನೀವು ಹೇಗೆ ಆರಿಸುತ್ತೀರಿ?'' ಪ್ರಶ್ನೆಯನ್ನು ಹಾಕಿದ. ತುಸು ಗೊಂದಲದಲ್ಲಿ ಬಿದ್ದ ಪ್ರಾಧ್ಯಾಪಕರು ಸುಧಾರಿಸಿಕೊಂಡು ಕೇಳಿದರು:

''ಏಕೆ?''

''ಯಾವ ತತ್ವದ ಮೇಲೆ ನೀವು ಆರಿಸುತ್ತೀರಿ?'' ಈ ಪ್ರಶ್ನೆ ಪ್ರಾಧ್ಯಾಪಕರ ಬುದ್ಧಿವಂತಿಕೆಯನ್ನು ಪ್ರಾಮಾಣಿಕತೆಯನ್ನು ಸಾಮರ್ಥ್ಯವನ್ನು ಪ್ರಶ್ನಿಸುವಂತಿತ್ತು. ಹತ್ತಿರ ಕುಳಿತ ಪ್ರಾಧ್ಯಾಪಕರೊಬ್ಬರು ಮಧ್ಯದಲ್ಲಿ ಕೇಳಿದರು:

''ನೀವು ಯಾರ?'' ಧ್ವನಿಯಲ್ಲಿ ಈ ಪ್ರಶ್ನೆ ಬರಿ ಪ್ರಶ್ನೆಯಾಗಿರಲಿಲ್ಲ- 'ಅದನ್ನು ಕೇಳಲು ನೀನು ಯಾರು ?' ಎಂದೇ ಅರ್ಥವಿತ್ತು.

''ನೀವು ಯಾರು? ನಾನು ನಿಮ್ಮನ್ನು ಕೇಳಿಲ್ಲ.''

''ನಿಮ್ಮ ಉದ್ಧಟತನ ನನ್ನ ಹತ್ತಿರ ನಡೆಯುವುದಿಲ್ಲ. ನಾನಿಲ್ಲಿಯ ಪ್ರಾಧ್ಯಾಪಕ. ಸರಿಯಾಗಿ ವರ್ತಿಸಲು ಕಲಿಯಿರಿ.''

''ಹೀಗೆ ಹೆದರಿಕೆಗೆ ಬಗ್ಗುವವನಲ್ಲ ನಾನು. ಕಾಲೇಜಿನ ವಿದ್ಯಾರ್ಥಿ ಇದ್ದೇನೆ ನಾನು.'' ಅವನ ಧ್ವನಿಯಲ್ಲಿ ಪರಿಣಾಮ ನೆಟ್ಟಗಾಗಲಿಕ್ಕಿಲ್ಲ ಎಂಬ ಎಚ್ಚರಿಕೆ ಇತ್ತು.

''ಇರಬಹುದು. ನೀವು ಏನು ಬೇಕಾದರೂ ಮಾಡಿಕೊಳ್ಳಬಹುದು'' ಎಂದು ಹೇಳಿಕಳಿಸಿದರು.

ಅವನ ತಲೆಯಲ್ಲೊಂದು ಬೆಳಕು ಮೂಡಿತು. ಆರೆಂಟು ವಿಜ್ಞಾನದ ವಿದ್ಯಾರ್ಥಿಗಳನ್ನು ಒಂದೆಡೆಗೆ ಕರೆದು ತಂದ. ಅವರನ್ನು ಹುರಿದುಂಬಿಸಿದ. ''ಇಷ್ಟು ವರ್ಷಗಳ ಅವಧಿಯಲ್ಲಿ ವಿಜ್ಞಾನದ ವಿದ್ಯಾರ್ಥಿ ವಿದ್ಯಾರ್ಥಿಪ್ರತಿನಿಧಿ ಯಾದುದುಂಟೆ? ಸ್ವಾತಂತ್ರ್ಯ ಪೂರ್ವದ ಇತಿಹಾಸವನ್ನು ಬಿಟ್ಟು ಬಿಡುವಾ. ಈಗ ವಿಜ್ಞಾನದ ಮಹತ್ವ ಇಷ್ಟೇ ಎಂದು ಹೇಳಲು ಬರುವುದಿಲ್ಲ. ಟ್ಯಾಲೆಂಟ್ ಇಲ್ಲದ ಆರ್ಟ್ಸ್ ವಿದ್ಯಾರ್ಥಿಗಳ ಕೈಯಲ್ಲಿ ಕಾಲೇಜ ನಿಯತಕಾಲಿಕ ಅಂದಗೆಟ್ಟಿದೆ. ''ಅವರಿಗೂ ಈ ಮಾತು ಒಪ್ಪಿಗೆಯಾಯಿತು. ಪ್ರಾಚಾರ್ಯರ ಕಡೆಗೆ ಹೋಗುವದೆಂದು ನಿಶ್ಚಯಿಸಿದರು. ಅವರಲ್ಲೊಬ್ಬ ''ನಾವು ಮೊದಲು ರಸಾಯನಶಾಸ್ತ್ರದ ಪ್ರಾಧ್ಯಾಪಕರ ಕಡೆಗೆ ಹೋಗೋಣ.'' ಸೂಚಿಸಿದ. ಈ ಮಾತು ಅವನಿಗೆ ಬೇಡವಾಗಿತ್ತು. ತಾನು ತುಂಬ ಅನಿಯಮಿತನಾಗಿದ್ದ. ತನ್ನ ಉದ್ದೇಶ ಸಫಲವಾಗದೆ ಬೇರೆ ಏನಾದರೂ ಅನಾಹುತವಾಗಬಹುದೆಂದು ಭಯವಿತ್ತು.

''ಅವರ ಕಡೆಗೆ ಹೋಗಿ ಏನು ಮಾಡುವದು?''

''ಅವರು ನಮ್ಮನ್ನು ಎತ್ತಿಹಿಡಿದರೆ ನಾವು ಯಶಸ್ವಿಗಳಾಗುವುದು ಖಂಡಿತ.''

''ಅವರು ಇದೆಲ್ಲ ಗೊಂದಲ ಬೇಡ ಎಂದರೆ?''

''ಹಾಗನ್ನಲಾರರು.''

''ಹಾಗೆಂದರೆ?''

''ಅವರು ವಿಚಾರಮಾಡಿ ನಿರ್ಣಯ ತೆಗೆದುಕೊಳ್ಳುತ್ತಾರೆ. ಅವರ ನಿರ್ಣಯವನ್ನು ಒಪ್ಪಿಕೊಳ್ಳುವುದು.''

ಅವನು ನಿರುಪಾಯನಾದ. ಅವರ ಕಡೆಗೆ ಹೋದರೆ ಈ ವಾದವನ್ನು ಎತ್ತಿಹಿಡಿಯುತ್ತಾರೆ. ಆದರೆ....... ತನ್ನ ಆಸೆ - ಸಂಪಾದಕನಾಗುವ ಆಸೆ ಮಾತ್ರ

ಈಡೇರುವುದಿಲ್ಲ.

ರಸಾಯನಶಾಸ್ತ್ರದ ಪ್ರಾಧ್ಯಾಪಕರಿಗೆ ಈ ವಾದ ಸರಿಯೆನ್ನಿಸಿತು. ಆದರೆ ವಿದ್ಯಾರ್ಥಿಗಳ ವಾದದಲ್ಲಿ ತಾನು ಕೈಹಾಕಬೇಕೇ ಹಾಕಬಾರದೇ ಎಂದು ಯೋಚಿಸಿದರು.

``ಹೇಗೂ ಎರಡೂ ಕಾಲೇಜುಗಳು ಬೇರೆ ಬೇರೆಯೇ ಆಗಿವೆ. ಮುಂದಿನ ಸಲ ನಮ್ಮ ಸ್ನೇಹ ಸಮ್ಮೇಲನವೂ ಬೇರೆ, ನಿಯತಕಾಲಿಕವೂ ಬೇರೆ'' ಹೀಗೆ ಹೇಳಿ ವಿದ್ಯಾರ್ಥಿಗಳನ್ನು ಸಮಾಧಾನಪಡಿಸಿದರು.

``ನಾನು ಹೇಳಿದ ಹಾಗೆಯೆ ಆಯಿತಲ್ಲ. ನೀವೆಲ್ಲಿ ಕೇಳುತ್ತೀರಿ?'' ಅವನು ಸ್ನೇಹಿತರನ್ನು ಮೂದಲಿಸಿದ.

``ಇನ್ನು ಏನು ಮಾಡುವುದೂ ಸಾಧ್ಯವಿಲ್ಲ'' ಅವರು ಹೇಳಿದರು. ಆದರೆ ಅವನು ಇಲ್ಲಿಗೇ ನಿಲ್ಲಲಿಲ್ಲ. ಪತ್ರಿಕೆಯಲ್ಲೊಂದು ಪತ್ರವನ್ನು ಬರೆದ: ಪ್ರಾಧ್ಯಾಪಕರನ್ನು ತುಂಬ ಟೀಕಿಸಿದ: ``ದಬ್ಬಾಳಿಕೆಯ ಮನೋವೃತ್ತಿಯ ಪ್ರಾಧ್ಯಾಪಕರ ಕೈಯಲ್ಲಿ ವಿದ್ಯಾರ್ಥಿಗಳಿಗೆ ಉಳಿಗಾಲವಿಲ್ಲ. ನಿಯತಕಾಲಿಕದ ಸಂಪಾದಕತ್ವಕ್ಕೆ ಬೇಕಾದ ಅರ್ಹತೆ ಬುದ್ಧಿವಂತಿಕೆಯಲ್ಲ. ಹುಡುಗರೇ ಸಿಕ್ಕುವುದಿಲ್ಲ ಈ ಸ್ಥಾನಕ್ಕೆ. ಚಲುವಿಯಾದ ಹುಡುಗಿಯೇ ಬೇಕು.'' ಹೀಗೆಲ್ಲ ತನ್ನ ಮನಸ್ಸಿಗೆ ಬಂದಂತೆ ಬರೆದ. ಒಂದೆರಡು ಲೇಖನಗಳನ್ನು ಬರೆದುಕೊಂಡು ಬಯ್ದ. ಸಂಪಾದಕರು ಅವನನ್ನು ಗಣಿಸಲೇ ಇಲ್ಲ.

.

.

ಏನು ಮಾಡಬೇಕು? ಸತ್ಯಾಗ್ರಹ? ಸಂಪು? ದೊಂಬಿ? ಹೌದು ಏನನ್ನಾದರೂ ಮಾಡಬೇಕು. ಪತ್ರಿಕೆಯೊಂದರಲ್ಲಿ ಪ್ರಕಟವಾದ ಪ್ರಸಿದ್ಧ ಪ್ರೇಮಪತ್ರಗಳನ್ನು ಓದಿ ಅವನ ತಲೆಯಲ್ಲೊಂದು ಯೋಚನೆ ಬಂತು. ಐದಾರು ಪತ್ರಗಳನ್ನು ಬರೆದು ಸಿದ್ಧಪಡಿಸಿದ. ಯಾರು ಯಾರಿಗೆ ಹಾಕಬೇಕು? ಆ ಹುಡುಗಿಗೆ...? ಛೇ. ಅವಳ ಮನೆಯಲ್ಲಿಯೇ ಇರುವುದು. ಅವಳ ತಂದೆಗೆ ಗೊತ್ತಾದರೆ? ಹೇಗೆ ಗೊತ್ತಾದೀತು? ಗೊತ್ತಾಗಲಿ ಬಿಡಲಿ ಅವಳಿಗೆ ಹೇಳುವುದು ಸರಿಯಲ್ಲ. ಅವನು ಆಮೇಲೆ ಬಹಳ ಹೊತ್ತು ಯೋಚಿಸಲಿಲ್ಲ. ತಲೆಯಲ್ಲಿ ಬಂದ ವಿಳಾಸಗಳಿಗೆ ಅವುಗಳನ್ನು ಅಂಚೆಯಿಂದ ಕಳಿಸಿಬಿಟ್ಟ. ಅವನು ನಾಲ್ಕಾರು ಸುದ್ದಿಗಳನ್ನು ಕೇಳಿದ್ದ. ಹುಡುಗ-ಹುಡುಗಿಯರು ಕೂಡಿ ಹೋಟೆಲಿಗೆ

ಹೋಗುವ-ಪರಸ್ಪರ ಪ್ರೇಮದಲ್ಲಿರುವ ಕತೆಗಳನ್ನು ಕಾದಂಬರಿಗಳನ್ನು ಓದಿದ್ದ. ಸಿನೇಮಾದಲ್ಲಿ ನೋಡಿದ್ದ. ಯಾವುದೋ ಒಂದು ಸಿನೆಮಾ - ''ನಾಯಕ ನಾಯಕಿಯ ಹಸ್ತವನ್ನು ತನ್ನ ಕೈಲಿ ಹಿಡಿದು ಅವಳ ಹಸ್ತಸಾಮುದ್ರಿಕವನ್ನು ಹೇಳುತ್ತಿದ್ದಾನೆ. ಹೌದು - ಇಂತಹ ಅವಕಾಶ ಬರಲಾರದೆ?

ನೂರು ವಿಚಾರಗಳು, ಗುಂಪುಗುಂಪಾಗಿ ಹೊಲಸನ್ನು ಮುತ್ತಿದ ನೊಣಗಳಂತೆ ಬಂದು ಅವನನ್ನು ಪೀಡಿಸುತ್ತಿದ್ದ. ಲಂಡನದಲ್ಲಿಯ ವಿದ್ಯಾರ್ಥಿನಿಯರ ನೈತಿಕ ರೀತಿನೀತಿಗಳನ್ನು ಪ್ರಕ್ಷೋಭಕರವಾಗಿ ವರ್ಣಿಸುವ ಲೇಖನವೊಂದು Titbits ದಲ್ಲಿ ಇತ್ತು. ''Students live in sex-to eat.'' ಕನ್ನಡ ಕಾದಂಬರಿಗಳಲ್ಲಿಯೂ ಕೆಲವು ಕಡೆಗಳಲ್ಲಿ ಸುಶಿಕ್ಷಿತ ವಿದ್ಯಾರ್ಥಿನಿಯರನ್ನು ದುರ್ವ್ಯಾಪಾರದಲ್ಲಿ ತೊಡಗಿಸುವ ಸಂಸ್ಥೆಗಳಿವೆ ಎಂದು ಓದಿದ್ದ. ಆದೇ ಓದಿದ್ದ ಕಾದಂಬರಿಯ ಕತೆಯೊಂದು ಇನ್ನೂ ಹಸಿರಾಗಿ ಮನಸ್ಸಿನಲ್ಲಿ ಉಳಿದಿತ್ತು. ಜತೆಗಾರನನ್ನು ಕೇಳಿದ:

'' 'ಹೆಣ್ಣೆ ನಿನ್ನ ಹೆಸರು... ' ಈ ಕಾದಂಬರಿಯನ್ನು ಓದಿದ್ದೀಯ?''

'' ಓದಿದ್ದೇನೆ. ಟೆರಿಬಲ್. ಎಕ್ಸಾಯಿಟಿಂಗ್.''

''ಅದೆಲ್ಲ ಸರಿ. ಅಂತಹ ವ್ಯವಹಾರ ನಿಜವಾಗಿ ನಡೆಯುತ್ತದೆಯೆ?''

''ಎಂತಹ ವ್ಯವಹಾರ.....?''

''ಆ ಕಾದಂಬರಿಯಲ್ಲಿ ವರ್ಣಿಸಿದ್ದಾರಲ್ಲ. ಕುಲೀನ ಸುಶಿಕ್ಷಿತ ವಿದ್ಯಾರ್ಥಿನಿಯರು ಒಂದು ಸ್ಥಳದಲ್ಲಿ ಕೂಡುತ್ತಾರೆ. ಅಲ್ಲಿ ವಿದ್ಯಾರ್ಥಿ....''

''ಸರಿ ಏಕೆ?''

''ನೀನು ನಾನು ಬರಿ ಓದಿಯೆ ತೃಪ್ತಿಪಡಬೇಕೇನು?''

''ಅಂದರೆ.......?''

'' ಸಣ್ಣ ಮಗು ನೀನು. ಈ ಊರಲ್ಲಿ ಹೀಗೆ ನಡೆಯುತ್ತದೇನು?''

''ನನಗೇನು ಗೊತ್ತು?''

ಅವನಿಗೆ ಮಾತು ಮುಂದೆ ಬೆಳೆಸುವುದರಲ್ಲಿ ವ್ಯರ್ಥವೆನಿಸಿತು. 'ತಂದೆಯೇ ಯಾರಿಂದಲೋ ಹಣ ಸಾಲವಾಗಿ ತೆಗೆದುಕೊಂಡು ಮದ್ಯ ಕುಡಿದು ಅಂತಹ ಒಂದು ಸ್ಥಳಕ್ಕೆ ಭೆಟ್ಟಿಯನ್ನು ಸಂಜೆಗತ್ತಲಲ್ಲಿ ಕೊಟ್ಟಾಗ - ಆ ಮನೆಯ ಯಜಮಾನತಿ

ಅವನ ಕಣ್ಣೆದುರು ಹೆಣ್ಣುಗಳ ಮೆರವಣಿಗೆಯನ್ನೇ ಮಾಡಿಸುತ್ತಾಳೆ- ಕೊನೆಯದಾಗಿ ಅವನ ಮಗಳೇ ಅಲ್ಲಿರುತ್ತಾಳೆ....'' ಇಂತಹ ಕತೆಯೊಂದನ್ನು ಅವನು ಓದಿರುತ್ತಾನೆ. ಈ ಊರಲ್ಲಿಲ್ಲವೆ ಇಂತಹ ನೈಟ್‌ಕ್ಲಬ್?

ಅವನು ಹಗಲುಗನಸುಗಳಲ್ಲಿ ತೊಡಗುತ್ತಾನೆ. ಆ ಹುಡುಗಿ ಅಲ್ಲಿ ಆ ಸ್ಥಳಕ್ಕೆ ಬರುತ್ತಾಳೆ. ಅವನ ಮನಸ್ಸಿಗೆ ನೋವಾಯಿತು. ಆ ಹುಡುಗಿ ಬರಬಾರದು. ಅವಳು ತನ್ನ ಹೃದಯದ ಅಧಿದೇವತೆ. ಅವಳು ತನ್ನ ಗೃಹಸ್ವಾಮಿನಿ. ಉಳಿದ ಹುಡುಗಿಯರು ಬರಲಿ ಒಂದು ಎರಡು ಮೂರು.... ಹುಡುಗಿಯರನ್ನು ಎಣಿಸುತ್ತ ಅವರ ಅಂಗಾಂಗಗಳನ್ನು ಲೆಕ್ಕಹಾಕುತ್ತ ಕುಳಿತ ಕನಸು. ಆದರೆ ಇಂತಹ ಹಗಲುಗನಸುಗಳನ್ನು ಎಷ್ಟು ಹೊತ್ತು ಉಣ್ಣಲು ಸಾಧ್ಯ? ಸೆಕ್ಸ್ ಟನ್ ಬ್ಲೇಕನ ಪತ್ತೇದಾರಿ ಕಾದಂಬರಿಯನ್ನು ತೆಗೆದು ಕಾಟಿನ ಮೇಲೊರಗಿ ಓದಹತ್ತಿದ - ಸಿಗರೇಟನ್ನು ಸೇದುತ್ತ.

ಲಂಡನ್ನಿನ ವಿದ್ಯಾರ್ಥಿಗಳ ವ್ಯವಹಾರ ಅವರ ಕಣ್ಣೆದುರು ಕುಣಿಯುತ್ತಿತ್ತು. ಅವರ ಅನಿರ್ಬಂದ ಸ್ವಾತಂತ್ರ್ಯ ಅವನ ಹೃದಯದಲ್ಲಿ ಮತ್ತೆ ಕಿಡಿಯನ್ನು ಹೊತ್ತಿಸಿತು. ನ್ಯೂಯಾರ್ಕದ ಸಿಟಿ ಆಫ್ ಟೆರರ್ ಚಿತ್ರಮಾಲಿಕೆಯಲ್ಲಿಯ ಭಯಗ್ರಸ್ತ ತರುಣಿಯ ಎರಡು ಕಣ್ಣುಗಳು ಅವನ ಸ್ಮೃತಿಪಟಲದಲ್ಲಿ ಅಚ್ಚೊತ್ತಿದವು. ಕಾಡ ಬೇಗೆಯಂತೆ ಸಹಸ್ರ ದಿಕ್ಕುಗಳಲ್ಲಿ ನಾಲಗೆ ಚಾಚುವ ಅವನ ಮನಸ್ಸು ಕನ್ನಡ ಕಾದಂಬರಿಯನ್ನು ನೆಕ್ಕುತ್ತಿತ್ತು. ಇಂಗ್ಲಿಶ್ ಕಾದಂಬರಿಗಳಲ್ಲಿಯ ಅನೇಕ ತುಣುಕುಗಳು ಅವನ ತಲೆಯಲ್ಲಿ ಉಳಿದಿವೆ. ಆದರೆ ಕನ್ನಡವೇನೂ ಹಿಂದೆ ಉಳಿದಿಲ್ಲ. ಅವನಿಗೆ 'ಲೋಳಿತಾ' ಕಾದಂಬರಿಗಿಂತ ಕನ್ನಡ ಕಾದಂಬರಿ ಹೆಚ್ಚು ಸೇರಿವೆ. 'ರಾಜು ಸುಜಾತಳ ತುಟಿ ಕಚ್ಚಿದ. ಅವಳು ಹಾ ಎಂದು ಸಣ್ಣಗೆ ನರಳಿದಳು' ಹೀಗೆ ಪ್ರಾರಂಭವಾಗುವ ಪ್ರಕರಣಗಳ ಪರ್ಯವಸಾನ, ಕಣ್ಣಿಗೆ ಕಟ್ಟುವಂತಹ ವರ್ಣನೆ.... ಅವನನ್ನು ಬೇರೊಂದು ಲೋಕಕ್ಕೆ ಒಯ್ಯುತ್ತದೆ.

ವಾರ್ಷಿಕ ಸ್ನೇಹ ಸಮ್ಮೇಲನದ ತಯಾರಿ ನಡೆದಿತ್ತು. ಅವನಿಗೆ ಕೊನೆಯ ಅವಕಾಶವಾಗಿತ್ತು- ತನ್ನ ವ್ಯಕ್ತಿತ್ವವನ್ನು ಅಭಿವ್ಯಕ್ತಿಗೊಳಿಸಲು. ವಿವಿಧ ಮನೋರಂಜನಾವಳಿ, ನಾಟಕ, ಫಿಶ್ ಪಾಂಡ್..... ಇವೆಲ್ಲವುಗಳಲ್ಲಿ ಭಾಗವಹಿಸಲೇ ಮನೋರಂಜನಾವಳಿಯಲ್ಲಿ ಏನನ್ನು ಮಾಡಬೇಕು? ಹಾ

ದ್ವಂದ್ವಗೀತ..... ಹುಡುಗಿಯೊಬ್ಬಳು ಬೇಕು. ಕಾಲೇಜಿನಲ್ಲಿ ಹುಡುಗಿಯರಿಗೇನು ಕೊರತೆಯಿಲ್ಲ. ಹೋದ ವರ್ಷವೇ ಅಲ್ಲವೇನು ಚೀನೀಯರ ದಾಳಿಯಾದ ವರ್ಷ-ಸ್ನೇಹ ಸಮ್ಮೇಲನ ನಿಲ್ಲಿಸಿದ್ದರು - ಕಾಲೇಜಿನವರು ತಮ್ಮ ದೇಶಭಕ್ತಿಯ ಪ್ರತೀಕವಾಗಿ. ಸಂರಕ್ಷಣ ನಿಧಿಗಾಗಿ ಸಾಂಸ್ಕೃತಿಕ ಕಾರ್ಯಕ್ರಮವನ್ನು ಏರ್ಪಡಿಸಿದ್ದರು.......ಅದರಲ್ಲಿ ಹಲವಾರು ಹುಡುಗ-ಹುಡುಗಿಯರೂ ಸಿನೇಮಾದ ದ್ವಂದ್ವಗೀತೆಗಳನ್ನು ಹಾಡಿದರು. ನಾನೂ ಕೇಳಬೇಕು ಈ ವರ್ಷ ಯಾವುದಾದರೂ ಹುಡುಗಿಯನ್ನು. ಹೇಗೆ ಕೇಳಬೇಕು? ಯಾರನ್ನು ಕೇಳಬೇಕು? ಈ ಸಲವಾದರೂ ಅನೇಕರು ಹಾಡಲಿದ್ದಾರೆ. 'ಹಾ !' ಎಂದು ಅವನು ಯೋಚಿಸಿದ. ಕೆಲವರಿಗೆ ಇದೆಲ್ಲ ಸುಲಭವಾಗಿ ಹೇಗೆ ಸಾಧಿಸುತ್ತದೆ? ತನಗೇ ಇದೆಲ್ಲ ಸಮಸ್ಯೆಯಾಗಬೇಕು? ಉಳಿದ ಹುಡುಗರು ಹುಡುಗಿಯರನ್ನು ಹೇಗೆ ಪಳಗಿಸುತ್ತಾರೆ? ಇದರ ರಹಸ್ಯ ತಿಳಿಯಲಿಲ್ಲ. ಆದರೂ ಪ್ರಯತ್ನಿಸುವುದು ಎಂದೂ ಮನಸ್ಸು ಮಾಡಿ ಈ ಕಲೆಯಲ್ಲಿ ಪಳಗಿದ ಒಬ್ಬನನ್ನು ಕೇಳಿದ:

"ನಾನೂ ಈ ಸಲ ಸ್ನೇಹಸಮ್ಮೇಲನದಲ್ಲಿ ಭಾಗವಹಿಸಬೇಕೆಂದು ಮಾಡಿದ್ದೇನೆ."

ಅವನ ಈ ಮಾತು ಆ ಹುಡುಗನನ್ನು ಒಂದೆರಡು ನಿಮಿಷ ಗೊಂದಲದಲ್ಲಿ ಕೆಡವಿತು. ಸಾವರಿಸಿಕೊಂಡು ಆ ಹುಡುಗ ಹೇಳಿದ:

"ನಾನೇನು ಮಾಡಬೇಕು?"

"ನಾನೂ ಒಂದು ದ್ವಂದ್ವಗೀತವನ್ನು ಹಾಡಲಿದ್ದೇನೆ."

"ನಾನೇನು ಮಾಡಬೇಕು?"

"ನಿಮ್ಮ ಸಹಾಯ ಬೇಕು."

"ಏನು?"

"ನೀನು ನನಗೊಂದು ಒಳ್ಳೆಯ ದ್ವಂದ್ವಗೀತವನ್ನು ಆರಿಸಿಕೊಡಬೇಕು."

"ಆಗಲಿ."

"ನಿಮ್ಮ ಜತೆ ಯಾರು ಹಾಡುತ್ತಾರೆ?"

"ಅದು ನಿನಗೇಕೆ ಬೇಕು?"

"ನನ್ನ ಜತೆ ಹಾಡಲು ಒಬ್ಬರು....."

``ನಿನಗೆಲ್ಲೋ ಮರುಳು'' ಎಂದು ಆ ಹುಡುಗ ಹೋದ.

ಮನೋರಂಜನೆ ಸಮಿತಿಯ ಅಧ್ಯಕ್ಷರನ್ನು ಕಾಣುವುದಕ್ಕಿಂತ ಮೊದಲು ಅವನು ತನ್ನ ಜತೆಗೆ ಹಾಡುವ ಹುಡುಗಿಯನ್ನು ಆರಿಸಿ ಅವಳನ್ನು ಒಪ್ಪಿಸಬೇಕಿತ್ತು. ಕೊನೆಗೆ ತಾನೊಬ್ಬನೇ ಹಾಡುವುದೆಂದು ನಿರ್ಧರಿಸಿದ. ಅವರ ಕಡೆಗೆ ಹೋಗಿ ಕೇಳಿಕೊಂಡ. ``ಮೇರೆ ಮಹಬೂಬ'' ಹಾಡನ್ನು ಹಾಡಿದ. ಅವನು ಸಿಲೆಕ್ಟ್ ಆಗಲಿಲ್ಲ. ಮತ್ತೆ ಮುಂದೆ ಬೇರೆ ಒಬ್ಬ ಹುಡುಗ ಬಂದು 'ಸಂಗಮ' ದಲ್ಲಿಯ ಇಂಗ್ಲಿಶ್ ಹಾಡನ್ನು ಹಾಡಹತ್ತಿದ. ಹಿಂದೆ ಇಬ್ಬರು ಬಂದರು. ಒಬ್ಬ ಆಕಾಡಿಯನ್ ವಾದ್ಯವನ್ನು ಕೊರಳಿಗೆ ಹಾಕಿಕೊಂಡು ಉತ್ಸಾಹದಿಂದ ಕುಣಿಯುತ್ತಿದ್ದ. ಇನ್ನೊಬ್ಬ ಬೊಂಗೊ ಡ್ರಮ್ ಬಡಿಯುತ್ತಿದ್ದ. ಆ ಕೋಣೆಯ ವಾತಾವರಣವೇ ಬದಲಾಗಿತ್ತು. ಮನೋರಂಜನ ಕಾರ್ಯಕ್ರಮದಲ್ಲಿ ಭಾಗವಹಿಸುವ ಹುಡುಗ ಹುಡುಗಿಯರು ಕುಳಿತಿದ್ದರು. ಒಬ್ಬ ಒಂದು ನಾಟಕದ ಸ್ವಗತವನ್ನು ಅಭಿನಯಿಸಿದ.

ಅವನು ನಾಟಕದ ಅಧ್ಯಕ್ಷರ ಕಡೆಗೆ ಹೋದ. ``ನಾನೂ ನಾಟಕದಲ್ಲಿ ಭಾಗವಹಿಸುತ್ತೇನೆ.''

``ಅವಕಾಶವಿಲ್ಲ'' ಎಂದು ಅವರು ಕಡ್ಡಿ ಮುರಿದಂತೆ ಹೇಳಿಬಿಟ್ಟರು.

``ನಾನು ಭಾಗವಹಿಸಲೇಬೇಕು'' ಅವನು ಆವೇಶದಿಂದ ಚೀರಿದ. ಪ್ರಾಧ್ಯಾಪಕರು ಅವನನ್ನು ಹೊರಗೆ ಹಾಕಿದರು. ನಾಟಕದಲ್ಲಿ ಪಾತ್ರ ವಹಿಸಿದ ಹುಡುಗರ ನಗೆ ಅಲೆ ಕಡಲ ತೆರೆಯಂತೆ ಬಂದು ಇವನ ಬೆನ್ನಿಗಪ್ಪಳಿಸಿತು. ನಾಟಕದಲ್ಲಿ ಭಾಗವಹಿಸಲಾಗಲಿಲ್ಲ. ಮನೋರಂಜನೆಯಲ್ಲಿ ಭಾಗವಹಿಸಲಾಗಲಿಲ್ಲ. ದ್ವೇಷ ಅವನಲ್ಲಿ ಮತ್ತೆ ಹೆಡೆಯೆತ್ತಿ ಫೂತ್ಕರಿಸಿದರು. ಒಂದು ತಿಂಗಳ ಹಿಂದೆಯೆ ಅವನು ತೀವ್ರವಾದ ನಿರಾಶೆಯನ್ನು ಅನುಭವಿಸಿದ್ದ. ವಿಶ್ವವಿದ್ಯಾಲಯದ ಕ್ರೀಡಾಮಹೋತ್ಸವ ಅವನ ಕಾಲೇಜಿನಲ್ಲಿಯೇ ಆಗಿತ್ತು. ನೂರಾರು ಸಂಖ್ಯೆಯಲ್ಲಿ ಹುಡುಗರು ಹುಡುಗಿಯರು ನೆರೆದಿದ್ದರು - ಸ್ಪರ್ಧಾಳುಗಳಾಗಿ. ಭಲ್ಲೆ ಎಸೆಯುವ, ಜಿಗಿಯುವ, ಓಡುವ ಹುಡುಗಿಯರನ್ನು ಕಂಡು ಬೆರಗಾಗಿ ನಿಂತ. ಹುಡುಗಿಯರ ಹತ್ತಿರ ನಿಂತು ನಗುತ್ತ ಮಾತಾಡುವ ಪ್ರಾಧ್ಯಾಪಕರನ್ನು ಕೆಂಡಗಣ್ಣಿನಿಂದ ನೋಡಿದ. ದೂರದಲ್ಲಿಯೇ ಪ್ರೇಕ್ಷಕರಾಗಿ ನಿಂತ ಕೆಲವರು ಅತೃಪ್ತ ಪ್ರಾಧ್ಯಾಪಕರ ಟೀಕೆಟಿಪ್ಪಣಿ ಅವನ ಕಿವಿಯಲ್ಲಿ ಬಿತ್ತು. ಅವನ ಕಾಲೇಜು ಜನರಲ್ ಚಾಂಪಿಯನ್‌ಶಿಪ್‌ನ್ನು ಕಳೆದುಕೊಂಡಾಗ ಎಂತಹ

ತೃಪ್ತಿಯನ್ನನುಭವಿಸಿತು ಅವನ ಮನಸ್ಸು - ಆದರೆ ಪತ್ರಿಕೆಯಲ್ಲಿ ತನ್ನ ಕಾಲೇಜು ಸೋತ ಕಾರಣವನ್ನು ವಿಮರ್ಶಿಸಿ ಪ್ರಾಧ್ಯಾಪಕರ ಅನಾಸಕ್ತಿ, ಪಕ್ಷಪಾತತನ ಇವುಗಳನ್ನು ಮುಖ್ಯ ಕಾರಣಗಳೆಂದು ನಮೂದಿಸಿದ್ದ. ಬೇರೆ ಕಾಲೇಜಿನ ಹುಡುಗರು ಅಸಂತುಷ್ಟರಾಗಿ ಕಾಲೇಜದ ಕಿಟಕಿಗಳಿಗೆ ಕಲ್ಲೆಸೆದಾಗ ಅವನೂ ಒಂದೆರಡು ಕಲ್ಲುಗಳನ್ನು ಎಸೆದಿದ್ದ.

ಅವನ ಕಾಲೇಜಿನಲ್ಲಿ ಒಂದು ದಿನ ಒಬ್ಬ ಲೇಡಿ ಪೊಲೀಸ್ ಕಾನ್‌ಸ್ಟೇಬಲ್ ಓರ್ವ ಹುಡುಗನನ್ನು ಕೈದುಮಾಡಿದಳು - ಅಸಭ್ಯ ವರ್ತನೆಯ ಆರೋಪದಿಂದ. ಪ್ರಾಚಾರ್ಯರು ಹುಡುಗನ ಪಕ್ಷವನ್ನು ವಹಿಸಿದರು. ಅಷ್ಟರಲ್ಲಿ ವಿದ್ಯಾರ್ಥಿಗಳ ಗುಂಪು ಘೋಷಣೆಗಳನ್ನು ಮಾಡುತ್ತ ಬಂತು. ಅವಳ ಸೈಕಲ್ ಮುರಿದು ಹಾಕಿದರು. ಅವನೂ ಆ ಗುಂಪಿನಲ್ಲಿ ಸೇರಿಕೊಂಡ. ತನ್ನದೇ ಒಬ್ಬನದು ಧ್ವನಿ ಎನ್ನುವ ಹಾಗೆ ಕೂಗಿದ. ಒಂದು ಅರೆತಾಸಿನಲ್ಲಿ, ಕೈದಾದ ಹುಡುಗ ಧೀರಪುರುಷನಾಗಿಬಿಟ್ಟ. ಅವನಿಗೆ ಮತ್ಸರ. ನನ್ನ ಕೈದುಮಾಡಿದ್ದರೆ..... ಎಂತಹ ಅಭಿಮಾನ ಎರಡು ಸಾವಿರ ಹುಡುಗರು ತನ್ನ ಬೆನ್ನಹಿಂದೆ. ಧನ್ಯತೆ ಎನಿಸಿತು. ಆದರೆ ಒಂದೇಕ್ಷಣ. ಆ ಹಗಲುಗನಸು ಆಣೆಕಲ್ಲು ಕರಗಿದಂತೆ ಕರಗಿತು.

ಅವನು ಯಾವುದರಲ್ಲಿ ಭಾಗವಹಿಸದಿದ್ದರೂ ಸ್ನೇಹಸಮ್ಮೇಲನದ ದಿನಗಳು ಬಂದವು. ಅವನಿಗೆ ಇನ್ನೊಂದು ಅಪೇಕ್ಷೆ ಉಳಿದಿತ್ತು. ಕಾಲೇಜಿನಲ್ಲಿ ಎರಡು ವರ್ಷಗಳನ್ನು ಕಳೆದ. ಅವನಿಗೆ ಇನ್ನೂ ಒಂದೇ ಒಂದು ಫಿಶ್ ದೊರೆತಿರಲಿಲ್ಲ. ಅವನಿಗೆ ಈ ಮೊದಲು ಇದರ ಅರಿವೂ ಇರಲಿಲ್ಲ. ಇದು ಈಗ ತೀವ್ರವಾಗಿ ಕಾಡಹತ್ತಿತು. 'ನನಗೆ ಈ ವರ್ಷ ಫಿಶ್ ದೊರೆಯಲೇಬೇಕು' ಎಂದು ಅವನ ಬಯಕೆ. ಕಾಲೇಜ ಸಡಗರದಿಂದ ಕುಣಿಯುತ್ತಿತ್ತು. ವಿದ್ಯುದ್ದೀಪಗಳಿಂದ ಅಲಂಕೃತವಾಗಿತ್ತು. ಅವನು ಬಹಳಷ್ಟು ಪ್ರಯತ್ನಿಸಿ ಸ್ವಯಂಸೇವಕ ಪದವಿಯನ್ನು ಪಡೆದಿದ್ದ. ಸ್ತ್ರೀ ವಿಭಾಗದ ಕಡೆಗೆ ನಿಲ್ಲಬೇಕೆಂಬ ಅವನ ಪ್ರಯತ್ನ ನಿಷ್ಫಲವಾಯಿತು. ಕೊನೆಗೆ ಗ್ರೀನ್ ರೂಮಿನಲ್ಲಾದರೂ ನಿಲ್ಲಬೇಕೆಂದು ತಳಮಳಿಸಿದ. ಸಾಧ್ಯವಾಗಲಿಲ್ಲ. ಆಗ ಅವನಿಗೆ ತಂದೆ ಹೇಳುತ್ತಿದ್ದ ಮಾತು ನೆನಪಾಯಿತು. ''ಈ ಜಗತ್ತಿನಲ್ಲಿ ಸ್ಪರ್ಧೆ ಇದೆ. ಗೆದ್ದವನೇ ಬದುಕಿದ.'' ಹೌದು. ಎಷ್ಟು ಸತ್ಯ ಈ ಮಾತು. ಆದರೆ ಹೇಗೊ ಪ್ರಯತ್ನಮಾಡಿ ಗ್ರೀನ್‌ರೂಮಿನೊಳಕ್ಕೆ ಒಂದುಕ್ಷಣ ನುಗ್ಗಿದ. ಬಿಕಿನಿ ತೊಟ್ಟ ಬೀಟನಿಕ್ಕುಗಳ ಹಾಗೆ ಹುಡುಗಿಯರು ! ಹಸಿದ

ಕಣ್ಣುಗಳ ಹುಡುಗರು ಪ್ರಾಧ್ಯಾಪಕರು. ವಾತಾವರಣವೇ ಉನ್ಮಾದಕವಾಗಿತ್ತು.

ಅವನನ್ನು ಅಲ್ಲಿ ಬಹಳ ಹೊತ್ತು ನಿಲ್ಲಗೊಡಲಿಲ್ಲ. ಹೊರಗೆ ಬಂದ. ವಿವಿಧ ವಿನೋದಾವಳಿಗಳು ನಡೆದವು. ದ್ವಂದ್ವಗೀತ, ನೃತ್ಯ, ಸ್ವಗತಭಾಷಣ. ವಿದ್ಯಾರ್ಥಿಗಳ ಪ್ರತಿಕ್ರಿಯೆ ಅಷ್ಟೇ ಉತ್ಸಾಹಕರವಿತ್ತು. ಕಾಲೇಜಿಗೆ ಕಾಲೇಜೇ ಕುಡುಕನಂತೆ ಕಾಣುತ್ತಿತ್ತು. ಫ್ಯಾನ್ಸಿ ಪರೇಡ ಆಯಿತು. ಕಾಲೇಜದ ಆಕಾಶವಾಣಿಯ ಸುದ್ದಿ ಬಿತ್ತರಿಸಲಾಯಿತು. ಜನ ನಕ್ಕರು. ಯಾವುದಕ್ಕಾಗಿ ಎಲ್ಲರೂ ಕಾದುಕುಳಿತಿದ್ದರೊ ಆ ಕಾರ್ಯಕ್ರಮ ಬಂತು. ಫಿಶ್‌ಪಾಂಡ್. ಅವನ ಸ್ನೇಹಿತ ಥಿಯೇಟರಿನ ಮಾಲಿಕ ಸ್ನೇಹ ಸಮ್ಮೇಲನದ ಕಾರ್ಯದರ್ಶಿ ರಂಗಮಂಚದ ಮೇಲೆ ಬಂದ. ಭರ್ಜರಿ ಬಟ್ಟೆ ತೊಟ್ಟಿದ್ದ. ವಿದ್ಯಾರ್ಥಿಗಳು 'ಹೋ' ಎಂದು ಕೂಗಿದರು. ಕಾರ್ಯದರ್ಶಿ ಅದನ್ನು ಸ್ವೀಕರಿಸಿದ. ಪ್ರಾಧ್ಯಾಪಕರೊಬ್ಬರು ಕೈಯಲ್ಲಿ ಮೈಕ ಹಿಡಿದು ನಿಂತಿದ್ದರು. ಪ್ರತಿವರುಷ ಅವರೇ ಫಿಶ್ ಓದುವವರು.

ಆತುರದ ಪ್ರಾಧ್ಯಾಪಕ ವರ್ಗ; ಉತ್ಕಂಠೆಯಿಂದ ಕುಳಿತ ವಿದ್ಯಾರ್ಥಿನಿಯರು, ವಿದ್ಯಾರ್ಥಿಗಳು ಮೈಯೆಲ್ಲ ಕಿವಿಯಾಗಿ ಕುಳಿತರು. ಫಿಶ್ ತನಗೆ ಈ ಸಲ ಬಂದೀತೆ ಎಂದು ಕಾದ ಪ್ರಾಧ್ಯಾಪಕರ ಎದೆ ಭಾರವಾಗಿತ್ತು. ಮಾಮೂಲಿನಂತೆ ಹಾವಭಾವದಿಂದ ಪ್ರಾಧ್ಯಾಪಕರು ಓದ ಹತ್ತಿದರು:

'ಎಡಕಿನಿಂದ ನೋಡಿದರೆ ದೇವ ಆನಂದ, ಬಲಕಿನಿಂದ ನೋಡಿದರೆ ದಿಲೀಪಕುಮಾರ, ಹಿಂದಿನಿಂದ ನೋಡಿದರೆ ರಾಜಕಪೂರ ಅರೇರೇ ಮುಂದಿನಿಂದ ನೋಡಿದರೆ ಜಾನಿವಾಕರ' ಯಾವುದೋ ವಿದ್ಯಾರ್ಥಿಯನ್ನು ಕುರಿತು ಹಾಸ್ಯದ ಹೊನಲು ಚಪ್ಪಾಳೆ. ವಿದ್ಯಾರ್ಥಿನಿಯರಲ್ಲಿ ಕೆಲವರಿಗೆ ಬಂದ ಫಿಶ್ ಹುಡುಗರನ್ನು ತುಂಬ ಸಂತೋಷಗೊಳಿಸಿದವು. ಸಾಧನಾ, ಸಾಯಿರಾಬಾನು, ಲೀಲಾನಾಯ್ಡು ಹೆಸರುಗಳು ಬಂದವು. N2 ಗೂ ನಾಲ್ಕೈದು ಫಿಶ್. ''ಕಾಲೇಜದ ಮರ್ಲಿನ ಮನ್ರೊ'' ಎಂದು. '' What is the pet hobby of miss.....? to tease the boys'' '' what does the girl of today want? To be sought after; to be the favourite partner of many rather the legal property of just one''. ಮತ್ತೆ ನಗೆಯ ಹೊನಲು.........

.... ಅರ್ಧಗಂಟೆಯಾಯಿತು. ಪ್ರಾಧ್ಯಾಪಕರು ತೆಗೆದುಕೊಳ್ಳುವ

ಪ್ರತಿಯೊಂದು ಕಾಗದಕ್ಕೂ ಅವನ ಎದೆ ಮಿಡಿಯುತ್ತಿತ್ತು. ''ಇದು ನನ್ನನ್ನು ಕುರಿತೇ ಇರಬಹುದು.'' ಆದರೆ ಮತ್ತೆ ನಿರಾಶೆ. ತನ್ನ ಬಗ್ಗೆ ಫಿಶ್ ಬಂದಾಗ ಜನ ಹೇಗೆ ಪ್ರತಿಕ್ರಿಯೆ ಮಾಡಬಹುದು? ಎಂಬ ಕಲ್ಪನೆಯಿಂದ ಅವನ ಮನಸ್ಸು ಉಬ್ಬುತ್ತಿತ್ತು... ಮಧ್ಯದಲ್ಲಿಯೇ ಒಂದು ಫಿಶ್ ಒಬ್ಬ ಪ್ರಾಧ್ಯಾಪಕರನ್ನು ಕುರಿತು: 'ನಿಮ್ಮ ತಾಯಿಗೆ ದೂರದೃಷ್ಟಿ ಇದ್ದರೆ ಅವರು ನಿಮಗೆ ಕೃಷ್ಣನೆಂದು ಹೆಸರು ಇಡುತ್ತಿದ್ದರು; ರಾಮನೆಂದಲ್ಲ.' ಮತ್ತೆ ನಗೆ..... ಹೀಗೆ ಒಂದು ಗಂಟೆಯವರೆಗೆ ಸಾಗಿತು. ಕೊನೆಯ ಫಿಶ್ ಓದಿ ಪ್ರಾಧ್ಯಾಪಕರು ತೆರೆಯ ಮರೆಗೆ ಸರಿದರು. ಅವನಿಗೆ ಆದ ನಿರಾಶೆ ಅಷ್ಟಿಷ್ಟಲ್ಲ.

ಅವನು ತನಗೆ ಈ ಸಲ ಫಿಶ್ ಬರಲೇಬೇಕೆಂದು ಹಟತೊಟ್ಟಿದ್ದ. ತನಗೆ ಯಾರೂ ಕೊಡುವುದಿಲ್ಲ ಎಂಬುದರ ಬಗ್ಗೆ ಎಳ್ಳಷ್ಟೂ ಸಂಶಯ ಅವನಿಗಿರಲಿಲ್ಲ. ಆದುದರಿಂದ ಏನು ಮಾಡಬೇಕು ಎಂಬುದರ ಬಗ್ಗೆ ಅವನು ಮೂರು ದಿನ ತಲೆ ಕೆರೆದುಕೊಂಡು ತಾನೇ ತನ್ನನ್ನು ಕುರಿತು ಐದು ಫಿಶ್ ತಯಾರಿಸಿದ್ದ. ಅವನು ಇಂದಿನವರೆಗೆ ಯಾರನ್ನು ಕುರಿತು ಫಿಶ್ ಹಾಕಿರಲಿಲ್ಲ. ತನಗೆ ಏನು ಮಾಡಬೇಕು? ಎಂದು ಯೋಚಿಸಿ N_2 ಹಾಗು ತನ್ನ ಹೆಸರನ್ನು ಜತೆಗೂಡಿಸಿ ಸಾಧನಾ- ಮನೋಜ ಕುಮಾರ ಎಂದು ಬರೆದಿದ್ದ. ಇನ್ನೆರಡು ಫಿಶ್‌ಗಳಲ್ಲಿ ತನ್ನನ್ನು ವರ್ಣಿಸಿಕೊಂಡಿದ್ದ. ಕ್ರಾಂತಿಕಾರಿ ಎಂದು ತನ್ನ ಬೆನ್ನನ್ನು ಚಪ್ಪರಿಸಿಕೊಂಡಿದ್ದ. ಐದರಲ್ಲಿ ಒಂದೂ ಬಂದಿರಲಿಲ್ಲ. ಅವನಿಗೆ ತುಂಬ ಕೋಪ ಬಂತು. ಅಷ್ಟರಲ್ಲಿ ಉಪನಾಯಕ ಬಂದು ಕಾರ್ಯದರ್ಶಿ ಕರೆಯುತ್ತಾನೆ ಎಂದು ಹೇಳಿದ. ಅವನಿಗೆ ಇದ್ದುದರಲ್ಲಿಯೇ ತುಸು ಧೈರ್ಯ ಬಂತು. ಆದರೆ ತನ್ನ ಹೆಸರನ್ನು ಮೈಕಿನಲ್ಲಿ ಕೂಗಬಾರದೆ? 'ಇವರು ಬಂದ ಇಂತಹವರನ್ನು ಕಾಣಬೇಕು' ಮೈಕಿನಲ್ಲಿ ಎಷ್ಟೋ ಸಲ ಕೂಗುತ್ತಾರೆ. ಹಾಗೆ ಈಗಲಾದರೂ 'ಕಾರ್ಯದರ್ಶಿಗಳನ್ನು ಕಾಣಬೇಕು' ಎಂದು ತನ್ನ ಹೆಸರನ್ನು ಏಕೆ ಸಾರಬಾರದು? ಅವನನ್ನು ಎಳೆದುಕೊಂಡು ಉಪನಾಯಕ ಕಾರ್ಯದರ್ಶಿಯ ಹತ್ತಿರ ಹೋದ.

''ಹೆಲೊ ಜಿ. ಎಸ್. ನಿಮ್ಮ ಪರ್ಸನ್ಯಾಲಿಟಿ....'' ಎಂದು ಉಚ್ಚರಿಸುತ್ತಿದ್ದಾಗಲೇ ಕಾರ್ಯದರ್ಶಿ ತನ್ನ ಮುಷ್ಟಿಯಿಂದ ಎದೆಗೊಂದು ಗುದ್ದಿ ಕಾಲರ್ ಹಿಡಿದೆಳೆದ . ಅವನು ಕಕ್ಕಾವಿಕ್ಕಿಯಾದ.

''ಹೀಗೇಕೆ ಹೀಗೇಕೆ?'' ನಡುಗುತ್ತ ಕೂಗಿದ.

``ಕಾರಣ ಕೇಳ್ತೀಯಾ ಮಗನೆ? ಬೀದಿನಾಯಿಗೆ ಗುಂಡು ಹಾಕೊ ಅಪ್ಪಣೆ ಯಾರು ಕೇಳ್ತಾರೊ?''

``ನಾನೇನು ಮಾಡಿದ್ದೇನೆ?''

``ಮತ್ತೆ ಅದೆ. ನಾಯಿ'' ಎಂದು ಬೂಟುಗಾಲಿನಿಂದ ಒದ್ದ. ಕಿಕ್ಕಿರಿದು ತುಂಬಿದ ಜನರಲ್ಲಿ ಒಬ್ಬನೂ ಅವನ ಸಹಾಯಕ್ಕೆ ಬರಲಿಲ್ಲ. ಪ್ರತಿಕಾರ ಮನೋಭಾವ ಕರಗಿಹೋಗಿತ್ತು.

``ನೀನೆಂದರೆ ಏನೆಂದು ತಿಳಿದುಕೊಂಡಿದ್ದಿ?'' ಎಂದು ಮತ್ತೆ ಅವನನ್ನು ಒದೆದ. ಏನಾದರೂ ಅವನಿಗೆ ತಾನು ಮಾಡಿದ ತಪ್ಪು ತಿಳಿಯಲೊಲ್ಲದು.

``ನೋಡು. ನಾನೇನು ಮಾಡಿದ್ದೇನೆ ಹೇಳು. ತಪ್ಪಾಗಿದ್ದರೆ ತಪ್ಪಾಯಿತು ಎಂದು ನಿನ್ನ ಕ್ಷಮೆ ಕೇಳುತ್ತೇನೆ. ನೀನು ಕ್ಷಮಿಸು.''

``ನಿನ್ನ ತಪ್ಪೇನು ಎಂದು ಕೇಳುತ್ತೀಯಾ? ನೋಡಿಲ್ಲಿ.''

ಜೇಬಿನಿಂದ ಒಂದು ಕಾಗದ ತೆಗೆದು ತೋರಿಸಿದ. ಹೌದು N_2 ಹಾಗೂ ತನ್ನನ್ನು ಕುರಿತು ತಾನೇ ಹಾಕಿದ ಫಿಶ್.

``ಅದರಲ್ಲಿ ತಪ್ಪೇನು?'' ಎಂದು ಕೇಳಬೇಕೆಂದು ಮಾಡಿದ್ದ. ಆದರೆ ಬಾಯಿಂದ ಬೇರೆ ಮಾತುಗಳೇ ಬಂದವು.

``ಇದನ್ನು ನಾನು ಮಾಡಿಲ್ಲ.''

``ಬದಮಾಷ್ ನೀನು ಮಾಡಿರದಿದ್ದರೆ ನಿಮ್ಮಪ್ಪ ಮಾಡಿದನೇನು ? ತಪ್ಪು ಮಾಡಿ ಮೇಲೆ ಸುಳ್ಳು ಬೇರೆ. ''

ಮತ್ತೊಂದು ಗುದ್ದಿದ.

``ಲೋ ಇವು ಅವನ ಅಕ್ಷರಗಳೇ ಅಲ್ಲವೇನೋ?'' ಎಂದು ಸಾಕ್ಷಿಗೆ ಕರೆದ ಕಾರ್ಯದರ್ಶಿ ತನ್ನ ಅನುಚರರನ್ನು.

``ಮಗನೇ ನೀನೇನು ಕಾಲೇಜ ಹೀರೋ ಆದೆಯೇನು ನಿನಗೆ ಇಂತಹ ಫಿಶ್ ಬರಲು? ನೀನೆಲ್ಲಿ? ಅವಳೆಲ್ಲಿ? ಅವಳ ಶೂಸ್ ಒರೆಸುವ ಯೋಗ್ಯತೆ ನಿನಗಿಲ್ಲ. ನಿನ್ನ ಎಲುವು ಪುಡಿ ಪುಡಿ ಮಾಡುತ್ತೇನೆ.''

ಕುತ್ತಿಗೆಗೆ ಕೈ ಹಾಕಿ ಅವನನ್ನು ನುಗಿಸಿದ. ಅವನು ಹುಡಿಯಲ್ಲಿ ಹೊರಳಿದ.

''ಲುಚ್ಚ. ಗ್ರೀನರೂಮಿನಲ್ಲಿ ನೀನೇಕೆ ಬಂದೆ? ಯಾರನ್ನು ಕೇಳಿ ಬಂದೆ? ಇದೊಂದು ಸಲ ಕ್ಷಮಿಸಿದ್ದೇನೆ. ಆಳನೀರಿನಲ್ಲಿ ಇಳಿಯಬೇಡ. ಹೋಗು.''

- ಕಾರ್ಯದರ್ಶಿ ಉಪದೇಶ ಮಾಡಿದ.

ಅವನು ಮುಂದಿನ ಕಾರ್ಯಕ್ರಮಕ್ಕೆ ನಿಲ್ಲಲಿಲ್ಲ. ಮಳೆಯಲ್ಲಿ ನೆನೆದ ಏಕಾಕಿಯಾದ ಕಾಗೆಯ ಮರಿ ಕತ್ತಲಲ್ಲಿ ಚಡಿಪಡಿಸುವಂತೆ ಮನೆಗೆ ಬಂದ. ನಿರಾಶೆಯ ಪ್ರವಾಹ ತನ್ನನ್ನು ಕೊಚ್ಚಿಕೊಂಡು ಹೋಗುತ್ತಿರುವಂತೆ ಭಾಸವಾಯಿತು ಅವನಿಗೆ. ಅವನು ಇದನ್ನು ಅಪೇಕ್ಷಿಸಿರಲಿಲ್ಲ. ನಿರೀಕ್ಷಿಸಿರಲಿಲ್ಲ. ತಾನು ರಂಗಮಂಚದಲ್ಲಿದ್ದಾನೆ. ಜತೆಗೆ ಚೆಲುವೆಯೊಬ್ಬಳು ನಿಂತಿದ್ದಾಳೆ. ಅವಳಿಗೆ ಅವನು ಧೈರ್ಯ ಹೇಳುತ್ತಿದ್ದಾನೆ:

''ನಾನಿದ್ದೇನೆ. ನೀನು ಏನೂ ಯೋಚಿಸಬೇಡ.''

ಎಂತಹ ಚೆಲುವೆ ಅವಳು! ತೆರೆಯು ಇನ್ನೂ ಸರಿದಿಲ್ಲ. ಪ್ರಾಧ್ಯಾಪಕರು ಅವನ ಕಾರ್ಯಕ್ರಮವನ್ನು ಕುರಿತು ವಿವರಿಸಿದ್ದಾರೆ. ಝುಣ್ ಎಂಬ ಸದ್ದಿನಿಂದ ತೆರೆ ಸರಿಯಿತು. ಎದುರು ದಿವ್ಯತೆಯ ಅಪೇಕ್ಷೆಯಿಂದ ಕುಳಿತ ಜನಸಮೂಹ. ಉಸಿರಾಡಿದರೆ ಕಾರ್ಯಕ್ರಮಕ್ಕೆ ಎಲ್ಲಿ ವ್ಯತ್ಯಯ ಬಂದಿತೋ ಎಂದು ಉಸಿರನ್ನೂ ಗಟ್ಟಿಯಾಗಿ ಆಡಿಸದ ಜನಸಮೂಹ. ಕೊರೆಯುವ ಚಳಿ. ಅವಳು ರಂಗಮಂಚದ ಮೇಲೆ ಬಂದಳು. ಅವನು ಗಂಭೀರ ಧ್ವನಿಯಿಂದ ''ರಂಗೋಲಿ ಸಜಾವ್ಹೋ'' ಹಾಡುತ್ತಿದ್ದ. ಏನು ಮುಖಭಾವ ತನ್ನದು. ತನ್ನ ದನಿ ನೆಲಗಗನದ ಪೊಳ್ಳನ್ನು ತುಂಬಿದೆ. ರಂಗದ ಪರಿಣಾಮಕ್ಕಾಗಿ ಬೆಳಕನ್ನೂ ಅದರ ಬಣ್ಣವನ್ನೂ ಬದಲಿಸಲಾಗುತ್ತಿದೆ. ಇಂತಹ ಕನಸಿನಲ್ಲಿ ಅವನಿದ್ದ. ಆದರೆ ಕಾರ್ಯದರ್ಶಿ ಅವನನ್ನು ಹುಡಿಯಲ್ಲಿ ಹೊರಳಿಸಿದ್ದ.

ಬೆಳಗಿನಲ್ಲಿ ಅವನು ಬೇಗನೆ ಏಳಲಿಲ್ಲ. ಇರುಳೆಲ್ಲ ಕಣ್ಣೀರು ಕರೆಯುತ್ತ ಮಲಗಿದ. ಸಿಗರೇಟು ಸೇದಲಿಲ್ಲ. ''ಏನು ನನ್ನ ದೈವ'' ಎಂದು ತನ್ನನ್ನು ತಾನೇ ಹಳಿದುಕೊಂಡ ! ಹೌದು ನಾನೀ ಹಾದಿಗೆ ಹೋಗಬಾರದಾಗಿತ್ತು. ಅವನ ಕಣ್ಣೆದುರು ಅವನ ಸ್ನೇಹಿತನ ಚಿತ್ರ ನಿಂತಿತು. ಅವನು ಇದೊಂದು ವರುಷ ನನ್ನ ಜತೆಗಿದ್ದರೆ......... ಎಂದು ಮಿಡುಕಿದ. ಬಿಸಿಲು ಏರುತ್ತಿತ್ತು. ಅವನು ಹಾಸಿಗೆ ಬಿಟ್ಟು ಏಳಲಿಲ್ಲ. ಮುಖ ತೊಳೆಯಲಿಲ್ಲ ಚಹ ಕುಡಿಯಲಿಲ್ಲ. ಊಟಕ್ಕೂ

ಹೋಗುವ ಮನಸ್ಸಿರಲಿಲ್ಲ, ಯಾರೋ ಬಾಗಿಲನ್ನು ಬಡಿದರು. ಅನಿರೀಕ್ಷಿತವಾದ ಈ ಸದ್ದಿನಿಂದ ಅವನು ಬೆಚ್ಚಿದ. ಬಾಗಿಲ ತೆರೆಯುತ್ತಾನೆ - ಮನೆಯೊಡತಿ - ಅವನ ತಾಯಿಯ ಗೆಳತಿ. ಕೈಯಲ್ಲೊಂದು ಕಾಗದದ ಕಟ್ಟನ್ನು ಹಿಡಿದುಕೊಂಡು ನಿಂತಿದ್ದಳು. ಅವಳು ತಾನೇ ಒಳಗೆ ಬಂದಳು. ಕೋಣೆಯ ತುಂಬ ಒಮ್ಮೆ ಕಣ್ಣು ಹಾಕಿದಳು. ಅವನಿಗೆ ಏನೂ ಅರ್ಥವಾಗಲಿಲ್ಲ. ತಾನಾಗಿಯೇ ಕೇಳಿದಳು:

"ಇನ್ನೂ ಏಕೆ ಎದ್ದಿಲ್ಲ?"

ಅವನು ಏನನ್ನೂ ಹೇಳಲಿಲ್ಲ.

"ಮೈಯಲ್ಲಿ ಸರಿಯಾಗಿಲ್ಲವೆ?"

"ಸ -ರಿ-ಯಾ-ಗಿದೆ" ತೊದಲುತ್ತ ಹೇಳಿದ.

"ನನ್ನನ್ನು ತುಂಬ ಪೇಚಿನಲ್ಲಿ ನೀನು ಹಾಕಿದೆ."

ಅವನಿಗೆ ಸಂದರ್ಭ ತಿಳಿಯಲಿಲ್ಲ.

ನಾನೇನು ಮಾಡಿದೆ ಎಂದು ಸ್ಮೃತಿಯನ್ನು ಕೆರೆದುಕೊಂಡ. ಹಿಂದೊಮ್ಮೆ ಅವಳು ಹೀಗೇ ಹೇಳಿದ್ದಳು. ತಕರಾರು ಯಾರಿಂದ- ಅವಳ ಮಗಳಿಂದಲೊ? ಅವಳಿಗೇನೂ ಅವನು ಪತ್ರ ಬರೆದಿಲ್ಲ. ಅವಳನ್ನು ತಾನೇನು ಪೀಡಿಸಿಲ್ಲ.

"ನೀನು ಏನು ಮಾಡಿರುವಿ ಎಂಬುದು ನಿನಗೆ ಗೊತ್ತಿಲ್ಲವೆ?"

ಅವನು ತಲೆ ಹಾಕಿದ.

"ನನ್ನ ಸುದೈವ. ಅವರು ಈ ಕಟ್ಟು ಬಂದಾಗ ಮನೆಯಲ್ಲಿರಲಿಲ್ಲ. ನೀನೂ ಮನೆಯಲ್ಲಿರಲಿಲ್ಲ."

ಅವಳು ಕಾಗದದ ಕಟ್ಟನ್ನು ಅವನ ಕೈಗೆ ಕೊಟ್ಟಳು. ಅವನು ಬಿಚ್ಚಿ ನೋಡಿದ. ಅವನ ಎದೆ ನಡುಗಿತು. ತನಗಿನ್ನು ಉಳಿಗಾಲ ಇಲ್ಲ ಎನ್ನಿಸಿತು. ಆದರೆ ಬಾಯಿಂದ ಮಾತು ಬರಲಿಲ್ಲ.

"ಹೀಗೇಕೆ ಮಾಡಿದೆ?"

ಅವನಿಂದ ಉತ್ತರವೇ ಇಲ್ಲ.

"ಇದನ್ನು ಮಾಡುವ ಮನಸ್ಸು ನಿನ್ನದಲ್ಲ. ನನಗೆ ತುಂಬ ದುಃಖವಾಗಿದೆ. ನಿನ್ನ ತಾಯಿ ನಿನ್ನ ಮೇಲೆ ಎಷ್ಟು ಗಾಳಿಗೋಪುರ ಕಟ್ಟಿದ್ದಾಳೆ. ಅವಳ ಹಗಲು

ಗನಸುಗಳಲ್ಲಿ ನೀನು ಪ್ರಾಣವನ್ನು ತುಂಬುತ್ತಿ ಎಂದು ಅವಳು ಜೀವ ಹಿಡಿದಿದ್ದಾಳೆ. ನೀನೋ....''

ಅವಳ ಕಂಠ ಬಿಗಿದು ಬಂದಿತು. ಅವನು ಅವಳ ಕಾಲಮೇಲೆ ಬಿದ್ದ. ಅವನು ಕರಗಿಹೋಗಿದ್ದ. ಅವನಿಗೆ ಆಶ್ರಯ ಬೇಕಿತ್ತು. ಅವಳು ಅವನನ್ನು ಎತ್ತಿದಳು. ಎಂತಹ ವಾತ್ಸಲ್ಯವಿತ್ತು ಅವಳ ಸ್ಪರ್ಶದಲ್ಲಿ.

''ನನ್ನಿಂದ ತಪ್ಪಾಯಿತು'' ಎಂದ.

''ನಾನೇನೂ ಹೆಚ್ಚಿಗೆ ಹೇಳಲಾರೆ. ಇದು ತಪ್ಪಿ ಅವರ ಕೈಗೆ ಬಿದ್ದಿದ್ದರೆ...... ಏನಾಗುತ್ತಿತ್ತೋ ನಾನು ಊಹಿಸಲಾರೆ. ನಿನ್ನ ಪರೀಕ್ಷೆ ಎಂದು ಪ್ರಾರಂಭ?''

''ಇನ್ನೂ ನಾಲ್ಕು ತಿಂಗಳು.''

''ನಾಲ್ಕು ತಿಂಗಳು......'' ಅವಳು ಉದ್ಗರಿಸಿದಳು.

ಅವಳ ಉದ್ಗಾರದಲ್ಲಿ ಭಯವಿತ್ತು. ನಾಲ್ಕು ತಿಂಗಳು ಬಹಳ ದೂರ ಎನ್ನುವ ಕಾತರತೆಯಿತ್ತು.

''ಈಗಲೇ ನಿನಗೆ ಮನೆಬಿಟ್ಟು ಹೋಗು ಎನ್ನುವುದು ನನ್ನ ಮನಸ್ಸಿಗೆ ಹಿಡಿಸುವುದಿಲ್ಲ. ಆದರೆ ಹೀಗೆ ಹೇಳದಿರುವುದಕ್ಕೂ ನಾನು ಹೆದರುತ್ತೇನೆ. ನಿನ್ನಲ್ಲಿ ನನಗೆ ವಿಶ್ವಾಸವಿಲ್ಲ. ಆದರೂ ನಿನ್ನ ತಾಯಿಯ ಮುಖ ನೋಡಿ ಇರು ಎಂದು ಹೇಳುತ್ತೇನೆ'' ಎಂದವಳೆ ಆ ಕಟ್ಟನ್ನಿಟ್ಟು ಹೊರಗೆ ಹೋದಳು. ಅವನು ಬಾಗಿಲನ್ನು ಹಾಕಿಕೊಂಡ.

ಒಂದೆರಡು ತಿಂಗಳ ಹಿಂದೆ ಅವನು ಪತ್ರಿಕೆಯಲ್ಲಿಯ ಒಂದು ಪ್ರಕಟಣೆಯನ್ನು ನೋಡಿದ್ದ. ಅದು ಅನೇಕ ಸಲ ಅವನ ಮನಸ್ಸನ್ನು ಎಳೆದಿತ್ತು. ''ನಿಮಗೆ ಹುಡುಗಿಯರ ನಗ್ನಚಿತ್ರಗಳು ಬೇಕೆ? ಆಕರ್ಷಕ ವಿವಿಧ ಭಂಗಿಗಳಲ್ಲಿ. ರಾತ್ರಿಯಲ್ಲಿ ರಹಸ್ಯವಾಗಿ ಓದುವ ಕಾಮಶಾಸ್ತ್ರದ ಉದ್ಗ್ರಂಥಗಳು ಬೇಕೆ? ಸಚಿತ್ರ. ಇಂದೇ ನಿಮ್ಮ ವಿಳಾಸವನ್ನು ತಿಳಿಸಿರಿ. ರೂಪಾಯಿ ಹದಿನೈದು ಮಾತ್ರ'' ಎಂದಿತ್ತು. ಅಂದಿನಿಂದ ದಿನವೂ ಆ ಪ್ರಕಟಣೆಯನ್ನು ಓದುತ್ತಿದ್ದ. ತರಿಸಬೇಕು ಎಂದು ಹಾತೊರೆಯುತ್ತಿದ್ದ. ಆದರೆ ಅವುಗಳಲ್ಲಿ ಒಂದು ಕರಾರು ಇತ್ತು: 'ವಿವಾಹಿತರಿಗೆ ಮಾತ್ರ ' ಎಂದು. ಇಂತಹ ಚಿತ್ರಗಳನ್ನು ಸಿನೆಮಾ ಥಿಯೇಟರಿನ ಮಾಲಿಕನ ಮಗ ತರಿಸಿದ್ದ. ಅವುಗಳನ್ನು ಅವನೂ ನೋಡಿದ್ದ. ಸಿನೆಮಾ

ಥಿಯೇಟರಿನ ಮಾಲಿಕನ ಮಗ ಅವುಗಳನ್ನು ಕಾಲೇಜಿಗೂ ತರುತ್ತಿದ್ದ. Vital statistics ನಲ್ಲಿ ತೊಡಗುತ್ತಿದ್ದ. ಹಿಂದೊಮ್ಮೆ ಅವರ ಗುಂಪಿನಲ್ಲಿ ಅವನಿನ್ನೂ ಸೇರದೆ ಇದ್ದಾಗ N_2 ಎಂದು ಹೇಳುತ್ತಿದ್ದುದು ಆ ನಗ್ನಚಿತ್ರಗಳನ್ನು ಕುರಿತೇ ಎಂದು ಅವನಿಗೆ ಆಮೇಲೆ ಗೊತ್ತಾಗಿತ್ತು.

''ಅವಿವಾಹಿತನಿದ್ದೂ ನಾಯಕ ಇವುಗಳನ್ನು ಹೇಗೆ ತರಿಸಿದ?''

ಕೊನೆಗೆ ಉಪನಾಯಕನಿಂದ ಅವನಿಗೆ ರಹಸ್ಯ ತಿಳಿಯಿತು:

''ಮದುವೆಯಾಗಿದೆ ಎಂದು ಬರೆದು ಹೆಂಡತಿಯ ಹೆಸರನ್ನು ಬರೆದು ಅವಳ ಹಸ್ತಾಕ್ಷರವನ್ನು ತಾನೇ ಮಾಡಿ ಕಳಿಸಿದರಾಯಿತು.''

''ಅರೆ ಎಷ್ಟು ಸುಲಭ.''

ಪತ್ರಿಕೆಯಲ್ಲಿಂದ ತುಂಬಿ ಕಳಿಸಬೇಕಾದ ಫಾರ್ಮನ್ನು ತೆಗೆದುಕೊಂಡು ಬಂದ. ತುಂಬುವಾಗ ಮಾತ್ರ ಯೋಚಿಸಿದ:

''ಯಾರ ಹೆಸರನ್ನು ಬರೆಯಲಿ-ಹೆಂಡತಿಯ ಹೆಸರು?''

ಕೊನೆಗೆ ಆ ಹುಡುಗಿಯ - ತನ್ನ ''ತಾಯಿಯ ಗೆಳತಿಯ ಮಗಳ'' ಹೆಸರನ್ನು ಬರೆದ. ಕೆಳಗೆ ಅವಳ ಹೆಸರಿನ ಸಹಿಯನ್ನೂ ಹಾಕಿದ. ಹಣವನ್ನು ಕಳಿಸಿ ಫಾರ್ಮನ್ನು ಅಂಚೆಗೆ ಹಾಕಿದ. ಈ ಸಂಗತಿ ಮರೆತೇಹೋಗಿತ್ತು. 'ನಾನು ಮನೆಯ ವಿಳಾಸವನ್ನು ಕೊಡಬಾರದಾಗಿತ್ತು. ಏಕೆ ಕೊಟ್ಟೆನೊ? ಕಾಲೇಜಿನ ವಿಳಾಸ ಕೊಟ್ಟಿದ್ದರೆ.....?'' ಎಂಬ ಯೋಚನೆಯಲ್ಲಿ ತೊಡಗಿದ.

ಆ ಫಾರ್ಮನ್ನು ತೆಗೆದುಕೊಂಡ. ಒಂದರೆ ನಿಮಿಷ ಕಣ್ಣು ಮುಚ್ಚಿದ. ಇದನ್ನು ಏನು ಮಾಡಬೇಕು? ಹರಿಯಬೇಕೆ? ಹರಿಯಲು ಮನಸ್ಸು ಬರಲಿಲ್ಲ. ಆ ಹುಡುಗಿಯ ಹೆಸರಿನ ಮೇಲೆ ಮೃದುವಾಗಿ ಬೆರಳಾಡಿಸಿದ. ಆ ಫಾರ್ಮ್ ಅವನಿಗೆ ಸತ್ಯ ಸತ್ಯ ಎನಿಸಿತು. ಆದರೆ ಹರಿದು ಹಾಕದೆ ಸಾಧ್ಯವಿರಲಿಲ್ಲ. ತುಣುಕು ತುಣುಕಾಗಿ ಕತ್ತರಿಸಿ ಅವಳ ಹೆಸರನ್ನಷ್ಟೇ ಉಳಿಸಿದ. ಕೊನೆಗೆ ಅದನ್ನು ಚಲ್ಲಿದ. ಕಡ್ಡಿಯನ್ನು ಕೊರೆದು ಒಂದೊಂದೇ ಫೋಟೋವನ್ನು ತೆಗೆದುಕೊಂಡು ಸುಡಹತ್ತಿದ. ಅವನಿಗೆ ತನ್ನ ಹೃದಯವನ್ನೇ ಸುಟ್ಟಂತಾಗುತ್ತಿತ್ತು. ಬಾಗಿಲ ಬಡಿದ ಸದ್ದಾಯಿತು. ಎದ್ದು ತೆಗೆದ. ಮನೆಯೊಡತಿ ಅವನಿಗೆ ಉಣ್ಣಲು ತಂದಿದ್ದಳು. ತಾಟನ್ನಿಟ್ಟಳು. ಅವನಿಗೆ ಕೃತಜ್ಞತೆಯಿಂದ ಕಣ್ಣು ತೇವಾಯಿತು. ಅರೆಸುಟ್ಟ ಫೋಟೋ ಅವಳ ಕಣ್ಣಿಗೆ ಬಿತ್ತು. ಅಲ್ಲಿ ಬಿದ್ದ ಬೂದಿ ಎರಡು ಮೂರು ಫೋಟೋಗಳದ್ದೇ ಇರಬೇಕೆನ್ನಿಸಿತು. ಅವಳೇ

ಮುಂದೆ ಬಂದು ಒಂದೇ ಕಡ್ಡಿಯಿಂದ ಎಲ್ಲ ಫೋಟೋಗಳನ್ನು ಸುಟ್ಟಳು.

''ನೋಡು, ಇದನ್ನೆಲ್ಲ ಮರೆತುಬಿಡು. ಊಟಮಾಡು. ಅಭ್ಯಾಸಮಾಡು. ನಿನ್ನ ತಾಯಿಯ ಅಪೇಕ್ಷೆಗಳ ಕತ್ತನ್ನು ಹಿಸುಕಬೇಡ.''

ಅವನು ಉತ್ತರವನ್ನು ಕೊಡಲಿಲ್ಲ.

ಅವನು ಊಟವನ್ನು ಮಾಡಿದ. ರೂಮಿನ ಕಸವನ್ನು ಗುಡಿಸಿದ.

''ಇಂದಿನಿಂದ ತಪ್ಪುದಾರಿಗೆ ಹೋಗುವುದಿಲ್ಲ.''

ಪುಸ್ತಕಗಳನ್ನು ಜತೆಗೂಡಿಸಿ ಧೂಳನ್ನು ಕೊಡಹಿದ. ನೋಟಬುಕ್ಕುಗಳನ್ನು ಕ್ರಮವಾಗಿ ಜೋಡಿಸಿದ. ''ಇಂದಿನಿಂದ ಅಭ್ಯಾಸ ಮಾಡಬೇಕು'' ವೇಳಾ ಪತ್ರಿಕೆಯೊಂದನ್ನು ಹಾಕಿಕೊಂಡ. ಹೊಸ ಮನುಷ್ಯ ಎಂದುಕೊಂಡ. ಉತ್ಸಾಹದಿಂದ ಹೊರಗೆ ಹೋಗಿ ಬಂದ. ಆದರೆ ಪುಸ್ತಕವನ್ನು ಕೈಯಲ್ಲಿ ಹಿಡಿದಾಗ ಉತ್ಸಾಹ ಉಳಿಯಲಿಲ್ಲ. ಕಣ್ಣಿಗೆ ಎಷ್ಟು ದೂರದವರೆಗೆ ನೋಡಿದರೂ ಹಿಮವೇ ಬಿದ್ದಂತೆನಿಸಿತು. ಕೈಯಲ್ಲೊಂದು ಚಿಕ್ಕ ಫೋರ್ಕ್. ಈ ಚಿಕ್ಕ ಫೋರ್ಕಿನಿಂದ ಈ ಹಿಮರಾಸಿಯನ್ನು ತೆಗೆಯುವದೆ? ಭೌತಶಾಸ್ತ್ರ, ರಸಾಯನಶಾಸ್ತ್ರ, ಗಣಿತ ಪುಸ್ತಕಗಳನ್ನು ನೋಡಿ ನೋಡಿ ತೆಗೆದಿಟ್ಟ. ನಿಟ್ಟುಸಿರು ಬಿಟ್ಟು ಹಾಸಿಗೆಯ ಮೇಲೆ ಒರಗಿದ.

ಅವನು ರಾತ್ರಿಯನ್ನೆಲ್ಲ ಕನಸುಗಳಲ್ಲಿಯೆ ಕಳೆದ. ಬೆಳಿಗ್ಗೆ ಎದ್ದಾಗ ಹೃದಯ ಭಾರವಾಗಿತ್ತು. ಒಂದು ಕನಸು ಬಹಳ ಭೀಕರವಾಗಿತ್ತು. ಆ ದೃಶ್ಯ ಕಣ್ಣಮುಂದೆ ಕಟ್ಟಿತು. ಎತ್ತರವಾದ ಬೂರುಗದ ಮರ. ಅದರ ತುಂಬ ಮುಳ್ಳು. ಬಾಣ ಕಾದಂಬರಿಯಲ್ಲಿ ವರ್ಣಿತವಾದ ಮರವೇ ಅದು. ಒಂದು ಕೈ -ಒಂದೊಂದು ಮರದ ಬೊಡ್ಡೆಯಷ್ಟು ಗಡುತರ - ಮರದ ಹೊದರುಗಳಿಂದ ಗಿಳಿಯ ಮರಿಗಳ ಕತ್ತನ್ನು ಹಿಸುಕಿ ನೆಲದ ಮೇಲೆ ಒಗೆಯುತ್ತಿದೆ. ಮರದ ಕೆಳಗಿನ ನೆಲವೆಲ್ಲ ಹಸುರು ಗಿಳಿಯ ಮರಿಗಳಿಂದ ತುಂಬಿಹೋಗಿದೆ. ಅವನ ಕಣ್ಣಿಗೆ ಕತ್ತಲೂ ಬಂತು. ಮರದ ಹೊದರುಗಳಲ್ಲಿಯ ಗಿಳಿಮರಿಗಳೆಲ್ಲ ಮುಗಿದವು ಎಂಬುದನ್ನು ಖಚಿತಪಡಿಸಿ ಕೊಂಡ ಕೈ ವಿಶ್ರಾಂತಿ ಪಡೆಯಿತು. ಒಂದೇ ನಿಮಿಷ ಮರದ ಸ್ಥಳದಲ್ಲಿ ಅವನ ತಾಯಿ ನಿಂತಳು. ಆ ಕೈ -ಗಿಳಿಮರಿಗಳನ್ನು ಹಿಚಿಕಿ ನೆಲಕ್ಕೊಗೆದ ಕೈ ಅವಳ ಕತ್ತಿನ ಮೇಲಿತ್ತು. ಆದರ ಬೆರಳು ಈಗ ಮೊದಲಿನ ಹಾಗೆ ಮರದ ಬೊಡ್ಡೆಯಷ್ಟು ಗಡುತರವಿರಲಿಲ್ಲ. ಈಗ ನೋಡುತ್ತಾನೆ. ಅದು ತನ್ನ ಕೈಯಂತೆಯೇ ಕಾಣುತ್ತಿತ್ತು.

ನೋಡುನೋಡುವಂತೆ ಆ ಕೈಗೆ ಅವಯವಗಳೊಡೆದಂತೆ ಆಯಿತು. ನೋಡುತ್ತಾನೆ ತಾನೇ ಅಯ್ಯೋ ಏನು ಭೀಕರ ಕನಸು. ತನ್ನ ಕೈಯನ್ನು ನೋಡಿಕೊಂಡ. ಕೈಗಳನ್ನು ಜಾಡಿಸಿಕೊಂಡ. ತಾಯಿಯ ಗೆಳತಿ ಹೇಳಿದ ಮಾತು ಕಿವಿಯಲ್ಲಿ ನಿನದಿಸುತ್ತಿತ್ತು.

``ನಿನ್ನ ತಾಯಿಯ ಅಪೇಕ್ಷೆಗಳ ಕತ್ತನ್ನು ಹಿಸುಕಬೇಡ.''

ನಾನು ಎಂತಹ ತಪ್ಪುದಾರಿ ಹಿಡಿದೆ. ನನ್ನ ತಾಯಿಯ ಬಯಕೆಗಳು-ಎಂತಹ ಚೆಲುವಾದ ಬಯಕೆಗಳವು ! - ನನ್ನ ಕೈಯಿಂದಲೇ ಸತ್ತುಬಿದ್ದಿವೆ. ಅವಳ ಮುಖ ಅವನ ಕಣ್ಣೆದುರು ಬಂದು ನಿಂತಿತು. ಬಾಡಿದ ಮುಖ. ಆದರೂ ತನ್ನನ್ನು ಕಂಡ ಸಲವೊಮ್ಮೆ ಕತ್ತಲೆಯ ಒಡ್ಡನ್ನೊಡೆದು ಬರುವ ಉಷೆಯ ಹೊನಲಿನ ಹಾಗೆ ತುಟಿಗಳನ್ನು ಬಿರಿದು ಅವಳ ಹರ್ಷ ಹೃದಯದಿಂದ ಹರಿದುಬರುತ್ತಿತ್ತು. ಅವಳು ನನ್ನಿಂದ ತುಂಬ ನೊಂದಿರಬೇಕು. ತಂಗಿಯ ತಮ್ಮನ ಚಿತ್ರ ನಿಂತವು. ತಂಗಿಯ ಮುಖದ ಮೇಲೆ ದಟ್ಟವಾಗಿ ವಿಷಾದ ಹಬ್ಬಿತ್ತು. ತಮ್ಮನ ಕಣ್ಣಲ್ಲಿ ದ್ವೇಷದ ಜುಗುಪ್ಸೆಯ ಭಾವ ಮೈಗೊಂಡಿತ್ತು. ಇಲ್ಲ ನಾನು ಬದಲಾಗುತ್ತೇನೆ ಎಂದು ಪುಸ್ತಕಗಳ ಕಡೆಗೆ ಕಣ್ಣು ಹಾಕಿದಾಗ ಅವನ ಎದೆಯೊಡೆಯಿತು. ಇದೊಂದು ವರ್ಷ ಹೋದಹಾಗೆಯೇ ಅಭ್ಯಾಸದ ಕಡೆಗೆ ಗಮನ ಕೊಡಲಿಲ್ಲ. ಮುಂದಿನ ಸಲ ದಾರಿಯೇನು? ಅವನಿಗೆ ತನ್ನ ಸಂಕಟವನ್ನು ಯಾರ ಮುಂದೆ ಹೇಳಬೇಕು ಎಂಬುದು ತಿಳಿಯಲಿಲ್ಲ. ಭಾರವಾದ ಮೈ. ಭಾರವಾದ ಮನಸ್ಸು. ಕಳೆದ ವರ್ಷದ ಜತೆಗಾರನ ನೆನಪು ನುಗ್ಗಿಬಂತು. ಸ್ನೇಹಿತ ತನ್ನಂತೆ ತಪ್ಪು ಹೆಜ್ಜೆ ಹಾಕಿಲ್ಲ - ಸ್ನೇಹಿತನೇ ಅಭ್ಯಾಸ ಚೆನ್ನಾಗಿ ನಡೆದಿರಬಹುದು - ಪ್ರಥಮ ಶ್ರೇಣಿಯಲ್ಲಿಯೇ ಬರುತ್ತಾನೆ. ಎಂತಹ ಅಭಿಮಾನ ತಂದೆತಾಯಿಗಳಿಗೆ. ನಾನೇನೂ ಕಡಿಮೆಯಿಲ್ಲ. ಸ್ನೇಹಿತನೇ ಒಪ್ಪಿಕೊಂಡಿದ್ದಾನೆ- ತಾನು ತನಗಿಂತ ಬುದ್ಧಿವಂತನೆಂದು. ಆದರೆ ನಾನು ಹೆಜ್ಜೆಯನ್ನು ತಪ್ಪಿ ಇಟ್ಟೆ. ಈ ತಳಮಳದಲ್ಲಿ ದಿನಗಳು ಕಳೆಯಹತ್ತಿದವು.

ಅವನಿಗೊಂದು ಕನಸು. ಸವತಿಯ ಬಳ್ಳಿ. ಬಾಟಲಿಯಲ್ಲಿ ಸವತಿಯ ಮಿಡಿ. ದಿನದಿನವೂ ಬೆಳೆದು ಅದು ಬಾಟಲಿಯ ತುಂಬ ಬೆಳೆಯಿತು. ಅವನೊಂದು ದೊಡ್ಡ ಕಲ್ಲನ್ನು ಎತ್ತಿ ಅದರ ಮೇಲೆ ಹಾಕುತ್ತಿದ್ದ. ಆದರೆ ಬಾಟಲಿ ಒಡೆಯುತ್ತಿರಲಿಲ್ಲ. ಖಣ್ ಎಂದು ಸಪ್ಪಳಮಾಡಿ ಕಲ್ಲು ಪುಟಿದು ಬೀಳುತ್ತಿತ್ತು. ಹಸಿರು ಹಸಿರಾಗಿ ರಸರಸವಾಗಿ ಬೆಳೆದ ಸವತಿಯ ಕಾಯಿ ಕೊಳೆತು ಅದರ ಬಣ್ಣ ಮಾಸಿತ್ತು. ಅದರ ದುರ್ಗಂಧ ಮಾತ್ರ ಅವನಿಗೆ ಅಸಹ್ಯ ಎನಿಸುತ್ತಿತ್ತು.

ನಾಲ್ಕು

ಬೇಡ ಬೇಡ ಎಂದರೂ ಹಳೆಯ ನೆನಹು ನುಗ್ಗಿ ಬರುತ್ತಿವೆ. ಹಳೆಯ ದಿನಗಳು ಕಳೆದಿವೆ. ಆದರೆ ನೆನಹು ಮಲೆತು ನಿಂತ ಸ್ಕ್ಯೂಎಜ್‌ದಂತಾಗಿದೆ ಒಳಚರಂಡಿಯಲ್ಲಿ. ಅಯ್ಯೋ ! ಪರೀಕ್ಷೆ ಮುಗಿದ ಮೇಲೆ ತಂದೆ (ಯಾರು ಎನ್ನಬೇಕು ಅವರಿಗೆ ತಂದೆ ಎಂದು?)ಯ ಮನೆಯಲ್ಲಿ ಕಳೆದ ಆರು ತಿಂಗಳ ನರಕವಾಸ ! ತಾನು ಪರೀಕ್ಷೆಯಲ್ಲಿ ಅನುತ್ತೀರ್ಣನಾಗಿದ್ದುದಕ್ಕೆ ತಂದೆಗೆ ವಿಷಾದವಾಗಿರಲಿಲ್ಲ. ತನ್ನ ಮಾತು ನಿಜವಾಯಿತು ಎಂಬ ಅಹಂಕಾರ ತಂದೆಯಲ್ಲಿ ಅಂಕುರಿಸಿ ತುಟಿಯ ತುದಿಗೆ ಇನ್ನೊಬ್ಬರ ಕಣ್ಣಿಗೆ ಕಾಣದ ಮುಗುಳುನಗೆಯಾಗಿ ಅರಳಿತ್ತು. ಅದು ಚೇಳಿನ ಕೊಂಡಿಯಂತೆ ಕಟುಕಿತ್ತು ಅವನನ್ನು. ತಾಯಿಗೆ ತುಂಬ ವಿಷಾದವಾಗಿತ್ತು. ಆದರೆ ಅವಳು ತನ್ನ ಮಗುವಿನ ಕೈಬಿಡಲಿಲ್ಲ. ಮಗುವಿದ್ದಾಗ ಅವನಿಗೆ ತಾಯ ವಾತ್ಸಲ್ಯದ ಅನುಭವ ಬಂದಿರಲಿಲ್ಲ. ಬಂದಿದ್ದರೂ ಅದರ ಹಿರಿಮೆ ಅವನಿಗೆ ಗೊತ್ತಾಗಿರಲಿಲ್ಲ.

ಅವನ ಮನದಲ್ಲಿ ತಾಯಿಯ ಮುಖವನ್ನು ಕಂಡೊಡನೆ - ಚಂದ್ರಮತಿಯ ಚಿತ್ರ ಮೂಡಿತು. ಅವನು ಚಂದ್ರಮತಿಯನ್ನು ನೋಡಿರಲಿಲ್ಲ. ಆದರೆ ಅವಳ ವಿಲಾಪವನ್ನು ಅವನು ಕೇಳಿದ್ದ. ಅವಳು ಹೇಳಿದ ''ಎನ್ನ ಗೋಣ ಕೊಯ್ದೆ'' ಎಂಬ ಮಾತು ತಾಯಿಯ ಬಾಯಿಂದ ಹೊರಟಂತೆ ಭಾಸವಾಯಿತು. ಪರೀಕ್ಷೆಯ ಫಲಿತಾಂಶ ಇನ್ನೂ ಒಂದು ತಿಂಗಳಿತ್ತು. ಆಗಲೇ ತನ್ನ ಮುಖ, ತನ್ನ ಚರ್ಯೆ ಮನೆಯಲ್ಲಿ ಫಲಿತಾಂಶವನ್ನು ಸಾರಿತ್ತು. ತಾನು ತರಿಸಿದ ನಗ್ನಚಿತ್ರಗಳ ಕತೆ ತಾಯಿಗೆ ಎಲ್ಲಿ ಗೊತ್ತಾಗಿದೆಯೋ ಎಂಬ ಭಯ ಬೇರೆ. ಅವಳು ತನ್ನ ತಾಯಿಗೆ ತಿಳಿಸಿರಲಿಕ್ಕಿಲ್ಲ. ಹಾಗೆ ಆಶ್ವಾಸನವನ್ನು ಕೊಟ್ಟಿದ್ದಳು. ತಂದೆ ಹೇಳಿದ:

''ನಾನು ಮೊದಲೇ ಹೇಳಲಿಲ್ಲವೆ? ನೀನು ಸಡಿಲುಕೊಟ್ಟೆ ಸುಮ್ಮನೆ ರೇಲ್ವೆದಲ್ಲಿ ನೋಕರಿ ಹಿಡಿದಿದ್ದರೆ ಎಷ್ಟು ಲಾಭವಾಗುತ್ತಿತ್ತು.''

ಪರೀಕ್ಷೆಯ ಫಲಿತಾಂಶ ಹೊರಬಿತ್ತು. ತಾನು ನಿರೀಕ್ಷಿಸಿದಂತೆಯೆ ಆಗಿತ್ತು. ''ಮುಂದೇನು?'' ಎಂಬ ಸಮಸ್ಯೆ ಕಾಡುತ್ತಿತ್ತು.

''ಒಮ್ಮೆ ಫೇಲ್ ಆದರೆ ಅಂತಹ ನಷ್ಟ ಏನು? ಯಾರೂ ಆಗಿಯೇ ಇಲ್ಲವೆ? ಒಮ್ಮೆ ಫೇಲ್ ಆದವರು ಮುಂದೆ ಬದುಕಿನಲ್ಲಿ ಶ್ರೇಯಸ್ಸನ್ನು

ಪಡೆದಿಲ್ಲವೆ?''

ತಂದೆಯ ಎದುರು ಈ ವಾದ ನಡೆಯುವಂತಿರಲಿಲ್ಲ.

``ತಾಗಿದಾಗಲೇ ಜಾಗಬೇಕು. ಈಗಾದರೂ ಏನಾಯಿತು? ರೇಲಿನಲ್ಲಿ ಆರ್ಜಿ ಹಾಕಲು ಹೇಳು'' ತಂದೆತಾಯಿಗೆ ಹೇಳುತ್ತಿದ್ದ. ತಂದೆಗೂ ತನಗೂ ನೇರವಾದ ಸಂಪರ್ಕವೇ ಇರಲಿಲ್ಲ. ತಾಯಿ ಹೇಳಿದಳು:

``ನೀವು ಇದೇ ಮಾತನ್ನು ಮಗುವಿಗೆ ಏಕೆ ಹೇಳಬಾರದು?''

``ನನ್ನ ಮಾತನ್ನು ಅವನು ಕೇಳಿದರಲ್ಲವೆ?''

``ಪ್ರೀತಿಯಿಂದ ಹೇಳಿದರೆ ಕೇಳದೆ ಏನು?''

``ಅದನ್ನೇ ನಾನು ಹೇಳುತ್ತಿದ್ದೇನೆ. ಪ್ರೀತಿಯಿಂದ ನನಗೆ ಹೇಳುವುದು ಬರುವುದಿಲ್ಲ. ನೀನೇ ಹೇಳು.''

ತಾಯಿಗೆ ತನ್ನ ಮಾತಿನ ತಪ್ಪು ತಿಳಿಯಿತು. ನನ್ನ ಮಾತಿನ ಅರ್ಥ ಹಾಗಿಲ್ಲ. ಹೀಗಾದರೆ ಹುಡುಗ ಕೈಗೆ ಹತ್ತುವುದಿಲ್ಲ.''

ಈ ಸಂವಾದ ನಿತ್ಯ ನಡೆಯುತ್ತಿತ್ತು.

``ತನ್ನದು ತಪ್ಪಿತು'' ಒಂದು ಮನಸ್ಸು ಹೇಳುತ್ತಿತ್ತು.

``ನನ್ನದೇನು ತಪ್ಪು? ತಂದೆಯ ತಪ್ಪು''

ಈ ತರ್ಕವಿತರ್ಕದಲ್ಲಿ ಅವನು ದಣಿದು ಹೆಣವಾಗುತ್ತಿದ್ದ.

ಪರೀಕ್ಷೆಯ ಮಂಟಪದಲ್ಲಿ ಎಷ್ಟು ಹೆಣಗಾಡಿದ ! ಆದರೆ ಒಂದೇ ಒಂದು ಪ್ರಶ್ನೆಯನ್ನು ಬಿಡಿಸುವುದಾಗಲಿಲ್ಲ. ಬಂದರಲ್ಲವೆ ಉತ್ತರವನ್ನು ಬರೆಯುವುದು? ಓದಿದ್ದರಲ್ಲವೆ ಬರುವುದು ? ಪರೀಕ್ಷೆಯ ಮಂಟಪ ಸ್ಮಶಾನಭೂಮಿಯಂತೆ ಕಾಣುತ್ತಿತ್ತು. ಹೀಗೆ ಅವನಿಗೆ ಕಂಡದ್ದು ಇದೇ ಮೊದಲನೆಯ ಸಲ. ಅವನು ಪರೀಕ್ಷೆಯ ವಿಷಯದಲ್ಲಿ ಕಾಳಗದ ಟಗರಿನಂತೆ ಉತ್ಸಾಹಿಯಾಗಿರದಿದ್ದರೂ ಕಡಿಯಲು ಒಯ್ಯುವ ಕುರಿಯಂತೆ ಹಿಂಜರಿದಿರಲಿಲ್ಲ. ಪರೀಕ್ಷೆಯಲ್ಲಿ ಕುಳಿತಾಗಲೇ ಅವನ ಹೃದಯದಲ್ಲಿ ಸಂಕಟವಾಗುತ್ತಿತ್ತು. ತನ್ನ ಹೃದಯಕ್ಕೆ ಉರಿ ಹತ್ತಿದಂತಾಯಿತು. ಹೋಳಿ ಹುಣ್ಣಿಮೆಯ ಮುಂದೆ ಕಾಮವನ್ನು ಸುಡಲು ಕಟ್ಟಿಗೆಯೊಟ್ಟಿದಂತೆ ಕಂಡಿತು ಅವನಿಗೆ. ಉರಿ ಹಚ್ಚಿದರು. ಲಬೋ ಲಬೋ

ಹೊಯ್ದುಕೊಂಡರು. ಅವನಿಗೆ ಒಂದು ಬಗೆಯ ಮಬ್ಬು. ಧಗಧಗ ಉರಿದು ಚಿತೆ ಆರಿತು. ಕೆಂಡದಲ್ಲಿ ಮಲಗಿದ್ದವು ಮೂರು ದೇಹ. ಎರಡು ಸಣ್ಣವು. ಒಂದು ದೊಡ್ಡದು. ಸುಟ್ಟು ಕರ್‍ರಗಾದರೂ ಅವನಿಗೆ ಅವುಗಳ ಗುರುತು ಹತ್ತಿತು.

ಒಂದು ತಾಯಿಯದು,

ಒಂದು ತನ್ನದು,

ಒಂದು ತಂಗಿಯದು.

ಈ ಚಿತ್ರ ಅಂದಿನಿಂದ ಇಂದಿನವರೆಗೆ ಕಾಣುತ್ತಿದೆ - ಎಚ್ಚರವಿರಲಿ-ನಿದ್ದೆಯಿರಲಿ.

ಮನೆಯಲ್ಲೂ ಬಹಳ ಹೊತ್ತು ಕೂಡುವಂತಿಲ್ಲ. ಸಿಗರೇಟಿನ ತಲುಬು ಬೇರೆ. ಸಿಗರೇಟಿಗೆ ಹಣವನ್ನು ತರುವುದೂ ಕಷ್ಟ. ಪರೀಕ್ಷೆಯ ಫಲಿತಾಂಶ ಬಂದ ದಿನ ಅವನಿಗೆ ತಾನು ಅನುತ್ತೀರ್ಣನಾಗಿದ್ದುದರ ದುಃಖಕ್ಕಿಂತ ಸಿನೆಮಾ ಥಿಯೇಟರಿನ ಮಾಲಿಕನ ಮಗ ಎರಡನೆಯ ವರ್ಗದಲ್ಲಿ ತೇರ್ಗಡೆಯಾದದ್ದು ಹೆಚ್ಚು ದುಃಖವನ್ನು ಕೊಟ್ಟಿತು. ''ನನಗಿಂತ ಅವನೇನು ಬುದ್ಧಿವಂತನೆ? ಒಂದು ದಿನವಾದರೂ ಎರಡು ನಿಮಿಷದವರೆಗಾದರೂ ಪುಸ್ತಕವನ್ನು ತೆಗೆದು ನೋಡಿದನೆ? ಕಾಪಿಯ ಬಲದಿಂದ ಅವನು ಪಾಸಾದದ್ದು.''

''ನೀನೇಕೆ ಮಾಡಲಿಲ್ಲ? ನಿನಗಾರು ಬೇಡ ಎಂದರು?''

''ನನಗೆ ಅನ್ಯಾಯದ ದಾರಿ ಒಗ್ಗಲಿಲ್ಲ.''

''ಅಬ್ಬಾ ತುಂಬ ಸತ್ಯವಂತ ! ಕೈಯಿಂದ ಆಗದುದಕ್ಕೆ ದೊಡ್ಡ ತತ್ವದ ಆಧಾರ ಬೇರೆ ಬೇಕು. ನೀನು ಹೆದರಿಬಿಟ್ಟೆ.''

ಹೌದು ತಾನು ಹೆದರಿಕೆಯಿಂದಲೇ ಕಾಪಿ ಮಾಡಲಿಲ್ಲ. ಅವನು ನಾಚಿಕೆಯಿಂದ ತಲೆತಗ್ಗಿಸಿದ. ಹೀಗೆ ಹತ್ತು ದಿಕ್ಕುಗಳಲ್ಲಿ ಹರಿದಾಡಿದ ಮನಸ್ಸು ಮರಳಿ ಬಂದಾಗ ಅದರ ಮುಂದೆ ''ಮುಂದೇನು?'' ಎಂಬ ದೊಡ್ಡ ಪ್ರಶ್ನೆ ನಿಂತಿರುತಿತ್ತು. ಗಂಟು ಗಂಟಾದ ಕಟ್ಟಿಗೆಯ ತುಂಡಿನಂತೆ.

•

ಪರೀಕ್ಷೆ ಮುಗಿದ ಮೇಲೆ ತಾನು ಮಾಡಿದ ಕಾರ್ಯವೇನೂ ದೊಡ್ಡದಲ್ಲವೆ? ಮಾಡಲು ಏನೂ ಕೆಲಸವಿಲ್ಲದೆ ತಂದೆಯ ಮನೆಯಲ್ಲಿ ಕುಳಿತಾಗ

ಪತ್ರಿಕೆಯೊಂದರಲ್ಲಿ ಸುದ್ದಿಯೊಂದು ಅವನ ಗಮನವನ್ನು ಸೆಳೆದಿತ್ತು. ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ಒಬ್ಬ ವಿದ್ಯಾರ್ಥಿ ಡೆಮಾನ್‌ಸ್ಟ್ರೇಟರನ ವಿರುದ್ಧ ಕೆಲವು ಆಪಾದನೆಗಳನ್ನು ``ನೂರು ರೂಪಾಯಿಗಳನ್ನು ಕೊಟ್ಟರೆ ಪ್ರಾಕ್ಟಿಕಲ್‌ನಲ್ಲಿ ನಿನಗೆ ಸಹಾಯ ಮಾಡುತ್ತೇನೆ. ನೀನು ಪ್ರಥಮ ವರ್ಗದಲ್ಲಿ ಬರುವಂತೆ ಮಾಡುತ್ತೇನೆ. ಹೀಗೆ ಡೆಮಾನ್‌ಸ್ಟ್ರೇಟರ್ ಆಶ್ವಾಸನೆಯನ್ನು ಕೊಟ್ಟಿದ್ದನಂತೆ. ಆಗ ಅದರ ವಿಚಾರಣೆ ನಡೆದಿದೆ.'' ಅವನು ತಡಮಾಡದೆ ವಿಶ್ವವಿದ್ಯಾಲಯದವರಿಗೆ ಒಂದು ಪತ್ರವನ್ನು ಬರೆದ ತನ್ನ ಹೆಸರು ಹಾಕದೆ, ಅದರಲ್ಲಿ ಕೆಲವು ಸುಪರವಾಯಿಜರುಗಳ ಹೆಸರುಗಳನ್ನು ಉಲ್ಲೇಖಿಸಿದ್ದ. ಅಂಚೆಗೆ ಹಾಕಿದಾಗ ಎಂತಹ ಕೃತಕೃತ್ಯತೆ ಆವರಿಸಿತು ಅವನನ್ನು ? ``ಉತ್ತರಪತ್ರಿಕೆಗಳು ಮೊದಲೇ ಒಡೆದಿದ್ದವು. ಐದು ರೂಪಾಯಿಗಳಿಗೊಂದರಂತೆ ಮಾರಾಟವಾಗಿದ್ದವು'' ಎಂದು ಮತ್ತೊಂದು ಪತ್ರವನ್ನು ಬರೆದ. ಎರಡೂ ಪತ್ರಗಳಿಂದ ಯಾವ ಪರಿಣಾಮವೂ ಆಗದೆ ಹೋಯಿತು.

ಆದರೆ ಇದಾವುದರಿಂದಲೂ ಮುಂದೇನು ಎಂಬ ಪ್ರಶ್ನೆಗೆ ಪರಿಹಾರ ದೊರಕಲಿಲ್ಲ.

ಪತ್ರಿಕೆಗಳಲ್ಲಿಯ ಪ್ರಕಟನೆಗಳನ್ನು ತಿರುವಿ ಹಾಕಿದ. ಎಂತೆಂತಹ ಅವಕಾಶಗಳು. ಆದರೆ ಅವುಗಳಲ್ಲಿ ತಾನು ಒಂದಕ್ಕೂ ಅರ್ಹನಲ್ಲ. ನಾನು ನಿಜವಾಗಿ ಫೇಲಾಗುತ್ತಿರಲಿಲ್ಲ. ಆ ಸ್ನೇಹಿತ ತನ್ನನ್ನು ಬಿಟ್ಟು ಬೇರೆ ಊರಿಗೆ ಹೋಗಿರದಿದ್ದರೆ ನಾನು ಹೀಗಾಗುತ್ತಿರಲಿಲ್ಲ. ಈಗಲಾದರೂ ಏನು ತಂದೆ ತುಸು ಅನುಕೂಲ ಮಾಡಿಕೊಟ್ಟರೆ.... ತಂದೆ ಅನುಕೂಲ ಮಾಡಿಕೊಡಲಾರ. ಅವನಿಗೆ ಸ್ನೇಹಿತನ ನೆನಪು ಬಂದು ಹರಿದು ಹಲವು ಬಗೆಯ ಭಾವಗಳಿಂದ ತುಂಬಿ ಬಂತು. ಮತ್ತೆ ಅದೇ ಪ್ರಶ್ನೆ ಕಣ್ಣೆದುರು ಬಂತು. ಸ್ನೇಹಿತ ಹೀಗೇಕೆ ಆದ ? ನಾನು ಹೀಗೇಕೆ ಆದೆ? ನಾನು ಏನಾಗಿದ್ದೇನೆ? ನಾನು ಮಾಡಿದ ತಪ್ಪೇನು? ಸ್ನೇಹಿತನ ಬದುಕು ಬದುಕೇ ಅಲ್ಲ. ಏನೇನೋ ವಾದಗಳು.

ಸ್ನೇಹಿತನ ನೆನಪು ಬಂದ ಸಲಕ್ಕೊಮ್ಮೆ ಅವನಿಗೆ ಆ ಹುಡುಗಿಯ ನೆನಪು ಉಂಟಾಗುತ್ತದೆ. ಒಮ್ಮೊಮ್ಮೆ ತನ್ನ ಸ್ನೇಹಿತನ ಬಗ್ಗೆ ತುಂಬ ಗೌರವವುಂಟಾಗುತ್ತದೆ. ಏನು ಬದುಕು ಅವನದು ಬಂಗಾರ ಬಂಗಾರ. ಎಳೆತವಿಲ್ಲ. ತೂಕ ತಪ್ಪಿದ್ದಿಲ್ಲ. ತನ್ನ ಮೇಲೆ ಜುಗುಪ್ಸೆ ಉಂಟಾಗುತ್ತದೆ. ಜುಗುಪ್ಸೆ ತಂದೆಯ ಮೇಲೆ ದ್ವೇಷದ ಕಿಡಿಯನ್ನು ಕಾರುತ್ತದೆ. ಅವನ ಹೃದಯ ನಾಚಿಕೆಯಿಂದ

ಬಾಗುತ್ತದೆ.

''ನೀನು ಅಷ್ಟು ದೀನನಾಗಿ ನಡೆದುಕೊಳ್ಳಬಾರದಿತ್ತು ಸ್ನೇಹಿತನೊಡನೆ.''

''ನಾನು ದೀನನಾಗಿ ನಡೆದುಕೊಂಡೆನೆ?''

''ಅಲ್ಲವೆ? ನೀನೇ ಯೋಚಿಸು.''

ಅವನು ತನ್ನ ಹಾಗು ಸ್ನೇಹಿತನ ಸಂಬಂಧವನ್ನು ನೆನಪಿಗೆ ತಂದುಕೊಳ್ಳುತ್ತಿದ್ದ. ಅವನ ಸ್ಮೃತಿಯಲ್ಲಿ ಸ್ನೇಹಿತನ ಚಿತ್ರ ಅಚ್ಚೊತ್ತಿದಂತೆ ಮೂಡಿದೆ. ಅದೇ ಮಾಸದ ನಗೆ, ಯಾವುದಕ್ಕೂ ಬಗ್ಗದ ಆತ್ಮವಿಶ್ವಾಸ, ಯಾವುದರಿಂದಲೂ ಕುಗ್ಗದ ವ್ಯಕ್ತಿತ್ವ ಅದರ ಪಕ್ಕದಲ್ಲಿಯೇ ಇನ್ನೊಂದು ಮಸುಕು ಚಿತ್ರ.

ಅದು ಯಾರದು?

ಹೇಳುವ ಕಾರಣವೇ ಇಲ್ಲ - ನೋಡಿದರೆ ಕಾಣುತ್ತದೆ - ಆ ಒಣಗಿದ ಮುಖ, ಆತ್ಮವಿಶ್ವಾಸವಿಲ್ಲದ ದುರ್ಬಲ ವ್ಯಕ್ತಿತ್ವ- ತನ್ನದೇ ಆ ಚಿತ್ರ. ಕೆನ್ನೆಯ ಮೇಲೆ ಇಪ್ಪತ್ತು ಏಟುಗಳನ್ನು ಹಾಕಿಕೊಳ್ಳಬೇಕು ಎನ್ನಿಸಿತು.

''ನೀನೇಕೆ ಹಾಗೆ ಆಗಲಿಲ್ಲ? ನಿನ್ನದೇ ತಪ್ಪು. ಸ್ನೇಹಿತನ ಆಧಾರ ತಪ್ಪಿದ್ದರಿಂದ ನಾನು ಹೀಗಾದೆ ಎನ್ನುವುದಕ್ಕೆ ನಾಚಿಕೆ ಬರಬೇಕು.''

''ಸ್ನೇಹಿತನದೆಲ್ಲ ನಟನೆ. ನನ್ನಂತೆಯೇ ಹುಟ್ಟಿ ಬಂದವನಲ್ಲವೆ ಸ್ನೇಹಿತನು ತಾಯಿಯ ಹೊಟ್ಟೆಯಿಂದ?''

ಅವನು ತನ್ನ ಸ್ನೇಹಿತನ ತಾಯಿಯನ್ನು ನೋಡಿರಲಿಲ್ಲ. ಆದರೆ ಅವಳ ಚಿತ್ರ ಅವನ ಕಣ್ಣೆದುರು ನಿಂತಾಗ ಅದರ ಜತೆ ತನ್ನ ತಾಯ ಚಿತ್ರವನ್ನಿಟ್ಟು ತುಲನೆ ಮಾಡಿದ.

''ಸ್ನೇಹಿತನನ್ನು ನಿನ್ನನ್ನು ಕಾಡುವ ಕನಸು ಕಾಡುವುದಿಲ್ಲ. ಕೊರಡುಗಳನ್ನು ಏರಿಸಿ ತಾಯಿಯನ್ನು ತಂಗಿಯನ್ನು ತಮ್ಮನನ್ನು ಸುಟ್ಟ ಕನಸು ನಿನ್ನ ಸ್ನೇಹಿತನನ್ನು ಕಾಡುವುದಿಲ್ಲ. ನಿನ್ನ ಸ್ನೇಹಿತ ತನ್ನ ತಾಯ ಆಸೆಆಕಾಂಕ್ಷೆಗಳ ಕತ್ತನ್ನು ಹಿಸುಕಿ ನೆಲಕ್ಕೊಗೆದಿಲ್ಲ.''

''ಹೌದು ನಾನು ತಪ್ಪಿದೆ. ನನ್ನ ದಾರಿಯಿಂದ ದೂರ ಸರಿದೆ.''

ಅವನ ಮನಸ್ಸನ್ನು ತಾನು ಎರಡು ವರ್ಷಗಳ ಹಿಂದೆ ವರ್ಗದಲ್ಲಿ ಕಲಿತ

ಕನ್ನಡ ಪದ್ಯವೊಂದು ಚುಚ್ಚಿತು. ``ಧೃತರಾಷ್ಟ್ರ ಗಾಂಧಾರಿಯನ್ನು ದುಃಖಶತ ಜನನಿ'' ಎಂದು ವರ್ಣಿಸಿದ ಪದ್ಯ.

``ಹೌದು. ಅವಳಿಗೆ ನೂರು ಮಕ್ಕಳು ನೂರು ದುಃಖ ಆದರೆ ತನ್ನ ತಾಯಿಗೆ ತಾನೇ ಸಾವಿರ ದುಃಖವಾದ ಹಾಗೆ.

``ನಾನೇನು ಮಾಡಲಿ? ನಾನೇನು ಮಾಡಬೇಕು?''

``ನಿನ್ನ ಸ್ನೇಹಿತ ಏನು ಮಾಡಿದ?''

``ನನ್ನ ಸ್ನೇಹಿತನನ್ನು ಯಾವ ಅಮಿಷವೂ ಎಳೆಯಲಿಲ್ಲವೆ?''

``ತಪ್ಪು ನನ್ನದಲ್ಲ ನನ್ನ.......''

``ಹೌದು ಅದೇ ನೀನು ಹೇಳುವ ಮಾತು ನಿನ್ನ ತಂದೆಯದು. ಅದಕ್ಕೆ ನಿನ್ನ ಸ್ನೇಹಿತ ಏನನ್ನು.......''

``ತಂದೆಯದಲ್ಲ. ತಾಯಿಯದು.''

``ಇದೇನು ನಿನ್ನ ಹೊಸ ವಿಚಾರ?''

``ಹೊಸದಲ್ಲ. ಈಗ ತಿಳಿಯಿತು.''

``ಹೌದು. ನಿನ್ನನ್ನು ಹಡೆದು ಇಷ್ಟು ವರ್ಷ ಬೆಳೆಸಿದುದೇ ನಿನ್ನ ತಾಯಿಯ.......''

``ಅಲ್ಲ. ಅಲ್ಲ. ನನ್ನನ್ನು ತನ್ನ ಗೆಳತಿಯ ಮನೆಯಲ್ಲಿ ಇಟ್ಟಿದ್ದು ತಪ್ಪು.''

``ಅದು ಹೇಗೆ?''

``ಇಷ್ಟನೆ ಗಾಲಿಸಿ ನಿಕಮ್ಮ ಕರದಿಯಾ | ವರನಾ ಹಮ್ ಭೀ ಆದಮೀ ಥೇ ಕಾಮಕೇ''

``ನಿನಗೆಲ್ಲೊ ಮರುಳು.''

``ಸ್ನೇಹಿತನನ್ನು ಇಂತಹ ಕನಸು ಕಾಡಲಿಲ್ಲವೆ? ಕಾಡಿರಲೇ ಬೇಕು. ನಾನೂ ಮನುಷ್ಯ. ಆದರೆ ಅವನು ಹಾಳಾಗಲಿಲ್ಲ. ನಾನು ಹಾಳಾದೆ.''

''ನನ್ನ ಮನಸ್ಸಿನಿಂದ ನಾನು ದೂರಾಗಬೇಕು.'' ಅವನಿಗೆ ಈ ಮಾತು ನೆನಪಾದೊಡನೆ ಆತ್ಮವಿಸ್ಮರಣದ ಸೌಖ್ಯದ ಅಪೇಕ್ಷೆ ಮತ್ತೂ ತೀವ್ರವಾಗುತ್ತದೆ. ಒಂದಲ್ಲ ಎರಡು ಸಿಗರೇಟು ಎಳೆಯುತ್ತಾನೆ. ಹಗಲುಗನಸುಗಳಲ್ಲಿ ಆ ಹುಡುಗಿಯೊಡನೆ ಅಲೆದಾಡುತ್ತಾನೆ. ಆದರೆ ಇದರಿಂದ ತುಂಬ ದಣಿವಾಗುತ್ತಿದೆ. ಕಣ್ಣು ಮುಚ್ಚಿದರೆ ನೂರು ಚಿತ್ರ. ಅವೂ ಸುಂದರವಾದ ಚಿತ್ರಗಳಲ್ಲ. ಎಲ್ಲಿಯ ಚಿತ್ರಗಳೋ ಇವು. ಅವನ ಕಾಲೇಜಿನ ಹತ್ತಿರ ಒಂದು ದೊಡ್ಡ ಹೊಂಡ. ಮಳೆಗಾಲದಲ್ಲಿ ಅದು ನೀರಿಂದ ತುಂಬಿರುತ್ತದೆ. ಅದರ ಸುತ್ತ ಹಸಿರು. ಒಂದೆರಡು ತಿಂಗಳವರೆಗೆ ಅದರ ಸುತ್ತ ಕೇಕೆ ನಗೆ. ಹೆಣ್ಣುಮಕ್ಕಳು ಸುತ್ತಣ ಪರಿವೆ ಇಲ್ಲದೆ ಗಂಡು ಗಚ್ಚೆಯನ್ನು ಹಾಕಿ ಬಟ್ಟೆ ತೊಳೆಯುತ್ತಾರೆ. ಕೇವಲ ಕೌಪೀನಧಾರಿಗಳಾದ ತುಂಬು ತೊಡೆಯ ತುಂಬು ತೋಳಿನ ಗಂಡಸರೂ ಅಲ್ಲಿರುತ್ತಾರೆ. ಯಾಕೋ ಏನೋ ಅವನಿಗೆ ಲಕ್ಷ್ಮೀಶನ ಚಂದ್ರಹಾಸ ಕಾವ್ಯದಲ್ಲಿಯ '...... ನೆಲಮೊಲೆಗಳಲುಗೆ' ಎಂಬ ಪದ್ಯ ನೆನಪಾಗುತ್ತದೆ-- ಕಾಲೇಜಿನ ಮೇಲಟ್ಟದಿಂದ ಈ ದೃಶ್ಯವನ್ನು ನೋಡಿದ ಸಲಕ್ಕೊಮ್ಮೆ ಈ ಪದ್ಯ ತಾನು ವರ್ಗದಲ್ಲಿ ಕಲಿತದ್ದೂ ಅಲ್ಲ. ಎಲ್ಲಿಯೋ ಒಮ್ಮೆ ನೋಡಿದ್ದು. ಆದರೆ ಮರೆತಿಲ್ಲ. ಅದೇ ಹೊಂಡ ಮುಂದೆರಡು ತಿಂಗಳಲ್ಲಿ ಹೊಲಸನ್ನೆಲ್ಲ ಒಳಗೊಂಡು ಕ್ರಿಮಿಗಳಿಂದ ಗಜಬಜಿಸುತ್ತದೆ. ನೀರು ಮಲೆತು ನಾರುತ್ತದೆ. ವರ್ಗದಲ್ಲಿ ಕುಳಿತಾಗ ಒಂದೊಂದು ಸಲ ಅದರ ದುರ್ಗಂಧವೂ ತೇಲಿಬರುತ್ತದೆ. ಸುತ್ತಲಿನ ಹಸಿರು ಹುಲ್ಲು...... ಯಾವ ಮಾತೇ ಇರಲಿ ಅವನಲ್ಲಿ ಲೈಂಗಿಕ ಪ್ರವೃತ್ತಿಯನ್ನೇ ಕೆರಳಿಸುತ್ತದೆ...... ಹಸಿರು ಹುಲ್ಲು ಪೊಸಸುಸಿಲೊಳು ನೆಲದೆಡೆಗೆ ಮೂಡಿದ ರೋಮಾಂಚ - ಯಾವ ಕವಿಯ ಕಲ್ಪನೆಯೊ? ಈ ಸಾಲು ಅವನ ಮನಸ್ಸಿನಲ್ಲಿ ಅಚ್ಚೊತ್ತಿದೆ. ಈಗ ಆ ಹೊಂಡದ ಸುತ್ತ ಹಸಿರೂ ಇಲ್ಲ. ಅದರ ಹತ್ತಿರ ಹೋದರೇ ಹೆಜ್ಜೆಯ ಸದ್ದಿಗೇ ಅಲ್ಲಿಯ ಕ್ರಿಮಿರಾಶಿ ಗೊಮ್ಮೆಂದು ಮುಖಕ್ಕೆ ಮುತ್ತುತ್ತಿದೆ. ಹಾಗೇ ತನ್ನ ಮನಸ್ಸು. ಒಂದು ನೆನಪಿನ ಸಣ್ಣ ತುಣಕನ್ನು ಅದರಲ್ಲಿ ಎಸೆದರೆ......

ಈ ಎಲ್ಲ ಸಮಸ್ಯೆಗಳು ನನಗೊಬ್ಬನಿಗೆಯೇ ಇವೆಯೆ? ಎರಡು ಸಾವಿರ ಹುಡುಗರಿದ್ದರಲ್ಲ. ದಿನಕ್ಕೊಂದು ವೇಷತೊಟ್ಟು ಎದೆಯನ್ನು suggestingly wide ಮಾಡಿಕೊಂಡು ಬರುವ ಬಿಂಬಿಗಳಿಗೇನೂ ಕೊರತೆಯಿರಲಿಲ್ಲ ಕಾಲೇಜಿನಲ್ಲಿ. ಉಳಿದವರಿಗೆ ಯಾವ ತೊಂದರೆಯೂ ಆಗದೆ ನನಗೊಬ್ಬನಿಗೆ ಹೀಗಾಗಬೇಕೆ? ಹುಡುಗಿಯರನ್ನು ಈ ಯೋಚನೆಗಳು ಕಾಡಿರಲಿಕ್ಕಿಲ್ಲವೆ? ಠಕ್ಕರು.

ಎಲ್ಲರು ಠಕ್ಕರು. ನಾನೊಬ್ಬನೇ ಪ್ರಾಮಾಣಿಕ. ನನ್ನ ಆಂತರಿಕ ವೇದನೆಯನ್ನು ನಾನು ಯಾರ ಮುಂದೆ ತೋಡಿಕೊಳ್ಳಬೇಕು? ತಂದೆಯನ್ನು ಕೇಳಬೇಕು:

"ನೀನು ಇಂತಹ ಪರಿಸ್ಥಿತಿಯನ್ನು ಹೇಗೆ ಎದುರಿಸಿದೆ?" ಎಂದು. ಇದನ್ನು ಮರೆಯುವುದೆಂತು? ಗಾಲಿಬ ದಾರಿ ತೋರಿಸಿದ್ದ "ಮಯಸೆ ಗರಜ ನಿಶಾತ ಹೈ ಕಿಸ್ ರುಸಿಯಾಹಕೋ? | ಏಕ ಗೂನಾ ಬೇಖುದೀ ಮುಝೆ, ದಿನ್ ರಾತ್ ಚಾಹಿಯೆ." ಆದರೆ ಅದು ಸಾಧ್ಯವಿಲ್ಲದ ಮಾತು.

"ನನಗೆ ಬೆಳಕು ಬೇಕು. ನನಗೆ ದಾರಿಯನ್ನು ಯಾರೂ ತೋರಿಸುವವರಿಲ್ಲವೆ? ಈ ಬೆಂಕಿಯಿಂದ ನನ್ನನ್ನು ಯಾರೂ ಎತ್ತುವವರಿಲ್ಲವೆ?"

ಅನುಕಂಪದ ಸಿಂಚನವಿಲ್ಲದೆ ಮುರುಟಿದ ಅವನ ಮನಸ್ಸು ತರತರ ಕಂಪಿಸಿತು. ತಾಯಿಯ ಮುಂದೆ ತನ್ನ ಎಲ್ಲ ವೇದನೆಯನ್ನು ತೋಡಿಕೊಳ್ಳಬೇಕು ಎಂದೆನಿಸಿತು. ಹೇಗೆ ಮಾತನ್ನು ಆರಂಭಿಸಬೇಕು ಎಂಬುದೇ ತಿಳಿಯಲಿಲ್ಲ. ಹೀಗೆ ಮನೆಯಲ್ಲಿ ಎಷ್ಟು ದಿನ ಇರಲು ಬಂದೀತು? ಒಂದು ಸಂಜೆ ತಾಯಿಯೇ ಅವನನ್ನು ಹತ್ತಿರ ಕರೆದಳು. ಅವಳು ಮಾತನಾಡಬೇಕೆಂದು ಬಾಯಿ ತೆರೆದಳು. ಆದರೆ ಅವಳ ಕಂಠ ತುಂಬಿ ಬಂತು. ಅವಳ ಕೆನ್ನೆಯ ಮೇಲೆ ಉರುಳಿಬಂದ ಕಂಬನಿಗಳನ್ನು ಅವಳಿಂದ ತಡೆಯುವುದಾಗಲಿಲ್ಲ. ಈ ಮೌನ ಸಂಭಾಷಣೆಯಿಂದ ಅವನು ತಿಳಿದುಕೊಂಡದ್ದು ಬಹಳ. ಇನ್ನೂ ಸುಮ್ಮನೆ ಕೈಕಾಲು ಕಟ್ಟಿಕೊಂಡು ಕುಳಿತರೆ ಆಗುವುದಾದರೂ ಏನು? ಅವನು ಬೆಳಗಿನಲ್ಲಿಯೇ ನೋಡಿದ ಒಂದು ಚಿತ್ರವನ್ನು ತನಗೆ ಅನ್ವಯಿಸಿಕೊಂಡ. ಕತ್ತೆ. ಅದರ ಮುಂದಿನ ಎರಡೂ ಕಾಲುಗಳನ್ನು ಕಟ್ಟಿದ್ದಾರೆ. ಬೆನ್ನೆಲ್ಲ ಭಾರ ಹೊತ್ತು ಹೊತ್ತು ಲೋಳೆಯಾಗಿದೆ. ರಕ್ತ ಹರಿದಿದೆ. ಮಾಂಸ ಕಾಣುತ್ತಿದೆ. ಕಾಗೆ ಕುಕ್ಕುತ್ತಿದೆ. ತನ್ನ ಗತಿಯೂ ಹಾಗೆಯೇ ಅಲ್ಲವೆ?

"ನಾನಿನ್ನು ನೋಕರಿಯನ್ನು ಹಿಡಿಯುತ್ತೇನೆ." ತಾಯಿಗೆ ಹೇಳಿದ ಅವನು.

"ನಾನು ಅವರಿಗೆ ಹೇಳುತ್ತೇನೆ."

ಅವಳಿಗೆ ತುಂಬ ಸಂತೋಷವಾಯಿತು.

"ಬೇಡ, ತಂದೆ ಹೇಳುವುದು ನನಗೆ ಗೊತ್ತು. ಮತ್ತೆ ರೇಲಿನಲ್ಲಿ ನೋಕರಿ ಹಿಡಿ...."

"ನೀನು ಏನು ಮಾಡಬೇಕೆಂದಿರುವೆ?"

‘‘ನಾನು ಪುನಃ - ಸೃಷ್ಟಿಯನ್ನೇ ನಿರ್ಮಿಸಬೇಕೆಂದಿದ್ದೇನೆ.’’

ಅವನ ಆವೇಶದಿಂದ ತಾಯಿ ವಿಸ್ಮಿತಳಾದಳು.

‘‘ನೀವು ನನಗೆ ಆಸ್ಪದ ಕೊಟ್ಟರಲ್ಲವೆ ಆ ಮಾತು?’’

‘‘ನನಗೆ ಏನು ಮಾಡು ಎನ್ನುತ್ತಿ?’’

ತಾಯಿಯ ಧ್ವನಿಯಲ್ಲಿ ತುಂಬ ವೇದನೆಯಿತ್ತು. ಆದರೆ ಈಗ ಅವನ ಹೃದಯ ಕಿವುಡಾಗಿತ್ತು. ತನ್ನ ತಂದೆಗೆ ಹೇಳಬೇಕು ಎಂದುದನ್ನೆಲ್ಲ ಅವನು ತಾಯಿಗೇ ಹೇಳಿಬಿಡಬೇಕೆಂದು ನಿರ್ಧರಿಸಿರದಿದ್ದರೂ ಮಾತು ಒಂದೇ ಸವನೆ ಧಾರಾಕಾರವಾಗಿ ಸುರಿದವು.

‘‘ಈಗ ನೀನು ಮಾಡುವುದೇನೂ ಉಳಿದಿಲ್ಲ. ಹುಟ್ಟಿದೊಡನೆ ನನ್ನ ಕತ್ತು ಹಿಸುಕಿ ಹಾಕಿದ್ದರೆ ನೀನು ನಿನ್ನ ಗಂಡ ಇಬ್ಬರೂ ಸುಖದಿಂದಿರಬಹುದಾಗಿತ್ತು.’’

ಆಡಿದ ಮೇಲೆ ಅವನಿಗೆ ಅರಿವು ಬಂತು - ಈ ಮಾತು ಬಹಳ ಬಿರುಸಾಯಿತು ಎಂದು. ಆದರೆ ಆಡಿಯಾಗಿತ್ತು.

‘‘ಇಂತಹ ಮಾತಿನಿಂದ........’’

‘‘ನನಗೆ ಗೊತ್ತು ನಿನಗೆ ದುಃಖವಾಗುತ್ತದೆ ಎಂದು...... ಆದರೆ ನನ್ನ ದುಃಖವೇನೂ ಕಡಿಮೆಯಿಲ್ಲವಲ್ಲ.’’

‘‘ನನಗೆ ಏನೂ ಅರ್ಥವಾಗುವುದಿಲ್ಲ. ಆಗಬಾರದ್ದೇನು ಆಗಿಲ್ಲ. ನೀನೊಂದು ನೌಕರಿ ಹಿಡಿದರೆ.....’’

‘‘ಅದನ್ನೇ ನಾನು ಹೇಳಿರುವುದು. ಇಂತಹ ಕ್ಷುದ್ರ ನೌಕರಿ ಮಾಡುವುದಕ್ಕಿಂತ ಸತ್ತರೇನು ಕೇಡು?’’

‘‘ಹಾಗಾದರೆ ನೀನು ಏನು ಮಾಡಬೇಕೆನ್ನುತ್ತೀ ಅದನ್ನೇ ಮಾಡು.’’

‘‘ಬರಿ ಬಾಯಿಂದ ಹೇಳಿದರಾಯಿತೆ? ಈ ಚಿತ್ರವನ್ನು ನೋಡು.’’

ಅವನು ಕೈಯಲ್ಲಿಯ ಪತ್ರಿಕೆಯನ್ನು ಅವಳೆದುರು ಒಗೆದ.

‘‘ನೋಡಿಯಾದರೂ ನೋಡು. ನೀವು ಕಣ್ಣು ತೆರೆಯದೆ ಹಾಳಾದಿರಿ. ನಾನು ಕಣ್ಣು ತೆರೆದು ಹಾಳಾದೆ.’’

ಅವನು ತೋರಿಸಿದ ಚಿತ್ರವನ್ನು ಅವಳು ನೋಡಿದಳು. ಸುಮ್ಮನಾದಳು.

``ನೋಡಿದೆಯಾ ! ನಿನಗೇನೂ ಎನ್ನಿಸುವುದಿಲ್ಲವೆ?``

``ಏನೆನ್ನಿಸಬೇಕು?``

ಇಷ್ಟೆಯೇ ತಂದೆಯಾದವನ ಕರ್ತವ್ಯ ! ಚಿತ್ರದಲ್ಲಿ ಕಾಣುತ್ತಿರುವುದು ಹಕ್ಕಿಗಳ ಒಂದು ಕುಟುಂಬ. ಮರಿಗಳಿಗೆ ಗುಟುಕು ಹಾಕುವುದಷ್ಟೇ ತಾಯಿತಂದೆ ಹಕ್ಕಿಗಳ ಕರ್ತವ್ಯ. ಆದರೆ ಮಾನವ ತಂದೆತಾಯಿಯವರ ಕರ್ತವ್ಯ ಇಷ್ಟೇನೆ?''

``ಇಷ್ಟೆ ಎಂದು ಯಾರು ಹೇಳಿದರು. ನಿನ್ನ ದೈವ ಇಂತಹ ತಂದೆಯನ್ನು ಪಡೆದದ್ದು. ನನ್ನ ಹೃದಯವನ್ನು ಹಿಂಡಬೇಡ ಬೇಡಿಕೊಳ್ಳುತ್ತೇನೆ.''

``ನಿಮಗೆ ದುಃಖವನ್ನು ಕೊಡಬೇಕೆಂದು ನಾನೀ ಮಾತನ್ನು ಹೇಳುತ್ತಿಲ್ಲ. ಆದರೆ.....''

``ನಾನು ಮತ್ತೆ ಅದೇ ಮಾತನ್ನು ಹೇಳುವವಳು. ನಿನಗೇನು ಬೇಕೋ ಅದನ್ನು ಮಾಡು.''

``ಹೇಗೆ ಮಾಡಲಿ ? ನನ್ನ ಕೈ ಕಾಲು ಕಟ್ಟಿ ಹಾಕಿದ್ದೀರಿ.''

``ನಾನು ಹೆಚ್ಚೇನೂ ಹೇಳಲಾರೆ. ನಾನು ನಿನ್ನಿಂದ ನನಗಾಗಿ ಏನನ್ನೂ ಅಪೇಕ್ಷಿಸಲಿಲ್ಲ. ನೀನು ನನ್ನ ಹೊಟ್ಟೆಯ ಕರುಳು. ಎಲ್ಲಿಯೇ ಇರು. ಸುಖವಾಗಿ ಇರು.....'' ಅವಳ ಕಂಠ ಬಿಗಿದು ಬಂತು.

``ಏನೇ ಆಗಲಿ. ನಾನು ರೈಲ್ವೆ ನೋಕರಿ ಮಾತ್ರ ಮಾಡಲಾರೆ. ''

``ಅದೊಂದೇ ನೌಕರಿ ಅಲ್ಲ. ನಿನಗೇನು ಬೇಕು ಅದನ್ನು ಮಾಡು.''

ಅವನು ಹತ್ತಾರು ನೌಕರಿಗಳ ಪ್ರಕಟಣೆಗಳನ್ನು ನೋಡಿದ. ಅವನಿಗೆ ಬಹಳ ಮೆಚ್ಚಿಕೆಯಾದ ನೋಕರಿ ಎಂದರೆ ಮೆಡಿಕಲ್ ರಿಪ್ರೆಜೆಂಟೇಟಿವ್ಹ. ಅವನು ಊರಲ್ಲಿಯೂ ಅನೇಕ ಸಲ ನೋಡಿದ್ದ ಅವನ ಐಶ್ವರ್ಯವನ್ನು. ಕೈ ತುಂಬ ಸಂಬಳ. ಮೇಲೆ ಬೋನಸ್ಸು. ವಾರ್ಷಿಕ ಹೆಚ್ಚಳ. ಪ್ರಥಮ ವರ್ಗದಲ್ಲಿ ಪ್ರವಾಸ. ಆದರೆ ಆದಕ್ಕೆ ಬಿ.ಎಸ್ಸಿ. ಅವಶ್ಯಕವಾಗಿತ್ತು. ``ಇನ್ನು ಎರಡು ವರ್ಷ ಕಳೆದರೆ ನಾನು ನಿನ್ನನ್ನು ಅರಮನೆಯಲ್ಲಿಡಬಲ್ಲೆ'' ಅವನು ತಾಯಿಗೆ ಹೇಳಿದ.

``ನಾನೇನು ಮಾಡಲಿ? ಎಲ್ಲಿಂದ ಹಣ ತರಲಿ? ನಿನ್ನ ತಂದೆ ಏನು ಹೇಳಿದರೂ ಕೇಳುವುದಿಲ್ಲ. ನಾನು ಮನೆಬಿಟ್ಟು ಹೊರಗೆ ಬರಬೇಕು. ದುಡಿದು

ತರಬೇಕು. ಹಾಗೆ ಮಾಡಬೇಕು ಎನ್ನಿಸುತ್ತದೆ. ಎರಡು ವರ್ಷ ಬಹಳಲ್ಲ. ನಿಜ. ಆದರೆ ನಾನು ಹಾಗೆ ಮಾಡಲಾರೆ. ನಾನು ಕಷ್ಟಕ್ಕೆ ಹೆದರುತ್ತೇನೆ ಎಂದಲ್ಲ. ನಾನು ದುಡಿದೇನು. ನನಗೆ ತ್ರಾಣವಿದೆ. ಆದರೆ ಮನೆತನದ ....'' ಅವಳಿಂದ ಮುಂದೆ ಮಾತು ಹೊರಡಲಿಲ್ಲ.

ದಿನದಿನಕ್ಕೆ ಅವನಿಗೆ ತನ್ನ ದಾರಿ ಅಸ್ಪಷ್ಟವಾಗುತ್ತ ಹೋಯಿತು.

''ನೀರೇರಿದಂತೆ ವಯಸ್ಸು ಏರುತ್ತ ನಡೆದಿದೆ. ಮುಂದೆ ಎಲ್ಲಿ ನೋಕರಿ ಸಿಕ್ಕೀತು?'' ತಂದೆ ಕೇಳುತ್ತಿದ್ದ. ತಾಯಿ ಅವನನ್ನು ಮಾತನಾಡಿಸಲೂ ಹೆದರುತ್ತಿದ್ದಳು. ಆದರೆ ಹೀಗೆ ಎಷ್ಟು ದಿನಗಳನ್ನು ಕಳೆಯಲು ಸಾಧ್ಯವಾದೀತು? ''ನನಗೆ ಕುಳಿತು ಉಣ್ಣಬೇಕೆಂಬ ದುರಾಸೆಯಿಲ್ಲ. ಆದರೆ ಬದುಕಿನಲ್ಲಿ ನಾನು ಸಾಧಿಸಬೇಕಾದುದನ್ನು ಸಾಧಿಸಲು ಹವಣಿಸುತ್ತಿದ್ದೇನೆ'' ಅವನು ತಾಯಿಗೆ ಹೇಳಿದ. ಹಿಂದೊಮ್ಮೆ ಅವನು ನಂಜನ್ನೇ ಕಾರಿದ್ದ. ಅವಳಿಗೆ ಅದರದೇ ಭಯ. ಆದರೆ ಹಾಗೇನೂ ಆಗಲಿಲ್ಲ. ಅವನು ಸಮಾಧಾನದಲ್ಲಿದ್ದುದನ್ನು ಕಂಡು ''ರೇಲು ಬೇಡ. ಟೆಲಿಫೋನಿನಲ್ಲಾದರೂ ಏಕೆ ಸೇರಬಾರದು?''

''ಅವೆರಡರಲ್ಲಿ ವ್ಯತ್ಯಾಸವಾದರೂ ಏನು? ಟೆಲಿಫೋನಿನಲ್ಲಿ ಇರುವ ಸೌಭಾಗ್ಯವಾದರೂ ಏನು?''

''ನನಗೇನು ಗೊತ್ತು? ನೆರೆಮನೆಯವರು ಹೇಳಿದರು -- ಅವರ ಹುಡುಗ ಬಿ.ಎಸ್‌ಸಿ. ಆಗಿ ಟೆಲಿಫೋನಿನಲ್ಲಿ ಸೇರಿದ್ದಾನಂತೆ. ಮುಂದೇನೋ ಆಫೀಸರ್ ಆಗುತ್ತಾನಂತೆ.

''ನೀನು ಹಾಗೆ ಏಕೆ ಮಾಡಬಾರದು ಎಂದು ಕೇಳಿದೆ''

''ನಾನು ಸರಕಾರಿ ನೌಕರಿಯನ್ನೇ ಮಾಡುವದಿಲ್ಲ.''

ಅವನ ನಿರ್ಣಯದಿಂದ ಅವಳ ಎದೆಯೇ ಒಡೆಯಿತು. ''ಹಾಗಾದರೆ......''

''ಜಗತ್ತು ಆಕಾಶದಷ್ಟೇ ವಿಶಾಲವಾಗಿದೆ. ನೀನು ಗಾಬರಿಯಾಗಬೇಡ.''

''ಏನೋ ನೋಡು ನೀನು ಸುಖದಿಂದಿರಬೇಕು ಎಂಬುದೊಂದೇ ನನ್ನ ಬಯಕೆ. ದೇವರು ಎಂದು ಪರಿಹಾರ ಮಾಡುತ್ತಾನೋ ! ದಾರಿ ಕಾಯುವದರ ಹೊರತು ಬೇರೆ ಏನಿದೆ ಮನುಷ್ಯನ ಕೈಯಲ್ಲಿ?''

ಬೆಳಗಿನ ಎಂಟಾಗಿತ್ತು. ಅವನ ಚಿಂತನೆಗೆ ಕೊನೆ ಬಂತು. ಈಗ ಅವನು ಒಂದು ನೌಕರಿಯಲ್ಲಿದ್ದಾನೆ. ಅವನು ಕೊನೆಗೂ ತನ್ನ ಹಟವನ್ನು ಸಾಧಿಸಿದ. ಸರಕಾರಿ ನೌಕರಿಯನ್ನು ಹಿಡಿಯಲಿಲ್ಲ. ತಂದೆ ಹೇಳಿದ:

''ಸರಕಾರಿ ನೌಕರಿಯಲ್ಲಿ ಸಿಕ್ಕುವ ಭದ್ರತೆ ಬೇರೆ ಎಲ್ಲೂ ಸಿಕ್ಕವುದಿಲ್ಲ.''

ಆದರೆ ಅವನು ಆ ಮಾತನ್ನು ಕಿವಿಯಲ್ಲಿಯೇ ಹಾಕಿಕೊಳ್ಳಲಿಲ್ಲ. ತಾಯಿ ಹೇಳಿದಳು:

''ಏನೇ ಆಗಲಿ ದೇವರು ಅವನಿಗೆ ಒಳ್ಳೆಯ ಬುದ್ಧಿಯನ್ನು ಕೊಟ್ಟ.''

ಅವನು ಚಹಾ ಕಂಪನಿಯ ಏಜೆಂಟನಾಗಿದ್ದ. ಆದರೆ ಒಂದೇ ಕೊರಗು:

''ನನ್ನ ಬಯಕೆ ಈಡೇರಲಿಲ್ಲ. ನನಗೆ ಮೆಡಿಕಲ್ ರಿಪ್ರೆಜೆಂಟೇಟಿವ್ ಆಗುವ ಬಯಕೆ. ಏನೆಂದರೂ ಅವರ ಯೋಗ್ಯತೆ ಇವರಿಗೆ ಬರಲಾರದು. ಇವರೂ ಟೆರಿಲಿನ್ ಹಾಕಬಹುದು. ಶೂಸ್ ಮೆಟ್ಟಬಹುದು. ಝೋಡಿಯಕ್ ಟಾಯ್ ಕಟ್ಟಬಹುದು. ಆದರೇನು ಅವರ ಸಮ ಇವರಾಗಲಾರರು. ನಾನೋ ಚಹಾ ಸೊಪ್ಪನ್ನು ಅಂಗಡಿ ಅಂಗಡಿಗೆ ಮುಟ್ಟಿಸುತ್ತಾ ತಿರುಗಬೇಕು. ಆದರೆ ಅವರೋ ತಲೆಯೆತ್ತಿ ಎದೆ ಸೆಟಿಸಿ ಡಾಕ್ಟರರ ಜತೆಯಲ್ಲಿರುತ್ತಾರೆ.'' ಹೀಗೆ ಹಲವಾರು ದಿನ ಪರಿತಪಿಸಿದ. ಆದರೆ ಈ ಕೊರಗು ಬಹಳ ದಿನ ಉಳಿಯಲಿಲ್ಲ. ಆರು ತಿಂಗಳಲ್ಲಿ ತನ್ನ ಉದ್ಯೋಗಕ್ಕೆ ಹೊಂದಿಕೊಂಡ. ಮನಮುಟ್ಟಿ ದುಡಿದರೆ ಇಲ್ಲಿಯೂ ಕೈ ತುಂಬ ಪಡೆಯಬಹುದು. ಇದಲ್ಲದೆ ಮೇಲಿನ ಗ್ರೇಡುಗಳು ಅವನ ಬಾಯಲ್ಲಿ ನೀರು ತರಿಸಿದವು. ಡಿಸ್ಟ್ರಿಕ್ಟ್ ಆಫೀಸರ, ಝೋನಲ್ ಆಫೀಸರ್, ಅಬ್ಬಾ ಏನು ಸಂಬಳ ಅವರದು. ನಾನು ಇಂದಿಲ್ಲ ನಾಳೆ ಅದನ್ನು ಪಡೆಯಬಹುದು.

ಈಗ ಅವನು ನಿರ್ಭಯವಾಗಿ ಸಿಗರೇಟು ಸೇದುತ್ತಾನೆ. ತಪ್ಪದೆ ಮಾಂಸಾಹಾರವನ್ನು ಮಾಡುತ್ತಾನೆ. ಇಸಪೇಟನ್ನು ಆಡುತ್ತಾನೆ. ಅವನಿಗೆ ನಿಲುಕದ ಎರಡೇ ಎರಡು ಸಂಗತಿಗಳೆಂದರೆ ಒಂದು ಮದ್ಯ ಇನ್ನೊಂದು ಮಾನಿನಿ. ಈಗ ಅವನು ಟೆರಿಲಿನ್, ಕಾಟ್ಸ್‌ವೂಲ್ ಬಟ್ಟೆ ಧರಿಸುತ್ತಾನೆ. ನೌಕರಿ ಆದ ನಾಲ್ಕೆ ತಿಂಗಳಲ್ಲಿ ಪೋರ್ಟೆಬಲ್ ಟ್ರ್ಯಾನ್ಸಿಸ್ಟರನ್ನು ಕೊಂಡಿದ್ದಾನೆ. ರಿಸ್ಟವಾಚ್ ಮುಂಗೈಗೆ ಬಂದಿದೆ. ಮನೆಯೊಡನೆಯಂತೂ ಅವನು ಯಾವ ಸಂಪರ್ಕವನ್ನೂ ಇಟ್ಟುಕೊಂಡಿಲ್ಲ. ಮನೆಯೆಂದರೇ ಅವನಿಗೆ ಮೈ ಉರಿಯುತ್ತದೆ. ಎಲಿಗಂಟ್,

ಈವ್ಸ್ ವೀಕ್ಲೀ, ಟಿಟ್-ಬಿಟ್ಸ್ ಮೊದಲಾದ ಪತ್ರಿಕೆಗಳನ್ನು ತೆಗೆದುಕೊಳ್ಳುತ್ತಾನೆ. ನೌಕರಿಯಾದ ಮೇಲೆ ಮಾಡಿದ ಮೊದಲನೆ ಕೆಲಸವೆಂದರೆ ತಾನು ಹಿಂದೆ ಸುಟ್ಟು ಹಾಕಿದ ನಗ್ನ ಚಿತ್ರಗಳನ್ನು ಮತ್ತೆ ತರಿಸಿದ್ದು. ಅವುಗಳನ್ನು ಬಾಗಿಲು ಹಾಕಿಕೊಂಡು ನೋಡಿಯೇ ನೋಡಿದ. ''ಇವುಗಳನ್ನು ತರಿಸಿದ್ದೇನೆ. ನಿನ್ನ ಮಗಳ ಹೆಸರನ್ನೇ ನನ್ನ ಹೆಂಡತಿಯೆಂದು ಬರೆದಿದ್ದೇನೆ - ಫಾರ್ಮಿನಲ್ಲಿ ! ಏನು ಮಾಡುತ್ತಿ?'' ಎದುರಿನಲ್ಲಿ ಇಲ್ಲದ ತನ್ನ ತಾಯಿಯ ಗೆಳತಿಯನ್ನು ಗಟ್ಟಿಯಾಗಿ ಕೇಳಿದ. ಮೇರಿಸ್ಟೋಪ್ಸ್, ಹ್ಯಾವ್‌ಲಾಕ್ ಎಲಿಸ್ ಇವರ ಪುಸ್ತಕಗಳನ್ನು ತರಿಸಿದ. ತನ್ನ ಮನಸ್ಸಿಗೆ ಬಂದ ಕನ್ನಡ ಕಾದಂಬರಿಗಳನ್ನೆಲ್ಲ ಕೊಂಡುಕೊಂಡ. ಒಂದೂ ಬಿಡದೆ ಸಿನಿಮಾ ನೋಡಿ ಬಂದ.

ಆದರೆ ಏನು ಮಾಡಿದರೂ ಅವನು ಬಯಸಿದ ಜೀವನದ ಹೊಸ ಅನುಭೂತಿ ಮಾತ್ರ ಇನ್ನೂ ಬರಲಿಲ್ಲ.

ಸ್ನೇಹವೃಂದ ಬೆಳೆಯಿತು. ಊರ ಹರಟೆ ನಡೆಯಿತು. ನಗರದ ವಿವಿಧ ಹಂತಗಳ ಪ್ರತಿಷ್ಠಿತರು ಅವನಿಗೆ ಸ್ನೇಹಿತರು. ವಕೀಲರು, ಪ್ರಾಧ್ಯಾಪಕರು, ವ್ಯಾಪಾರಸ್ಥರು, ಡಾಕ್ಟರರು, ಸರಕಾರಿ ಅಧಿಕಾರಿಗಳು ಅವನ ಸ್ನೇಹಿತರು. ಅವರ ಜತೆ ಹರಟೆ ಕೊಚ್ಚುವಾಗ ಅವನದೇ ಮೇಲುಗೈ. ಹಾಸ್ಯದಿಂದ ಹಿಡಿದು ವಿಜ್ಞಾನದ ವರೆಗಿನ ಯಾವ ವಿಷಯವಾದರೂ ಸೈ. ಅವನ ಹರಿತವಾದ ನಾಲಗೆ ಏನೆಲ್ಲವನ್ನೂ ತತ್ತರಿಸುತ್ತದೆ. ವಿನೋದದ ಮಾತುಗಳನ್ನು ಹೇಳುವುದರಲ್ಲಿಯಂತೂ ಅವನದು ಎತ್ತಿದ ಕೈ. ಐದಾರು ಭಾಷೆಗಳಲ್ಲಿಯ ಪ್ರೇಮಗೀತೆಗಳನ್ನು ಹೇಳುತ್ತಾನೆ. ಗಝಲ್, ಗಾಥಾ ಸಪ್ತಶತಿಯ ತುಣುಕು ಇವುಗಳನ್ನು ವಿವರಿಸಿ ರಸಿಕರನ್ನು ತಣಿಸುತ್ತಾನೆ. ನಗರದ ಜೀವನದಲ್ಲಿ ಹಾಸುಹೊಕ್ಕಾಗಿದ್ದಾನೆ. ನಗರಕ್ಕೆ ಮೊದಲು ಬಂದಾಗ ಅವನಿಗೆ ಎಲ್ಲಿ ಯಾರೂ ಪರಿಚಿತರೆ ಇರಲಿಲ್ಲ. ಈಗ ಅವನಿಗೆ ಬಿಡುವೇ ಇಲ್ಲ. ಅವನ ಮಾತಿನ ಸೊಗಸನ್ನು ಜನ ತುಂಬ ಮೆಚ್ಚಿಕೊಳ್ಳುತ್ತಾರೆ.

ಬ್ರೇನ್ ಟೆಸ್ಟಿನಲ್ಲಿ ಅವನು ಭಾಗವಹಿಸಿದ. ಅದು ಅವನಿಗೆ ತುಂಬ ಪ್ರತಿಷ್ಠೆಯನ್ನು ತಂದುಕೊಟ್ಟಿತು. ಸಾಮಾಜಿಕ ಸಾಂಸ್ಕೃತಿಕ ವಿಷಯಗಳಲ್ಲಿಯ ಕೆಲವು ಪ್ರಶ್ನೆಗಳನ್ನು ತಾನೇ ಇಂಗ್ಲಿಶ್‌ನಲ್ಲಿ ಟೈಪು ಮಾಡಿಕೊಟ್ಟಿದ್ದ - ಇನ್ನೊಬ್ಬರಿಗೆ ತಿಳಿಯದಂತೆ. ಆ ಪ್ರಶ್ನೆಗಳಿಗೆಲ್ಲ ತಾನೇ ಈ ಮೊದಲು ಪಾಠಮಾಡಿದ

ಉತ್ತರಗಳನ್ನು ಕೊಟ್ಟ. ಜನ ಚಪ್ಪಾಳೆ ತಟ್ಟಿ ಅವನ ಬಹುಶ್ರುತತೆಯನ್ನು ಪ್ರತಿಭೆಯನ್ನು ಪ್ರಶಂಸಿಸಿತು.

``ಈಗಿನ ರಾಜಕಾರಣಿಯ ವಿಷಯದಲ್ಲಿ ನಿಮ್ಮ ಅಭಿಪ್ರಾಯ ?'' ಅದಕ್ಕೆ ಅವನ ಉತ್ತರ - `` He is like a woman who changes partners in the hope that one day she will experience true orgasm.'' ಎಷ್ಟು ಸಂಕ್ಷಿಪ್ತ. ಎಷ್ಟು ಮೊನೆ ಅವನ ಉತ್ತರಕ್ಕೆ!

``ಇಂದಿನ ಎರಡು ದೊಡ್ಡ ಅಪರಾಧಗಳು ಯಾವವು?''

ಅವನ ಉತ್ತರ ಬಂದೆರಗಿತು: ``Being broke; Being caught.'' ಅವನ ಜತೆಯಲ್ಲಿ ವ್ಯಾಸಪೀಠದ ಮೇಲೆ ಕುಳಿತ ಇನ್ನಿಬ್ಬರು -ಒಬ್ಬರಂತೂ ನ್ಯಾಯಾಧೀಶರು, ಇನ್ನೊಬ್ಬರು ಪತ್ರಿಕೆಯ ಸಂಪಾದಕರು ಅವನ ಮುಂದೆ ತೀರ ಸಪ್ಪಗಾಗಿ ಕಂಡರು.

``ಇಂದಿನ ತರುಣರ ಬಗ್ಗೆ ನಿಮ್ಮ ಅಭಿಪ್ರಾಯ ?''

``...... Vain and shallow. Believes in admiration and flattery, and thinks they are real and genuine.''

``ನವಯುವತಿಯ ವಿಷಯದಲ್ಲಿ?''

``ಅವಳದೆಲ್ಲ ಹುಸಿ- ಅವಳ ಕಣ್ಣೀರೆ, ಅವಳ ಚೆಲುವು, ಅವಳ ರೀತಿ ಎಲ್ಲ ನಟನೆ.''

``ನವಯುವತಿಯ ನೀತಿ ಎಂತಹದು?''

``Morals of an alley cat.''

ಒಂದು ಗಂಟೆಯವರೆಗೆ ಸಭಿಕರನ್ನು ಮುಗ್ಧಗೊಳಿಸಿದ ಅವನು. ಅವನಿಗೆ ಕೃತಕೃತ್ಯತೆಯ ಭಾವದಿಂದ ಉಂಟಾದ ಆತ್ಮವಿಸ್ಮೃತಿ ಅನನ್ಯವಾದ ಅನುಭವವಾಗಿತ್ತು. ಕಾರ್ಯಕ್ರಮ ಮುಗಿದ ಮೇಲೆ ಅವನನ್ನು ಅನೇಕರು ಅಭಿನಂದಿಸಿದರು. ಅವನ ಬುದ್ಧಿಮತ್ತೆಯನ್ನು ಹೊಗಳಿದರು. ಅವನ ಇಂಗ್ಲಿಶ್ ಜ್ಞಾನವನ್ನು ಪ್ರಶಂಸಿಸಿದರು. ಅವನಿಗೆ ತಮ್ಮ ಮನೆಗೆ ಬರಲು ಆಮಂತ್ರಣವನ್ನು ಕೊಟ್ಟರು.

''ನಿಮ್ಮ ಇಂಗ್ಲಿಶ್ ಬಹಳ ಚೆನ್ನಾಗಿದೆ.''

'' ಇಂಗ್ಲಿಶ್ ಒಂದೇ ಏಕೆ ! ನಾನು ಫ್ರೆಂಚ್ ಕೂಡ ಬಲ್ಲೆ. ಉರ್ದು, ಹಿಂದಿ ಬಂಗಾಲಿ.'' ಅವನ ಅನುಯಾಯಿಗಳಿಗೆ ವಿಸ್ಮಯ, ಆದರ. ಉರ್ದು ಗಝಲ್ ಅಂದು ತೋರಿಸಿದ. ''ದಹಕಾ ಕೀ ಪ್ಯಾರೀ ಲಡಕೀ ನದ್ದೀಪೇ ಜಲ್ವಾ ಜಾ ಹೈ | ಸಾರೀಕಾ ಸಬ್ಜ ಆಂಚಲ ಸರ ಸೇ ಢಲಕ್ ರಹಾ ಹೈ | ಬತವನ ಕೀ ಸಾದಗೀಮೇ ಇಕ ಬರ್ಕ್ ಶೋಲಾ ಜೊ ಹೈ | ಜಿಸ್ ಪರ ನಜರ ಪಡೀ ವಹ ಶೋಲಾ ಬನಾ ಹುವಾ ಹೈ.'' ಗಂಭೀರ ಧ್ವನಿಯಲ್ಲಿ ಪ್ರತಿಯೊಂದು ಚರಣವನ್ನು ಎರಡೆರಡು ಸಲ ಹೇಳಿದ. ಆಮೇಲೆ ಒಂದೊಂದೇ ಚರಣದ ಅರ್ಥವನ್ನು ಹೇಳಿದ. ಆಗ ಅವನ ಕಣ್ಣು ಮುಂದೆ ಆ ಹುಡುಗಿ ಕುಣಿದಳು.

''ನಮ್ಮ ದೇಶ ಕೇವಲ ಮುದುಕರಿಗಾಗಿ ಮಾತ್ರ'' ಅವನು ಗೆಳೆಯರೆದುರು ಹೇಳುತ್ತಾನೆ. ''ನಾವು ಬದುಕಿನ ಸೊಗಸನ್ನು ಕಾಣಲಾರೆವೆಂದು ಕಣ್ಣುಮುಚ್ಚಿದ್ದೇವೆ. ನಾನು ಮೊನ್ನೆ 'ನೈಲ್‌ನದಿಯ ಮೇಲೆ ತರುಣಿ' ಎಂಬ ಸಿನೆಮಾ ನೋಡಿದೆ. ಓ ಅದ್ಭುತ.'' ಒಂದೆರಡು ನಿಮಿಷ ಅವನು ಮೌನದಿಂದ ಕುಳಿತು ಗೆಳೆಯರ ಮುಖಗಳನ್ನು ನಿರೀಕ್ಷಿಸುತ್ತಾನೆ. ಅವರು ಅವನು ಆಡುವ ಮಾತಿಗಾಗಿ ಕುತೂಹಲದಿಂದ ಕಾದಿರುತ್ತಾರೆ.

''ಸಿನೆಮಾದಲ್ಲಿ ಈಗ ಫ್ರಾನ್ಸದಲ್ಲಿ New wave technique ಬಂದಿದೆ.''

''ನ್ಯೂ ವೇವ್ ಎಂದರೇನು?''

''ಓ ಅದ್ಭುತ ಅದು. ಎರೊಡಕ್‌ಶನ್ ಗೊತ್ತೇನು ನಿಮಗೆ?''

''ಇಲ್ಲ.''

''ಜಪಾನದಲ್ಲಿಯ ಸಿನೆಮಾ ತಂತ್ರ. ಹೊಸ ಶಬ್ದ ಅದು. ಎರೊಟಿಕ್ ಪ್ರೊಡಕ್‌ಶನ್, ಟೆಲಿವ್ಹಿಜನ್ ಹಾಗೂ ಸಿನೆಮಾ ಇವುಗಳ ಸಂಘರ್ಷದಿಂದ ಬಂದ ಹೊಸ ತಂತ್ರ ಅದು.''

''ನಮ್ಮಲ್ಲಿ ಇವೆಲ್ಲ ಬರುವುದೆಂದು?''

''ನಮಗೆ ಎಚ್ಚರ ಬಂದಾಗ. ಝುಕ್ ಫಿಲ್ಮ್ ನೋಡಿದ್ದೀರೆಂದು ನೀವು?''

ಸತ್ಯಜಿತರ ....'' ಗೆಳೆಯನೊಬ್ಬ ಬಾಯಿ ತೆರೆದ.

''ಓ ಅವರ ಪರಿಚಯ ನನಗಿದೆ. ನಾನವರಿಗೆ ಪತ್ರಗಳನ್ನು ಬರೆದಿದ್ದೇನೆ. ನಾನವರಿಗೆ ಕೆಲವು ಸೂಚನೆಗಳನ್ನು ಮಾಡಿದ್ದೆ. ಅವರು ಒಪ್ಪಿಕೊಂಡರು. ನೀವು ಚಾರುಲತಾ ನೋಡಿದ್ದೀರೇನು?''

''ಇಲ್ಲ'' ಏಕಕಂಠದಲ್ಲಿ ಉತ್ತರ.

''ಹಾಗಾದರೆ ಹೇಳಿ ಏನು ಉಪಯೋಗ? ಅಪರಾಜಿತೋದಲ್ಲಿಯ ದೋಷಗಳನ್ನು ಅದರಲ್ಲಿ ತಿದ್ದಿಕೊಂಡಿದ್ದಾರೆ. ನಾನು ನಿಜವಾಗಿ ಕಲಕತ್ತೆಗೇ ಹೋಗುವ ಯೋಚನೆಯಲ್ಲಿದ್ದೆ. ಆದರೆ ನಾನಿಲ್ಲಿ ಉಳಿದದ್ದು ಕೇವಲ ಕನ್ನಡದ ಮೇಲಿನ ಅಭಿಮಾನದಿಂದ.'' ಈ ಮಾತಿನ ಪರಿಣಾಮವನ್ನು ಅವರ ಮುಖದ ಮೇಲೆ ಓದಿದ. ಅಲ್ಲಿ ಸಂದೇಹದ ಛಾಯೆ ಮೂಡಿತ್ತು. ಅವನು ನಸುನಕ್ಕು ತನ್ನ ಬ್ಯಾಗನ್ನು ತೆಗೆದು ಪತ್ರಗಳ ಒಂದು ಕಟ್ಟನ್ನೇ ಹೊರಗೊಗೆದ. ಅದರಲ್ಲಿಯ ಒಂದು ಪತ್ರವನ್ನು ತೆಗೆದು ತೋರಿಸಿದ. ಅದು ಎಲಿಜಾಬತ್ ಟೇಲರಳದಿತ್ತು. ಅವಳ ಮದುವೆಗೆ ಅವನು ಶುಭಾಶಯಗಳನ್ನು ಕಳಿಸಿ ಅವಳ ಒಂದು ವಿಶೇಷ ಭಾವಚಿತ್ರವನ್ನು ತೋರಿಸಿದ. ಅದಕ್ಕೆ ಅವಳ ಅಂಕಿತವೂ ಇತ್ತು. ''ಈಗಲಾದರೂ ನನ್ನ ಮಾತಿನ ಮೇಲೆ ವಿಶ್ವಾಸ ಉಂಟಾಯಿತೆ?'' ಎಂಬ ದೃಷ್ಟಿಯಿಂದ ಅವರನ್ನು ನೋಡಿದ.

''ಇಂತಹ ಸಂಶಯದಿಂದಲೇ ಕನ್ನಡ ಹಾಳಾಗಿದೆ. ನನಗೆ ಕೆಲವು ಅನುಯಾಯಿಗಳು ದೊರೆತರೆ....'' ಮತ್ತೆ ಅವನೇ ಮಾತು ಮುಂದುವರಿಸಿದ ''ಅಮೇರಿಕೆಯಲ್ಲೊಂದು ಹೊಸ ಮಾಸಪತ್ರಿಕೆ ಹೊರಬಿತ್ತು. ಅದನ್ನು ನಿಲ್ಲಿಸಿದರು ಏಕೆ ಗೊತ್ತೆ?''

''ಇಲ್ಲ.''

''ಅದರ ಹೆಸರು ಎರೊಟಿಕ್. ಅವರಿಗೆ ಅಶ್ಲೀಲ ಅನ್ನಿಸಿತಂತೆ. ಅದರ ಬೆಲೆ ತಿಂಗಳಿಗೆ ಐವತ್ತು ರೂಪಾಯಿ.''

''ಅಬ್ಬಾ'' ಈ ಉದ್ಗಾರದ ಹೊರತು ಅವನ ಅನುಯಾಯಿಗಳಲ್ಲಿ ಬೇರೆ ಶಬ್ದವಿರಲಿಲ್ಲ. ''

''ಕನ್ನಡದಲ್ಲಿ ಅಂತಹ ಪತ್ರಿಕೆಯೊಂದನ್ನು ಹೊರಡಿಸಬೇಕು ಎಂದು ನನ್ನ ಆಸೆ.''

``ಪಶ್ಚಿಮದ ಸಾಹಿತ್ಯದಲ್ಲಿ.......''

``ಓ ಇಲ್ಲ, ನ್ಯೂ ಟ್ರೆಂಡ್ಸ್. ಲಿಸ್‌ಬೆನಿಝುಮ್, ನಿಮ್ಫೊಮೆನಿಯಾ ಅಭಿವ್ಯಕ್ತವಾಗಿದೆ ಈಗ. ನಮ್ಮಲ್ಲಿ ನಾವಿನ್ನು ಅಡುಗುಲಜ್ಜಿಯ ಕತೆಯ ಯುಗದಲ್ಲಿಯೇ ಇದ್ದೇವೆ.''

ಅವನ ಜತೆ ಕುಳಿತರೆ ಎಷ್ಟು ಹೊಸ ಶಬ್ದ ಬರುತ್ತವೆ ಅವನ ಬಾಯಿಂದ!

``ನೀವೆಂದು ಕಾರ್ಯಶೀಲರಾಗುವವರು?''

``Waiting for time ನಾನು ಹೇಳಿದರೆ ನಿಮಗೆ ಆಶ್ಚರ್ಯವಾದೀತು. ನಿಮಗೆ ಸತ್ಯಜಿತರೆ ಈಗ ಪರಿಚಿತ. ಅವನು ಮೊದಲೇನು ಮಾಡುತ್ತಿದ್ದ ಗೊತ್ತೆ?''

``ಇಲ್ಲ.''

``ಸಾಬೂನಿನ ರ್‍ಯಾಪರುಗಳ ಮೇಲೆ ಡಿಝೈಯಿನ್ ಬಿಡಿಸುತ್ತಿದ್ದ. ಇನ್ನೊಬ್ಬ ಮಹಾ ದಿಗ್ದರ್ಶಕ. ಅವನ ಹೆಸರು ನಾನು ಹೇಳಲಾರೆ. ತನ್ನ ಕರಿಯರನ್ನು ಅವನು ಡೋರಕೀಪರ ಎಂದು ಪ್ರಾರಂಭಿಸಿದ್ದ. ಈಗ ಬೇಕಾದದ್ದು ತಾಳ್ಮೆ. ಇಂದು ನಕ್ಕವರೆಲ್ಲ ನಾಳೆ ಬೆರಗಾಗುತ್ತಾರೆ.''

ಅವನು ಎಷ್ಟೋ ಸಲ ಇಂತಹ ಹಗಲುಗನಸುಗಳನ್ನು ಕಂಡಿದ್ದಾನೆ. ಚಲನಚ್ಚಿತ್ರಮಂದಿರದಲ್ಲಿ ಕುಳಿತಾಗ, ಹೇ ಆರ್ ಕಟ್ಟಿಂಗ್ ಸಲೂನಿನಲ್ಲಿ ಕುಳಿತಾಗ ಎಲ್ಲಿಯೇ ಇರಲಿ ಅವನು ಹಗಲುಗನಸುಗಳನ್ನು ಕಾಣುತ್ತಿರುತ್ತಾನೆ. ``ನಾನೇಕೆ ಸತ್ಯಜಿತರೈರನ್ನೇ ಮೀರಿಸುವ ದಿಗ್ದರ್ಶಕನಾಗಬಾರದು?'' ಎಂದು ತನ್ನನ್ನು ತಾನೇ ಅನೇಕ ಸಲ ಕೇಳಿಕೊಂಡಿದ್ದಾನೆ. ಆಸೆನಿರಾಶೆಗಳ ಸಂಘರ್ಷದಲ್ಲಿ ಹಣ್ಣಾಗಿದ್ದಾನೆ `` ಸಿನೇಮಾನೇ ನನ್ನ ಕಾರ್ಯಕ್ಷೇತ್ರ'' ಎಂದು ಉದ್ಘೋಷಿಸಿದ್ದಾನೆ.

ಆದರೆ ಅವನಿಗೆ ಒಮ್ಮೊಮ್ಮೆ ಪತ್ರಿಕೆಗಳಲ್ಲಿ ಬರುವ ಅನೇಕ ಸಂಗತಿಗಳಿಂದ ತುಂಬ ನೋವು ಉಂಟಾಗುತ್ತದೆ. ಅವನ ಸ್ನೇಹಿತನಿಗೆ ರಾಷ್ಟ್ರೀಯ ಶಿಷ್ಯವೃತ್ತಿ ದೊರೆತ ವರ್ತಮಾನವನ್ನು ಪತ್ರಿಕೆಯಲ್ಲಿ ಓದಿದಾಗ ಅವನು ಅಸೂಯೆಯ ಜ್ವಾಲೆಯಲ್ಲಿ ಹೊರಳಾಡುತ್ತಾನೆ.

``ಇವನು ನನ್ನ ಕ್ಲಾಸ್‌ಮೇಟ್'' ತನ್ನ ಗೆಳೆಯರಿಗೆ ಹೇಳಿದ. ``ಇವನಿಗೆ

ಗಣಿತ ಬರುತ್ತಿರಲಿಲ್ಲ. ಎರಡು ವರ್ಷಗಳವರೆಗೆ ನಾನು ಇವನಿಗೆ ಗಣಿತ ಕಲಿಸಿದೆ. ಆದರೆ ವ್ಯರ್ಥ. ಕೊನೆಗೂ ಅವನು ಉತ್ತೀರ್ಣನಾದದ್ದು ನಾನು ಕಾಪಿ ಕೊಟ್ಟಿದ್ದರಿಂದ.'' ಅವನು ತನಗಾದ ಹಾನಿಯನ್ನು ಹಗಲು ಗುಂಪಿನಲ್ಲಿ ಇಂತಹ ಮಾತುಗಳನ್ನಾಡಿ ಮರೆಯಲು ಸಾಧ್ಯವಿತ್ತು. ಆದರೆ ರಾತ್ರಿ ಸಾಧ್ಯವಿರಲಿಲ್ಲ. ತಾನು ಬಂಡೆಬ್ಬಿಸಿ ಪಡೆದ ನಾಲ್ಕನೆಯ ಆಯಾಮ ಯಾವುದು? ಪಡೆದಿದ್ದೇನೆಯೆ? ಅವನಿಗೆ ನಿರಾಸೆಯಾಗುತ್ತಿತ್ತು. ''ನೀವು ಕಾಲೇಜ ಏಕೆ ಬಿಟ್ಟಿರಿ?''

''ಅದೇ ಒಂದು ದೊಡ್ಡ ಕತೆ. ಅನ್ಯಾಯದ ವಿರುದ್ಧ ಹೋರಾಟ.''

ಕಲ್ಪಕತೆಯ ಅಭಾವದಿಂದ ಕಾಮ ವಾಣಿಜ್ಯದಲ್ಲಿ ಒಂದು ಪ್ರಧಾನ ಘಟಕವಾಗಿದೆ. ಪತ್ರಿಕೆಗಳ ಮುಖಪುಟದಲ್ಲಿ ಅಚ್ಚಾದ ಲೈಂಗಿಕ ಪ್ರವೃತ್ತಿಯನ್ನು ಕೆರಳಿಸುವ ಭಂಗಿಯಲ್ಲಿ ಚೆಲುವೆಯ ವರ್ಣರಂಜಿತ ಚಿತ್ರ; ಪುಟಪುಟಗಳಲ್ಲಿ ಅಚ್ಚಾಗುವ ಪ್ರಕಟನೆಗಳಲ್ಲಿಯ ಲೈಂಗಿಕ ಆಕರ್ಷಣೆ. ಚಲನಚಿತ್ರ ಅವು ಅವನಲ್ಲಿಯ ಲೈಂಗಿಕ ಪ್ರವೃತ್ತಿಗೆ ಎಣ್ಣೆಯನ್ನು ಸುರಿದವು. ''She is looking at you. But are you....'' ಇದು ಬ್ಲೇಡಿನ ಪ್ರಕಟಣೆ, ಡೆಬಿಲ್ ಗರ್ಲ್ - ಕಂಕುಳನ್ನೆತ್ತಿ ನಿಂತವಳು; ಹೀಗೆ ಒಂದಲ್ಲ ಹತ್ತಲ್ಲ ಸಾವಿರ ಹುಡುಗಿಯರು. ಅವನಿಗೆ ಇನ್ನೂ ಆ ಹುಡುಗಿಯ ಮೇಲಿನ ಮೋಹ ಹೋಗಿಲ್ಲ. ಬೀದಿಯಲ್ಲಿ ಹೋಗುವಾಗ ಪಾನಪಟ್ಟಿಯ ಅಂಗಡಿಗಳಲ್ಲಿ ತುಂಬಿದೆದೆಯನ್ನು ಅರೆತೆರೆದು ನಿಂತ ನಟಿಯರ ಭಾವಚಿತ್ರ, ಸಲೂನಿನಲ್ಲಿಯ ಭಾವಚಿತ್ರ, ಸಿನೇಮಾ ಸಂಗೀತ ಎಲ್ಲ ಅವನ ಹೃದಯದ ಮೇಲೆ ದಾಳಿ ಮಾಡಿವೆ.

ಅವನು ಆ ಹುಡುಗ ಇಬ್ಬರು ಕೂಡಿ ಕಡಲತಡಿಯಲ್ಲಿದ್ದಂತೆ ಕನಸು. 'Farewell to the arms' ಚಲನಚಿತ್ರ ಅವನ ಮೇಲೆ ತುಂಬ ಪರಿಣಾಮ ಮಾಡಿದೆ. ಕ್ಯಾಥರಿನ್‌ಗಳನ್ನು ಹೆನ್ರಿ 'ಕ್ಯಾಟ್' ಎಂದು ಕರೆಯುತ್ತಿರುತ್ತಾನೆ. ತಾನು ಆ ಹುಡುಗಿಯನ್ನು ಏನೆಂದು ಕರೆಯಬಹುದು? ಅಷ್ಟರಲ್ಲಿ ಆ ಹುಡುಗಿಯ ತಂದೆ ಬರುತ್ತಾರೆ. ''ಇಲ್ಲಿದೀಯಾ. ನಾನೆಷ್ಟು ಹುಡುಕಿದೆ.''

ಆ ಹುಡುಗಿ ಗಾಬರಿಯಾಗಿ ತಂದೆಯ ಕಡೆಗೆ ಸರಿಯುತ್ತಾಳೆ. ತಂದೆ ಅವನನ್ನು ಗದರಿಸುತ್ತಾರೆ:

''ಏನಿದು ನಿನ್ನ ಅವ್ಯವಹಾರ.''

ಅವನಿಗೂ ಗದರಿಸುವ ಅಪೇಕ್ಷೆಯಾಗುತ್ತದೆ. ಆದರೆ ಆ ಹುಡುಗಿಯ ಮನಸ್ಸು ನೋಯಿಸಬಾರದೆಂದು ಸೌಮ್ಯ ಉತ್ತರ ಕೊಡುತ್ತಾನೆ.

''ನೀನು ಅವನನ್ನು ಮದುವೆಯಾಗುತ್ತೀಯಾ?'' ತಂದೆ ಮಗಳನ್ನು ಕೇಳಿದ. ಅವನು ಕುತೂಹಲದಿಂದ ಅವಳ ಉತ್ತರಕ್ಕಾಗಿ ಕಾದ. ಅವಳ ಬಾಯಿಂದ ಮಾತೇ ಬರಲಿಲ್ಲ.

''ಹೇಳು, ಹೇಳು ಧೈರ್ಯವಾಗಿ ಹೇಳು'' ಅವನು ಅವಳನ್ನು ಕೇಳಿದ.

''ಅವಳೇನು ಹೇಳುತ್ತಾಳೆ. ಅವಳ ತಂದೆ ನಾನಿಲ್ಲಿ....''

''ನಿಮ್ಮದೇನು ಸಂಬಂಧ?''

''ನಿನ್ನನ್ನು ಜೇಲಿಗೆ ಕಳಿಸಬಲ್ಲೆ.''

ಅಷ್ಟರಲ್ಲೇ ಇನ್ನೊಂದು ಮನುಷ್ಯಕೃತಿ. ತಂದೆ ಹೇಳಿದ:

''ಈ ಕೈ ಭದ್ರತೆಯನ್ನು ಬಯಸುತ್ತಿದೆ. ಆ ಕೈ ಇದನ್ನು ನೀಡಲು ಸಿದ್ಧವಿದೆಯೆ?''

''ಸಿದ್ಧವಿದೆ'' ಎಂಬ ಧ್ವನಿ ಬಂತು.

ನೋಡುತ್ತಾನೆ. ತನ್ನ ಸ್ನೇಹಿತ. ಬಂದವನೆ ತನ್ನ ಸ್ನೇಹಿತ ತನ್ನ ಕೈಯನ್ನು ಮುಂದೆ ಚಾಚಿದ. ಸಾಯಂಕಾಲದ ಮನೋಹರ ಕಾಂತಿಯಲ್ಲಿ ಮೊದಲೆ ಚೆಲುವಾದ ಸ್ನೇಹಿತರ ಅಂಗೈ ಮತ್ತೂ ಸುಂದರವಾಗಿ ಕಂಡಿತು. ಅವನು ತನ್ನ ಅಂಗೈಯನ್ನು ನೋಡಿಕೊಂಡ. ಕಪ್ಪುಕಪ್ಪಾಗಿತ್ತು. ಅವಳು ತನ್ನ ತಂದೆಯ ಹಿಂಬದಿಯಿಂದ ಮುಂದೆ ಬಂದಳು - ನವವಧುವಿನಂತೆ ನಾಚುತ್ತ. ಹರವಾದ ಅಂಗೈ ಮೇಲೆ ತನ್ನ ಅಂಗೈಯನ್ನಿರಿಸಿದಳು. ಬಳೆ ಕಿಂಕಿಣಿ ನಾದ ಮಾಡಿತು. ಅನಾಮಿಕಾದ ಉಂಗುರ ಮತ್ತೂ ಚೆಲುವಾಗಿ ಕಂಡಿತು. ಅವಳ ಕೈ ಹೆಬ್ಬೆರಳು ಹಾಗೂ ಉಳಿದ ಬೆರಳು ಸ್ನೇಹಿತನ ಅಂಗೈ ಮಧ್ಯ ಹಾಗೂ ಅನಾಮಿಕಾ ಇವುಗಳನ್ನು ತಬ್ಬಿಕೊಂಡಿತು. ಆ ಎರಡು ಕೈಗಳ ಚಿತ್ರ ಅವಳ ಕಣ್ಮುಂದೆ ಸ್ಪಷ್ಟವಾಗಿ ನಿಂತಿದೆ.

ಹೌದು. ಆ ಸ್ನೇಹಿತ ಪರದೇಶಕ್ಕೆ ಹೋಗುತ್ತಾನೆ. ಶಿಕ್ಷಣ ಮುಗಿಸಿ ಬರುತ್ತಾನೆ. ಆ ಹುಡುಗಿಯ ತಂದೆ ತಾಯಿ ತನ್ನ ಸ್ನೇಹಿತನ ಮನೆಗೆ ಹೋಗುತ್ತಾರೆ. ಅಲ್ಲಿ ಹಾಸಲು ಒಂದು ಚಾಪೆ ಮಾತ್ರ ಇರುತ್ತದೆ. ಸ್ನೇಹಿತನ ತಂದೆಯ ಮುಖದಲ್ಲಿ ಧನ್ಯತೆ ಅರಳುತ್ತದೆ. ತಾಯಿ ಭಾವಸಮಾಧಿಗೇ ಇಳಿಯುತ್ತಾಳೆ. ''ತಾವು ದೊಡ್ಡ

ಮನಸ್ಸು ಮಾಡಿ ತಮ್ಮ ಮಗನಿಗೆ ನಮ್ಮ ಹುಡುಗಿಯನ್ನು ತೆಗೆದುಕೊಳ್ಳಬೇಕು.'' ಮುಂದಿನದನ್ನು ಅವನು ಯೋಚಿಸದಾದ. ಶಹನಾಯಿಯ ಸದ್ದು ಅವನ ಕಿವಿಗೆ ಸ್ಪಷ್ಟವಾಗಿ ಕೇಳುತ್ತದೆ.

ನಾನೇ ಅಲ್ಲದೆ ಇದನ್ನೆಲ್ಲ ಹಾಳು ಮಾಡಿಕೊಂಡವ ! ಸ್ನೇಹಿತನ ತಾಯಿಯ ಚಿತ್ರ ಬಂದಕೂಡಲೇ ತನ್ನ ತಾಯಿಯ ಚಿತ್ರ ಅದರ ಜತೆ. ಅವನ ಕರುಳಲ್ಲಿ ಅಲಗಿಕ್ಕಿದಂತಾಗುತ್ತದೆ. ತಾನು ಕನಸಿನಲ್ಲಿ ಕಂಡ ಆ ಎರಡು ಕೈಗಳ ಮಿಲನಚಿತ್ರ ಪತ್ರಿಕೆಗಳಲ್ಲಿಯೂ ಪ್ರಕಟವಾಗುತ್ತಿದೆ. ಅದನ್ನು ನೋಡಿದಾಗ ಒಮ್ಮೆ ಅವನಲ್ಲಿ ಅಸಹ್ಯವೇದನೆ ಉಂಟಾಗುತ್ತದೆ. ಅವನಿಗೆ 'ಇಲಸ್ಟ್ರೇಟೆಡ್ ವೀಕ್ಲಿ' ಯನ್ನು ತೆಗೆಯುವಾಗ ಕೈ ನಡುಗುತ್ತದೆ. ಅದರಲ್ಲಿಯೆ ಒಮ್ಮೆ ತನ್ನ ಸ್ನೇಹಿತನನ್ನು ಕುರಿತು ಲೇಖ ಅಚ್ಚಾಗಿತ್ತು. ಇಂದಿಲ್ಲ ನಾಳೆ ಅದೇ ಪತ್ರಿಕೆಯಲ್ಲಿ ಸ್ನೇಹಿತನ ಹಾಗೂ ಆ ಹುಡುಗಿ ಇವರ ಭಾವಚಿತ್ರ ಬರುತ್ತದೆ. ಅವನ ಹೃದಯ ಮೊರೆಯುತ್ತದೆ.

ನಗರದ ಪ್ರತಿಷ್ಠಿತ ಕುಟುಂಬದೊಡನೆ ಅವನಿಗೆ ಪರಿಚಯವಾಗಿದೆ. ಮೇಲಿಂದಮೇಲೆ ಅವರ ಮನೆಗೆ ಹೋಗಿ ಹರಟೆಹೊಡೆದು ಬರುತ್ತಾನೆ. ಆ ಮನೆಯಲ್ಲಿ ಅವನ ಪ್ರಭಾವ ಅಭೇದ್ಯವಾದ ಒಂದು ಕೋಟೆಯನ್ನು ನಿರ್ಮಿಸುತ್ತದೆ. ಕೌಟುಂಬಿಕ ಭದ್ರತೆಯೆಂದರೆ ಏನೆಂಬುದು ಅವನಿಗೆ ಅರ್ಥವಾಗಿದೆ. ಭವ್ಯ ಬಂಗಲೆ. ಹೂತುಂಬಿದ ತೋಟ ಇದೆಲ್ಲ ಇದ್ದರೂ ಭದ್ರತೆಗೆ ಎಲ್ಲಿಯೋ ಬೆಸುಗೆ ಬಿಟ್ಟಿದ್ದು ಅವನ ಕಣ್ಣಿಗೆ ಸ್ಪಷ್ಟವಾಗಿ ಗೋಚರವಾಯಿತು. ಅವನಿಗೆ ತನ್ನ ತಾಯಿಯ ಗೆಳತಿಯ ಮನೆ ನೆನಪಾಯಿತು. ಅವರಿಗೂ ಇವರಿಗೂ ಏನು ವ್ಯತ್ಯಾಸ? ಅವನಿಗೆ ಮೇಲು ತೋರಿಕೆಗೆ ಎರಡೂ ಒಂದೇ ಕಂಡಿದ್ದವು. ಈ ಮನೆಯಲ್ಲಿ ಅವನಿಗೆ ಪ್ರವೇಶ ದೊರೆಯಿತು. ಅಲ್ಲಿ ಎರಡು ವರ್ಷ ಇದ್ದರೂ ಒಳಗೇ ಹೋಗಲಿಲ್ಲ. ಅವನು ಇಂದಿನವರೆಗೆ ಹೆಣ್ಣುಮಕ್ಕಳೊಡನೆ ಕುಳಿತು ಮಾತನಾಡಿರಲಿಲ್ಲ. ಆದರೆ ಇಲ್ಲಿ ಒಂದೊಂದು ಗಂಟೆ ಹರಟೆ ಹೊಡೆಯುತ್ತಾನೆ. ಅವರ ಮನಸ್ಸನ್ನು ಎಳೆದುಕೊಂಡಿದ್ದಾನೆ. ಮನೆಯೊಡತಿಯ ಕಣ್ಣಲ್ಲಿ ಯಾವುದೋ ಕೊರತೆ ಮನೆಮಾಡಿದುದನ್ನು ಕಂಡ. ತನ್ನ ತಾಯಿಯ ಗೆಳತಿ? ಛೇ ತಾನು ಅವಳ ಮುಖವನ್ನೇ ನೋಡಲಿಲ್ಲ.

ಅವನು ಅವರ ಜತೆ ರಾಜಕೀಯವನ್ನು ಚರ್ಚಿಸುತ್ತಾನೆ. ಸಾಮಾಜಿಕ ರೀತಿ ನೀತಿಗಳನ್ನು ಖಂಡಿಸುತ್ತಾನೆ.

''ಪತಿಪರಾಯಣತೆ ಪಾತಿವ್ರತ್ಯ ಮುರ್ಖತನದ ಕಲ್ಪನೆ. ಬದುಕಿನ ಸೊಗಸನ್ನು ಕಾಣದ ಮೂರ್ಖರು ಮಾಡಿದ ಕಲ್ಪನೆ.''

''ಅದು ಹೇಗೆ ಸಾಧ್ಯ?''ಅವರ ಪ್ರಶ್ನೆ.

''ಶಾಸ್ತ್ರಗಳನ್ನೆಲ್ಲ ಬರೆದವರು ಗಂಡಸರು ತಾನೆ?''

''ಹೆಣ್ಣುಮಕ್ಕಳು ಬರೆದಿದ್ದರೆ ಬೇರೆ ಬರೆಯುತ್ತಿದ್ದರೇನು?''

''ನಿಶ್ಚಿತವಾಗಿ.''

''ಈಗೇನು ಮಾಡಲಾದೀತು?''

''ಬಂಡೇಳಬೇಕು.''

ಬರಬರುತ್ತ ಅವನ ಪ್ರಭಾವ ಅವರ ಮಗಳ ಮೇಲೂ ಆಗಹತ್ತಿತು. ಕಾಲೇಜಿಗೆ ಹೋಗುವ ಹುಡುಗಿ ಅವಳು. ನೃತ್ಯವನ್ನು ಅಭ್ಯಾಸ ಮಾಡಿದವಳು. ನಗರದಲ್ಲಿ ಕೆಲವಾರು ಸಲ ನೃತ್ಯ ಪ್ರದರ್ಶನವನ್ನು ಮಾಡಿದ್ದಳು. ಅವನಿಂದ ತಾನು ಮೆಚ್ಚಿಗೆ ಪಡೆಯಬೇಕು ಎಂಬ ಹಂಬಲ ಅವಳಿಗೆ.

''ನಾನು ಮೊನ್ನೆ ಮಾಡಿದ ನೃತ್ಯ ಹೇಗಿತ್ತು?''ಅವಳು ಕೇಳಿದಳು.

''ಚೆನ್ನಾಗಿತ್ತು.''

ಅವಳಿಗೆ ತುಂಬ ಹಿಗ್ಗು. ಅವನ ಮನಸ್ಸಿನಿಂದ ಒಂದೇ ಕೊರಗು. ಆ ಹುಡುಗಿ ಹೀಗೆ ಒಮ್ಮೆಯೂ ಕೇಳಲಿಲ್ಲ. ಮನದಲ್ಲಿ ಅವಳನ್ನು ಇವಳನ್ನು ತೂಗಿ ನೋಡಿದ. ಏನೆಂದರೂ ಆ ಹುಡುಗಿ ಚೆಲುವೆ. ಇವಳಲ್ಲಿ ಕಂಡುಬರದ ಯಾವುದೋ ಆಕರ್ಷಣೆ ಅವಳಲ್ಲಿದೆ. ಈಗೇನು ಮಾಡಬಹುದು?

ಸಲುಗೆ ತುಂಬ ಬೆಳೆಯಿತು. ತಾನು ಕೊಂಡು ತಂದ ಪುಸ್ತಕಗಳನ್ನು ಓದಲು ಕೊಡಹತ್ತಿದ. ಚರ್ಚೆಗೆ ಕುಳಿತಾಗ ''ಇವೇನು ಪುಸ್ತಕಗಳು? ಇಂಗ್ಲಿಶ್‌ನಲ್ಲಿವೆ ಏನು ಪುಸ್ತಕಗಳು! ಲಾರೆನ್ಸನ 'ಲೇಡಿ ಚಟರ್ಲೀಜ ಲವ್ವರ' ಓದಬೇಕು. 'ಲೊಳಿತಾ' ಓದಿಲ್ಲವೆ? 'ಫ್ಯಾನಿಹಿಲ್' ಎಂಬುದೊಂದು ಕಾದಂಬರಿ. ಅಂತಹ ಕಾದಂಬರಿ ಮತ್ತೆ ಬೇರಿಲ್ಲ.''

``ನನಗೆ ನೃತ್ಯವೆಂದರೆ ಪ್ರಾಣ'' ಅವಳು ಹೇಳಿದಳು.

ಈಗ ಅವನು ಅವಳನ್ನು ಏಕವಚನದಿಂದ ಕರೆಯುತ್ತಿದ್ದ. ಅವನಲ್ಲಿ ಹತ್ತು ಕನಸು ತೇಲುತ್ತಿದ್ದವು. ತನ್ನ ಪ್ರಭಾವದಲ್ಲಿ ಅವಳನ್ನು ಹೇಗೆ ತರುವುದು ಎಂದು ಯೋಚಿಸುತ್ತಿದ್ದ. ``ನಾನು ಈ ಮೊದಲೆ ಹೆಜ್ಜೆಯನ್ನಿಟ್ಟಿದ್ದರೆ N_2ನ್ನೊ ಆ ಹುಡುಗಿಯನ್ನೊ ಒಲಿಸಿಕೊಳ್ಳುವುದು ಕಷ್ಟವಿರಲಿಲ್ಲ.'' ಎನ್ನಿಸಿತು. N_2 ನೆನಪಾದೊಡನೆ ಅವನ ಕೈಕಾಲು ನಡುಗಿದವು. ಆಂತರಿಕ ದ್ವಂದ್ವದಿಂದ ಬಿಡಿಸಿಕೊಂಡು ಕೇಳಿದ:

``ನಿಜವಾಗಿಯೂ ನಿನಗೆ ನೃತ್ಯಕಲೆಯಲ್ಲಿ ಆಸಕ್ತಿಯಿದೆಯೇ?''

``ನನ್ನ ಕೊರಳಾಣೆ.''

``ಹಾಗಾದರೆ ನಾನು ಒಂದೆರಡು ಸಲಹೆ ಕೊಟ್ಟರೆ?''

``ಸಂತೋಷದಿಂದ ಸ್ವೀಕರಿಸುತ್ತೇನೆ.''

``ನಿನ್ನಲ್ಲಿ ಕಲೆಯಿದೆ. ಆದರೆ ಪೂರ್ಣತೆಗಾಗಿ ಪ್ರಯತ್ನ ಮಾಡಬೇಕು.''

``ಏನು?''

``ಹೀಗೆ ಒಂದೆರಡು ಮಾತುಗಳಲ್ಲಿ ಹೇಳುವ ಸಂಗತಿ ಇದಲ್ಲ. ಸಾವಕಾಶವಾಗಿ ಎಲ್ಲವನ್ನೂ ಹೇಳುತ್ತೇನೆ. ಆದರೆ ಕೋಪಿಸಿಕೊಳ್ಳಬಾರದೆಂದು ಪ್ರಾರ್ಥನೆ.''

``ಕೋಪಿಸಿಕೊಳ್ಳುವುದಿಲ್ಲ.''

``ನನ್ನ ಅಪೇಕ್ಷೆ, ನಿನ್ನ ನೃತ್ಯ ಸ್ನೇಹಸಮ್ಮೇಲನ ಮುಂತಾದವುಗಳಿಗೇ ಸೀಮಿತವಾಗಿರಬಾರದು. ಇದು ನಿನಗೆ ಒಪ್ಪಿಗೆಯೆ?''

``ಒಪ್ಪಿಗೆ.''

``ಹಾಗಾದರೆ ಇದಕ್ಕಿಂತ ದೀರ್ಘಕಾಲದ ಅಭ್ಯಾಸ ಅವಶ್ಯಕ.''

ಅವಳು ಅವನ ಮುಖವನ್ನೇ ನೋಡುತ್ತಿದ್ದಳು.

``ನಿನಗೆ ನೃತ್ಯದ ಮೇಲೆ ಇಷ್ಟು ಆಸಕ್ತಿ ಏಕೆ?''

ಇದಕ್ಕೆ ಏನು ಉತ್ತರ ಹೇಳಬೇಕೋ ಅವಳಿಗೆ ತಿಳಿಯಲಿಲ್ಲ.

``ನೋಡು. ನಿನಗೆ ಆಸಕ್ತಿ ಏಕೆ ಎಂಬುದನ್ನು ಕಂಡುಕೊ. ನಿನ್ನ ಆಸಕ್ತಿ

ನಿಜವೆ ಎಂಬುದನ್ನು ಸ್ಪಷ್ಟಪಡಿಸಿಕೊ. ನೃತ್ಯದಂತಹ ಕಲೆ ಕರಗತವಾಗುವುದು ತಪಸ್ಸಿನಿಂದ ಮಾತ್ರ.''

ತನ್ನ ವಾಕ್ಸರಣಿಯಿಂದ ತಾನೇ ಮೋಹಿತನಾದ. ನನಗೂ ಎಷ್ಟು ಚೆನ್ನಾಗಿ ಮಾತನಾಡಲು ಬರುತ್ತದೆ. ನನ್ನನ್ನು ಹಾಳುಮಾಡಿದವರು ನನ್ನ ಸ್ನೇಹಿತರೆ. ನಾನು ಅನುಸರಿಸುವ ಹಂಬಲದಲ್ಲಿ ನಾನು ನನ್ನ ಮುಂದಾಳುತನವನ್ನೇ ಕಳೆದುಕೊಂಡೆ. ಈ ಸ್ವಗತದಿಂದ ಅವನು ಕೆಳಗಿಳಿದು ಕೇಳಿದ:

''ಭಾರತೀಯ ನರ್ತಕಿಯರ ಚರಿತ್ರೆಗಳನ್ನು ಓದಿದ್ದೀಯ?''

''ಇಲ್ಲ.''

''ಅಂತರರಾಷ್ಟ್ರೀಯ ಖ್ಯಾತಿಯ ನರ್ತಕಿಯರ ಆತ್ಮಚರಿತ್ರೆಗಳನ್ನು?''

''ಊಹುಂ.'' ಅವಳ ಮುಖದ ಮೇಲೆ ನಿರಾಸೆಯ ಛಾಯೆ ಕವಿಯಿತು.

''ಈಗಾಗಲೇ ನಿನಗೆ ಕೋಪ ಬಂತು. ನಿನ್ನನ್ನು ಹೀಗಳೆಯುವುದಕ್ಕಾಗಿ ನಾನು ಹೀಗಾಡುತ್ತಿಲ್ಲ.''

ಮುಖಸ್ತುತಿಯನ್ನು ಬಯಸಿದ್ದ ಅವಳಿಗೆ ಅವನ ಮಾತಿನಿಂದ ಅವಳಿಗೆ ದುಃಖವಾಗಿತ್ತು.

''ನಿರಾಶೆಗೆ ಕಾರಣವಿಲ್ಲ. ನಾನು ದಾರಿಯನ್ನು ಹೇಳುತ್ತೇನೆ. ದುಡಿಯುವುದು ನಿನ್ನ ಕೆಲಸ. ಇಂದಿನವರೆಗೆ ಯಾವ ನರ್ತಕಿಯೂ ಏರದ ಶಿಖರವನ್ನು ನೀನೇರುವಂತೆ ಮಾಡುತ್ತೇನೆ.''

ಅವಳ ಕಣ್ಣುಗಳಲ್ಲಿ ಮಿಂಚಿನ ಹೊಳೆ ತುಳುಕಾಡಿತು.

''ನೃತ್ಯಕಲೆಯ ಪ್ರಾಥಮಿಕ ಅವಶ್ಯಕತೆಗಳೇನು ಗೊತ್ತೆ?''

''ಇಲ್ಲ.''

''ಸೌಷ್ಠವಂ ರೂಪಸಂಪತ್ತಿಶ್ಚಾರು ವಿಸ್ತೀರ್ಣ ವಕ್ಷತಾ'' ಎರಡು ದಿನಗಳ ಹಿಂದೆ ಪತ್ರಿಕೆಯಲ್ಲಿ ಬಂದ ಒಂದು ಸಂಸ್ಕೃತ ಸಾಲನ್ನು ಹೇಳಿ ಕೇಳಿದ:

''ಇದರ ಅರ್ಥ ಗೊತ್ತೆ?''

''ಇಲ್ಲ.''

''ಇದು ನಾಟ್ಯಶಾಸ್ತ್ರದಲ್ಲಿಯ ಶ್ಲೋಕ. ಅದರ ಅರ್ಥ ಹೀಗೆ. ಸೌಷ್ಠವ,

ರೂಪಸಂಪತ್ತಿ, ಅರಳಿದ ವಿಶಾಲವಾದ ಮೊಗ'' ಅವಳ ಅಂಗಾಂಗಗಳನ್ನು ಅಳೆಯುತ್ತ ಮುಂದುವರಿಸಿದ: ''ವಿಶಾಲ ನೇತ್ರತಾ, ಬಿಂಬಾಧರತಾ.......ಈ ದೈಹಿಕ ಆವಶ್ಯಕತೆ ನಿನ್ನಲ್ಲಿವೆ. ಆದರೆ ಇನ್ನೊಂದು ಮುಖ್ಯ ಆವಶ್ಯಕತೆ ಕಾಲು. ನೃತ್ಯ ನಿಂತದ್ದೆ ಅದರ ಮೇಲೆ. Do you know the girl with world's most beautiful legs?'

''ಯಾರು?''

''ರಾಕ್ವೆಲ್ ವೆಲ್ಚ.'' ಅವನು ಅಭಿಮಾನದಿಂದ ತಲೆ ಎತ್ತಿ ಕುಳಿತ.

''ನಿನ್ನ ಕಾಲು ಹೇಗಿವೆ?''

ಅವಳು ಪಾದಗಳನ್ನು ಮುಂದೆ ಚಾಚಿದಳು. ಅವನು ನಕ್ಕ.

''ತಮ್ಮ ಪಾದಗಳನ್ನು ಚಾಚಿದಿರಿ. ತಾವು ಭುವನೇಶ್ವರಿಯೆ? ತಮ್ಮ ಪಾದಕ್ಕೆ ಹಣೆ ಹಚ್ಚಲೆ? ನಾನು ಕೇಳಿದ್ದು ಪಾದವಲ್ಲ. ಕಾಲು.''

ಅವಳು ನಾಚಿದಳು.

''ನೋಡು . ಹೀಗೆ ಮಾಡಿದರೆ ಹೇಗೆ?''

ಅವಳು ಮೊಳಕಾಲವರೆಗೆ ಸೀರೆ ಎತ್ತಿದಳು. ಅವನು ಸೂಕ್ಷ್ಮವಾಗಿ ನೋಡಿದ್ದಂತೆ ಮಾಡಿ ಮೊಳಕಾಲ ಮೇಲೆ ಮುಟ್ಟಿದ. ಅವನು ಹುಡುಗಿಯರನ್ನು ಮುಟ್ಟಿದ್ದು ಇದೇ ಮೊದಲ ಸಲ. ಅವನ ಮುಚ್ಚಿದ ಕಣ್ಣುಗಳೆದುರು ನಿಂತವಳು ಆ ಹುಡುಗಿಯೆ!

''ಬದುಕನ್ನು ಸಾರ್ಥಕ ಮಾಡಿಕೊಳ್ಳಬೇಕು. ನೃತ್ಯವೆಂದರೆ ಸಾಮಾನ್ಯವಲ್ಲ. ಅದು ಕೇವಲ ಮನೋರಂಜನೆಯ ಸಾಧನವಲ್ಲ. ಸೂಕ್ಷ್ಮಾತಿಸೂಕ್ಷ್ಮ ಭಾವನೆಗಳ ಅಭಿವ್ಯಕ್ತಿಯ ಏಕಮೇವ ಮಾಧ್ಯಮ. '' ಅವನು ಹೇಳುತ್ತಿದ್ದ: ''ನಿನಗೆ ಈ ಭಾವನೆಯಿರದಿದ್ದರೆ ಏನು ಪ್ರಯೋಜನ?''

''ನನಗೆ ನೃತ್ಯವೇ ಜೀವನ ಸರ್ವಸ್ವ.''

''ಬರಿ ಬಾಯಿಂದ ಹೇಳಿದರೆ ಸಾಲದು. ಯಾವ ತ್ಯಾಗಕ್ಕೂ ಹಿಂದೆ ಸರಿಯ ಬಾರದು.''

ಅವಳು ಸುಮ್ಮನೆ ಕುಳಿತು ಕೇಳುತ್ತಿದ್ದಳು.

''ನೃತ್ಯಕಲೆಗೆ ಎರಡು ಆಸ್ಪೆಕ್ಟ್ ಇವೆ. ಒಂದು ಡೈನಾಮಿಕ್. ಇನ್ನೊಂದು

ಸ್ಟೈಟಿಕ್. ನಾನು ಹೇಳಿದ್ದು ಅರ್ಥವಾಯಿತೆ?''

ಅವಳು ಇಲ್ಲ ಎಂದು ತಲೆ ಹಾಕಿದಳು.

''ಸ್ಟೈಟಿಕ್ ಎಂದರೆ ತಂತ್ರ. ಹೆಜ್ಜೆ ಹಾಕುವ ರೀತಿ, ತಾಳ, ಲಯ- ಇವನ್ನು ಯಾರೂ ಕಲಿಯಬಹುದು. ಆದರೆ ಬರಿ ಟೆಕ್‌ನಿಕ್ ಏನು ಮಾಡೀತು? ಟೆಕ್‌ನಿಕ್‌ನಿಂದ ಜೀನಿಯಸ್ ಸಾಧ್ಯವಿಲ್ಲ. ನೀನು ಕೇಳು ಜೀನಿಯಸ್ ಯಾತರಿಂದ ಸಾಧ್ಯ ಎಂದು'' ಅವಳು ಕೇಳಿದಳು.

''ಮೆಚ್ಯುರಿಟಿ ಆವಶ್ಯಕ. ಲೋಕದ ಮಾನವೀಯ ಭಾವಗಳ ಸಮಗ್ರ ಅನುಭೂತಿ ನಿನ್ನಲ್ಲಿರಬೇಕು. ಆದರೆ ದೇಹ ತರುಣವಾಗಿಯೇ ಇರಬೇಕು. ನೃತ್ಯವೆಂದರೆ ಕರ್ಣತುಟ್ಟಲ್ಲ.'' ಹೀಗೆ ಅವನು ಅವಳನ್ನು ತನ್ನ ಅಂಕಿತದಲ್ಲಿ ತೆಗೆದುಕೊಳ್ಳಲು ಪ್ರಯತ್ನವನ್ನು ರಭಸದಿಂದ ನಡೆಯಿಸಿದ್ದ.

''ನೀನು ಎಂದಾದರೂ ಯಾರನ್ನಾದರೂ ಪ್ರೀತಿಸಿರುವೆಯಾ?''

ಅವನ ಈ ಪ್ರಶ್ನೆಯಿಂದ ಅವಳು ಕಕ್ಕಾವಿಕ್ಕಿಯಾದಳು.

''ನೀನು ರಾಧೇಯ ನೃತ್ಯವನ್ನು ಮಾಡಿರುವಿ.''

''ಅನೇಕ ಸಲ ''

''ನಾನು ಕೇಳುತ್ತಿರುವುದೂ ಅದನ್ನೇ. ರಾಧೆಯ ಅನುಭವವಿಲ್ಲದೆ ನೀನು ರಾಧೇಯ ಪ್ರೇಮವನ್ನು ವಿರಹದುರಿಯನ್ನು ಹೇಗೆ ಚಿತ್ರಿಸಬಲ್ಲೆ?'' ಒಂದೆರಡು ನಿಮಿಷ ಅವನು ಮೌನದಿಂದಿದ್ದ.

''ನಿನ್ನ ಭವಿಷ್ಯತ್ತಿಗಾಗಿ ನಾನಿದನ್ನೆಲ್ಲ ಮಾತನಾಡುತ್ತಿದ್ದೇನೆ. ಸಮಗ್ರ ಎಂದರೆ Global experience ನಿನ್ನ ನೃತ್ಯದಲ್ಲಿ ಅಭಿವ್ಯಕ್ತವಾಗಬೇಕು. ಸುಗ್ಗಿಯ ಕುಣಿತ, ಪತಂಗನೃತ್ಯ ಇವೆಲ್ಲ ನೃತ್ಯಗಳೆ? ಪ್ರಾರಂಭದ ಬಾಲಿಶ ಪ್ರಯತ್ನ. Mind emotion ಹಾಗೂ will ಇವುಗಳ integration ಪ್ರಥಮ ಹೆಜ್ಜೆ. ದೇಹ ಕನ್ನಡಿಯಂತೆ ಅದನ್ನು ಪ್ರಕಟಿಸಬೇಕು.''

ರಾಕ್ವೆಲ್ ವೆಲ್ಚಳ ನಗ್ನಚಿತ್ರವನ್ನು ತಂದು ತೋರಿಸಿದ. ''ಹೀಗೆ ನಿಂತರೆ ಮಾತ್ರ ಕಾಲು ಹೇಗಿವೆ? ಕಾಲಿಗೂ ದೇಹಕ್ಕೂ ಪ್ರಪೋರ್ಶನ್ ಇದೆಯೆ ಎಂಬುದು ತಿಳಿಯುತ್ತದೆ.''

ಅವಳು ಸಂಶಯದ ದೃಷ್ಟಿಯಿಂದ ಅವನನ್ನು ನೋಡಿದಳು.

"ಗುರುವಿನಲ್ಲಿ ಶ್ರದ್ಧೆ ಇರಬೇಕಾದದ್ದು ಅವಶ್ಯಕ."

ಅವಳು ಸುಮ್ಮನೆ ನಿಂತಳು.

"ನಿನ್ನ ಕಾಲು Psychosymmetrical ಇವೆ. ನೀನೇನು ಚಿಂತೆ ಮಾಡಬೇಡ."

ಒಂದು ತಾಸು ಕಳೆದ ಬಳಿಕ ಅವನು ಎದ್ದು ನಡೆದ.

"ನೀನೇನು ಚಿಂತೆ ಮಾಡಬೇಡ. ಆದರೆ ಒಂದು ಮಾತು ನೆನಪಿನಲ್ಲಿಡು. ನಿನ್ನ ಕಲೆಗೆ ಲೋಕವೇ ನಾಟ್ಯರಂಗವಾಗಬೇಕು. ದೆಹಲಿ, ಮಾಸ್ಕೊ, ಲಂಡನ್, ನ್ಯೂಯಾರ್ಕ್, ಟೋಕಿಯೊ ಮೊದಲಾದವುಗಳಲ್ಲಿ ನಿನ್ನ ಗೆಜ್ಜೆಯ ದನಿ ತುಂಬಬೇಕು. ವೈಜಯಂತಿಮಾಲಾ ಏಕೆ, ಇಂದಿನವರೆಗೆ ಯಾರಿಂದಲೂ ಪಡೆಯಲಾಗದ ಹಿರಿಮೆ ನಿನ್ನದಾಗಬೇಕು." ಹಿಂದಿರುಗಿ ನೋಡಿದ. ಅವಳು ಚಿಂತನೆಯಲ್ಲಿದ್ದಳು. ಆದರೂ ಅವನ ಕೊನೆಯ ಮಾತಿನಿಂದ ಉತ್ಸಾಹ ಮೂಡಿತ್ತು. ಅವಳನ್ನು ಎಳೆದು ಅಪ್ಪಿಕೊಳ್ಳಬೇಕು ಎಂದು ಒಂದು ಹೆಜ್ಜೆ ಮುಂದಿಟ್ಟ. ಅವಳ ಮುಖದಲ್ಲಿ ತನ್ನ ಹೃದಯದ ಧ್ವನಿಗೆ ಪ್ರತಿಧ್ವನಿ ದೊರೆತೀತೆ ಎಂದು ನಿಟ್ಟಿಸಿ ನೋಡಿದ. ಅವಳು ಕೈ ಚಾಚಬೇಕು. ತನ್ನ ವಕ್ಷದಲ್ಲಿ ನಿರಾಲಂಬಳಾಗಿ ಒರಗಬೇಕು. ತಾನು "ಅಬ್ ತಮನ್ನಾ ಮೈ ಕರೂ ಕಿಸ್ ಚೀಜಕೀ | ಮಿಲ್ ಗಯೇ ಇಕ್ ತುಮ್ ಸಬ್‌ಕುಛ್ ಮಿಲ್ ಗಯಾ |" ಎಂದು ಹಾಡಬೇಕು. ಆದರೆ ಮತ್ತೆ ಏನೆನ್ನಿಸಿತೊ ಆ ಇಚ್ಛೆಯನ್ನು ತಡೆದುಕೊಂಡ.

"ವಿಚಾರಮಾಡು ನಿನ್ನ ತಂದೆತಾಯಿ ಒಂದು ಒಳ್ಳೆಯ ವರನನ್ನು ನೋಡಿ ಮದುವೆ ಮಾಡುವ ಯೋಚನೆಯಲ್ಲಿರಬಹುದು. ಆದರೆ ನೀನು ನಿರ್ಧರಿಸು: ನಿನ್ನ ಬದುಕೆಂದರೆ Birth, copulation and death ಈ ಮೂರೇ ಆಯಾಮಗಳಲ್ಲಿ ಮುಗಿಯಬೇಕೆ? ಮದುವೆ ಎಂದರೆ ಏನು?

Two people who know they do not understand each other,

Breeding children whom they do not understand.

And who will never understand them."ಇದೇ ಅಲ್ಲವೇ? ಇಷ್ಟು ಹೇಳಿ ಅವನು ಮರಳಿ ನಡೆದ. ತನ್ನ ಪ್ರಭಾವವೆಷ್ಟು ಎಂಬುದನ್ನು ನೋಡಲು ಹಿಂದಿರುಗಿದ. ಕೋಣೆಯ ತುಂಬ ಸಿಗರೇಟಿನ ಹೊಗೆ ಹಾಗೂ ವಾಸನೆ

ತುಂಬಿತ್ತು.

ಅವನ ತಲೆಯಲ್ಲಿ ಈಗ ಹೊಸ ಯೋಚನೆ. ಹೌದು ಈ ಹುಡುಗಿ ತನ್ನ ಯೋಜನೆಗಳಿಗೆ ಒಪ್ಪಿದರೆ? ಲಕ್ಷಾವಧಿ ಹಣವನ್ನು ಗಳಿಸಬಹುದು. ದೇಶ ವಿದೇಶವನ್ನು ಸುತ್ತಬಹುದು. ಮೊದಲು ಅವಳನ್ನು ಕರೆದುಕೊಂಡು ಮದ್ರಾಸಕ್ಕೆ ಹೋಗಬೇಕು. ಐದು ವರ್ಷ ಶಿಕ್ಷಣ. ಆಮೇಲೆ ನೃತ್ಯ ಪ್ರದರ್ಶನಗಳು. ಅವಳನ್ನು ಮದುವೆಯಾಗುವುದೆ? ''ಅಲ್ಲ ಅಲ್ಲ. ತನ್ನ ಸೌಭಾಗ್ಯವತಿ ಉತ್ಸವಮೂರ್ತಿಯಾಗಬಾರದು. ತನ್ನ ಹೃದಯ ಸಿಂಹಾಸನದಲ್ಲಿ ಪ್ರತಿಷ್ಠಿತವಾದ ಮೂಲ ವಿಗ್ರಹ.'' ಏನೇನೋ ಯೋಜನೆ, ಏನೇನೋ ಯೋಚನೆ.

ಅವನ ಮನಸ್ಸಿಗೆ ಶಾಂತಿ ಎಂಬುದಿರಲಿಲ್ಲ. ತುಂಬ ಉದ್ರಿಕ್ತನಾಗಿರುತ್ತಿದ್ದ. ''ತಾಯಿಯ ವಿಷಯದಲ್ಲಿ ತಪ್ಪು ನಡೆದೆ'' ಎಂಬ ಭಾವನೆ ಅವನನ್ನು ಕಾಡುತ್ತಿತ್ತು. ನೂರು ಚಿಂತೆಗಳಲ್ಲಿ ಅವನು ಹಣ್ಣಾಗುತ್ತಿದ್ದ. ಕಳ್ಳ ಹೃದಯದಲ್ಲಿ ಸಿಕ್ಕವಸಂತೆ ಒದ್ದಾಡುತ್ತಿದ್ದ ನಾನು ಗಳಿಸಿದ್ದೇನು? ನಾನು ಬಂಡೆದ್ದುದು ಏತಕ್ಕಾಗಿ? ನನ್ನ ಬದುಕು ವ್ಯರ್ಥವೇ ಆಯಿತಲ್ಲವೆ? ಆತ್ಮನಿಂದೆಯಲ್ಲಿ ರಾತ್ರಿಯೆಲ್ಲ ಕಳೆಯುತ್ತಿತ್ತು. ಹೊಸ ಅನುಭವಕ್ಕಾಗಿ ಹಾರೈಸಿದ ಹೃದಯದ ಹಸಿವನ್ನು ಇನ್ನೂ ಯಾವ ಹೆಣ್ಣೂ ಹಿಂಗಿಸಲಿಲ್ಲ. ಸಂಘರ್ಷದಲ್ಲಿ ಅವನ ಮನಸ್ಸು ಬಳಲುತ್ತಿತ್ತು. ವೇಶ್ಯೆಯರ ಜೀವನದ ಮೇಲಿನ ಕಾದಂಬರಿಗಳನ್ನು ಓದಿದ ಅವನ ಮನಸ್ಸು ದೇಹದ ಹಸಿವನ್ನು ಹಿಂಗಿಸಿಕೊಳ್ಳಲು ಏನೇನೋ ಕಲ್ಪನೆಯಲ್ಲಿ ವಿರಮಿಸಿತು. ನಗರದ ಮಧ್ಯದಲ್ಲಿಯೆ ಅಂತಹ ವ್ಯವಸಾಯಕ್ಕೆ ಕೇಂದ್ರವಾದ ಮನೆಯೊಂದಿತ್ತು. ಅದಕ್ಕೆ ಹತ್ತಿರದಲ್ಲಿಯೇ ದೇಗುಲವಿತ್ತು; ಶಾಲೆಯಿತ್ತು. ಅಲ್ಲಿ ಅನೇಕ ಸಲ ಸುತ್ತಾಡಿದ್ದ. ಆದರೆ ಧೈರ್ಯವಾಗಿರಲಿಲ್ಲ. ಆ ಮನೆಯ ಮುಂದೆ ನಿಂತು ನಿಂತು ಹೆದರಿ ಮರಳಿ ಬಂದಿದ್ದ.

ಒಂದು ದಿನ ಮಾತ್ರ --

ಯಾವ ತಡೆಯನ್ನೂ ಗಮನಿಸದೆ ಅವನು ಹೋಗಿ ಬಂದ.

ಅಂದಿನಿಂದ ಅವನ ಮಾನಸಿಕ ಸ್ಥಿತಿ ತುಂಬ ಕೆಟ್ಟಿತು. ಅಪರಾಧಿಯ ಮನೋವೃತ್ತಿ ಅವನನ್ನು ತುಂಬ ಕಾಡಿತು.

``ಇಂದು ನನ್ನ ಪುಣ್ಯವೆಲ್ಲ ತೀರಿತು`` ಎಂದು ಅತ್ತ.

ತನ್ನ ಮುಖ ಕಪ್ಪೊತ್ತಿದಂತೆ ಅವನಿಗೆ ಕಾಣಹತ್ತಿತು. ``ನಾನು ಎಂತಹ ಕೀಳು ಮನುಷ್ಯ ! ನನ್ನ ತಾಯಿ ಎಷ್ಟು ಒಳ್ಳೆಯವಳು ! ತಂದೆ-ಹೌದು ಅವನೂ ಒಳ್ಳೆಯವನೇ``

ಅವನಲ್ಲಿ ಮಾನಸಿಕ ಅಶಾಂತತೆ ಮೂಡಿತು.

``ನೀನು ಅಲ್ಲಿ ಹೋದುದನ್ನು ಯಾರಾದರೂ ನೋಡಿದರೆ?'' ಬೀದಿಯಲ್ಲಿ ಅಡ್ಡಾಡುವಾಗ ಎಲ್ಲರೂ ತನ್ನನ್ನೇ ಬೊಟ್ಟುಮಾಡಿ ತೋರಿಸುತ್ತಿದ್ದಾರೆ ಎಂದು ಅವನಿಗೆ ಎನಿಸಿತು. ``ನಾನು ಪಾಪಿ !'' ಅವನ ಕಣ್ಣಲ್ಲಿ ಉಳಿದವರೆಲ್ಲರೂ ಮಹಾ ಪುರುಷರಾಗಿಯೇ ಕಂಡರು. ``ನೀನು ಹೇಡಿಯೇ ಅಲ್ಲವೆ? ಸ್ನೇಹಿತ- ಇಂತಹದಕ್ಕೆ ಬಗ್ಗಲಿಲ್ಲ. ಸಿನೆಮಾಗಳನ್ನು ನೋಡಬಾರದಾಗಿತ್ತು. ಆ ಕಾದಂಬರಿಗಳನ್ನೋದಬಾರದಾಗಿತ್ತು. ನಗ್ನ ಚಿತ್ರಗಳಿಂದ ತುಂಬಿದ ಪತ್ರಿಕೆಗಳನ್ನು ನೋಡಬಾರದಾಗಿತ್ತು......'' ಅವನಿಗೆ ತುಂಬ ದಣಿವಾಯಿತು.

``ನನ್ನೆದುರು ಎಂತಹ ಸಮಸ್ಯೆಗಳಿದ್ದವು ! ನಾನವುಗಳಿಗೆ ಗಮನಕೊಟ್ಟಿದ್ದರೆ? ನನ್ನ ಅಭ್ಯಾಸ ಆರೋಗ್ಯ, ತಾಯಿ-ತಂದೆ, ತಮ್ಮ-ತಂಗಿ, ಸ್ನೇಹ-ಬಡತನ. ಹೌದು ನಾನು ಹೀಗೇಕೆ ಮಾಡಿದೆ? ಹೀಗೇಕೆ ಮಾಡಿದೆ?''

ಒಮ್ಮೆ ಅವನು ಸಿಫ್‌ಲಿಸಿನ ಬಗ್ಗೆ ಲೇಖನವೊಂದನ್ನು ಓದಿದ. ಅವನ ಎದೆಯೊಡೆಯಿತು. ಬುದ್ಧಿ ಭ್ರಮೆಯಾಯಿತು. ಕೆಲಸದಲ್ಲಿ ಮನಸ್ಸು ತೊಡಗುತ್ತಿರಲಿಲ್ಲ. ಬಾಗಿಲು ಕಿಟಕಿಗಳನ್ನು ಮುಚ್ಚಿ ಹೊದ್ದುಕೊಂಡು ಮಲಗಿಬಿಡುತ್ತಿದ್ದ. ರೋಗದ ಭೀಕರತೆಯನ್ನು ಮನಮುಟ್ಟುವಂತೆ ಚಿತ್ರಿಸಿದ್ದರು. ಆದರಲ್ಲಿ ಒಂದೊಂದೇ ಲಕ್ಷಣಗಳನ್ನು ನೆನಪು ಮಾಡಿಕೊಂಡ. ನಾನು ಹೀಗೆ ಮಾಡಬಾರದಾಗಿತ್ತು. ನಾನೇ ನನ್ನನ್ನು ಕೊಂದುಕೊಂಡೆ. ೫-೧೦-೨೦-೪೦ ವರ್ಷಗಳವರೆಗೆ ರೋಗಜಂತು ರಕ್ತದಲ್ಲಿ ಬೆರೆತಿರಬಹುದು. ಅಲ್ಲಿಯವರೆಗೆ ತನಗೆ ರೋಗವಿದೆಯೆಂಬ ಭಾವನೆಯೇ ಇರುವುದಿಲ್ಲ. ರೋಗದ ಉಪದ್ರವವೇ ಇರುವುದಿಲ್ಲ. ಅವನು ಅತ್ತ. ತಲೆ ತಲೆ ಚಚ್ಚಿಕೊಂಡ. ಇದನ್ನೆಲ್ಲ ಯಾರ ಮುಂದೆ ತೋಡಿಕೊಳ್ಳಲಿ? ಅವನಿಗೆ ತನ್ನ ಸ್ನೇಹಿತನ ನೆನಪಾಯಿತು. ಅಳುವು ಮತ್ತೆ ನುಗ್ಗಿ ಬಂತು. ತನಗೀಗ ಇಪ್ಪತ್ತೇಳು ವರ್ಷ. ಅವನಿಗೂ ಅಷ್ಟೆ! ಈಗ ಹೇಗೆ

ಬೆಳೆದಿದ್ದಾನೋ! ಏನು ನಿಯಮಿತತನ ಅವನದು! ಈಗ ಅವನ ಶಿಕ್ಷಣ ಮುಗಿದಿರಬಹುದು. ಏನು ಕಲಿತಿದ್ದಾನೊ. ಇಂಗ್ಲಂಡಿನಿಂದ ಮರಳಿ ಬಂದಿರಬಹುದು. ಮರಳಿ ಬಂದಿದ್ದರೆ.... ಅವನ ಮದುವೆ ನಿಶ್ಚಯವಾಗಬಹುದು. ಆ ಹುಡುಗಿಯನ್ನೇ ಅವನು ಮದುವೆಯಾಗಬಹುದು......

ನನಗೂ ಇದೆಲ್ಲ ಸಾಧ್ಯವಿತ್ತು. ನಾನೇ ಕೆಡಿಸಿಕೊಂಡೆ. ಸ್ನೇಹಿತ ಹೇಗೆ ತನಗೆ ಬಂದ ಸಮಸ್ಯೆಗಳನ್ನೆದುರಿಸಿದ. ತೂಗಿಕೊಂಡ. ಸ್ನೇಹಿತನ ಹಿರಿಮೆಯಿಂದ ಅವನಿಗೆ ದುಃಖವಾಯಿತು. ಈಗ ಅವನಿಗೆ ಮುಖವಾಡವನ್ನು ಹಾಕಿಕೊಳ್ಳುವುದರಲ್ಲಿ ಉತ್ಸಾಹವಿಲ್ಲ. ತನ್ನಲ್ಲಿಯ ದ್ವಂದ್ವ ಸಂಘರ್ಷ ಇನ್ನುಮೇಲೆ ತನ್ನ ಶಕ್ತಿಯನ್ನು ಮೀರಿದ್ದು. ಪತ್ರಿಕೆಗಳಲ್ಲಿ 'ಟಿಕ್‌ಟ್ವೆಂಟಿ' ಕುಡಿದು ಸತ್ತ ಹುಡುಗರ ವರದಿಗಳನ್ನು ಓದಿದ್ದ. ಆದರೆ ಧೈರ್ಯವಾಗಲಿಲ್ಲ.

''ನನಗೆ ಈ ರೋಗ ಆಗಲಾರದು.''

''ಏಕೆ ಆಗಲಾರದು?''

ಅವನಲ್ಲಿ ಉತ್ತರವಿರಲಿಲ್ಲ.

''ದೇವರೇ ನಾನು ತಪ್ಪಿದೆ. ನನಗೆ ಶಿಕ್ಷೆಯಾಗಲಿ. ಆದರೆ ಇದರಿಂದ ನನ್ನ ತಂದೆತಾಯಿಗಳಿಗೆ ದುಃಖವಾಗದಿರಲಿ'' ಕೂಗಿಕೊಂಡಿತು ಅವನ ಹೃದಯ.

ಆ ರೋಗದ ವಿವರಗಳನ್ನುಳ್ಳ ಲೇಖನವನ್ನು ತೆಗೆದುಕೊಂಡು ಮತ್ತೊಮ್ಮೆ ಕೊನೆಯ ವಾಕ್ಯವೃಂದದ ಮೇಲೆ ಕಣ್ಣು ಹಾಕಿದ. ''ಮೆದುಳಿನಲ್ಲಿ - ಮಜ್ಜಾರಜ್ಜುವಿನಲ್ಲಿ ಈ ರೋಗದ ಪರಿಣಾಮಗಳು ಬಹುವಿಧವಾಗಿದ್ದು ಭಯಂಕರವಾಗಿವೆ. ಬೆನ್ನೆಲುಬಿನ ಕ್ಷಯ ಹಾಗು ಜಿ.ಪಿ. ಆಯ್. ದಂತಹ ರೋಗಗಳ ಲಕ್ಷಣಗಳುಂಟಾಗುತ್ತವೆ. ಈ ರೋಗಕ್ಕೆ ಬಲಿಯಾದವನು ಭಾವಸಂಯಮವನ್ನು ಕಳೆದುಕೊಳ್ಳುತ್ತಾನೆ. ಸ್ಮರಣಶಕ್ತಿ ಹೋಗುತ್ತದೆ......''

ಅವನಿಗೆ ಮುಂದು ಓದುವುದಾಗಲಿಲ್ಲ.

''ಮುಗಿಯಿತು ಇನ್ನು ನನ್ನ ಅವಸ್ಥೆ'' ಎಂದುಕೊಂಡ.

ಏನೇನೋ ಕೆಟ್ಟ ಕನಸು. ತಾನೊಂದು ಹಂಸವಾಗಿ ಸರೋವರದಲ್ಲಿ ಅಲೆದಾಡುತ್ತಿದ್ದಾನೆ. ನೂರಾರು ಹಂಸಗಳಿವೆ ಜತೆಜತೆಯಾಗಿ ಮೇಲೊಂದು

ವಿಮಾನ ಬಂತು. ಅದರ ಭಯಂಕರ ಧ್ವನಿಯಿಂದ ತನ್ನ ಎದೆ ನಡುಗಿತು. ಒಂದೇ ನಿಮಿಷ. ಭಯಂಕರ ಸ್ಫೋಟವಾಯಿತು. ತಾನೊಂದು ಆಸ್ಪತ್ರೆಯಲ್ಲಿ. ತನ್ನ ದೇಹ ಒಂದು ಬಗೆಯ ಕಬ್ಬಿಣದ ಪೆಟ್ಟಿಗೆಯಾದಂತಾಗಿದೆ. ಒಳಗೆ ಗಾಯಗೊಂಡ ಇನ್ನೊಂದು ದೇಹವಿದೆ. ಅಯ್ಯೋ ಏನದರ ಮೇಲಿನ ಗಾಯಗಳು ! ರಕ್ತ ಬಸಿಯುತ್ತಿದೆ. ಅವನ ಕಿವಿಯಲ್ಲಿ ''ಕಿಕಾವಾ ಕಿಕಾವಾ ಕಿಕಾವಾ'' ಯಾರೋ ಕೆಟ್ಟ ಧ್ವನಿಯಿಂದ ಚೀರಿದರು.

''ಯಾರವರು? ಯಾರು ಕಿಕಾವಾ?''

''ವ್ಹಾ. ನೀನೇ ಅಲ್ಲವೇನು ಕಿಕಾವಾ?''

''ನಾನೆಲ್ಲಿ? ನಾನು ಕಿಕಾವಾ ಅಲ್ಲ.''

''ನೀನೇ ಕಿಕಾವಾ. ನೀನೇ ಕಿಕಾವಾ. ನೋಡಿಕೋ ನಿನ್ನ ಬೆನ್ನನ್ನು.''

ಅವನಿಗೆ ತನ್ನ ಬೆನ್ನು ಕಾಣಿಸಿತು. ಅದರ ಮೇಲೆ ಅಸಂಖ್ಯಾತ ಗಾಯಗಳು!........ ಅವನು ಗಾಬರಿಯಾದ. ಕಣ್ಣು ತೆರೆಯುತ್ತಾನೆ. ಕನಸಿನಲ್ಲಿಯ ವೇದನೆ ಸತ್ಯವೇ ಎನ್ನುವಷ್ಟು ಅವನು ನಿಸ್ಪೃಹವಾಗಿದ್ದ. ಏನೀ ಕನಸು? ಎಂದೋ ಒಂದು ದಿನ ವೃತ್ತಪತ್ರಿಕೆಯಲ್ಲಿ ಅವನು ಕಿಕಾವಾನ ಕತೆಯನ್ನು ಓದಿದ್ದ. ಅವನ ಬೆನ್ನಿನ ಭಾವಚಿತ್ರವನ್ನು ನೋಡಿದ್ದ. ಅವನ ದೇಹ ಇನ್ನೂ ತರತರ ನಡುಗುತ್ತಿತ್ತು. ಗಡಿಯಾರದತ್ತ ನೋಡಿದ. ಅದು ನಿಂತಿತ್ತು. ಯಾವುದೋ ಅಸಹ್ಯ ವೇದನೆಯಿಂದ ಜರ್ಜರಿತನಾಗಿದ್ದ.

ಅಂದು ಸಂಜೆ ಹೊಸ ನಿರ್ಧಾರವನ್ನು ಮಾಡಿದ. ಇನ್ನು ನಾನು ಬದುಕುವ ದಾರಿಯನ್ನು ಹುಡುಕಬೇಕು ಎಂದು ತನ್ನಲ್ಲಿಯೇ ಹೇಳಿಕೊಂಡ. ಹೊರಗೆ ನಡೆದ. ಸೂರ್ಯನಮಸ್ಕಾರದ ಮೇಲಿನ ಪುಸ್ತಕವೊಂದನ್ನು ಕೊಂಡು ತೆಗೆದುಕೊಂಡ.

''ಒಳ್ಳೆಯದನ್ನು ಆರಂಭಿಸಲು ಯಾವಾಗಲೂ ತಡವಿಲ್ಲ. ನಾನಿಂದಿನಿಂದ ಹೊಸ ಮನುಷ್ಯ'' ಎಂದುಕೊಂಡು ರೂಮಿಗೆ ಬಂದ. ಹೊಸ ಜೀವನದ ಪ್ರತೀಕವೆಂದು ಸ್ನಾನಮಾಡಿದ. ರಾಮರಕ್ಷೆಯನ್ನು ಹೇಳಿದ. ಮನಸ್ಸಿನಲ್ಲಿ ತಂದೆತಾಯಿಗಳಿಗೆ ವಂದಿಸಿ ಕ್ಷಮೆ ಕೇಳಿಕೊಂಡ. ಆದರೆ ಸಿಫ್‌ಲಿಸಿನ ಭಯ ಬೆನ್ನುಬಿಡಲಿಲ್ಲ.

ಬೆಳಗಿನಲ್ಲಿ ಎದ್ದು ಸ್ನಾನಮಾಡಿ ಸೂರ್ಯನಮಸ್ಕಾರ ಹಾಕಬೇಕೆಂದ. ಆದರೆ ಅಂದು ತನ್ನಘಾತವಾರವೆಂದು ನೆನಪಾಯಿತು. ನಾಳೆ ಒಳ್ಳೆಯ ದಿನ.

ಪ್ರಾರಂಭ ಮಾಡಬೇಕು. ಇದೊಂದು ದಿನ ಸಿಗರೇಟು. ನಾಳಿನಿಂದ ಹೊಸ ಮನುಷ್ಯ ಎಂದು ಒಂದರ ಹಿಂದೊಂದು ಎಂಬಂತೆ ೫-೬ ಸಿಗರೇಟುಗಳನ್ನು ಸೇದಿದ. ಸ್ನಾನ ಮಾಡಿದ. ರಾಮರಕ್ಷೆಯನ್ನು ಹೇಳಿದ. ಸ್ಟೇಶನ್ನಿಗೆ ಹೋದ. 'ಇಲಿಸ್ಟ್ರೇಟೆಡ್ ವೀಕ್ಲಿ' ಯೊಂದನ್ನು ಕೊಂಡುಕೊಂಡ.

ನಡುಗುವ ಕೈಗಳಿಂದ ಅದನ್ನು ಬಿಡಿಸಿದ.

ಪುಟಪುಟಗಳನ್ನು ತೆಗೆದು ನೋಡಿದಾಗ ನವವಿವಾಹಿತರ ಭಾವಚಿತ್ರಗಳ ಪುಟ ಬಂತು. ಅದರಲ್ಲಿ ಸ್ಪಷ್ಟವಾಗಿತ್ತು. ತನ್ನ ಸ್ನೇಹಿತ - ಆ ಹುಡುಗಿ ನವ ದಂಪತಿಗಳಾಗಿದ್ದರು.

ಏನೋ ಒಂದು ಬಗೆಯ ವೇದನೆಯಾಗಿ ಕೂಗಿದವನೇ ನೆಲಕ್ಕೆ ಬಿದ್ದ.

ಅವನಿಗೆ ಎಚ್ಚರವಾದಾಗ ಅವನು ಆಸ್ಪತ್ರೆಯಲ್ಲಿದ್ದನು. ಹತ್ತಿರದಲ್ಲಿ ತಾಯಿ-ತಂದೆ ಕುಳಿತಿದ್ದರು. ಅವನು ಕಣ್ ತೆರೆದುದನ್ನು ನೋಡಿ ಅವರಿಗೆ ತುಸು ಸಂತೋಷವಾಯಿತು. ಆದರೆ ಅವನ ನಾಲಿಗೆ ಹೋಗಿತ್ತು. ಬಾಯಿಂದ ಮಾತು ಬರುತ್ತಿರಲಿಲ್ಲ. ತಾನು ಸ್ಟೇಷನ್ನಿನಲ್ಲಿ ಮೂರ್ಛೆ ಬಂದು ಬಿದ್ದಾಗಿನಿಂದ ಇಲ್ಲಿಯವರೆಗೆ ನಡೆದುದೇನು ಎಂಬುದು ಅವನಿಗೆ ತಿಳಿಯಲಿಲ್ಲ. ಕಣ್ಣಿಂದ ನೀರು ಸುರಿಯುತ್ತಿದ್ದಿತು. ಈಗ ಬಹುಶಃ ಅವನು ತನ್ನ ಸ್ಥಿತಿಗಾಗಿ ಮರುಗುತ್ತಿದ್ದಿಲ್ಲ. ಅವನಿಗೆ ಬದುಕುವ ಅಪೇಕ್ಷೆಯೇ ಇರಲಿಲ್ಲ. ಕೈಕಾಲುಗಳನ್ನು ಎಳೆದುಕೊಳ್ಳುವುದಕ್ಕೂ ಅವನಿಂದ ಸಾಧ್ಯವಾಗಲಿಲ್ಲ. ತನ್ನ ತಾಯಿತಂದೆಗಳಿಗೆ ತನ್ನಿಂದಾದ ದುಃಖಕ್ಕಾಗಿ ಮರುಗಿದ.

ತಾನು ಸಾಯಬೇಕು.

ಆದರೆ ಬೇಗನೆ ಸಾಯಬೇಕು.

ಸಾಯುವ ಮೊದಲು ಎರಡೇ ಆಸೆ - ತನ್ನ ತಪ್ಪನ್ನು ಒಪ್ಪಿಕೊಂಡು ತಾಯಿತಂದೆಗಳ ಕ್ಷಮೆ ಕೇಳಬೇಕು.

ಎರಡನೆಯದು--

ತನ್ನ ಸ್ನೇಹಿತ- ಆ ಹುಡುಗಿ ಅವರಿಬ್ಬರೂ ತನ್ನನ್ನು ಕಾಣಲು ಬರಬೇಕು. ತನ್ನ ಸ್ಥಿತಿಯನ್ನು ಕಂಡು ಅವರ ಕಣ್ಣಲ್ಲಿ ನೀರು ಬರಬೇಕು.

ಈ ಎರಡರಿಂದ ತನ್ನ ಬದುಕಿಗೆ ಒಂದು ಸಾರ್ಥಕತೆ ಬಂದಂತೆ......

ಅವನ ಕಣ್ಣಿಂದ ಧಾರಾಕಾರವಾಗಿ ನೀರು ಸುರಿಯುತ್ತಿತ್ತು. ಡಾಕ್ಟರ್ ಬಂದರು.

''ಚಿಂತೆಗೆ ಯಾವ ಕಾರಣವೂ ಇಲ್ಲ. ಬೇಗನೆ ಗುಣವಾಗುತ್ತದೆ'' ಹೇಳಿ ಹೋದರು. ತಾಯಿಯ, ತಂದೆಯ ಮುಖದ ಮೇಲೆ ಕಳೆ ಬಂತು.

ಆದರೆ ಅವರ ಕಣ್ಣೀರು ಮಾತ್ರ ನಿಲ್ಲಲಿಲ್ಲ.

ಕನ್ನಡದಲ್ಲಿ ಲೇಖಕ-ಪ್ರಕಾಶಕ-ಮಾರಾಟಗಾರ-ಓದುಗರ ನಡುವೆ ಗಾಢ ಸಂಬಂಧವನ್ನು ಏರ್ಪಡಿಸಿ, ಓದುಗರಲ್ಲಿ ಉತ್ತಮ ವಾಚನಾಭಿರುಚಿಯನ್ನು ಬೆಳೆಸಿ, ಓದುಗರಿಗೆ ಒಳ್ಳೆಯ ಪುಸ್ತಕಗಳು ಸುಲಭ ಬೆಲೆಯಲ್ಲಿ ದೊರೆಯುವಂತೆ ಮಾಡುವುದು, ಕನ್ನಡ ಪುಸ್ತಕೋದ್ಯಮವನ್ನು ಜನಪರವಾಗಿ ಬೆಳೆಸುವುದು-ಇದು ಕನ್ನಡ ಪುಸ್ತಕ ಪ್ರಾಧಿಕಾರದ ಪ್ರಮುಖ ಧ್ಯೇಯೋದ್ದೇಶಗಳಲ್ಲಿ ಒಂದು. ಈಗಾಗಲೇ ಪ್ರಕಟವಾಗಿ ಮನ್ನಣೆಗಳಿಸಿ, ಈಗ ಲಭ್ಯವಿಲ್ಲದಿರುವ ಪುಸ್ತಕಗಳನ್ನು 'ಜನಪ್ರಿಯ ಪುಸ್ತಕ ಮಾಲೆ' ಯಲ್ಲಿ ಪ್ರಕಟಿಸಿ ಸುಲಭ ಬೆಲೆಗೆ ಪ್ರಾಧಿಕಾರವು ಓದುಗರ ಕೈಯಲ್ಲಿಡುತ್ತಿದೆ. ನಿನ್ನೆ-ಇಂದುಗಳ ನಡುವಣ ಒಂದು ಸೇತುವೆ 'ಜನಪ್ರಿಯ ಪುಸ್ತಕ ಮಾಲೆ'.